


ಚಿತ್ರಕಲಾವಿದ

ಪಿ.ಎಸ್.ಕಡೇಮನಿ

ಬದುಕು ಮತ್ತು ಕಲಾಕೃತಿಗಳು

ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಸಂಶೋಧನ ಪ್ರಬಂಧ



ಭಾಗ
ಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

1169

ಚಿತ್ರಕಲಾವಿದ ಪಿ.ಎಸ್.ಕಡೇಮನಿ

ಬದುಕು ಮತ್ತು ಕಲಾಕೃತಿಗಳು

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು
ಗಾಯತ್ರಿ ಮಂತ

ಮಾರ್ಗದರ್ಶಕರು
ಮೋಹನ್ ಬಿ ಶಾಂಡಿಲ್ಯ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಪರಿವಿಡಿ



ಕಿ.ಎಸ್.ಕಡೇಮನಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತಾವನೆ

ಮಾನವ ಮತ್ತು ಪ್ರಕೃತಿ ಬೇರ್ಪಡಿಸಲಾಗದಂತಹ ಅವಿನಾಭಾವ ಸಂಬಂಧವನ್ನು ಹೊಂದಿದ್ದು, ಮಾನವನು ಪ್ರಕೃತಿಯ ಒಂದು ಭಾಗವಾಗಿದ್ದಾನೆ. ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಇರುವಿಕೆಗಾಗಿ ಪ್ರಕೃತಿಯೊಡನೆ ನಿರಂತರವಾಗಿ ಸೆಣೆಸಾಡಬೇಕಿತ್ತು. ಆಹಾರಕ್ಕಾಗಿ ಅಲೆಯುವಾಗ ಪ್ರಾಣಿಗಳನ್ನು ಎದುರಿಸಿ, ಕೊಲ್ಲಲು ಸದಾ ಜಾಗರೂಕನಾಗಿರುವಂತೆ ಮಾಡಿತ್ತು. ಇದರ ಜೊತೆಗೆ ಪ್ರಕೃತಿ ಅವನಲ್ಲಿ ಭಯ, ಆಶ್ಚರ್ಯ ಮತ್ತು ವಿಸ್ಮಯಗಳನ್ನು ಉಂಟುಮಾಡಿತು. ಮಳೆ, ಗುಡುಗು, ಸಿಡಿಲುಗಳು, ಹುಟ್ಟು, ಸಾವುಗಳು ನಿಸರ್ಗ ನಿಯಮಗಳೇ ಎಂದು ಅರಿಯದ ಕಾರಣ ಅವನಲ್ಲಿ ಭೀತಿಯನ್ನು ಮೂಡಿಸಿದವು. ಹಾಗಾಗಿ ನಿಸರ್ಗದಲ್ಲಿ ಮನುಷ್ಯ ಶಕ್ತಿಗಿಂತಲೂ ಮಿಗಿಲಾದ ಅದ್ಭುತ ಶಕ್ತಿ(ದೇವರು) ಯೊಂದಿದೆ ಎಂಬುದಾಗಿ ನಂಬಿದನು. ನಿಸರ್ಗದ ಆ ಅದ್ಭುತ ಶಕ್ತಿಯ ರಹಸ್ಯವನ್ನು ಅರಿಯುವ ಕುತೂಹಲ ಉಂಟಾಯಿತು. ಇದಕ್ಕಾಗಿ ನಿಸರ್ಗದಲ್ಲಿನ ಶಕ್ತಿಗಳು ಪವಿತ್ರ, ಪೂಜನಾರ್ಹ ಎಂದು ನಂಬಿದನು. ಶಕ್ತಿಯನ್ನು ಒಲಿಸಿಕೊಳ್ಳಬೇಕಾದರೆ ಅದನ್ನು ಆರಾಧಿಸಬೇಕು. ತಾನು ಸಾಧಿಸಬೇಕಾದಂತಹ ಕಾರ್ಯಗಳಿಗೆ ಇಂತಹ ಶಕ್ತಿಯ ಬೆಂಬಲ, ಆಶೀರ್ವಾದ ಅವಶ್ಯವೆಂದು ಭಾವಿಸಿದನು. ಆದುದರಿಂದ ಆ ಶಕ್ತಿಗೊಂದು ರೂಪ ನೀಡಿ, ಅದನ್ನು ಚಿತ್ರಿಸಿ, ಪ್ರತಿಮೆಯನ್ನಾಗಿ ಪೂಜಿಸುವ ಪದ್ದತಿಯನ್ನು ಜಾರಿಗೆ ತಂದನು. ಕುಂಚದಿಂದ ತನ್ನ ಕಲ್ಪನೆಯ ಚಿತ್ರವೊಂದನ್ನು ರೇಖಿಸಿ ಅದಕ್ಕೆ ಶಸ್ತ್ರ, ಆಭರಣ ತೊಡಿಸಿ ಇಡೀ ಚಿತ್ರದ ಸುತ್ತಲೂ ಒಂದು ಮಂಡಲವನ್ನು ಎಳೆದು ಅದು ಪವಿತ್ರವೆಂದು ಭಾವಿಸಿದರು. ಕಾಲ ಕಳೆದಂತೆ ಇಂತಹ ಚಿತ್ರಗಳಿಗೆ ಬದಲಾಗಿ ಪ್ರತಿಮೆಗಳನ್ನು ಮಾಡಿ ಅವುಗಳನ್ನು ಪ್ರತ್ಯೇಕ ಸ್ಥಳದಲ್ಲಿಟ್ಟು ಸುತ್ತಲೂ ರಕ್ಷಣೆಯ ಗೋಡೆ ನಿರ್ಮಿಸಿ ಪೂಜಿಸತೊಡಗಿದನು ಈ ರೀತಿಯಾಗಿ ಚಿತ್ರ,ಶಿಲ್ಪ ಮತ್ತು ವಾಸ್ತುಶಿಲ್ಪ ನಿರ್ಮಾಣಕ್ಕೆ ನಾಂದಿಯಾಯಿತು. ಕಲೆಯ ವಿಕಾಸಕ್ಕೆ ಪ್ರೇರಣೆಯಾಯಿತು.

ಈ ಕಲೆ ಎಂಬ ಪದವನ್ನು ಇಂಗ್ಲೀಷ್‌ನ 'Art' ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗಿದೆ. ಕಲೆ ಎಂದಾಗ ಲಲಿತ ಕಲೆ, ಕುಶಲ ಕಲೆ ಎಂಬ ವಿಂಗಡಣೆಗಳನ್ನು ಮಾಡಿರುವುದುಂಟು. ಕಲೆ ಎಂದರೆ? 'ಸಂತೋಷ ಕೊಡತಕ್ಕದ್ದು, ಬಯಕೆಗೆ ತಕ್ಕುದು' ಎಂದು ಹೇಳಬಹುದಾಗಿದೆ.

"ಸಂಸ್ಕೃತದ 'ಕಲಾ' ಎಂಬುದೇ ಕನ್ನಡದಲ್ಲಿ 'ಕಲೆ' ಆಗಿದೆ. ಕಲಾ ಎಂದರೆ ಚಂದಿರನ ಹದಿನಾರು ಅಂಶಗಳ ಪೈಕಿ ಒಂದಂಶ ಎಂಬ ಅರ್ಥವಿದೆ. 'ಕಲಾತು ಷೋಡಶೋ ಭಾಗೋ' ಎನ್ನುತ್ತದೆ. ಅಮರ. 'ಕಲಾ' ಎಂದರೆ ಗತಿ, ನಡೆ, ಅರ್ಥ, ಜ್ಞಾನ, ತಿಳಿವಳಿಕೆ ಎಂಬ ಅರ್ಥಗಳೂ ಇವೆ ಎಂಬುದಾಗಿ ನಿಘಂಟುಕಾರರು ಅಭಿಪ್ರಾಯಪಡುತ್ತಾರೆ. 'ಕಾಲಶಿಲ್ಪೇ' ಎಂದು ಅಮರಕೋಶದಲ್ಲಿ ಹೇಳಿದೆ. ಅಂದರೆ ಶಿಲ್ಪವೇ ಮೊದಲಾದ ಕುಶಲ ವಿದ್ಯೆಗಳಿಗೂ ಕಲಾ ಎಂಬ ಶಬ್ದವನ್ನು ಬಹಳ ಹಿಂದಿನಿಂದಲೂ ಬಳಸಲಾಗುತ್ತಿದೆ. ಎಂದು ಭಾವಿಸಬಹುದು. ಆದರೆ, ಖಚಿತವಾಗಿ ಈ ಪದವನ್ನು ಎಂದಿನಿಂದ ಬಲಸಲಾಗುತ್ತಿದೆ. ಎಂಬುದು ಸ್ಪಷ್ಟವಾಗಿಲ್ಲ."[1]

ಕಲೆ ಎಂದರೇನು? ಎಂಬ ಪ್ರಶ್ನೆಗೆ ಹಲವಾರು ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಅನೇಕ ವ್ಯಖ್ಯಾನಗಳನ್ನು ನೀಡಿದ್ದಾರೆ. ಸಾಮಾನ್ಯವಾಗಿ ಹೇಳುವುದಾದರೆ, 'ದೃಷ್ಟಿ ಗೋಚರ ರೀತಿಯಲ್ಲಿ ಅಭಿವ್ಯಕ್ತಿಗೊಂಡ ಮಾನವನ ಮನಸ್ಸಿನ ಆಗು ಹೋಗುಗಳೇ ಕಲೆ'

ಕಲೆಯು ವಿಶ್ವವ್ಯಾಪಿಯಾಗಿದ್ದು, ಅದು ಕೃತಿಯಲ್ಲಿ ಒಡಮೂಡಿದೆ. ಇಲ್ಲಿ ಕೃತಿ ಎಂದರೆ ಕೈಯಿಂದ ಮಾಡಿರುವಂತಹುದು ಎಂದರ್ಥ. ಅಂದರೆ ಯಾರೋ ಒಬ್ಬರು ಯಾವುದೋ ಸಂದರ್ಭದಲ್ಲಿ ತನಗಾಗಿ ಅಥವಾ ಇತರರಿಗಾಗಿ ಮಾಡಿದ ಕಲಾಕೃತಿ ಎಂದರ್ಥ. ಕಾವ್ಯ, ಕೃತಿ, ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಕಲೆ ಇವುಗಳೆಲ್ಲಾ ಕಲೆಯ ವಿವಿಧ ರೂಪಗಳಾಗಿವೆ.

ಮಾನವನ ನಾಗರೀಕತೆಯ ಉಗಮದೊಂದಿಗೆ ಕಲೆಯ ಉಗಮವನ್ನು ಗುರುತಿಸ ಬಹುದಾಗಿದೆ. ಸಮಾಜ ಶಾಸ್ತ್ರಜ್ಞರು ಕಲೆಯ ಉಗಮವನ್ನು ಮಾನವನ ಸಾಮಾಜಿಕ ಜೀವನದ ವಿಕಾಸದಲ್ಲಿ ಕಾಣುತ್ತಾರೆ. ಮನಃಶಾಸ್ತ್ರಜ್ಞರು ಕಲೆಯ ಉಗಮವನ್ನು ಮಾನವನ ಮನಸ್ಸಿನಲ್ಲಿ ಕಾಣುತ್ತಾರೆ. ಮನಸ್ಸಿನ ಸೂಕ್ಷ್ಮ ಚಲನವಲನ ಅಭಿಯಕ್ತಿಯೇ ಕಲೆ. ಐತಿಹಾಸಿಕ ದೃಷ್ಟಿಯಲ್ಲಿ ನೋಡಿದಾಗ ಕಲೆಯು ಮಾನವನಷ್ಟೇ ಪ್ರಾಚೀನವಾದದ್ದು ಎಂದು ಗೋಚರವಾಗುತ್ತದೆ.

ಹೀಗೆ ಕಲೆಯು ವಿವಿಧ ರೂಪವನ್ನು ತಾಳಿ ಸಫಲತೆಯನ್ನು ಹೊಂದುತ್ತಾ ಆತ್ಮರಕ್ಷಣೆ, ನಿರೂಪಣ, ಅನುಕರಣ ಈ ಪ್ರವೃತ್ತಿಗಳಿಂದ ಬೆಳವಣಿಗೆಯಾಯಿತು. ಇವುಗಳ ಜೊತೆಗೆ ಸಾಮಾಜಿಕ ಅವಶ್ಯಕತೆಗಳು, ರಾಜ ಮನೆತನದವರ, ಶ್ರೀಮಂತರ ಪ್ರೋತ್ಸಾಹಗಳು ಕಲೆಯ ಬೆಳವಣಿಗೆಗೆ ಕಾರಣವಾಗಿವೆ. ಒಂದು ಶೈಲಿ ಮತ್ತೊಂದು ಹೊರಗಿನ ಶೈಲಿಯ ಅಂತರ, ಪ್ರಭಾವದಿಂದ ಹೊಸ ಆಲೋಚನಾ ವಿಧಾನ ರೂಪುಗೊಂಡಿದೆ. ದೇವರ ಕಲ್ಪನೆ, ಮೊದಲಿನಿಂದ

ಬೆಳೆದುಬಂದ ಸಂಪ್ರದಾಯಗಳು, ವಿದೇಶಿಯರ ಆಗಮನ, ಶೈಲಿಗಳ ಅಂತರ ಸಂಬಂಧದಿಂದ ಕಲೆಯ ಬೆಳವಣಿಗೆ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಆಗಿದೆ.

ಕಲೆ, ಮನುಷ್ಯ ಸಹಜವಾದ ಒಂದು ಪ್ರವೃತ್ತಿ. ಸಂತೋಷ, ಆನಂದಗಳನ್ನು ಉಂಟುಮಾಡು ವಂತದ್ದು. ಮತ್ತು ಮನುಷ್ಯನಲ್ಲಿ ಅಂತರ್ಗತವಾಗಿರುವ ಪ್ರತಿಭೆಯಿಂದ ವಿಕಾಸಗೊಳ್ಳುವುದು. ಭಾರತಿಯರ ಪ್ರಕಾರ 'ವೇದಗಳೇ ಸರ್ವ ಕಲೆಗಳಿಗೂ ಮೂಲ' ವಾಸ್ತುಶಿಲ್ಪ ಕಲೆ, ಸಂಗೀತ, ಸಾಹಿತ್ಯ, ಚಿತ್ರಕಲೆ ಮುಂತಾದವುಗಳೆಲ್ಲವೂ ಲಲಿತಕಲೆಗಳೆಂದು ಹೆಸರು ಪಡೆದಿವೆ. ಪ್ರಾಚೀನ ಭಾರತೀಯರು ಈ ಎಲ್ಲಾ ಕಲಾ ಪ್ರಕಾರಗಳಲ್ಲಿಯೂ ಮಹೋನ್ನತ ಸಾಧನೆಗಳನ್ನು ಮಾಡಿ ಉತ್ಕೃಷ್ಟ ಕಲಾ ಪರಂಪರೆಯನ್ನೇ ಸೃಷ್ಟಿಸಿದರು.

ಗೋರ್ಕಿಯವರು, 'ಓದುಗರಲ್ಲಿ ಓದುಗನಿಂದ ಹೇಳಿಸುವಂತೆ "ತನ್ನನ್ನು ತಾನು ಅರಿತುಕೊಳ್ಳಲು ಮಾನವನಿಗೆ ನೆರವಾಗುವುದು, ಅವನ ಆತ್ಮವಿಶ್ವಾಸವನ್ನು ಧೃಡವಾಗಿಸುವುದು, ಸತ್ಯಾನ್ವೇಷಣೆಯ ಅವನ ಪ್ರಯತ್ನಗಳನ್ನು ಬೆಂಬಲಿಸುವುದು, ಜನರಲ್ಲಿ ಅಡಗಿರುವ ಒಳ್ಳೆಯತನ ಹೊರಬರುವಂತೆ ಮಾಡುವುದು ಹಾಗೂ ಕೆಟ್ಟತನವನ್ನು ಬುಡಸಹಿತ ಕಿತ್ತೊಗೆಯುವುದು, ಜನರ ಹೃದಯದಲ್ಲಿ ನಾಚಿಕೆ, ಕೋಪ ಹಾಗೂ ಸಾಹಸಗಳ ಕಿಡಿ ಹೊತ್ತಿಕೊಂಡು ಉರಿಯುವಂತೆ ಮಾಡುವುದು. ಉದಾತ್ತ ಧ್ಯೇಯಗಳಿಗಾಗಿ ಶಕ್ತಿಯನ್ನು ಒಗ್ಗೂಡಿಸಿಕೊಳ್ಳಲು ಅವರಿಗೆ ನೆರವು ನೀಡುವುದು ಹಾಗೂ ಸೌಂದರ್ಯದ ಪವಿತ್ರ ಭಾವನೆಯಿಂದ ಅವರ ಬಾಳು ಶುಭವಾಗುವಂತೆ ಮಾಡುವುದು.ಇವೆ ಕಲೆಯ ಉದ್ದೇಶಗಳು.

ಒಂದು ಕಲೆಯಲ್ಲಿ ಸಾಹಿತ್ಯವನ್ನು ಪರಂಪರೆ ರೂಪಿಸುತ್ತದೆ ಹಾಗೂ ಒಂದು ಪರಂಪರೆ ಯನ್ನು ಬೆಳೆಸುವುದು ಕಲಾ ಚರಿತ್ರೆ. ಇಂದಿನ ದಿನಗಳಲ್ಲಿ 'ಪರಂಪರೆ' ಹಾಗೂ ಸಂಪ್ರದಾಯ ಹಬ್ಬಗಳು ಬಹುವಾಗಿ ಚರ್ಚಿತವಾಗುತ್ತಿರುವುದರಿಂದ ಇವುಗಳನ್ನು ಇಲ್ಲಿ ಆದಷ್ಟು ಸಂಕ್ಷಿಪ್ತವಾಗಿ ಸ್ಪಷ್ಟಪಡಿಸುವುದು ತುರ್ತು ಅಗತ್ಯವಾಗಿದೆ. ಎಂದು ಭಾವಿಸುತ್ತೇನೆ. ಸಾಹಿತ್ಯವೂ ಸೇರಿದಂತೆ ಎಲ್ಲಾ ಕಲೆಗಳೂ ಒಳಗೊಂಡಿರುವ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುವ ಸಂಪ್ರದಾಯಗಳು ಮೂರ್ತಸ್ವರೂಪದವುಗಳು. ಅವುಗಳನ್ನು ವಸ್ತುನಿಷ್ಠವಾಗಿ ಕಂಡುಕೊಳ್ಳುವುದು ಸಾಧ್ಯ. ಆದರೆ ಸಂಪ್ರದಾಯಗಳಿಗಿಂತ ಭಿನ್ನವಾದ ಪರಂಪರೆ ಒಂದು ಅಮೂರ್ತವಾದ ಪರಿಕಲ್ಪನೆ. ಪರಂಪರೆ ಒಂದು ನಿರ್ದಿಷ್ಟವಾದ ಕಾಲಘಟ್ಟದಲ್ಲಿ ಸಮುದಾಯವೊಂದು ತನ್ನ ತತ್ಕಾಲದ ಅವಶ್ಯಕತೆ, ಒತ್ತಡಗಳಿಗನುಸಾರವಾಗಿ ಕಟ್ಟಿಕೊಳ್ಳುವ ಒಂದು ಅಮೂರ್ತ ರಚನೆ ಎಂದು ವಿಮರ್ಶಕ ಸಿ.ಎನ್. ರಾಮಚಂದ್ರನ್ ಅಭಿಪ್ರಾಯಪಡುತ್ತಾರೆ.

'ಕಲೆಗಾಗಿ ಕಲೆ' ಅಥವಾ 'ಜನರಿಗಾಗಿ ಕಲೆ' ಇತ್ಯಾದಿ ಸಿದ್ಧಾಂತಗಳು ಯಾಕೆ ಬೇಕು?, ಯಾವಾಗ ಹುಟ್ಟಿಕೊಳ್ಳುತ್ತವೆ?, ಅವುಗಳು ಉದ್ಭವಿಸಲು ಕಾರಣವಾಗುವ ಸಾಮಾಜಿಕ ಸ್ಥಿತಿಗತಿಗಳು ಅವಶ್ಯಕತೆಗಳು ಅಥವಾ ಒತ್ತಡಗಳು ಯಾವುವು? ಎಂಬುದರ ಕುರಿತಾಗಿ ನೋಡುವುದಾದರೆ,

ಎಲ್ಲಿ ಕಲಾವಿದನು ತನ್ನ ಸಾಮಾಜಿಕ ಪರಿಸರದೊಂದಿಗೆ ನಿರಾಶಾದಾಯಕ ಸ್ಥಿತಿಯಲ್ಲಿ ವಿಸಂತನಾಗುತ್ತಾನೋ ಅಲ್ಲಿ ಕಲೆಯು ಶುದ್ದ ಕಲೆಯಾಗಿ ರೂಪುಗೊಳ್ಳುತ್ತದೆ. ಯಾವಾಗ ಕಲಾಕಾರನು ಜನರತ್ತ ಸ್ಪಂಧಿಸುವಲ್ಲಿ ಅಸಮರ್ಥನಾಗುತ್ತಾನೋ ಆತನ ಮಿಡಿತವು ಕಲೆಯಾಗುವುದನ್ನು ಯಾವುದಾದರೂ ಬಾಹ್ಯ ಅಥವಾ ಆಂತರಿಕ ಒತ್ತಡ ಪ್ರತಿಬಂಧಿಸುತ್ತದೋ ಆಗ 'ಕಲೆಗಾಗಿ ಕಲೆ' ಎಂಬ ಸಿದ್ದಾಂತದಲ್ಲಿ ನಂಬಿಕೆ ಹುಟ್ಟಿಕೊಳ್ಳುತ್ತದೆ,

ಸಮಾಜದಲ್ಲಿ ಪರಸ್ಪರ ಸಹಾನುಭೂತಿ ಉಂಟಾದಾಗ ಕಲೆಯ ಉಪಯುಕ್ತತೆಯ ಸಿದ್ಧಾಂತವು ಉದ್ಭವಿಸುತ್ತದೆ. ವಿಮರ್ಶಕರಿಗಾಗಿ ಕಲಾವಿದ ಕಲೆಯನ್ನು ಮೀಸಲಿಡದೆ ಕಲೆಯ ಗಮನವನ್ನು ಜನರತ್ತ ಕೇಂದ್ರೀಕರಿಸಿದಂತಾಗುತ್ತದೆ.

ಕಾಮಸೂತ್ರಕಾರನ ಅಭಿಮತದಂತೆ 'ಅಲೇಖ್ಯ' ನಾಲ್ಕನೆಯ ಕಲೆ. 'ಅಲೇಖ್ಯ' ಎಂದರೆ ಚಿತ್ರ ರಚನೆ ಎಂದರ್ಥ. ಚಿತ್ರರಚನಾ ಕಲೆ ವೇದಗಳಷ್ಟೇ ಪ್ರಚೀನವಾದುದು ಎಂದು ಪಂಡಿತರು ಅಭಿಪ್ರಾಯಪಡುತ್ತಾರೆ. ವೇದ ಕಾಲದಲ್ಲಿ ಯಜ್ಞೋಪಕರಣಗಳಾದ ಕುಂಭ, ಯೂಪ, ವೇದಿಗಳನ್ನು ಲೇಪನಗಳಿಂದ ಅಲಂಕರಿಸುತ್ತಿದ್ದ ರೀತಿಯಿಂದಲೂ ತಾಂತ್ರಿಕರ ಶ್ರೀ ವಿದ್ಯೋಪಾಸನೆಗಾಗಿ ರಚಿಸುತ್ತಿದ್ದ ರೀತಿಯಿಂದಲೂ ಯಂತ್ರ, ಮಂಡಲಗಳಿಂದಲೂ ಚಿತ್ರಕಲೆ ಬೆಳೆಯಿತು. ಹರಪ್ಪ ಸಂಸ್ಕೃತಿಯ ಅವಶೇಷಗಳಾಗಿ ದೊರೆತಿರುವ ಕುಂಭಗಳ ಮೇಲೆ ಬಣ್ಣದ ರೇಖಾಚಿತ್ರಗಳನ್ನು ಕಾಣಬಹುದಾಗಿದೆ.

"ಮನೆಗಳಿಗೆ ಮಾಂಗಲ್ಯದಂತೆ ಮಂಗಳಪ್ರದವಾದುದು ಎಂದು ಬಣ್ಣಿಸಲ್ಪಟ್ಟಿರುವ ಚಿತ್ರಕಲೆಯ ಹುಟ್ಟಿನ ಬಗ್ಗೆ ಮಾರ್ಖಂಡೇಯ ಪುರಾಣದಲ್ಲಿ ಒಂದು ಕಥೆಯುಂಟು. ಬದರಿಕಾಶ್ರಮದಲ್ಲಿದ್ದ ನಾರಾಯಣನೆಂಬ ಋಷಿಯು ಭೂಮಿ(ಊರ್ವಿ)ಯ ಮೇಲೆ ಮಾವಿನ ರಸದಿಂದ ಹೆಣ್ಣಿನ ಚಿತ್ರ ಬರೆದು ಅದಕ್ಕೆ ಜೀವ ತುಂಬಿದನಂತೆ. ಆ ಚಿತ್ರವೇ ಊರ್ವಶಿಯಾದಳು ಆನಂತರ ನಾರಾಯಣ ಋಷಿಯು ಚಿತ್ರರಚನಾ ವಿಧಿವಿಧಾನಗಳ ಸೂತ್ರಗಳನ್ನು ರಚಿಸಿ, ವಿಶ್ವಕರ್ಮನಿಗೆ ಬೋಧಿಸಿದನಂತೆ ವಿಶ್ವಕರ್ಮನ ಈ ಕಲೆ ಜಗತ್ತಿನಲ್ಲಿ ಪ್ರಚಲಿತವಾಯಿತು.

ಕಾಮಸೂತ್ರದ ವ್ಯಾಖ್ಯಾನಕಾರನಾದ ಯಶೋಧರನು, ಚಿತ್ರಕಲೆಯು ಆರು ಅಂಗಗಳಿಂದ ಕೂಡಿದ್ದಾಗಿರಬೇಕು ಎನ್ನುತ್ತಾನೆ. ಚಿತ್ರಕ್ಕೆ ರೂಪಭೇದ, ಪ್ರಮಾಣ, ಭಾವ, ಲಾವಣ್ಯಯೋಜನಾ ಸಾದೃಶ್ಯ, ವರ್ಣಿಕಾಭಂಗ ಎಂಬವೇ ಈ ಆರು ಅಂಗಗಳು. ಹಾಗೆಯೇ ಚಿತ್ರರಚನೆಯಲ್ಲಿ ನಾಲ್ಕು ಹಂತಗಳನ್ನು ಕಾಣಬಹುದು.

ರೇಖಾ ಪ್ರಶಂಸ್ಯಾಚಾಯಾಃ ವರ್ತನಾಂಚ ವಿಚಕ್ಷನಾಃ।
ಸ್ತ್ರೀಯೋಭೂಷಣ ವಿಚ್ಛಂತಿ ವನಾಪ್ಯಮಿತರೇಜನಾಃ॥

೧. ಧಾತಃ : ಚಿತ್ರ ಬರೆಯುವ ಗೋಡೆ ಅಥವಾ ಬಟ್ಟೆಗೆ ಸುಣ್ಣ ಅಥವಾ ಬಿಳಿಯ ಬಣ್ಣ ಬಳಿದು ಸಿದ್ಧಪಡಿಸುವುದು.

೨. ಘಟ್ಟಿತ : ಸಿದ್ಧಪಡಿಸಿದ ಗೋಡೆ ಅಥವಾ ಬಟ್ಟೆಗೆ ಅನ್ನ ಬಳಿಯುವುದು.

೩. ಲಾಂಛಿತ : ಹೊರಗಿನ ರೇಖೆಯನ್ನು ಇದ್ದಿಲಿನಿಂದ ರಚಿಸಿಕೊಳ್ಳುವುದು.

೪. ರಂಜಿತ : ಬಣ್ಣ ತುಂಬುವುದು.

ಆಧುನಿಕ ಚಿತ್ರ ರಚನಾ ವಿಧಾನದಲ್ಲೂ ಸಾಧಾರಣವಾಗಿ ಇದೇ ಸೂತ್ರಗಳನ್ನು ಅನುಸರಿಸುತ್ತಿರುವುದು ಗಮನಾರ್ಹವಾದ ಅಂಶವಾಗಿದೆ.

ವಿಷ್ಣುಧರ್ಮೋತ್ತರದಲ್ಲಿ ಚಿತ್ರಗಳನ್ನು ಸತ್ಯ(Realistic), ವೈಣಿಕ (ಡಂಭ, ಆಡಂಭರಯುಕ್ತ), (Lyrical), ನಾಗರ (ಗುಂಡಾದ ಚೌಕಟ್ಟಿನಲ್ಲಿ ಅಲ್ಪಾಲಂಕಾರಯುಕ್ತವಾದುದು.) ಮತ್ತು ಮಿಶ್ರ ಎಂದು ನಾಲ್ಕು ವಿಧಾನಗಳಾಗಿ ವಿಂಗಡಿಸಲಾಗಿದೆ. ಸೋಮೇಶ್ವರನ 'ಅಭಿಲಾಷಿತಾರ್ಥ ಚಿಂತಾಮಣಿ' ಯಲ್ಲಿ ವಿದ್ಧ-ಅವಿದ್ಧ, ಅಥವಾ ರಸಚಿತ್ರ, ಧೂಳಿ ಚಿತ್ರ, ಭಾವಚಿತ್ರಗಳೆಂಬ ಭೇದಗಳು ಉಕ್ತವಾಗಿವೆ. ನಾರದ ಶಿಲ್ಪದಲ್ಲಿ ಭೌಮಿಕ, ಭಿತ್ತಿ, ಭಾವಚಿತ್ರಗಳೂ ಬರೆಯುವುದರಲ್ಲಿ ಪತ್ರರೇಖೆ ಹೈರಿಕ(ಸೂಕ್ಷ್ಮ ರೇಖೆ), ಬಿಂದುಜ ಮತ್ತು ಸ್ತಂಭನ(Fixing), ರೀತಿಗಳ ವರ್ಣನೆಯಿದೆ. ಮೊದಲು ರೇಖಾಪಾತ, ಅನಂತರ ವರ್ತನ, ಆಮೇಲೆ ಅಲಂಕಾರ, ಕೊನೆಗೆ ಬಣ್ಣ. ಇದು ಚಿತ್ರಲೇಖನೆಯ ಕ್ರಮ. ಗೃಹಗಳಲ್ಲಿಟ್ಟುಕೊಳ್ಳುವ ಚಿತ್ರಗಳು ಶೃಂಗಾರ, ಹಾಸ್ಯ, ಶಾಂತರಸಗಳನ್ನು ಮಾತ್ರ ಸೂಚಿಸಬೇಕು. ದೇವಾಲಯಗಳ ಪ್ರಕಾರ ಮುಂತಾದ ಬಹಿರಂಗ ಸ್ಥಳಗಳಲ್ಲಿ ಕುಡ್ಯ ಅಥವಾ ಭಿತ್ತಿ ಚಿತ್ರಗಳು ಸರ್ವ ರಸಗನ್ನು ತೋರಿಸಬಹುದು."[೨]

ಶಿಲಾಯುಗದ ಅನಾಗರಿಕರ ಚಿತ್ರಗಳು ರಾಯ್ಘರ್, ಸಿಂಗನ್‌ಪುರ್, ಮಿರ್ಸಾಪುರ್, ಬಳ್ಳಾರಿ, ಮುಂತಾದ ಅನೇಕ ಸ್ಥಳಗಳಲ್ಲಿ ಗುಹೆಗಳಲ್ಲಿಯೂ, ಬಂಡೆಗಳ ಮೇಲೂ ಕಂಡುಬರುವುವು, ರಾಮ್ ಘರ್ ಗುಹೆಗಳ ಚಿತ್ರಗಳು ಕ್ರಿ.ಪೂ. ೨ನೇ ಶತಾಬ್ಧಕ್ಕೆ ಸೇರಿದವು, ಈ ಗುಹೆಗಳ ಮುಂದೆ ಅರ್ಧಚಂದ್ರಾಕಾರವಾದ ಬಹಿರಂಗ ನಾಟಕ ಶಾಲೆಯು ಇದ್ದಿತೆಂದೂ ನಟಿಯರು ಕೆಲವು ಗುಹೆಗಳನ್ನು ವೇಷಧಾರಣೆಗಾಗಿ ಉಪಯೋಗಿಸುತ್ತಿದ್ದರೆಂದೂ ಇಲ್ಲಿನ ಶಾಸನಗಳಿಂದ ತಿಳಿದು ಬರುವುದು.

ಅಜಂತಾ(ಅಜೇಂಠ) ಗುಹಾಲಯಗಳೂ ವಾಘ್ ಕಣಿವೆಯಲ್ಲಿ ಮನೋಹರವಾದ ಪ್ರಕೃತಿ ಸನ್ನಿವೇಶದಲ್ಲಿವೆ. ಕ್ರಿ.ಪೂ. ೨ನೇ ಶತಾಬ್ಧದಿಂದಲೇ ಇಲ್ಲಿ ಗುಹೆಗಳನ್ನು ಕೊರೆಯಲು ಆರಂಭವಾಯಿತು. ಶಾತವಾಹನ, ವಾಕಾಟಕ, ಬಾದಾಮಿಯ ಚಾಲುಕ್ಯ ರಾಜರು ಬೌದ್ಧ ಭಿಕ್ಷುಗಳಿಗಾಗಿ ಚೈತ್ಯ, ವಿಹಾರಗಳನ್ನು ಮಾಡಿಸಿ ಚಿತ್ರಗಳಿಂದ ಅಲಂಕರಿಸಿರುವರು. ಇಲ್ಲಿದ್ದ

ಬೌದ್ಧ ಭಿಕ್ಷುಗಳೇ ಚಿತ್ರಕಾರರಾಗಿದ್ದರೆಂಬುದಕ್ಕೆ ಆಧಾರವಿಲ್ಲ, ಬಹುಶ: ನಾನಾ ದೇಶಗಳ ಶಿಲ್ಪಿಗಳನ್ನು ಚಿತ್ರಕಾರರನ್ನು ಕರೆಯಿಸಿಕೊಂಡಿದ್ದರು ಎಂಬುದಕ್ಕೆ ಅವಕಾಶವಿದೆ.

ಮುಸ್ಲಿಮರು ಎಲ್ಲ ಕಲೆಗಳಿಗೂ ವಿರೋಧವಾಗಿದ್ದರೂ ಭರತ ಖಂಡದಲ್ಲಿ ನೆಲೆಸಿದ ಮೇಲೆ ಹಿಂದುಗಳ ಸಂಪರ್ಕದಿಂದ ಸ್ವಲ್ಪಮಟ್ಟಿಗೆ ವಾಸ್ತುಶಿಲ್ಪ, ಸಂಗೀತ ಚಿತ್ರಕಲೆಗಳನ್ನು ಕಲಿತರು, ಮೊಘಲರ ಕಾಲದಲ್ಲಿ ಕೇವಲ ಲೌಖಿಕ ಮತ್ತು ಆಸ್ಥಾನ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಕಾಣಬಹುದು.

ಮೊಘಲ್ ಚಿತ್ರಗಳಲ್ಲಿ ಪಾಶ್ಚಾತ್ಯ ರೀತಿಯ ಅನುಕರಣೆಯು ಕಂಡುಬರುವುದು. ಮೊಘಲರ ಅನಂತರ ಬಂದ ಬ್ರಿಟೀಷರಿಗೆ ವ್ಯಾಪಾರ, ಸಾಮ್ರಾಜ್ಯ ಲಾಭಗಳೇ ಮುಖ್ಯವಾಗಿದ್ದುದರಿಂದ ಸಮಸ್ತ ಕಲೆಗಳೂ ಕ್ಷೀಣಿಸತೊಡಗಿದವು. ಹಳ್ಳಿಗಳಲ್ಲೂ ಕೆಲವು ದೇಶೀಯ ರಾಜರ ಆಶ್ರಯದಲ್ಲಿಯೂ ಸ್ವದೇಶಿ ರೀತಿಯು ಅಲ್ಪಸ್ವಲ್ಪವಾಗಿದ್ದಿತ್ತು. ಭಾರತೀಯ ಚಿತ್ರಕಲಾ ಸ್ವಾರಸ್ಯವನ್ನು ತಿಳಿಯಲಾರದೆ ಪಾಶ್ಚಾತ್ಯರು ಅವಹೇಳನ ಮಾಡಲಾರಂಭಿಸಿದರು. ರವಿವರ್ಮನಂತಹ ಕೆಲವರು ಪಾಶ್ಚಾತ್ಯ ರೀತಿಯನ್ನು ಅನುಸರಿಸಿದರು. ಈ ರೀತಿಗೆ ಬೊಂಬಾಯಿ ಪ್ರಾಂತ್ಯವು ಕೇಂದ್ರವಾಯಿತು. ೧೯ನೆಯ ಶತಮಾನದಲ್ಲಿ ರಾಷ್ಟ್ರೀಯ ಭಾವವು ಹೆಚ್ಚುತ್ತಾ ಬರಲು ಬಂಗಾಳ ಆಂಧ್ರಪ್ರದೇಶದಲ್ಲಿ ಪೂರ್ತಿ ಸ್ವದೇಶಿ ರೀತಿಯಾದ ಅಜಂತ ಮೇಲ್ಪಂಕ್ತಿಯನ್ನು ಅನುಸರಿಸಿ ಅವನೀಂದ್ರನಾಥ ಟ್ಯಾಗೋರ್, ನಂದಲಾಲ್ ಭೊಸ್, ಡಿ. ರಾಮರಾವ್ ಕೌತರಾಮ ಮೋಹನಶಾಸ್ತ್ರಿ, ಆನಂದ ಮೋಹನಶಾಸ್ತ್ರಿ, ಮೈಸೂರಿನ ಕೆ. ವೆಂಕಟಪ್ಪ ಮುಂತಾದವರು ಹೊಸ ಯುಗವನ್ನಾರಂಭಿಸಿದರು.

ಒಂದು ರಾಷ್ಟ್ರದ ಪ್ರಗತಿಯನ್ನು ಅಳೆಯಲು, ಅದರ ಹಿರಿಮೆಯನ್ನು ಲೆಕ್ಕಹಾಕಲು ಕೇವಲ ಅದರ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಮಾನದಂಡವನ್ನಾಗಿ ಇಟ್ಟುಕೊಳ್ಳ ಬಾರದು. ಆ ರಾಷ್ಟ್ರದಲ್ಲಿ ಸಾಹಿತ್ಯ, ಕಲೆ, ಸಂಸ್ಕೃತಿಯ ಚಟುವಟಿಕೆಗಳು ಯಾವ ಮಟ್ಟದಲ್ಲಿವೆ, ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಎಂಥ ಕವಿಗಳು, ಕಲಾವಿದರು ಹುಟ್ಟಿದ್ದಾರೆ, ಯಾವ ಬಗೆಯ ಸಾಧನೆ ಮಾಡಿದ್ದಾರೆ. ಎಂಬಂತಹ ಸಂಗತಿಗಳೂ ಮಹತ್ವವಾದ ವುಗಳು. ಸಾಹಿತ್ಯ, ಕಲೆಗಳು ರಾಷ್ಟ್ರಜೀವನದ ಹೃದಯಭಾಗದಲ್ಲಿರುವಂತಹವುಗಳು. ಅವು ಒಂದು ಜನಾಂಗದ ಪ್ರತಿಷ್ಠೆಯನ್ನು ಬೆಳೆಸುತ್ತವೆ, ಗೌರವವನ್ನು ಹೆಚ್ಚಿಸುತ್ತವೆ.

ಭಾರತ ದೇಶದಲ್ಲಿ ಕರ್ನಾಟಕ ಒಂದು ಪ್ರಾಂತ್ಯ. ಆದರೂ ಅದು ಪ್ರಪಂಚದ ಕೆಲವು ಸ್ವತಂತ್ರ್ಯ ದೇಶಗಳಿಗಿಂತ ದೊಡ್ಡದು. ಇದಕ್ಕೆ ಉಜ್ವಲವಾದ ಪರಂಪರೆಯಿದೆ. ಸಾಹಿತ್ಯ ಕಲೆಗಳ ಹಿರಿಮೆಯನ್ನು ಗಣ್ಯವೆನಿಸಿದೆ. ನಾವು ಕಲಾ ಶ್ರೀಮಂತರಾಗಿದ್ದರೂ ನಮಗೇ ಈ ಶ್ರೀಮಂತಿಕೆಯ ಪರಿಚಯವಿಲ್ಲ. ಬೇರೆಯವರಿಗೆ ಪರಿಚಯಿಸುವಂತ ಕೆಲಸವನ್ನು ನಾವು ಮಾಡಿಲ್ಲ. ಇದು ನಮ್ಮ ಒಂದು ದೊಡ್ಡ ಕೊರತೆ. ಇದರಿಂದಾಗಿ ನಮಗೆ ನಮ್ಮ ಕಲಾವಿದರ ಪರಿಚಯವೂ ಇಲ್ಲ. ಅವರ ಸಾಧನೆಗಳ, ಸಿದ್ಧಿಗಳ ಆಳ ವಿಸ್ತಾರಗಳ ಅರಿವು ನಮಗಿಲ್ಲ. ಈಚಿನ ವರ್ಷಗಳಲ್ಲಿ

ನಾನಾ ಬಗೆಯ ಸಾಂಸ್ಥಿಕ ಚಟುವಟಿಕೆಗಳಿಂದ, ವ್ಯಕ್ತಿಗತ ಪ್ರಯತ್ನಗಳಿಂದ ಅಲ್ಪಸ್ವಲ್ಪವಾದರೂ ನಮ್ಮನ್ನು ನಾವು ತಿಳಿದುಕೊಳ್ಳುವ ಕಡೆಗೆ ಗಮನಗೊಡಲಾರಂಭಿಸಿದ್ದೇವೆ. ನಮ್ಮ ಪರಂಪರೆ, ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುವವರು ಇವರ ಪರಿಚಯವಾಗತೊಡಗಿದೆ. ಇದು ಸಮಾಧಾನದ ಸಂಗತಿ. ನಮ್ಮ ಕಲಾ ಪ್ರಪಂಚದ ವಿವಿಧ ಕ್ಷೇತ್ರಗಳಲ್ಲಿ ದುಡಿದ, ದುಡಿಯುತ್ತಿರುವ ವ್ಯಕ್ತಿಗಳನ್ನು ಪರಿಚಯಿಸುವ ಕೆಲಸ ಆಗಿರುವುದು ತುಂಬಾ ಕಡಿಮೆ. ಕೆಲವರಾದರೂ ಆ ದಿಕ್ಕಿನಲ್ಲಿ ಸಣ್ಣ ಪ್ರಮಾಣದಲ್ಲಿಯಾದರೂ ಕೆಲಸ ಮಾಡುತ್ತಿದ್ದಾರೆ. ಎನುವುದು ಸಂತೋಷ ತರುವ ಸಮಾಧಾನ ಕೊಡುವ ಮಾತು.

ದೃಶ್ಯಕಲೆಗಳಲ್ಲಿ ಒಂದಾದ ಚಿತ್ರಕಲೆ ಮತ್ತು ಕಲಾವಿದರ ಕುರಿತು ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನಾ ರೂಪದಲ್ಲಿ ಅಧ್ಯಯನಗಳಾಗಿರುವುದು ತೀರಾ ಇತ್ತೀಚೆಗೆ ಅಂದರೆ ೯೦ರ ದಶಕದಲ್ಲಿ. ಅದರಲ್ಲೂ ಕಲಾವಿದರ ಕುರಿತಾಗಿ, ಅವರ ಸಮಗ್ರ ಜೀವನ ಮತ್ತು ಕಲಾಕೃತಿಗಳ ಕುರಿತು ಆಳವಾದ ಅಧ್ಯಯನಗಳು ನಡೆದಿರುವುದು ತೀರಾ ಇತ್ತೀಚೆಗೆ. ಅಂದರೆ ಅಧಿಕೃತವಾಗಿ ೧೯೯೭ರಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಪಿ.ಎಚ್.ಡಿ. ಮಹಾಪ್ರಬಂಧವನ್ನು ಡಾ. ಪುಷ್ಪಾ ದ್ರಾವಿಡ ಅವರ 'ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು' ಎಂಬ ಪ್ರಬಂಧ ಮೊದಲನೆಯದೆಂದು ಹೇಳಬಹುದು.

ಕನ್ನಡ ನಾಡಿಗೆ ಚಿತ್ರಕಲಾ ಕ್ಷೇತ್ರದ ಕೊಡುಗೆ ಅಪಾರವಾಗಿದೆ. ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಕಲಾವಿದನು ಪ್ರಮುಖ ಪಾತ್ರ ವಹಿಸಿದ್ದಾನೆ. ಇಂತಹ ಕಲಾವಿದರನ್ನು ಕುರಿತು ಅವರ ಸಮಗ್ರ ಜೀವನದ ಜೊತೆಗೆ ಅವರ ಬದುಕಿನ ಬಹುಮುಖ್ಯ ಅಂಗವಾಗಿರುವ ಅವರ ಕಲೆಯನ್ನು ಒಂದೆಡೆ ಹಿಡಿದಿಡುವ ಹಾಗೂ ಮುಂದಿನ ಪೀಳಿಗೆಗೆ ಅವರನ್ನು ಪರಿಚಯಿಸುವ ನಿಟ್ಟಿನಲ್ಲಿ ಸಂಶೋಧನಾ ಕಾರ್ಯಗಳು ನಡೆಯುವುದು ಹಿಂದೆಂದಿಗಿಂತಲೂ ಇಂದು ಮಹತ್ವದ ಕಾರ್ಯವಾಗಿದೆ. ವಿಶ್ವವಿದ್ಯಾಲಯದ ಹಂತದಲ್ಲಿ ಕಲಾವಿದರ ಕುರಿತಾದ ವ್ಯಕ್ತಿ ಕೇಂದ್ರಿತ ಸಂಶೋಧನಾ ಅಧ್ಯಯನಗಳ ಸಂಖ್ಯೆಯನ್ನು ಗಮನಿಸಿದಾಗ ಆಗಿರುವ ಅಧ್ಯಯನಗಳು ಬೆರಳೆಣಿಕೆಯಷ್ಟು ಎಂದು ಹೇಳಬಹುದು.

ಬೇರೆ ಬೇರೆ ಜ್ಞಾನಶಿಸ್ತಿನ ಕ್ಷೇತ್ರಗಳನ್ನು ಗಮನಿಸಿದರೆ ಚಿತ್ರಕಲಾ ಕ್ಷೇತ್ರದಲ್ಲಿ ವ್ಯಕ್ತಿಕೇಂದ್ರಿತ ಅಧ್ಯಯನಗಳು ಆಗಿರುವುದು ಅತ್ಯಲ್ಪ. ಈ ಕೊರತೆಯನ್ನು ಗಮನಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು, ಸಾವಿರಾರು ವೈವಿಧ್ಯಮಯ ಕಲಾಕೃತಿಗಳನ್ನು ರಚಿಸಿ ನಾಡಿನ ಕಲಾಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ ವಿಜಾಪುರ ಜಿಲ್ಲೆಯ ಹಿರಿಯ ಕಲಾವಿದರಾದ, ನನ್ನ ಗುರುಗಳೂ ಆದ ಪಿ.ಎಸ್. ಕಡೇಮನಿಯವರ ಬದುಕು ಮತ್ತು ಅವರ ಕಲಾ ಸಾಧನೆಯನ್ನು ಕುರಿತಾಗಿ ಇಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

'ಕೆಲಸ ಮಾಡುವವರ ಮನಸ್ಸು ಸ್ವಚ್ಛವಾಗಿರುತ್ತದೆ' ಎಂಬ ಈ ಸರಳ ಸೂತ್ರಕ್ಕೆ ವ್ಯಾಖ್ಯಾನವೆಂಬಂತೆ ಬದುಕುತ್ತಿರುವವರು ಶ್ರೀ ಪಿ. ಎಸ್ ಕಡೇಮನಿಯವರು. ಒಳಗೆ ಮಡಿಯಾದ ಮನಸ್ಸು, ಹೊರಗೆ ದುಡಿಯುವ ದೇಹ. ಇವುಗಳ ಸಮ್ಮಿಲನವಾಗಿದ್ದ ಕಾರಣ ಇಂದಿನ ಯಾಂತ್ರೀಕೃತ ಬದುಕಿನಲ್ಲಿ ಬೆಳೆದ ಇವರು ಸಾಧನೆಯ ಶಿಖರವನ್ನೇ ಸೃಷ್ಟಿಸುತ್ತಾ ಬಂದಿದ್ದಾರೆ.

ಪ್ರಸ್ತುತ ಕರ್ನಾಟಕದ ಹೆಸರಾಂತ ಕಲಾವಿದರಲ್ಲಿ ಒಬ್ಬರಾದ ಪಿ.ಎಸ್. ಕಡೇಮನಿಯವರು ಕೇವಲ ಚಿತ್ರಕಲಾವಿದರಾಗಿರದೆ, ಅದಕ್ಕಷ್ಟೇ ತಮ್ಮ ಸೃಜನಶಿಲತೆಯನ್ನು ಮೀಸಲಿಡದೆ ಒಬ್ಬ ಉತ್ತಮ ನಾಟಕಕಾರರಾಗಿ, ನಟನೆಯ ಜೊತೆಗೆ ರಂಗಸಜ್ಜಿಕೆ ಮತ್ತು ಪ್ರಸಾಧನದಲ್ಲಿ ತಮ್ಮ ಪ್ರೌಢಿಮೆಯನ್ನು ಪ್ರದರ್ಶಿಸಿದ್ದಾರೆ. 'ರಂಗ ವೈಭವ' ಹವ್ಯಾಸಿ ನಾಟಕ ತಂಡದ ಸಂಸ್ಥಾಪಕ ಸದಸ್ಯರಾಗಿ, 'ವಿಜಾಪುರ ಕಲಾ ಸಂಘ'ದ ನಿರ್ದೇಶಕರಾಗಿ ಹಾಗೂ 'ನಾಟೇಶ್ವರ ಕಲಾಬಳಗ' ಮತ್ತು 'ಹಂದಿಗನೂರು ನಾಟ್ಯ ಸಂಘ'ದ ಉಪಾಧ್ಯಕ್ಷರಾಗಿ ಅಲ್ಲದೇ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸಯರಾಗಿ, ಬಿ.ಎಲ್.ಡಿ.ಇ. ನೌಕರರ ಪತ್ತಿನ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಹೀಗೆ ಹಲವಾರು ರಂಗಗಳಲ್ಲಿ ಗುರುತಿಸಿಕೊಂಡ ಪ್ರತಿಭಾವಂತರಾಗಿದ್ದಾರೆ. ಅವರು ಒಬ್ಬ ಕಲಾವಿದರಾಗಿ, ನಾಟಕಕಾರರಾಗಿಯೂ ಅಲ್ಲದೇ ಉತ್ತಮ ಚಿತ್ರಕಲಾ ಶಿಕ್ಷಕರೂ ಆಗಿದ್ದಾರೆ. ಅನೇಕ ವಿದ್ಯಾರ್ಥಿಗಳು ಅವರ ಕೈಯ್ಯಲ್ಲಿ ಕಲಿತು, ಇಂದು ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅಲ್ಲದೇ ಹಲವಾರು ವಿದ್ಯಾರ್ಥಿಗಳು ಇಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕಲಾವಿದರಾಗಿದ್ದಾರೆ. ಅವರೆಲ್ಲರಿಗೂ ಉತ್ತಮ ನಾಗರಿಕರಾಗಿ ಬದುಕಲು ಇವರ ಮಾರ್ಗದರ್ಶನದ ಪಾತ್ರ ಹಿರಿದು.

ಜಾನಪದವು ನಮ್ಮ ನಾಡಿನ ಜನಜೀವನದೊಂದಿಗೆ ಬೆಳೆದು ಬಂದ ಒಂದು ದೇಶೀಯ ಸಂಸ್ಕೃತಿ. ೧೮ನೆಯ ಶತಮಾನದಿಂದೀಚೆಗೆ ಪಾಶ್ಚಾತ್ಯರು ಈ ನೆಲದ ವಾಸನೆಗೆ ಬೆರಗಾಗಿ ಅದರ ಸಂಗ್ರಹಕ್ಕೆ ಮುಂದಾದರು ಎಂಬುದು ಗಮನಾರ್ಹವಾದ ಅಂಶವಾಗಿದೆ. ಇಂತಹ ಅಮೂಲ್ಯವಾದ ನಮ್ಮ ಭಾರತೀಯ ಜಾನಪದ ಕಲೆಯ ಅಂಶಗಳನ್ನು, ಕಲಾನೆಲೆಗಳನ್ನು ಗಮನದಲ್ಲಿಟ್ಟುಕೊಂಡು ಕಲಾಕೃತಿಯಲ್ಲಿ ಒಡಮೂಡಿಸುವಿಕೆ ಬಹುಮುಖಿಯಾದುದು. ಇಂದಿನ ಕಂಪ್ಯೂಟರ್ ಯುಗದಲ್ಲಿ ನಮ್ಮ ಜನಪದ ಕಲೆಗಳು ಆಚರಣೆಗಳು, ಹಬ್ಬಗಳು ಮರೆಯಾಗುತ್ತಿವೆ. ಅವುಗಳನ್ನು ಉಳಿಸಿ, ಬೆಳೆಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಿದೆ.

ಪರಿಣಿತ ವ್ಯಕ್ತಿಗಳ ಕೊರತೆಯಿಂದಾಗಿ ಒಬ್ಬನೇ ವ್ಯಕ್ತಿ ಈ ಎಲ್ಲಾ ಮುಖಗಳ ಪ್ರಗತಿಗಾಗಿ ಶ್ರಮಿಸುವುದು ಅನಿವಾರ್ಯವೆನಿಸಿದ್ದಿತು. ಕಡೇಮನಿಯವರು ಇಂಥ ಬಹುಮುಖಿ ಅನಿವಾರ್ಯತೆಗಳನ್ನು ಏಕಕಾಲಕ್ಕೆ ಹೊತ್ತು ನಡೆದರು. ಗ್ರಾಮೀಣ ಪರಿಸರದ ಭೌತಿಕ, ಅಭೌತಿಕ

ಕಲಾ ಅಂಶಗಳಿಗೆ ಹೊಸ ಜೀವ ನೀಡಿದ್ದು ಇದರ ಅಂಗವಾಗಿ ಕಲೆ, ಸಮಾಜ, ಶಿಕ್ಷಣ ಮತ್ತು ಸಹಕಾರ ವಿವಿಧ ಕ್ಷೇತ್ರಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿದ್ದಾರೆ. ಹೀಗಿದ್ದೂ ನಮಗೆ ಕಡೇಮನಿಯವರೆಂದರೆ ಮೊದಲು ನೆನಪಾಗುವುದು ಗ್ರಾಮೀಣ ಪರಿಸರ ಮತ್ತು ಕೌದಿ ಕಲೆ. ಇವರು ನಮ್ಮ ವಿಸ್ಮೃತಿಯ ಸಾಗರದಲ್ಲಿ ಮುಳುಗಿ ಹೋಗಿದ್ದ ಗ್ರಾಮೀಣ ಕಲೆ ಮತ್ತು ಅವರ ನಿತ್ಯ ಬದುಕಿನ ನೈಜ ಚಿತ್ರಣವನ್ನು ಕಾಲಗರ್ಭದಿಂದ ಹೊರತೆಗೆದು ಕಲಾಕೃತಿಗಳನ್ನಾಗಿಸಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಗ್ರಾಮೀಣ ಜನರ ನೋವು ನಲಿವುಗಳನ್ನು ಮತ್ತು ಜನಪದ ಕಲಾ ನೆಲೆಗಳನ್ನು ನಾಡಿಗೆ ಪ್ರಸಾರ ಮಾಡುತ್ತಿದ್ದಾರೆ. ಇವರ ವೈವಿಧ್ಯಪೂರ್ಣ ಕಲಾಕೃತಿಗಳನ್ನು ಮತ್ತು ಬದುಕು ಬರಹವನ್ನು ಸ್ಥೂಲವಾಗಿ ಪರಿಚಯಿಸುವ ಕೆಲವು ಕಿರು ಪ್ರಬಂಧಗಳು, ಲೇಖನಗಳು ಪ್ರಕಟಗೊಂಡಿವೆ.

ಅವುಗಳಲ್ಲಿ ೧೯೯೦ ರಲ್ಲಿ ಪ್ರಕಟಗೊಂಡ ಶೆಟ್ಟರ ಅವರು ಸಂಪಾದಕತ್ವದಲ್ಲಿ 'ಕಲಾ ಪಯಣಿಗರು', ೨೦೦೯ ರಲ್ಲಿ ಪ್ರಕಟವಾದ ಐ.ಬಿ. ರಾಠೋಡ ಅವರ 'ರೇಖೆಗಳಲ್ಲಿ ಚಿತ್ರಕಲಾವಿದರು', ೧೯೯೧ರಲ್ಲಿ ಪ್ರಕಟವಾದ 'ಸಾಮಾಜಿಕ ಕಳಕಳಿಯ ಚಿತ್ರಕಲಾ ಶಿಕ್ಷಕ', ೧೨ನೇ ಜುಲೈ ೧೯೯೮ರಲ್ಲಿ (ಪ್ರಜಾವಾಣಿ) ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಬಣ್ಣದ ಗೆರೆಗಳಲ್ಲಿ ನಿತ್ಯ ನವ್ಯವಾಗಿರುವ ಗ್ರಾಮೀಣ ಬದುಕು' ಅಕ್ಟೋಬರ್ ೧೯೯೮ರಲ್ಲಿ ರಾಘವೇಂದ್ರ ಕುಲಕರ್ಣಿಯವರ 'ಪ್ರಚಾರ ಬಯಸದ ಧೀಮಂತ ಕಲಾವಿದ ಪೊನ್ನಪ್ಪ ಕಡೇಮನಿ' ೨೦೦೦ ದಲ್ಲಿ ಕನ್ನಡಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಬಸವರಾಜ ಎಸ್ ಗೋಂದಳೆಯವರ 'ಗ್ರಾಮಂತರ ಗೌಪ್ಯತೆ ಹೊರಸೂಸುವ ಕಲಾವಿದ', ೨೦೦೬ ರಲ್ಲಿ ಪ್ರಕಟವಾದ ಶ್ರೀನಿವಾಸ ಛಲವಾದಿಯವರ 'ಅವ್ವನ ಕೌದಿಯ ಚಿತ್ತಾರದ ಬ್ಯಾಗು' ಎಂಬ ಲೇಖನಗಳು ಮುಖ್ಯವಾದವುಗಳು.

ಈ ಎಲ್ಲಾ ಕಿರು ಕೃತಿಗಳು, ಕಿರು ಪ್ರಬಂಧಗಳು, ಲೇಖನಗಳ ಉದ್ದೇಶ ಮತ್ತು ವ್ಯಾಪ್ತಿ ತುಂಬಾ ಸೀಮಿತವಾದದ್ದು ಅವುಗಳೆಲ್ಲವುಗಳು ವಿಶೇಷವಾಗಿ ಏಕರೂಪದವುಗಳಾಗಿದ್ದು, ಕಡೇಮನಿಯವರನ್ನು ಪರಿಚಯಿಸುವಲ್ಲಿ ಸಮರ್ಥವಾಗಿವೆ. ಇವರ ಬದುಕು, ವ್ಯಕ್ತಿತ್ವ, ಕಲಾಕೃತಿಗಳು ಮತ್ತು ಸಾಧನೆಗಳ ಕುರಿತಾದ ಅಧ್ಯಯನ ಹಾಗೂ ಆಲೋಚನೆಗಳ ವೈವಿಧ್ಯತೆಗೆ ಇಂಬುಕೊಡುವುದಲ್ಲದೆ, ಮುಂದಿನ ತಲೆಮಾರಿನ ಕಲಾ ವಿದ್ಯಾರ್ಥಿಗಳಿಗೆ, ನಾಡಿನ ಕಲಾಕ್ಷೇತ್ರಕ್ಕೆ ಪರಿಚಯಿಸುವ ದೃಷ್ಟಿಯಿಂದ ಹಾಗೂ ಅವರ ಕಲಾಕೃತಿಗಳ, ಕಲಾ ಸಾಧನೆಯ ಮೇರು ಶಿಖರವನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಂಡಿದ್ದೇನೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸಿರುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪದ ವಿವರಗಳನ್ನು ಈ ಕೆಳಗಿನಂತೆ ಕೊಡಲಾಗಿದೆ.

ಒಂದನೆಯ ಅಧ್ಯಾಯವು ಪ್ರಸ್ತುತ ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತಾದ ವಿವರಣೆಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಪಿ.ಎಸ್. ಕಡೇಮನಿಯವರ ಸಾಂಸ್ಕೃತಿಕ ಪರಿಸರ, ಬಾಲ್ಯ ಜೀವನ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮತ್ತು ಬಾಲ್ಯದಲ್ಲಿ ಕಲಾವಿದರ ಮೇಲೆ ಪ್ರಭಾವ ಬೀರಿದ ಕಲಾ ಪರಿಸರ, ಬಾಲ್ಯದಲ್ಲಿ ತಮ್ಮನ್ನು ಕಲೆಯಲ್ಲಿ ತೊಡಗಿಸಿಕೊಂಡಿರುವ ವಿಧಾನಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಪಿ.ಎಸ್. ಕಡೇಮನಿಯವರು ಧಾರವಾಡದಲ್ಲಿ ಕಲಾ ಶಿಕ್ಷಣ ಪಡೆಯುವಾಗ ಗಳಿಸಿದ ಅನುಭವ, ಆ ಕಲಾ ಶಾಲೆಯ ವಾತಾವರಣ, ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪರಿಚಯ, ಕಡೇಮನಿಯವರ ವೃತ್ತಿಜೀವನ, ವೃತ್ತಿ ಪ್ರಾರಂಭಿಸಿದ ಆ ಕಲಾ ಶಾಲೆಯ ಪರಿಸರ, ಅಲ್ಲದೇ ವೃತ್ತಿ ಜೀವನದ ಜೊತೆಗೆ ಕಲಾಬದುಕನ್ನು ನಿರ್ವಹಿಸುತ್ತಿರುವುದು, ವೃತ್ತಿ ಬದುಕು, ಅದರ ಜೊತೆಗೆ ಕಲಾ ಬದುಕಿನ ಜೊತೆಗೆ ಅವರ ಪ್ರವೃತ್ತಿಯನ್ನು ಈ ಅಧ್ಯಾಯದಲ್ಲಿ ವಿಸ್ತೃತವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಪಿ.ಎಸ್. ಕಡೇಮನಿಯವರು ತಮ್ಮ ದೈನಂದಿನ ಬದುಕಿನಲ್ಲಿ ರಚಿಸಿರುವಂತಹ ರೇಖಾಚಿತ್ರಗಳು, ಸಂಯೋಜನಾ ರೇಖಾ ಚಿತ್ರಗಳು, ಭಾವ ಚಿತ್ರಗಳು, ನೈಸರ್ಗಿಕ ಚಿತ್ರಗಳು ಎಂದು ವ್ಯವಸ್ಥಿತವಾಗಿ ವಿಂಗಡಿಸಿ ಕಲಾಕೃತಿಗಳ ರಚನೆಯ ಹಿನ್ನಲೆ, ಉದ್ದೇಶ, ಸಂದರ್ಭ, ಬಳಸಿದಂತಹ ಮಾಧ್ಯಮ, ಕಲಾಕೃತಿಗಳ ನಿರೂಪಣೆ ಮುಂತಾದವುಗಳನ್ನು ಕುರಿತು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಪಿ.ಎಸ್ ಕಡೇಮನಿಯವರು ತಮ್ಮ ಕಲಾಬದುಕಿನಲ್ಲಿ ರಚಿಸಿರುವಂತಹ ನಿಸರ್ಗ ಚಿತ್ರಗಳು, ಭಾವ ಚಿತ್ರಗಳು, ವಸ್ತು ಚಿತ್ರಗಳು, ಸಂಯೋಜನಾ ಚಿತ್ರಗಳು, ಸಾಮಾನ್ಯ ಸಂಯೋಜನಾ ಚಿತ್ರಗಳು ಮತ್ತು ಸೃಜನಾತ್ಮಕ ಸಂಯೋಜನಾ ಚಿತ್ರಗಳು ಎಂದು ವಿಂಗಡಿಸಿಕೊಂಡು ಕಲಾಕರತಿಗಳ ರಚನೆಯ ಹಿನ್ನಲೆ, ಉದ್ದೇಶ, ಬಳಸಿದಂತಹ ಮಾಧ್ಯಮ ಕಲಾಕೃತಿಗಳ ವಸ್ತು ವಿಷಯಗಳ ನಿರೂಪಣೆ ಮುಂತಾದವುಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯವು ಒಟ್ಟು ಅಧ್ಯಯನದ ಹೃದಯ ಭಾಗದಂತಿದ್ದು ಪ್ರಮುಖ ಅಂಗವಾಗಿದೆ.

ಅಧ್ಯಾಯ ಆರರಲ್ಲಿ ಪಿ.ಎಸ್. ಕಡೇಮನಿಯವರ ಕಲಾಕೃತಿಗಳ ತಂತ್ರ, ಶೈಲಿ, ಪ್ರಭಾವ ಮತ್ತು ಪ್ರೇರಣೆಯ ಕುರಿತಾಗಿದ್ದು, ಸಾಮಾನ್ಯವಾಗಿ ಎಲ್ಲಾ ಕಲಾವಿದರು ಇತರ ಕಲಾವಿದರಿಗಿಂತ ತಾವು ಬದುಕಿದ ಪರಿಸರದಿಂದ ಬರುವ ಘಟನೆಗಳಿಂದ ಸುತ್ತಮುತ್ತಲಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಇಲ್ಲಿ ಪ್ರಮುಖವಾಗಿ ಅವರು ಕಲಿತುಬಂದ ಕಲಾಶಾಲೆಯ ಗುರುಗಳ ರಚನಾ ಶೈಲಿಯ ಪ್ರಭಾವ ಅಲ್ಲದೇ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರಿದ ವ್ಯಕ್ತಿಗಳ ಕುರಿತು ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತಗಳ ಕುರಿತು ಸಮೀಕ್ಷೆಯನ್ನು ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಕಡೇಮನಿಯವರು ಬಹುಮುಖ ಪ್ರತಿಭೆಯನ್ನು ಹೊಂದಿರುವ ಕಲಾವಿದರು. ಚಿತ್ರಕಲಾವಿದರಾಗಿ, ನಾಟಕಕಾರರಾಗಿ, ನಟನೆಯ ಜೊತೆಗೆ ರಂಗಸಜ್ಜಿಕೆ ಜೊತೆಗೆ ಪ್ರಸಾಧನದಲ್ಲಿ ತಮ್ಮ ಪ್ರೌಢಿಮೆ ತೋರಿದ ಪ್ರತಿಭಾವಂತರಾಗಿದ್ದಾರೆ. ಪ್ರಸ್ತುತ ಅಧ್ಯಯನವು ಕಡೇಮನಿಯವರ ಚಿತ್ರಕಲೆ ಸಾಧನೆ ಕುರಿತು ಕೇಂದ್ರೀಕೃತವಾಗಿದ್ದು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

ಕಡೇಮನಿಯವರು ತಮ್ಮ ಕಲಾ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಅವು ವಿಭಿನ್ನ ವಿಷಯಗಳನ್ನು ಒಳಗೊಂಡ ವೈವಿಧ್ಯಮಯ ಕೃತಿಗಳಾಗಿದ್ದು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಗ್ರಹಗೊಂಡಿವೆ. ಕಡೇಮನಿಯವರ ಅನೇಕ ಕಲಾಕೃತಿಗಳು ಮಾರಾಟವಾಗಿಯೋ, ಕೆಲವೊಂದು ಕಳೆದು ಹೋಗಿಯೋ ಅಥವಾ ಇನ್ನಿತರ ಕಾರಣ ಗಳಿಂದಾಗಿಯೋ ಅವರ ಎಲ್ಲ ಕಲಾಕೃತಿಗಳು ಲಬ್ಯವಾಗಿಲ್ಲ.

ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಲಭ್ಯವಾದ ಕಲಾಕೃತಿಗಳನ್ನು ಸ್ಥೂಲವಾಗಿ ಅಧ್ಯಯನ ಮಾಡುವ ಪ್ರಯತ್ನವಾಗಿದೆ. ಕಡೇಮನಿಯವರು ತಮ್ಮ ಬದುಕಿನುದ್ದಕ್ಕೂ ಅವಿರತವಾಗಿ ಬಿಡುವಿಲ್ಲದೆ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಈಗಲೂ ಕೂಡ ಅವರು ಕಲಾಕೃತಿಗಳನ್ನು ರಚಿಸುವದರಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಆದರೆ ಈ ಅಧ್ಯಯನದ ಅವಧಿಯ ಲಭ್ಯವಾದಂತಹ ಕಲಾಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿ ಅಧ್ಯಯನ ಮಾಡಲಾಗಿದೆ

ಅಧ್ಯಯನದ ವಿಧಾನ

ಯಾವುದೇ ಪ್ರಕಾರದ ಅಧ್ಯಯನದ ಹಿನ್ನಲೆಯಲ್ಲಿ ಸಂಶೋಧನೆಯನ್ನು ಕಟ್ಟಿಕೊಡುವ ಪೂರ್ವದಲ್ಲಿ ಅಧ್ಯಯನವೊಂದಕ್ಕೆ ಅದರದ್ದೇ ಆದಂತಹ ವಿಧಾನಗಳಿರುವುವು ಮತ್ತು ಈ ವಿಧಾನ ಸಮರ್ಥವಾಗಿ ಪ್ರಬಂಧ ರಚಿಸುಲಲ್ಲಿ ನೆರವಾಗುತ್ತದೆ. ಹೀಗಾಗಿ ಅಧ್ಯಯನ ವಿಧಾನ ಬಹುಮುಖ್ಯವಾದ ಅಂಗವಾಗಿದೆ. ನನ್ನ ಈ ಅಧ್ಯಯನ ಚಿತ್ರಕಲಾವಿದ ಪಿ.ಎಸ್. ಕಡೇಮನಿ ಯವರ ವ್ಯಕ್ತಿಗತ ಅಧ್ಯಯನದ ನೆಲೆಯಲ್ಲಿ ಮಾಡಲಾಗಿದೆ. ನನ್ನ ಅಧ್ಯಯನಕ್ಕೆ ಎರಡು ರಿತಿಯ ಆಕರ ಸಾಮಾಗ್ರಿಗಲನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಾಗ್ರಿ

೨. ಅನುಷಂಗಿಕ ಆಕರ ಸಾಮಾಗ್ರಿ

೧. ಮೂಲ ಆಕರ ಸಾಮಾಗ್ರಿ

ಯಾವುದೇ ವಿಷಯದ ಬಗ್ಗೆ ಸಂಶೋಧನೆ ಮಾಡಬೇಕಾದರೆಕ್ಷೇತ್ರಕಾರ್ಯ ಬಹುಮುಖ್ಯ ವಾದದ್ದು, ಕ್ಷೇತ್ರಕಾರ್ಯದ ವಿಷಯಸಂಗ್ರಹಣೆ ಮಾಡಬೇಕಾದರೆ ಮೂಲ ಅಕರ ಸಾಮಗ್ರಿಗಳು ತುಂಬಾ ಅವಶ್ಯಕವಾದದು. ಚಿತ್ರಕಲಾ ಕ್ಷೇತ್ರದ ಸಂಶೋಧನೆಗೆ ಮತ್ತು ಬೇರೆ ಬೇರೆ ಕ್ಷೇತ್ರಗಳ ಸಂಶೋಧನೆಗಳಿಗೆ ಹೋಲಿಸಿದಾಗ ಚಿತ್ರಕಲಾ ಕ್ಷೇತ್ರದ ಸಂಶೋಧನ ಕಾರ್ಯ ವಿಭಿನ್ನವಾಗಿರುತ್ತದೆ.

ಅ. ಸಂದರ್ಶನ : ನಾನು ಈ ಅಧ್ಯಯನಕ್ಕೆ ಕೈ ಹಾಕಿದಾಗ ಕಲಾವಿದ ಪಿ.ಎಸ್. ಕಡೇಮನಿಯವರನ್ನು ಹಲವಾರು ಬಾರಿ ಭೇಟಿಮಾಡಿ ಸಂದರ್ಶನ ಮಾಡಿದೆ. ಅಲ್ಲದೆ ಅವರು ಕಾರ್ಯನಿರ್ವಹಿಸುತ್ತಿರುವ ಕಲಾ ಶಾಲೆಗೆ ಹೋಗಿ ಅಲ್ಲಿನ ಉಪನ್ಯಾಸಕರು, ವಿದ್ಯಾರ್ಥಿಗಳನ್ನು ಸಂದರ್ಶಿಸುವ ಮೂಲಕ ಸಂಶೋಧನಾ ಕಾರ್ಯ ಮುಂದುವರಿಸಿದ್ದು, ಟೇಪ್‌ರೆಕಾರ್ಡರ್‌ನಲ್ಲಿ ಧ್ವನಿಮುದ್ರಣ ಕೇಳುವುದರೊಂದಿಗೆ ಬರವಣಿಗೆ ಸಾಕ್ಷೀಕರಿಸಲಾಗಿದೆ.

ಆ. ಛಾಯಾಚಿತ್ರ:

ಇ. ಕ್ಷೇತ್ರಕಾರ್ಯ: ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮತ್ತು ಇತರ ಮೂಲಗಳಿಂದ ಸಂಗ್ರಹಿಸಲಾದ ಕಲಾಕೃತಿಗಳ ಛಾಯಾಚಿತ್ರ ಮಾಡಿಕೊಂಡು, ಸಂಗ್ರಹಿಸಿ ಅಧ್ಯಯನ ಮಾಡುವುದು ಇಲ್ಲಿ ಮುಖ್ಯವಾಗುತ್ತದೆ. ಕಡೇಮನಿಯವರ ನೂರಾರು ಕಲಾಕೃತಿಗಳು ದೇಶದ ವಿವಿಧ ಭಾಗಗಳಲ್ಲಿ ಮಾತ್ರವಲ್ಲದೆ, ವಿದೇಶಗಳಲ್ಲೂ ಸಂಗ್ರಹಗೊಂಡಿವೆ. ಅವು ಅನೇಕ ಮಠ–ಮನೆಗಳಲ್ಲಿ, ಸಂಗ್ರಹಾಲಯ, ದೇವಸ್ಥಾನ, ಶಾಲಾ ಕಾಲೇಜುಗಳಲ್ಲಿ ಸಂಗ್ರಹಗೊಂಡಿವೆ. ಹೀಗೆ ಕಡೇಮನಿಯವರ ಕಲಾಕೃತಿಗಳನ್ನು ಅವು ಇರುವಲ್ಲಿಗೆ ಹೋಗಿ ಲಭ್ಯವಾದಷ್ಟು ಛಾಯಾಚಿತ್ರಗಳನ್ನು ಸಂಗ್ರಹ ಮಾಡಿಕೊಂಡು ಮಾಧ್ಯಮವಾರು, ವಿಷಯವಾರು ವಿಂಗಡಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಾಗ್ರಿ

ಪ್ರಕಟಿತ ಸಾಹಿತ್ಯ ಕೃತಿಗಳು, ಕಿರು ಸಂಶೋಧನಾ ಪ್ರಬಂಧಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು, ನಿಯತಕಾಲಿಕಗಳು, ಕಲಾವಿದರ ಕಲಾಕೃತಿಗಳ ಕುರಿತು ಬಂದ ಪತ್ರಿಕಾ ವರದಿಗಳು, ಪ್ರಕಟಿತ ಪುಸ್ತಕಗಳು, ಅಭಿನಂದನಾ ಗ್ರಂಥಗಳು ಸಂಶೋಧನಾ ಲೇಖನಗಳು. ಮುಂತಾದ ಆನುಷಂಗಿಕ ಆಕರ ಸಾಮಾಗ್ರಿಗಳನ್ನು ಬಲಸಿಕೊಂಡು ಪ್ರಸಕ್ತ ಎಂ.ಫಿಲ್. ಸಂಶೋಧನಾ ಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ಅಡಿಟಿಪ್ಪಣಿಗಳು

೧. ಡಾ.ಜಿ.ಎಸ್.ಶಿವರುದ್ರಪ್ಪ (ಪ್ರ.ಸಂ), **ಕಲೆಗಳು.**

೨. ಡಾ.ಜಿ.ಎಸ್.ಶಿವರುದ್ರಪ್ಪ (ಪ್ರ.ಸಂ), **ಕಲೆಗಳು,** ಪು.೮

ಅಧ್ಯಾಯ ಎರಡು

ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯ ಜೀವನ

ಅಧ್ಯಾಯ ಎರಡು

ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯ ಜೀವನ

"ಮನುಷ್ಯ ಮಾತು ಕಲಿತು ತನ್ನ ನೆರೆಹೊರೆಯವರೊಂದಿಗೆ ವ್ಯವಹಾರ ಪ್ರಾರಂಭಿಸಿದಾಗಲೇ ಸಾಮಾಜಿಕ ಪ್ರಜ್ಞೆ ಚಿಗುರಿದಾಗಲೇ ಕಥೆ, ನಾಟಕ, ಜೀವನಚರಿತ್ರೆಗಳು ಜೊತೆಜೊತೆಗೇ ಅಂಕುರಿಸಿರ ಬೇಕೆಂದು ತೋರುತ್ತದೆ. ಅರಿತವರಾಗಲಿ ಅರಿಯದವರಾಗಲಿ ಒಂದು ಕಡೆ ಸೇರಿ ಸುಖದುಃಖ ಗಳನ್ನು ಸುರಿದುಕೊಳ್ಳುವಲ್ಲಿ, ಇಷ್ಟಾನಿಷ್ಟಗಳನ್ನು ನಿರೂಪಿಸುವಲ್ಲಿ ಲೇಸು ಕೆಡುಗಳನ್ನು ಚರ್ಚಿಸುವಲ್ಲಿ ಆತ್ಮವೃತ್ತ ಮೊದಲಾಗುತ್ತದೆ. ಅದರ ಜೊತೆಗೆ ಪರಕೀಯ ವೃತ್ತವೂ ಶುರುವಾಗುತ್ತದೆ. ತನ್ನತನದ ಅರಿವಿರುವ ಪ್ರತಿಯೊಬ್ಬ ವ್ಯಕ್ತಿಯೂ ಮತ್ತೊಬ್ಬರೊಡನೆ ಸ್ವವಿಷಯವನ್ನು ಕಥಿಸುವಾಗ ಸಂತೋಷಪಡುತ್ತಾನೆ. ಹಾಗೆಯೇ ಗುರುಭಕ್ತಿ, ಮಿತ್ರಸ್ನೇಹ, ವಿಭೂತಿಪೂಜೆ, ಉಪಕಾರ ಸ್ಮರಣೆ ಮೊದಲಾದ ಮಾನವೀಯ ಗುಣಗಳು ಪರಕೀಯ ವೃತ್ತ ಕಥನಕ್ಕೆ ಸ್ಫೂರ್ತಿಯ ಸೆಲೆಯಾಗುತ್ತವೆ. ಈ ರೀತಿಯ ಸ್ವವಿಷಯ ನಿರೂಪಣೆ ಮತ್ತು ಪರವಿಷಯ ಕಥನ ಮಾತಿನ ಉಗಮದೊಡನೆ ಬೆಳೆದುಬಂದಿರಬೇಕು. ಪ್ರತಿಭಾಶಕ್ತಿ, ಬುದ್ಧಿ ಸಾಮರ್ಥ್ಯ ಮತ್ತು ಸಾಹಸ ಕಾರ್ಯಗಳಿಂದ ಲೋಕ ಕಲ್ಯಾಣವನ್ನು ಸಾಧಿಸುವ ಮಹಾವ್ಯಕ್ತಿಗಳ ಬಗೆಗೆ ಜನಮನಸ್ಸಿನಲ್ಲಿ ಗೌರವ ಶ್ಲಾಘನೆಯ ರೂಪದಲ್ಲಿ ಹೊರಹೊಮ್ಮುವುದೂ ಸಹಜವಾದದ್ದೇ ಆಗಿದೆ. ಮಾನವಶಕ್ತಿ ಸಾಮರ್ಥ್ಯಗಳು ಪ್ರಕಾಶಗೊಳ್ಳುವ ಪ್ರಣಾಳಿಕೆಗಳು ಹಲವು. ಅವು ಮಹಾಋಷಿಗಳ ತಪಸ್ಸಿನಲ್ಲಿ ಮಹಾಕವಿಗಳ ಕಾರ್ಯಾಚರಣೆಯಲ್ಲಿ, ಪಿರಮಿಡ್ಡು, ಗೊಮ್ಮಟ, ಮೂರ್ತಿಗಳ ಶಿಲ್ಪಕಲೆಯಲ್ಲಿ ಮಹಾಪ್ರವಾದಿಗಳ ಉಪದೇಶವಾಣಿಯಲ್ಲಿ ಮಹಾಯೋಧನ ಸಾಹಸಯಾತ್ರೆಗಳಲ್ಲಿ, ಎವರೆಸ್ಟ್ ಶಿಖರಾರೋಹಣದಲ್ಲಿ, ಲೋಕ ಕಲ್ಯಾಣಕರ ಸಾಧನೆಗಳಲ್ಲಿ, ಬದುಕಿನ ಹೋರಾಟದಲ್ಲಿ ಸತ್ತವರನ್ನು ಗೌರವಿಸುವಲ್ಲಿ, ನಾನಾ ರೂಪಗಳಲ್ಲಿ ಅಭಿವ್ಯಕ್ತವಾಗುತ್ತವೆ. ಆ ಸಾಮರ್ಥ್ಯಗಳ ಪ್ರಕಾಶನಕ್ಕೆ ವಿಭೂತಿ ತತ್ವ ಅಭಿವ್ಯಕ್ತಿಗೆ ನಿಮಿತ್ತವಾಗುವ ಪುಣ್ಯಶಾಲಿಗಳು, ಲೋಕಗೌರವಕ್ಕೆ ಭಾಜನರಾಗಿ ಸಮಾಜದ ಮಾರ್ಗದರ್ಶಕರಾಗಿ, ದೃಶ್ಯಕಲಾ ಕ್ಷೇತ್ರದಲ್ಲಿ ನಾಯಕರ ಪಟ್ಟ ಪಡೆದು ವಿರಾಜಿಸುತ್ತಾರೆ.

ಮಾತು ಬರಹಕ್ಕಿಳಿದಾಗ ಇಂತಹ ಬಾಳ್ಗತೆಗಳ ಕಲ್ಪನಾಂಶಗಳು ಕಡಿಮೆಯಾಗತೊಡಗುತ್ತವೆ. ಆಗ ಅವುಗಳು ಕೇವಲ ಐತಿಹ್ಯಗಳಾಗಿ ಉಳಿಯದೆ ಚರಿತ್ರೆಗಳಾಗುತ್ತವೆ. 'ಚರಿತ್ರೆ' ಎಂಬುದು ನಡೆ, ಅಲೆದಾಡು, ಮಾಡು, ಅಭ್ಯಸಿಸು, ವರ್ತಿಸು, ಬದುಕು, ಪಯಣಿಸು ಮೊದಲಾದ ಅರ್ಥಗಳನ್ನು ಕೊಡುತ್ತದೆ. 'ಚರ್' ಎಂಬ ಕ್ರಿಯೆಯಿಂದ ನಿಷ್ಪನ್ನಗೊಂಡ ನಾಮಪದವಾಗಿದೆ. ವರ್ತನೆ, ನಡತೆ, ಅಭ್ಯಾಸ, ಸಾಧನೆ, ಆಚರಣೆ, ಸಾಹಸಕಾರ್ಯ ಮೊದಲಾದ ಅರ್ಥಗಳ ಜೊತೆಗೆ ಚರಿತ್ರೆ. ಜೀವನ ಎಂಬ ಅರ್ಥಗಳೂ ಈ ಪದಕ್ಕುಂಟು. ಅಂದರೆ ಒಂದು ವಸ್ತುವಿನ ಇಡೀ ಬದುಕಿನ ವಿವರವನ್ನು ತಿಳಿಸತಕ್ಕದ್ದೇ ಚರಿತ್ರೆ. ಒಬ್ಬ ವ್ಯಕ್ತಿಯ ನಡತೆಯೇ ಅವನ ಚರಿತ್ರೆಯಾಗುತ್ತದೆ. ಆದರೆ ಎಲ್ಲ ವ್ಯಕ್ತಿಗಳ ಬದುಕೂ ಚರಿತ್ರೆಯ ವಸ್ತುವಾಗಲಾರದು. ಯಾವ ವ್ಯಕ್ತಿ ತನ್ನ ತ್ಯಾಗ, ತಪಸ್ಸುಗಳಿಂದ, ಬುದ್ಧಿ, ಸಾಹಸಗಳಿಂದ ಶಿಖರ ಸ್ಥಾನಕ್ಕೇರಿ, ಸಾಮಾನ್ಯ ವ್ಯಕ್ತಿಗಳಿಂದ ಪ್ರತ್ಯೇಕವೆಂಬಂತೆ ನಿಂತು ಗೌರವ ಭಾಜನನಾಗುತ್ತಾನೆಯೋ ಅಂಥಹ ವ್ಯಕ್ತಿಯ ಬದುಕು ಕಥನಯೋಗ್ಯವಾಗುತ್ತದೆ. ಆ ವ್ಯಕ್ತಿಯಲ್ಲಿ ವಿಶೇಷ ಗೌರವವಿರುವ ಲೇಖಕ, ಸಂಶೋಧಕ ಅವನ ಬದುಕನ್ನು ಕುರಿತು ಬರೆಯುವಾಗ ಆ ಬರಹ ಸಹಜವಾಗಿಯೇ ಶ್ಲಾಘನೆಯ ರೂಪ ಪಡೆಯುತ್ತದೆ. ಶ್ಲಾಘನೆಗೆ ಪಾತ್ರವಾಗಲು ಅವರ ಸಾಂಸ್ಕೃತಿಕ ಪರಿಸರವು ಬಹುಮುಖ್ಯವಾಗುತ್ತದೆ."[೧]

ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಪರಿಸರ

ಕರ್ನಾಟಕ ರಾಜ್ಯದ ಬಯಲುಸೀಮೆಯ ಜಿಲ್ಲೆ ವಿಜಾಪುರ. ಈ ಜಿಲ್ಲೆಯು ಒಂದು ಐತಿಹಾಸಿಕ ಕೇಂದ್ರವಾಗಿದ್ದು, ಅನೇಕ ರಾಜಮನೆತನದವರು ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಆಳಿ, ತಮ್ಮದೇ ಆದ ಶೈಲಿಯಲ್ಲಿ ಅತ್ಯಮೂಲ್ಯವಾದ ವಾಸ್ತು ಮತ್ತು ಶಿಲ್ಪಕಲಾಕೃತಿಯಿಂದ ಸಂಪದ್ಭರಿತವಾದ ಗುಡಿ, ಗೋಪುರ, ಬೃಹದಾಕಾರದ ಗುಹಾಂತರ ದೇವಾಲಯ ಮತ್ತು ವಿಶ್ವವಿಖ್ಯಾತ ಗೊಳಗೊಮ್ಮಟ ಮತ್ತು ಕೋಟೆ ಕೊತ್ತಲಗಳನ್ನು ನಿರ್ಮಿಸಿ ಕರ್ನಾಟಕದ ಇತಿಹಾಸದಲ್ಲಿ ವಿಜಾಪುರ ಜಿಲ್ಲೆಯ ಚರಿತ್ರೆಯನ್ನು ಸುವರ್ಣಾಕ್ಷರಗಳಿಂದ ಬರೆದಿಡುವಂತೆ ಮಾಡಿದ್ದಾರೆ. ಜಾತಿ ವ್ಯವಸ್ಥೆಯಲ್ಲಿ ಮೇಲು ಕೀಳೆಂಬ ಭಾವನೆಯನ್ನು ಕಿತ್ತೊಗೆಯಲು ಧರ್ಮದ ಸಂದೇಶವನ್ನು ಸಾರಿ ಮಾನವರಲ್ಲಿ ಪ್ರೀತಿ ವಿಶ್ವಾಸವನ್ನು ಹುಟ್ಟಿಸಿದ ಭಕ್ತಿ ಭಂಡಾರಿ ಬಸವಣ್ಣ, ನಡೆದಾಡುವ ದೇವರೆಂದೇ ಕರೆಯಲ್ಪಡುವ ಶ್ರೀ ಸಿದ್ಧೇಶ್ವರ ಶ್ರೀಗಳಂತಹ ಮಹಾನ್ ಶರಣರು ಜನಿಸಿದ ಜಿಲ್ಲೆಯಿದು. ವಿಜಾಪುರದಲ್ಲಿ ಮಹಮ್ಮದ್ ಆದಿಲ್ ಷಾ ನು ಕಟ್ಟಿಸಿದ 'ಗೋಲ ಗುಮ್ಮಟ'ವು ಜಗತ್ಪ್ರಸಿದ್ಧವಾಗಿದೆ. ಅದಿಲ್ ಷಾಹಿ ಸುಲ್ತಾನರ ಕಾಲದಲ್ಲಿ ನಿರ್ಮಾಣವಾದ ಜುಮ್ಮಾ ಮಸೀದಿ, ಉಪ್ಪಲಿ ಬುರಜ, ತಾಜ ಬಾವಡಿ, ಚೆಂದಾ ಬಾವಡಿ, ಹತ್ತಿರದಲ್ಲೇ ಇರುವ ನವರಸಪುರ ಮೊದಲಾದ ಕಟ್ಟಡಗಳು ಮತ್ತು ಸುಂದರವಾದ ತೋಟಗಳು ದೇಶಿ ವಿದೇಶಿ ಪ್ರವಾಸಿಗರ ಮನಸ್ಸನ್ನು ಸೂರೆಗೊಂಡಿವೆ.

ಜಿಲ್ಲೆಯ ಒಳನೋಟ

ಹಿಂದೆ ವಿಜಾಪುರವು ಮುಂಬೈ ಕರ್ನಾಟಕದಲ್ಲಿಯ ಒಂದು ದೊಡ್ಡ ಜಿಲ್ಲೆ. ಪಂಚ ನದಿಗಳು ಕೂಡಿ ಪಂಚಾಮೃತದ ಬೀಡಾಗಿದೆ. ಈ ಜಿಲ್ಲೆಯಲ್ಲಿ ಬಿಳಿಜೋಳ, ಗೋದಿ, ಕುಸುಬಿ, ನಿಂಬೆ, ದ್ರಾಕ್ಷಿ, ದಾಳಿಂಬೆ, ಹತ್ತಿಗಳ ಪೆರ್ನಾಡು. ವಿಭಿನ್ನ ಸಂಸ್ಕೃತಿಗಳ ಬೀಡು ಎಂದೆಲ್ಲಾ ಹೆಸರು ಪಡೆದಿರುವ ವಿಜಾಪುರ ಜಿಲ್ಲೆಯು ೧೮೮೫ರಲ್ಲಿ ಜಿಲ್ಲಾ ಕೇಂದ್ರವಾಗುವುದಕ್ಕೆ ಮೊದಲು ಎಂಟು ತಾಲೂಕುಗಳನ್ನೊಳಗೊಂಡ ಕಲಾದಗಿ ಜಿಲ್ಲೆಯು, ೧೮೬೪ ರಿಂದಲೇ ಅಸ್ತಿತ್ವದಲ್ಲಿತ್ತು. ೧೯೪೭ರ ನಂತರ ಬೀಳಗಿ, ಮುಧೋಳ, ಹಾಗೂ ಜಮಖಂಡಿಗಳ ಸೇರ್ಪಡೆಯಾಗಿ ತಾಲೂಕುಗಳ ಸಂಖ್ಯೆ ಹನ್ನೊಂದಾಗಿ, ಭೌಗೋಳಿಕವಾಗಿ ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಆದರೆ ೧೯೯೭ರ ಜಿಲ್ಲಾ ವಿಭಜನೆಯಿಂದಾಗಿ ಆ ಹೆಗ್ಗಳಿಕೆ ಇಲ್ಲವಾಯಿತು. ವಿಜಾಪುರ ಜಿಲ್ಲೆಯ ಉತ್ತರ ಮತ್ತು ವಾಯುವ್ಯ ದಿಕ್ಕುಗಳಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಮತ್ತು ಸಾಂಗ್ಲಿ ಜಿಲ್ಲೆಯ ಗಡಿ ಪ್ರದೇಶಗಳಿವೆ. ಉಳಿದ ಭಾಗ ರಾಜ್ಯದ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದ್ದು ಪೂರ್ವದಲ್ಲಿ ಗುಲಬರ್ಗಾ ಜಿಲ್ಲೆ, ಆಗ್ನೇಯ ಮತ್ತು ದಕ್ಷಿಣದಲ್ಲಿ ರಾಯಚೂರು ಜಿಲ್ಲೆ ಮತ್ತು ಪೂರ್ವದಲ್ಲಿ ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶವನ್ನು ಹೊಂದಿದೆ. ಭೌಗೋಳಿಕವಾಗಿ ಒಣಹವೆಯನ್ನು ಹೊಂದಿರುವ ಈ ಜಿಲ್ಲೆಯು ಬಯಲು ಸೀಮೆಯ ನಾಡಾಗಿದೆ(ಡಾ. ಮುನಿಸ್ವಾಮಿ, ೧೯೯೯).

ವಿಜಾಪುರ ಜಿಲ್ಲೆ ಮಹಾನ್ ಶರಣರ ಪುಣ್ಯಭೂಮಿಯಾಗಿದೆ. ಈ ನಾಡಿನಲ್ಲಿ ಸಾಹಿತಿಗಳು, ಕವಿಗಳು, ಮತ್ತು ದಾರ್ಶನಿಕರು ಸಾಹಿತ್ಯದ ಹೊನಲನ್ನು ಹರಿಸಿ ಹೋಗಿದ್ದಾರೆ. ಆದರೂ ಈ ಜಿಲ್ಲೆಗೆ ಪ್ರಕೃತಿಯ ಶಾಪ ನಿರಂತರವಾಗಿದೆ. ಒಂದಿಲ್ಲೊಂದು ವರ್ಷ ಬರಗಾಲದ ಛಾಯೆಯು ಇಲ್ಲಿನವರ ಮುಖದ ಮೇಲೆ ಹರಿದುಹೋಗುತ್ತದೆ. 'ಯಾರೇನು ಮಾಡುವುದು? ಒಲೆ ಹತ್ತಿ ಉರಿದು ನಿಲ್ಲಬಹುದಲ್ಲದೇ ಧರೆ ಹತ್ತಿ ಉರಿದೊಡೆ ನಿಲ್ಲಬಹುದೇ?' ಆದ್ದರಿಂದ ಇಲ್ಲಿಯ ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಹಾಗೂ ಶೈಕ್ಷಣಿಕ ಉನ್ನತಿಯು ಕುಂಠಿತಗೊಂಡಿದೆ. ಈ ಜಿಲ್ಲೆಗೆ ಒಳ್ಳೆಕಾಲ ಬರುವುದು ಸನ್ನಿಹಿತವಾಗಿದೆ. ಅದಕ್ಕಾಗಿ ವಿಜಾಪುರ ಜಿಲ್ಲೆಯ ಜನ ನಿರಂತರವಾಗಿ ಹೋರಾಟ ನಡೆಸಬೇಕಾಗಿದೆ.

ವಿಜಾಪುರ ಹಿತವಾದ ಹವಾಗುಣ, ಪ್ರಾಕೃತಿಕ ಪರಿಸರ ಸಂಪತ್ತುಗಳಿಂದ ಸಂಪದ್ಭರಿತವಾದ ಜಿಲ್ಲೆ. ಸದಾ ಉಷ್ಣವಾದ ವಾತಾವರಣದಿಂದಾಗಿ 'ಬರಗಾಲದ ನಾಡು' ಎಂಬುದಾಗಿ ಕುಖ್ಯಾತಿ ಪಡೆದಿದೆ. ಕಲಾ ವೈಭವ, ಶ್ರೀಮಂತ ಸಂಸ್ಕೃತಿ, ಜಾನಪದ ಸೊಗಡುಗಳಿಂದ ವೈವಿಧ್ಯಮಯವಾಗಿದೆ. ಒಟ್ಟಿನಲ್ಲಿ ಸದಾ ಒಂದಿಲ್ಲೊಂದು ಕಾರಣಕ್ಕೆ ಸುದ್ದಿಯಲ್ಲಿರುವ ವಿಜಾಪುರ ವರ್ಣರಂಜಿತ ಜಿಲ್ಲೆ.

'ಅಲಮಟ್ಟಿ' ಅಣೆಕಟ್ಟು ಜಿಲ್ಲೆಯ ಜೀವಜಲ. 'ಡೋಣಿ' ನದಿಯ ಫಲವತ್ತಾದ ಮಣ್ಣಿನ ಮೈದಾನದಲ್ಲಿಯ ಬೇಸಾಯವು ಜಿಲ್ಲೆಯ ಜನರ ಬದುಕಿಗೆ ಆಧಾರ. ವಿವಿಧತೆಯಲ್ಲಿ ಏಕತೆ ಸರ್ವಧರ್ಮಗಳ ಸಮನ್ವಯತೆಯ ಸಾಕಾರ ಸ್ವರೂಪ ಪಡೆದಿರುವ ಈ ಜಿಲ್ಲೆಯು ಬಯಲು ಸಿಮೆಯ ನಾಡು, ಪಂಚ ನದಿಗಳ ಸಂಗಮದ ಬೀಡು.

ಐತಿಹಾಸಿಕ ಹಿನ್ನೆಲೆ

"ಕಲ್ಯಾಣದ ಚಾಲುಕ್ಯರ, ಹನ್ನೆರಡನೆಯ ರಾಜಧಾನಿಯಾಗಿದ್ದ ವಿಜಾಪುರವು, ವಿಜಯಪುರ ಎಂದು ಪ್ರಸಿದ್ಧಿ ಪಡೆದಿತ್ತು. ಇದನ್ನು ವಿವಿಧ ಕಾಲಗಳಲ್ಲಿ ಬಿಜ್ಜನ ಹಳ್ಳಿ, ವಿದ್ಯಾಪುರ, ಮಹಮ್ಮದಪುರ ಎಂಬುದಾಗಿಯೂ ಕರೆಯಲಾಗುತ್ತಿತ್ತು. ದೇವಗಿರಿಯ ಯಾದವ ದೊರೆಗಳು ವಿಜಯಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ದೇವಗಿರಿಯ ಯಾದವರ ಕೊನೆಯ ದೊರೆ ಶಂಕರದೇವನು, ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಧಿಕಾರಿ ಮಲ್ಲಿಕಾಫರ್‌ನಿಂದ ಕೊಲ್ಲಲ್ಪಟ್ಟಾಗ ವಿಜಾಪುರದಲ್ಲಿ ಮುಸಲ್ಮಾನರ ಆಳ್ವಿಕೆ ಪ್ರಾರಂಭವಾಯಿತು. (ಕ್ರಿ.ಶ.೧೩೧೬)

ಬಹಮನಿಗಳ ಪತನಾನಂತರ ಅಸ್ತಿತ್ವಕ್ಕೆ ಬಂದ ಐದು ಸಾಮ್ರಾಜ್ಯಗಳ ಪೈಕಿ ಒಂದಾದ ಆದಿಲ್‌ಶಾಹಿಗಳು ವಿಜಾಪುರವು ಕೀರ್ತಿಗಳಿಸಲು ಕಾರಣರು. ಇವರ ಮೊದಲ ದೊರೆ ಯೂಸುಫ್ ಆದಿಲ್‌ಖಾನ್ ಬಹಮನಿ ಅರಸನ ಸೇನಾಪತಿಯಾಗಿದ್ದ. ಈತನು ಟರ್ಕಿ ಮೂಲದವನು. ಇವನು ಬಹಮನಿ ಅರಸರು ದುರ್ಬಲರಾದುದರ ಪ್ರಯೋಜನ ಪಡೆದು ಕ್ರಿ.ಶ. ೧೪೮೯ ರಲ್ಲಿ ತನ್ನನ್ನು ವಿಜಯಪುರದ ಷಾಹ್ ಎಂದು ಘೋಷಿಸಿಕೊಂಡ. ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಇನ್ನೂರು ವರ್ಷಗಳ ಕಾಲ ಒಂಭತ್ತು ಮಂದಿ ಆದಿಲ್‌ಷಾಹಿ ದೊರೆಗಳು ವಿಜಾಪುರವನ್ನು ಆಳಿ, ವಿಜಾಪುರವು ದಕ್ಷಿಣ ಭಾರತದ ಸಾಮ್ರಾಜ್ಯಗಳಲ್ಲಿ ಶಕ್ತಿಶಾಲಿಯೆಂದು ಗುರ್ತಿಸಲು ಕಾರಣರಾದರು. ವಿಜಾಪುರದ ಬೆಳವಣಿಗೆಯನ್ನು ಕಂಡ ವಿದೇಶಿ ಪ್ರವಾಸಿಗರು ಅದನ್ನು 'ದಕ್ಷಿಣದ ರಾಣಿ' ಎಂದು ಕರೆದರು. ಆದಿಲ್ ಷಾಹಿಗಳು ಕಲೆ, ವಾಸ್ತುಶಿಲ್ಪ, ಮತ್ತು ಸಾಹಿತ್ಯದ ಆರಾಧಕರಾಗಿದ್ದರು."[೨]

ಚಿತ್ರಕಲೆ

ಚಿತ್ರಕಲೆಯ ಬೆಳವಣಿಗೆಯಲ್ಲಿ ವಿಜಾಪುರವು ಪ್ರಮುಖ ಪಾತ್ರ ವಹಿಸಿದೆ. ವಿಜಾಪುರದ ಬಹುತೇಕ ಸುಲ್ತಾನರು ಚಿತ್ರಕಲೆಗೆ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದರು. ಪರ್ಷಿಯನ್, ತುರ್ಕಿಸ್ಥಾನ ಮತ್ತು ರೋಮ್‌ನಿಂದ ಚಿತ್ರಕಾರರನ್ನು ಯೂಸೂಫನು ಆಹ್ವಾನಿಸುತ್ತಿದ್ದನೆಂದು ಸಮಕಾಲೀನ ಗ್ರಂಥಗಳು ತಿಳಿಸುತ್ತವೆ. ಈ ಗ್ರಂಥಗಳಲ್ಲಿ ಚಿತ್ರಗಳನ್ನು ಬರೆಯಲು ಸುಲ್ತಾನರು ಆದ್ಯತೆ ನೀಡಿದರು. 'ನುಜೂಮ್ ಉಲ್ ಉಲೂಮ್' ಗ್ರಂಥದ ಘಟನೆಗಳನ್ನು ವಿವರಿಸಲು

ಚಿತ್ರಗಳನ್ನು ಬಿಡಿಸಲಾಗಿದೆ. ಇದು ಇಂದು ಡ್ಯುಬ್ಲಿನ್‌ನ ಚೆಸ್ಟರ್ ಬೆಟ್ಟ ಗ್ರಂಥಾಲಯದಲ್ಲಿದೆ. ಇವು ಲೇಪಾಕ್ಷಿಯ ಚಿತ್ರಗಳ ಪ್ರಭಾವಕ್ಕೆ ಒಳಗಾಗಿರುವುದು ಕಾಣುತ್ತದೆ. ವಿಜಾಪುರದ ಚಿತ್ರಕಲೆಯ ಇತಿಹಾಸದಲ್ಲಿ ಎರಡನೇ ಇಬ್ರಾಹಿಂ ಆದಿಲ್ ಷಾನ ಕಾಲ ಸ್ಮರಣಾರ್ಹವಾದುದು. ಇವನು ದಖ್ಖನಿ ಚಿತ್ರಕಲೆಯನ್ನು, ಶೈಲಿಯನ್ನು ಉತ್ತಮವಾಗಿ ಬೆಳೆಸಿದ. ಈ ಕಾಲದಲ್ಲಿ 'ರಾಗಮಾಲಾ' ಚಿತ್ರಶೈಲಿಯನ್ನು ಅಳವಡಿಸಿಕೊಳ್ಳಲಾಗಿದೆ. ಇಬ್ರಾಹಿಮನು ಚಿಕಣಿ ಚಿತ್ರಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ. ಇವನ ಅನೇಕ ವ್ಯಕ್ತಿಚಿತ್ರಗಳು ದೊರೆಯುತ್ತವೆ. ಸಂಸ್ಕೃತಿ ಪ್ರಿಯನಾದ ಅಲಿ ಆದಿಲ್ ಷಾ ಸಹ ಚಿತ್ರಕಲೆಗೆ ಕ್ರಿಯಾತ್ಮಕ ಬೆಂಬಲ ನೀಡಿದ. ಇವನ ಕಾಲದ ಚಿತ್ರಗಳಲ್ಲಿ ಚಲನೆ ಮತ್ತು ಜೀವಂತಿಕೆಗೆ ಹೆಚ್ಚು ಮಹತ್ವ ಕೊಡಲಾಗಿದೆ. ಪರ್ಷಿಯಾದ ಶಾಪವೀ ಶೈಲಿಯ ಪ್ರಭಾವವು ವಿಜಾಪುರದ ಚಿತ್ರಶೈಲಿಯ ಮೇಲೆ ದಟ್ಟವಾಗಿ ಗೋಚರಿಸುತ್ತದೆ. ಗೋವೆಯಲ್ಲಿದ್ದ ಪೋರ್ಚುಗೀಸರ ಪ್ರಭಾವವು ವಿಜಾಪುರದ ಚಿತ್ರಕಲೆಯ ಮೇಲೆ ಬೀರಿರುವುದುಂಟು. ಮುಸ್ಲಿಮ್ ಧರ್ಮದಲ್ಲಿ ಚಿತ್ರಕಲೆಗೆ ಅಂತಹ ಒಲವಿಲ್ಲದಿದ್ದರೂ ಧರ್ಮವನ್ನು ಮೀರಿ ಅಲ್ಲಿನ ಸುಲ್ತಾನರು ಚಿತ್ರಕಲೆಗೆ ಪ್ರೋತ್ಸಾಹವನ್ನು ನೀಡಿದರು. ಈ ಮೂಲಕ ಇಲ್ಲಿನ ಸಂಸ್ಕೃತಿಯನ್ನು ಬೆಳೆಸಿದರು.

ಅನರ್ಘ್ಯ ರತ್ನ ಭಂಡಾರ

ಮಾಜಿ ಉಪರಾಷ್ಟ್ರಪತಿ ಬಿ.ಡಿ. ಜತ್ತಿ ಅವಿಭಜಿತ ವಿಜಾಪುರ ಜಿಲ್ಲೆಯವರು. ಅನೇಕ ರೀತಿಯ ಸಾಹಿತಿಗಳು ಚಿಂತಕರು, ವಿಮರ್ಶಕರು ಈ ಜಿಲ್ಲೆಯವರು. ಶ್ರೀರಂಗರು ಸೇರಿದಂತೆ ಅನೇಕ ರಂಗಕರ್ಮಿಗಳು ಇಲ್ಲಿ ಆಗಿಹೋಗಿದ್ದಾರೆ. ಮಕ್ಕಳ ಸಾಹಿತ್ಯ ಹುಟ್ಟಿದ್ದೇ ವಿಜಾಪುರದಲ್ಲಿ ಎಂದರೆ ತಪ್ಪಲ್ಲ.

ಸೈಕ್ಲಿಂಗ್ ಕ್ರೀಡೆಯಲ್ಲಿ ಛಾಪು ಮೂಡಿಸಿದ ಜಿಲ್ಲೆ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾರತ್ನ ಗಳನ್ನು ಹೊಂದಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ದೊಡ್ಡ ಕಂಪೆನಿಗಳ ಉನ್ನತ ಹುದ್ದೆಯಲ್ಲಿ ವಿಜಾಪುರ ಜಿಲ್ಲೆಯ ಅನೇಕರು ಕಾರ್ಯನಿರ್ವಹಿಸುತ್ತಿರುವುದು ಜಿಲ್ಲೆಗೆ ಸಂದ ಗೌರವವಾಗಿದೆ.

ಶೈಕ್ಷಣಿಕ ಕ್ರಾಂತಿ

ಇತ್ತೀಚಿನ ಹತ್ತು ಹದಿನೈದು ವರ್ಷಗಳಿಂದ ವಿಜಾಪುರ ಜಿಲ್ಲೆಯು ನಾನಾರಂಗಗಳಲ್ಲಿ ಶರವೇಗದಲ್ಲಿ ಮುನ್ನಡೆಯುತ್ತಿದೆ. ವಿಜಾಪುರದ ಗಟ್ಟಿ ಜೋಳ, ಕೋಲಾರದ ಕೆನೆಮೊಸರು ಇಂದಿಗೂ ಜನಪ್ರಿಯ. ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯ ಹಾಗೂ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯ ವಿಜಾಪುರದಲ್ಲಿದೆ. ಬಿ.ಎಂ ಪಾಟೀಲ್ ಹಾಗೂ ಆಲ್ ಅಮೀನ್ ಹೆಸರಿನ ಎರಡು ವೈದ್ಯಕೀಯ ಕಾಲೇಜುಗಳಿವೆ. ಫ.ಗು. ಹಳಕಟ್ಟಿ ಮತ್ತು ಸಿಕ್ಯಾಬ್

ಇಂಜೀನಿಯರಿಂಗ್ ಕಾಲೇಜುಗಳು, ಎಂ.ಬಿ.ಎ. ಕಾನೂನು ಹಾಗೂ ವೃತ್ತಿಪರ ಅನೇಕ ಕಾಲೇಜುಗಳು ಬೆಳೆದುದಲ್ಲದೇ ಚಿತ್ರಕಲಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿರುವ ಶ್ರೀ ಸಿದ್ಧೇಶ್ವರ ಕಲಾ ಮಹಾವಿದ್ಯಾಲಯವು ಕೂಡಾ ಈ ಜಿಲ್ಲೆಯಲ್ಲಿದೆ. ಹೀಗೆ ಅಪಾರ ಸಂಖ್ಯೆಯಲ್ಲಿ ವಿವಿಧ ಸಂಸ್ಥೆಗಳು ಸೇವೆ ಸಲ್ಲಿಸುತ್ತಿವೆ. ಶಿಸ್ತು ಮತ್ತು ದೇಶಪ್ರೇಮ ಬೆಳೆಸುವ ಸೈನಿಕ ಶಾಲೆ, ಕೇಂದ್ರೀಯ ವಿದ್ಯಾಲಯ, ಶತಮಾನ ಕಂಡ ಮರಾಠಿ ವಿದ್ಯಾಲಯಗಳು ಪ್ರದೇಶದಲ್ಲಿವೆ. ಈ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಎಬ್ಬಿಸಿವೆ ಎನ್ನಬಹುದು. ಪ್ರಸ್ತುತ ಕೆ.ಎ.ಎಸ್, ಐ.ಎ.ಎಸ್, ಎನ್.ಇ,ಟಿ ಮುಂತಾದ ತರಬೇತಿ ಕಾರ್ಯನಿರ್ವಹಿಸುತ್ತಿವೆ ಅಲ್ಲದೇ ಸಿ.ಇ.ಟಿ ಪ್ರವೇಶ ಪರೀಕ್ಷಾ ಕೇಂದ್ರಗಳು ರಾಜ್ಯದಲ್ಲಿ ಗಮನಸೆಳೆಯುತ್ತಿವೆ.

ಜನಪದ ಕಲೆಗಳು

"ವಿಜಾಪುರ ಜಿಲ್ಲೆ ಎರಡು ವಿಷಯಗಳಿಗೆ ಬಹಳಷ್ಟು ಪ್ರಖ್ಯಾತಿ ಪಡೆದಿದೆ. ಒಂದು ಬರಗಾಲಕ್ಕೆ, ಇನ್ನೊಂದು ಜನಪದ ಕಲೆಗಳಿಗೆ. ಪ್ರತಿಯೊಂದು ಜಿಲ್ಲೆಯೂ ತನ್ನದೇ ಆದ ಕೆಲವು ವಿಶಿಷ್ಟ ಕಲೆಗಳನ್ನು ಮೆರೆದಿರುತ್ತದೆ. ಈ ದಿಸೆಯಲ್ಲಿ ವಿಜಾಪುರ ಜಿಲ್ಲೆಯೂ ಕೆಲವು ವಿಶಿಷ್ಟ ಜನಪದ ಕಲೆಗಳನ್ನು ಪೋಷಿಸಿಕೊಂಡು ಬಂದಿದೆ. ಅವುಗಳಲ್ಲಿ ಸಣ್ಣಾಟ, ದೊಡ್ಡಾಟ ಮತ್ತು ಶ್ರೀ ಕೃಷ್ಣ ಪಾರಿಜಾತ ಮುಖ್ಯವಾದವುಗಳು. ಈ ಸಣ್ಣಾಟ ಮತ್ತು ದೊಡ್ಡಾಟಗಳು ಕೇವಲ ಉತ್ತರ ಕರ್ನಾಟಕಕಷ್ಟೇ ಸಿಮಿತವಾಗಿದ್ದರೂ ಪಾರಿಜಾತ ಮಾತ್ರ ವಿಜಾಪುರ ಜಿಲ್ಲೆಯ ಕಲೆಯೆಂದು ಪ್ರಖ್ಯಾತಿ ಪಡೆದಿದೆ. ಇದನ್ನು ಕೆಲವು ಕಾಲದವರೆಗೆ ಸಣ್ಣಾಟ ಪ್ರಕಾರವೆಂದು ಜನ ತಿಳಿದಿದ್ದರೂ ಇದೊಂದು ವಿಶಿಷ್ಟವಾದಂತಹ ಬಯಲಾಟ ಪ್ರಕಾರವಾಗಿದೆ. ವಿಜಾಪುರ ಜಿಲ್ಲೆಯಲ್ಲಿ ಪ್ರತಿ ಇಪ್ಪತ್ತು ಹಳ್ಳಿಗೊಂದರಂತೆ ಪಾರಿಜಾತ ಆಡುವ ಮೇಳಗಳಿವೆ. ಜಮಖಂಡಿಯ ಅಪ್ಪಲಾಲ ನದಾಫ್ ಬಹಳಷ್ಟು ಪ್ರಚಾರಗೊಂಡು ಕಲೆಯ ಉಚ್ಚಮಟ್ಟವನ್ನು ಜನತೆಯ ಮನದಲ್ಲಿ ಬಿಂಬಿಸಿದ ಈ ಬಯಲಾಟ ಅವರಿಗಿಂತಲೂ ಪೂರ್ವದಲ್ಲಿ ಅಷ್ಟೇ ಸಮರ್ಥವಾಗಿ ಪ್ರದರ್ಶಿಸಲ್ಪಡುತ್ತಿತ್ತು. ಈಗಲೂ ಪಾರಿಜಾತವನ್ನು ಟಕ್ಕಳಕಿ, ಕನ್ನೂರ, ಸಾರವಾಡ, ಲೋಕಾಪುರ ಮೊದಲಾದ ಮೇಳಗಳು ಬಹಳ ಕಲಾತ್ಮಕವಾಗಿ ಪ್ರದರ್ಶಿಸುತ್ತವೆ. ಸಿನಿಮಾಯುಗದ ಸಂಸ್ಕಾರ ಎಷ್ಟೇ ದಟ್ಟವಾಗಿದ್ದರೂ ಪಾರಿಜಾತ ತನ್ನ ಮೂಲ ಜನಪದ ಕಲೆಯ ಕುಸುಮವನ್ನು ಕಡೆದುಕೊಂಡಿಲ್ಲ. ಇದು ವಿಜಾಪುರ ಜಿಲ್ಲೆಯ ಒಂದು ವಿಶಿಷ್ಟ ಕಲೆ ಎಂದು ಹೇಳಬಹುದು.

ವಿಜಾಪುರ ಜಿಲ್ಲೆಯ ಇನ್ನೊಂದು ವಿಶಿಷ್ಟಪೂರ್ಣ ಕಲೆಯೆಂದರೆ ಲಾವಣಿ ಮತ್ತು ಗೀಗೀ ಹಾಡುಗಾರಿಕೆ. ಲಾವಣಿ ಮತ್ತು ಗೀಗೀ ಮೇಳಗಳು ವಿಜಾಪುರ ಜಿಲ್ಲೆಯಲ್ಲಿರುವ ತಾಲೂಕುಗಳಲ್ಲಿ ಪ್ರತಿಯೊಂದರಲ್ಲಿಯೂ ನಾಲ್ಕೈದಾದರೂ ಕಾಣಸಿಗುತ್ತವೆ. ಗೋಪಾಳ ದುರದುಂಡಿಯಿಂದಾದಿಯಾಗಿ ಹಸನ ಮೊದಲಾದವರ ಕೈಯಲ್ಲಿ ಹದಗೊಂಡು ಗೀಗೀ ಮೇಳ

ವಿಜಾಪುರ ಜಿಲ್ಲೆಯ ಬಹುಭಾಗವನ್ನು ಇಂದಿಗೂ ವ್ಯಾಪಿಸಿಕೊಂಡಿದೆ. ವಿಜಾಪುರ ಜಿಲ್ಲೆಯಲ್ಲಿ ಉಪಲಬ್ಧವಿರುವ ಲಾವಣಿ ಗೀಗೀ ಹಾಡುಗಳ ಸಂಗ್ರಹವೇ ಕನ್ನಡ ಜಾನಪದ ಸಂಗ್ರಹದ ಸಿರಿವಂತ ಸೊತ್ತಾಗಿ ಉಳಿಯಬಹುದಾಗಿದೆ.

ಭಜನೆ ಭಾರತದ ತುಂಬೆಲ್ಲಾ ಕೇಳಿಬರುವ ಒಂದು ಗೀತ ಸಂಪ್ರದಾಯ. ಇದು ವಿಜಾಪುರ ಜಿಲ್ಲೆಯ ವೈಶಿಷ್ಟ್ಯವೆಂದು ಹೇಳಲಿಕ್ಕಾಗದಿದ್ದರೂ ವಿಜಾಪುರ ಜಿಲ್ಲೆಯ ಪ್ರತಿ ಗ್ರಾಮದಲ್ಲಿಯೂ ಜಾತಿ ಮತಗಳ ಗೋಜಿಲ್ಲದ ಭಜನೆಯ ಮೇಳಗಳಿವೆ. ವಿಜಾಪುರ ಜಿಲ್ಲೆಯಲ್ಲಿ ಕಣಿಹಲಗೆಯ ಕಲಾತ್ಮಕವಾದಂತಹ ಪ್ರದರ್ಶನವನ್ನು ಕಾಣಬಹುದು. ಇಲ್ಲಿ ಮೊಹರಂ ಹಬ್ಬ ಬಹಳ ಪ್ರಖ್ಯಾತವಾಗಿದೆ. ಅದು ಹಿಂದೂ ಮುಸ್ಲಿಂ ಬದುಕಿನ ಸಾಮರಸ್ಯಕ್ಕೆಂದು ಸಾಕ್ಷಿಯಾಗಿ ಆಚರಿಸಲ್ಪಡುತ್ತದೆ."[೩]

ಸಮಕಾಲೀನ ಕಲೆ

"ವಿಜಾಪುರ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದ ಮೊದಲ್ಗೊಂಡು ಅರ್ವಾಚೀನವಾದವರೆಗೂ ಚಿತ್ರಕಲೆ ನಿರಂತರವಾಗಿ ಸೃಷ್ಟಿಯಾಗುತ್ತಾ ಬಂದಿರುವುದನ್ನು ಗಮನಿಸಬಹುದು. ಆಧುನಿಕತೆಯ ದಟ್ಟ ಪ್ರಭಾವದ ಕಾರಣವಾಗಿದೆ. ಇಪ್ಪತ್ತನೆಯ ಶತಮಾನದ ದೃಶ್ಯಕಲಾ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸಿತು. ಆರಂಭದ ದಶಕಗದಲ್ಲಿ ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟ ಮುಂಬೈ ಜೆ.ಜೆ ಕಲಾಶಾಲೆಯಲ್ಲಿ ಅಕಡೆಮಿಕ್ ದೃಶ್ಯಕಲಾ ಶಿಕ್ಷಣದೊಂದಿಗೆ ಆಧುನಿಕ ದೃಶ್ಯಕಲಾ ಶಿಕ್ಷಣಕ್ಕೂ ಹೆಚ್ಚಿನ ಪ್ರಾಶಸ್ತ್ಯ ದೊರೆಯಲಾರಂಭಿಸಿತು. ಈ ಅಕಾಡೆಮಿಕ್ ಶಿಕ್ಷಣ ಪದ್ಧತಿಯು ಸಹಜವಾಗಿಯೇ ವಿಜಾಪುರ ಕಲಾವಿದರ ಮೇಲೂ ಆಯಿತು. ಹಾಗಾಗಿ ಸಹಜವಾಗಿ ಆ ಶೈಲಿಯನ್ನೇ ಅನುಸರಿಸಿ, ಅನುಕರಿಸಿ ಮುಂದುವರೆಸಿಕೊಂಡು ಬರುವಂತಾಯಿತು. ಮುಂಬೈನಲ್ಲಿ ನೆಲೆಸಿದ್ದ ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ಎ. ಎ. ಅಲಮೇಲಕರ್ ಅವರು ಮೂಲತಃ ಮುಂಬೈ ಕರ್ನಾಟಕದ ವಿಜಾಪುರ ಜಿಲ್ಲೆಗೆ ಸೇರಿದವರೆಂದು ತಿಳಿದು ಬರುತ್ತದೆ. ಅವರ ಪೂರ್ವಜರು ಈ ಜಿಲ್ಲೆಯ ಸಿಂಧಗಿ ತಾಲೂಕಿನ ಅಲಮೇಲದವರು. ತಮ್ಮ ಜೀವಿತಾವಧಿಯಲ್ಲಿ ಅಲಮೇಲಕರ್ ಅವರು ಜಿಲ್ಲೆಯ ಕಲಾವಿದರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಇವರ ಕಲಾಕೃತಿಗಳು ಕರ್ನಾಟಕದ ಹಲನಾರು ಕಲಾವಿದರ ಮೇಲೂ ಪ್ರಭಾವ ಬೀರಿವೆ. ಡಿ.ವಿ.ಹಾಲಭಾವಿಯವರ ಪೂರ್ವಿಕರು ವಿಜಾಪುರ ಜಿಲ್ಲೆಯ 'ಗೊರೆ' ಗ್ರಾಮದವರಾಗಿದ್ದು ಶ್ರೇಷ್ಠ ಬಣ್ಣಗಾರರೂ, ವಿದ್ವಾಂಸರೂ ಆಗಿದ್ದು ತಿಕೋಟ ಮೊದಲಾದ ಸ್ಥಳಗಳಲ್ಲಿ ಚಿತ್ರಿಸುವ ಕಾರ್ಯದಲ್ಲಿ ನೆರವಾಗಿದ್ದರೆಂಬುದಾಗಿ ದಾಖಲೆಗಳಿಂದ ತಿಳಿದುಬರುತ್ತದೆ. ತದನಂತರದ ಪೀಳಿಗೆಯ ಈ ಜಿಲ್ಲೆಯ ಅನೇಕ ಕಲಾವಿದರು ನಾಡಿ ನಾದ್ಯಂತ ಪ್ರಸಿದ್ಧರಾಗಿರುವರು. ಎಂ.ವಿ ಮಿಣಜಗಿ, ಎ.ಎಂ ಜೋಲಾಪುರಕರ್, ಎಂ.ಎಸ್ ಜತ್ತಿ, ಎಂ.ಬಿ. ಪಾಟೀಲ್, ವಿ.ಎಸ್. ಬುರಣಾಪುರ, ಜಿ.ಆರ್ ಈರಣ್ಣ, ಡಾ. ಶಿವಾನಂದ

ಬಂಟನೂರ, ಸುನೀಲ ಮಮದಾಪುರ, ಎಂ.ಎಂ. ಕನ್ನೂರ, ಶಿವಾನಂದ ನಾಗೋರೆ ಮೊದಲಾದ ಕಲಾವಿದರನ್ನು ಹೆಸರಿಸಬಹುದು."[೪]

ಯುವ ಕಲಾವಿದರಲ್ಲಿ ಪ್ರಮುಖವಾಗಿ ಎದ್ದುಕಾಣುವಂತಹವರು ಇನ್ನೂ ಅನೇಕರಿದ್ದಾರೆ. ಅವರಲ್ಲಿ ಸುನೀಲ್ ಮಮದಾಪುರ ಕೂಡ ಒಬ್ಬರು. ರಾಷ್ಟ್ರಮಟ್ಟದ ಪ್ರಶಸ್ತಿ ಗಳಿಸಿರುವ ಇವರ ಕಲಾಕೃತಿಗಳು ಚಿಂತನಶೀಲತೆಯಿಂದ ಕೂಡಿದ ಗಮನಾರ್ಹ ಸೃಷ್ಠಿಗಳಾಗಿವೆ. ಬಸವನ ಬಾಗೇವಾಡಿಯ ಚೌದರಿ, ದೇವರ ಹಿಪ್ಪಗಿರಿಯ ಗುರಪ್ಪ ಮನ್ನೂರ, ಆರ್.ಸಿ ಅಂಗಡಿ, ವಿಜಾಪುರದ ಶ್ರೀಧರ ಚೌವ್ಹಾಣ, ಶ್ರೀಶೈಲ ಹೂಗಾರ್, ಎಂ.ಜಿ. ಹೆಗಡೆ, ರುದ್ರಗೌಡ ಇಂಡಿ, ನಂದಬಸಪ್ಪ ವಾಡೆ, ರಮೇಶ್ ಚೌವ್ಹಾಣ, ಶಿಲ್ಪಾ ಕಬ್ಬಿಣಕಂತಿ ಮುಂತಾದ ಯುವ ಕಲಾವಿದರ ಸಾಧನೆ ಗಮನಾರ್ಹವಾದದ್ದು. ಭವಿಷ್ಯದಲ್ಲಿ ಚಿತ್ರಕಲಾ ಪ್ರಪಂಚಕ್ಕೆ ಮಹತ್ವದ ಕೊಡುಗೆಯನ್ನೀಯುವ ಭರವಸೆಯನ್ನು ಮೂಡಿಸಿದ್ದಾರೆ.

ಕಲಾ ಸಂಸ್ಥೆಗಳು

"ಜಿಲ್ಲೆಯಲ್ಲಿ ಕಲಾಶಿಕ್ಷಣ ನೀಡಲೆಂದೇ ಹಲವಾರು ಸಂಸ್ಥೆಗಳು ಹುಟ್ಟಿಕೊಂಡು ಕಾರ್ಯನಿರತವಾಗಿವೆ. ವಿಜಾಪುರದ ಶ್ರೀ ಸಿದ್ಧೇಶ್ವರ ಲಲಿತಕಲಾ ಮಹಾವಿದ್ಯಾಲಯ, ಇಂಡಿಯ ಆದರ್ಶ ಚಿತ್ರಕಲಾ ವಿದ್ಯಾಲಯ, ಹೂವಿನ ಹಿಪ್ಪಗಿರಿಯ ಶ್ರೀ ರೇವಣಸಿದ್ಧೇಶ್ವರ ಸಂಘದ ಚಿತ್ರಕಲಾ ಶಾಲೆ, ಅಮೀನಘಡದ ಅಲ್ಲಮಪ್ರಭು ಚಿತ್ರಕಲಾ ವಿದ್ಯಾಲಯ, ಮುದ್ದೇಬಿಹಾಳದ ಗುರುಪಾದಪ್ಪ ಚಿತ್ರಕಲಾ ಶಾಲೆ, ಬಸವನವಾಗೇವಾಡಿಯ ರವಿವರ್ಮ ಚಿತ್ರಕಲಾ ವಿದ್ಯಾಲಯ ಮತ್ತು ಇದೇ ತಾಲೂಕಿನ ನಿಡಗುಂದಿಯ ಅಮರಶಿಲ್ಪಿ ಜಕಣಾಚಾರಿ ಶಿಲ್ಪಕಲಾ ಶಾಲೆ ಮತ್ತು ವಿಜಾಪುರದ ಸಿದ್ಧಲಿಂಗ ಲಲಿತಕಲಾ ಸಂಘ ಮುಂತಾದವುಗಳನ್ನು ಹೆಸರಿಸಬಹುದು."[೫]

ಪಿ.ಎಸ್.ಕಡೇಮನಿಯವರ ಬಾಲ್ಯಜೀವನ

ಈ ಪ್ರಪಂಚದಲ್ಲಿ ಹುಟ್ಟುವುದು ಸಾಯುವುದು ಸಹಜವಾದುದು ಮತ್ತು ಸ್ವಾಭಾವಿಕವಾದುದು. ಹುಟ್ಟಿದವರು ಸಾಯಲೇಬೇಕು. 'ಜಾತಸ್ಯ ಮರಣಂ ದೃವಂ' ಆಕಾಶದಲ್ಲಿ ನಕ್ಷತ್ರಗಳು ಮೂಡುತ್ತವೆ ಮತ್ತು ಬೀಳುತ್ತವೆ. ನಕ್ಷತ್ರಗಳಂತೆಯೇ ಸಾಮಾನ್ಯ ಜನತೆಯ ಜೀವನ. ಆದರೆ ಕೆಲವೊಂದು ಗ್ರಹಗಳು ಶಾಶ್ವತವಾಗಿ ಸೂರ್ಯನ ಸುತ್ತಲೂ ತಿರುಗುತ್ತಿರುತ್ತವೆ. ಈ ಪ್ರಪಂಚದಲ್ಲಿ ಗ್ರಹಗಳಂತಿರುವ ಮಾನವ ಜೀವಿಗಳು ಇಹಲೋಕದಿಂದ ಕಣ್ಮರೆಯಾದರೂ ತಮ್ಮ ವೈಯಕ್ತಿಕ ಸಾಧನೆ ತಪಸ್ಸುಗಳಿಂದ ಪಡೆದ ಅಮರತ್ವ ಫಲಗಳ ಉದ್ಧರಕ್ಕಾಗಿ, ಪ್ರಗತಿಗಾಗಿ ಅನುಕರಿಸಲು ಕೊಟ್ಟುಹೋಗಿರುತ್ತಾರೆ. ಅಂಥ ಐತಿಹಾಸಿಕ ವ್ಯಕ್ತಿಗಳ ಆಗುಹೋಗುಗಳನ್ನು ಪ್ರತಿಬಿಂಬಿಸುವುದೇ ಈ ಅಧ್ಯಯನದ ಸಾರ.

ವ್ಯಕ್ತಿ ಕೇಂದ್ರಿತ ಚರಿತ್ರೆಗಳು ಪ್ರಪಂಚದಲ್ಲಿ ಹುಟ್ಟಿಬರುವ ಜೀವಿಗಳಿಗೆ ಸ್ಫೂರ್ತಿ, ಪ್ರಭಾವಗಳನ್ನು ಬೀರಿ ಅವರಂತೆಯೇ ಅಮರರಾಗಲು ಪ್ರೇರೇಪಿಸುತ್ತವೆ. ಕಲಾವಿದರಾಗಲಿ, ಸಾಹಿತಿಗಳಾಗಲಿ, ವಿಜ್ಞಾನಿಗಳಾಗಲಿ, ತತ್ವಸಿದ್ಧಾಂತಗಳನ್ನು ವಿವರಿಸುವ ತತ್ವಜ್ಞಾನಿಗಳಾಗಲಿ ಜೀವನ ಸಾಧನೆಗಳಿಂದ ಸ್ಫೂರ್ತಿ ಪ್ರೇರಣೆ ಮಾರ್ಗದರ್ಶಕ ದಾರ್ಶನಿಕರಾಗಿ ಇತಿಹಾಸದ ಪುಟಗಳಲ್ಲಿ ಮೂಡಿಬರುತ್ತಾರೆ. ಅಂಥ ಐತಿಹಾಸಿಕ ಮನೆತನ ವಿಜಾಪುರ ಜಿಲ್ಲೆಯ, ತಾಲೂಕಿನ ಕಮತೆ ಗ್ರಾಮದ ಕಡೇಮನಿಯವರ ಮನೆತನವಾಗಿದೆ.

ವಿಜಾಪುರ ಜಿಲ್ಲೆಯ ಕುಮತೆ ಎಂಬ ಚಿಕ್ಕ ಗ್ರಾಮ ಬಹುಸಂಖ್ಯೆಯುಳ್ಳ ರೈತಾಪಿ ಕುಟುಂಬ. ಹೃದಯ ಶ್ರೀಮಂತಿಕೆ ಹೊಂದಿರುವ ಹಿರಿಯರಾದ ಶಿದಗಿರೆಪ್ಪ, ಸತಿ ಈರಮ್ಮ ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಮೂರು ಜನ ಹೆಣ್ಣು ಮಕ್ಕಳು. ನಾಲ್ಕು ಜನ ಗಂಡು ಮಕ್ಕಳಲ್ಲಿ ಚಿಕ್ಕ ಮಗನಾಗಿ ಪೊನ್ನಪ್ಪ ಕಡೇಮನಿ ಅವರು ೧೯೫೫ ಜನವರಿ ೧ ರಂದು ಸ್ವಗ್ರಾಮ ಕಮತೆಯಲ್ಲಿ ಜನಿಸಿದರು.

ಅಪ್ಪಟ ರೈತಾಪಿ ಅವಿಭಕ್ತಿ ಕುಟುಂಬದಲ್ಲಿ ಶಿಕ್ಷಣ ಅಷ್ಟಕಷ್ಟೇ. ಆದರೆ ಸಂಸ್ಕೃತಿ ಸದಾಚಾರ ಗಳಲ್ಲಿ ಸಿರಿವಂತರು. ಇಂಥ ಪರಿಸರ ಅವರ ಮೇಲೆ ಗಾಢವಾದ ಪ್ರಭಾವ ಬೀರಿತು. ಇಂತಹ ಅವಿಭಕ್ತ ಕುಟುಂಬದಲ್ಲಿ ೪೦ರಿಂದ ೪೫ ಜನರಿರುವಂತಹ ಒಕ್ಕಲುತನದ ಮನೆತನ. ದಿನನಿತ್ಯ ಮನೆಯ ಜನರೆಲ್ಲರೂ ಒಕ್ಕಲುತನದಲ್ಲಿಯೇ ತೊಡಗುವಂತಹುದು. ಒಕ್ಕಲುತನದ ಅವಿಭಾಜ್ಯ ಕೆಲಸಗಳಾಗಿರುವಂತಹ ಎಲ್ಲಾ ಕೆಲಸಗಳನ್ನೂ ಕೂಡಾ ಕಲಾವಿದರು ಮೈಗೂಡಿಸಿಕೊಂಡಿದ್ದರು. ಬಿತ್ತುವುದೊಂದನ್ನು ಬಿಟ್ಟು ಉಳಿದ ಎಲ್ಲಾ ಒಕ್ಕಲುತನದ ಕೆಲಸಗಳನ್ನು ಇವರು ನಿಭಾಯಿಸುತ್ತಿದ್ದರು.

ಇಂತಹ ಸುಸಂಸ್ಕೃತ ಮನೆತನದಲ್ಲಿ ಹುಟ್ಟಿದ ಪಿ.ಎಸ್. ಕಡೇಮನಿಯವರ ಪ್ರಾಥಮಿಕ ಶಿಕ್ಷಣವು ೧೯೬೧ರಲ್ಲಿ ಸ್ವಗ್ರಾಮ ಕುಮತೆಯಲ್ಲಿಯೇ ಪ್ರಾರಂಭಿಸಿದರು. ಬಾಲ್ಯದಲ್ಲಿಯೇ ಇವರಲ್ಲಿ ಹುದುಗಿದ್ದಂತಹ ಸೃಜನಶೀಲತೆಯನ್ನು ಮನಗಂಡು, ಅಜ್ಜಿ ಕಾಶೀಬಾಯಿ ಮೊಮ್ಮಗನ ಚಲನ ವಲನಗಳನ್ನು ಗಮನಿಸಿ ಭವಿಷ್ಯದ ಬಗ್ಗೆ ಗಮನಹರಿಸಿ ಪುಷ್ಠಿ ನೀಡಿದಳು. ಕಡೇಮನಿಯವರ ತಂದೆಯವರು ಹಬ್ಬ ಹರಿದಿನಗಳಲ್ಲಿ ಗೋಡೆಗಳನ್ನು ಸೆಗಣಿಯಿಂದ ಸಾರಿಸಿ, ಹುರಮಂಜು ಮತ್ತು ಸುಣ್ಣದಿಂದ ಅಂದವಾದ ಹಳ್ಳಿಯ ಜನಪದ ಚಿತ್ರಗಳನ್ನು ಬಿಡಿಸುತ್ತಿದ್ದರು. ಅಲ್ಲದೇ ಕಾರದ ಹುಣ್ಣಿಮೆಗೆ ಎತ್ತುಗಳಿಗೆ ಬಣ್ಣಹಚ್ಚಿ ಶೃಂಗರಿಸುತ್ತಿದ್ದರು. ಅದೇರೀತಿ ಅವರ ತಾಯಿ ಈರಮ್ಮನವರೂ ಕೂಡ ಕಲಾವಿದ ಕಡೇಮನಿಯವರ ಕಲೆಗೆ ಹುರುಪನ್ನು ಕೊಟ್ಟವರೆಂದರೆ, ತಾಯಿಯವರು. ಏಕೆಂದರೆ? ಅವರು ಕೂಡ ಕೌದಿ ಮತ್ತು ಕಸೂತಿ ಕಲೆಗಳಲ್ಲಿ ಸೈ ಎನಿಸಿಕೊಂಡ ವರು. ತಮ್ಮ ದಿನನಿತ್ಯದ ಕೆಲಸಗಳನ್ನು ಬದಿಗೊತ್ತಿ ಬಿಡುವಿನ ವೇಳೆಯಲ್ಲಿ ಕೌದಿ ಕಲೆ, ಕಸೂತಿ ಕಲೆ, ರಂಗವಲ್ಲಿ ಇಂಥಹ ಅಪರೂಪದ

ಗ್ರಾಮೀಣ ಕಲೆಗಳನ್ನು ನಿರಂತರವಾಗಿ ಮಾಡುತ್ತಿದ್ದರು. ಆ ತಾಯಿಯವರ ಕೌದಿ ಮತ್ತು ಕಸೂತಿ ಕಲೆಗೆ ರಾಜ್ಯ ಜನಪದ ಅಕಾಡೆಮಿಯ ಪ್ರಶಸ್ತಿಯು ಕೂಡಾ ಲಭಿಸಿತ್ತು. "ಅವರಿಂದಲೇ ಕಲೆಯು ನನ್ನಲ್ಲಿ ಮೂಡಿರಲು ಸಾಧ್ಯ"[೬] ಎಂಬುದಾಗಿ ಕಲಾವಿದರು ಹೇಳುತ್ತಾರೆ. ಆ ಬಾಲ್ಯಾವಸ್ಥೆಯಲ್ಲಿ ಈ ಎರಡು ಘಟನೆಗಳು ಕಲಾವಿದರನ್ನು ಚಿತ್ರಕಲೆಯ ಕಡೆಗೆ ಸೆಳೆಯಲು ಸಾಧ್ಯವಾಯಿತು.

ಪ್ರಾಥಮಿಕ ಶಿಕ್ಷಣ

ಈ ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣದೊಂದಿಗೆ ಶಾಲಾ ಬಿಡುವಿನ ವೇಳೆಯಲ್ಲಿ ತಮ್ಮ ತೋಟದಲ್ಲಿ ಸಿಗುವ ಮಣ್ಣನ್ನು ಹದಗೊಳಿಸಿ ಎತ್ತು, ಈಶ್ವರ, ಲಿಂಗ ಹಬ್ಬಹರಿದಿನಗಳಲ್ಲಿ ಗೊಂಬೆಗಳನ್ನು ಮತ್ತು ದೀಪಾವಳಿಯಲ್ಲಿ ಆಕಾಶ ಬುಟ್ಟಿ, ರಂಗವಲ್ಲಿಗಳನ್ನು ಮಾಡಿ ಹಳ್ಳಿಯ ಜನರ ಗಮನವನ್ನು ತಮ್ಮತ್ತ ಸೆಳೆಯುತ್ತಿದ್ದರು. ಶಾಲೆಯಲ್ಲಿ ಪಾಟಿಯ ಮೇಲೆ ಚಿತ್ರಗಳನ್ನು ಬರೆದು ಗುರುಗಳಾದ ಶ್ರೀ ವಿ. ಬಿ. ಅಡಹಳ್ಳಿ ಅವರಿಗೆ ತೋರಿಸುತ್ತಿದ್ದರು. ಗುರುಗಳು ಅವರ ಕಲೆಯನ್ನು ಕಂಡು ಪ್ರೋತ್ಸಾಹಿಸುತ್ತಿದ್ದರು. ಓದು, ಬರಹ, ಚಿತ್ರಗಳಿಗಷ್ಟೇ ಆಸಕ್ತಿಯನ್ನು ಸೀಮಿತಗೊಳಿಸದೇ ವಿವಿಧ ಆಟಗಳಲ್ಲಿಯೂ ಮುಂಚೂಣಿಯಲ್ಲಿರುತ್ತಿದ್ದರು. ಶಾಲೆಗೆ ಮಧ್ಯಂತರ ಧೀರ್ಘಾವಧಿ ರಜೆ ಹಾಗೂ ಬೇಸಿಗೆ ರಜೆಗಳಲ್ಲಿ ಸಮಯ ಹಾಳು ಮಾಡದೆ ಸಹೋದರರೊಡಗೂಡಿ ತೋಟದಲ್ಲಿ ಮೇಕೆ, ಹಸು, ಎಮ್ಮೆಗಳನ್ನು ಮೇಯಿಸುವ ಹೊಣೆಗಾರಿಕೆಯೂ ಇವರದ್ದಾಗಿತ್ತು. ನಂತರ ೧೯೭೯ರಲ್ಲಿ ಇವರ ಪ್ರಾಥಮಿಕ ಶಿಕ್ಷಣ ಪೂರ್ಣ ಗೊಂಡಿತು.

ಮಾಧ್ಯಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣ ಪೂರ್ಣಗೊಂಡ ನಂತರ ತಮ್ಮೂರಿನ ಸಮೀಪದಲ್ಲಿರುವ ಬಬಲೇಶ್ವರದ ಶಾಂತೇಶ್ವರ ಪ್ರೌಢಶಾಲೆಯಲ್ಲಿ ೧೯೭೯ರಲ್ಲಿ ಮಾಧ್ಯಮಿಕ ಶಿಕ್ಷಣಕ್ಕೆ ಸೇರಿಕೊಂಡ ನಂತರ ಅಭ್ಯಾಸಕ್ಕಿಂತಲೂ ಚಿತ್ರಬಿಡಿಸುವ ಅಭಿರುಚಿ ಹೆಚ್ಚಾಯಿತು. ಇದಕ್ಕೆ ಕಾರಣ ಚಿತ್ರಕಲಾ ಶಿಕ್ಷಕರಾದ ಶ್ರೀ ಬಿ. ಡಿ. ಮೊಕಾಶಿಯವರು. ಇವರೊಬ್ಬ ಅಗ್ರಮಾನ್ಯ ಕಲಾವಿದರು. ಅವರು ಚಿತ್ರಕಲೆ ಕಲಿಸುವುದರೊಂದಿಗೆ ಒಳ್ಳೆಯ ಅಡಿಪಾಯವನ್ನು ಹಾಕಿದಂತಹ ಶಿಕ್ಷಕರೆಂದು ಕಡೇಮನಿಯವರು ತಮ್ಮ ಗುರುಗಳನ್ನು ನೆನೆಯುತ್ತಾರೆ. ಎಸ್.ಎಸ್.ಎಲ್.ಸಿ. ಮುಗಿಸಿ ಹೊರಬರುವಾಗ "ನೀನು ಚಿತ್ರಕಲೆಯನ್ನು ಅಭ್ಯಸಿಸಿದರೆ ಉತ್ತಮ ಭವಿಷ್ಯ ಕಾಯ್ದಿದೆ." ಎಂದು ಹುರಿದುಂಬಿಸಿ ಬೆನ್ನುತಟ್ಟಿದರು. ಮೊಕಶಿ ಗುರುಗಳು ಹೇಳಿದ್ದನ್ನು ಗಮನದಲ್ಲಿರಿಸಿಕೊಂಡು ಹಟತೊಟ್ಟು ಚಿಕ್ಕಪ್ಪನ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು. 'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎನ್ನುವಂತೆ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು

ಕಡೇಮನಿಯವರನ್ನು ಒಕ್ಕಲುತನಕ್ಕೆ ಸೆಳೆದುಕೊಂಡರು. ಹಲವು ದಿನಗಳು ಕಳೆಯುತ್ತಿದ್ದ ಹಾಗೆ ಒಕ್ಕಲುತನದ ಎಲ್ಲಾ ಕೆಲಸಗಳನ್ನು ಪೂರ್ಣವಾಗಿ ಅರಿತುಕೊಂಡು ಭಾವಿ ಜೀವನವನ್ನು ಕೃಷಿಕರಾಗಿಯೇ ಕಳೆಯುವರೇನೋ ಎನ್ನುವಷ್ಟರ ಮಟ್ಟಿಗೆ ಕೆಲಸಗಳಲ್ಲಿ ಬೆರೆತರು. ಆದರೆ 'ಬೆಳೆಯ ಸಿರಿ ಮೊಳಕೆಯಲ್ಲಿ' ಎಂಬಂತೆ ಒಳಗೊಳಗೆ ಚಿತ್ರಕಲೆ ಕಲಿಯುವ ಕನಸನ್ನೂ ನನಸು ಮಾಡಿಕೊಳ್ಳಲು ಆತುರ ಹೆಚ್ಚಾಯಿತು. ಚಿಕ್ಕಪ್ಪನ ಮೊರೆಹೋಗಿ ತನ್ನ ಹಟವನ್ನು ಮುಂದುವರಿಸಿ ಅವರ ಒಪ್ಪಿಗೆ ದೊರೆಯುವವರೆಗೆ ಬಿಡಲಿಲ್ಲ. ಆಗ ಅವರು "ಆಯ್ತು ನಿನ್ನಾಸೆಯಂತೆ ಚಿತ್ರಕಲೆಯನ್ನೇ ಕಲಿಯಲು ಹೋಗು." ಎಂದು ಧಾರವಾಡಕ್ಕೆ ಕಳುಹಿಸಿದರು.

ಅಡಿಟಿಪ್ಪಣಿಗಳು

೧. ದೇಜಗೌ, **ತೀನಂಶ್ರೀ ಜೀವನ ಚರಿತ್ರೆ** ಮುನ್ನುಡಿಯಿಂದ.

೨. ವೆಂಕಟೇಶ ಮಾಚನೂರ, ಡಾ.ಹೆಚ್.ಜಿ.ದಡ್ಡಿ(ಸಂ), **ಪರಂಪರೆ ಮಾಲಿಕೆ ವಿಜಾಪುರ** ಪು.೮೯

೩. ರಾಮಪ್ರಸಾದ ಎನ್.ಎಸ್.(ಸಂ), **ವಿಶ್ವ ಕನ್ನಡ ಸಂಪುಟ ೩,** ಪು.೩೧೯, ೩೨೧

೪. ಶಿವಾನಂದ ಎಚ್. ಬಂಟನೂರ, **ದೃಶ್ಯ ಪದದೃಶ್ಯ,** ಪು.ಸಂ: ೮೧

೫. ಅದೇ, ಪು. ೮೫, ೮೬

೬. **ಪಿ.ಎಸ್.ಕಡೇಮನಿಯವರೊಂದಿಗೆ ಸಂದರ್ಶನ,** ೧೪.೦೨.೨೦೧೪

ಅಧ್ಯಾಯ ಮೂರು

ಕಲಾ ಶಿಕ್ಷಣ ಮತ್ತು ವೃತ್ತಿ ಜೀವನ

ಅಧ್ಯಾಯ ಮೂರು

ಕಲಾ ಶಿಕ್ಷಣ ಮತ್ತು ವೃತ್ತಿ ಜೀವನ

ಕಲಾ ಶಿಕ್ಷಣ

ಧಾರವಾಡ ಮಲೆನಾಡಿನ ಸೆರಗಿನಲ್ಲಿದ್ದರೂ ಕೂಡ ಬಯಲುಸೀಮೆಯ ಕೆಚ್ಚನ್ನು ಹೊಂದಿದ್ದು, ರಾಜ್ಯದ ಸಾಂಸ್ಕೃತಿಕ ರಾಜಧಾನಿಯೆನಿಸಿದೆ. ವಿದ್ಯೆಯ ತವರೂರಾಗಿರುವ ಇದು, ಕಲೆ, ಸಾಹಿತ್ಯ, ಸಂಗೀತ, ನಾಟ್ಯ, ಶಿಲ್ಪ, ಇತಿಹಾಸ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರಮಟ್ಟ ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿದ ಪ್ರತಿಭಾವಂತರನ್ನು ಪಡೆದ ಭೂಮಿ. ಧಾರ್ಮಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ದಾಖಲೆಗಳನ್ನು ನಿರ್ಮಿಸಿದ ಪುಣ್ಯಭೂಮಿ. ಸರ್ವರಿಗೂ ಮಂಗಳವನ್ನೇ ಬಯಸುವ ತಾಯಂದಿರು ರಂಗೋಲಿ ಹಾಕಿ, ಮಕ್ಕಳಿಗೆ, ಹಿರಿಯರಿಗೆ ಚಿತ್ರದ ಮೂಲಕ ಸಂಸ್ಕಾರದ ಪಾಠವನ್ನು ತಿಳಿಸುತ್ತಾರೆ.

ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಧಾರವಾಡದ ಕಿರುನೋಟ

ಈ ಕಲಾಶಾಲೆಯು ೧೯೩೫ರಲ್ಲಿ ಪ್ರಾರಂಭವಾಯಿತು. ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಪ್ರಾರಂಭವಾದ ಪ್ರಪ್ರಥಮ ಖಾಸಗಿ ಚಿತ್ರಕಲಾ ಶಾಲೆಯಿದು. ಇದನ್ನು ಶ್ರೀ ಡಿ.ವಿ. ಹಾಲಭಾವಿಯವರು ಪ್ರಾರಂಭಿಸಿದರು. ೧೯೫೭ರಲ್ಲಿ ಈ ಕಲಾಮಂದಿರವು 'ಡ್ರಾಯಿಂಗ್ ಶಿಕ್ಷಕರ ತರಬೇತಿ ಕೇಂದ್ರ' ವಾಗಿ ಗುರುತಿಸಲ್ಪಟ್ಟಿತ್ತು. ಈ ಕಲಾಶಾಲೆಯಲ್ಲಿ ರಾಜ್ಯದ ಪ್ರಥಮ ಮಹಿಳಾ ಕಲಾವಿದೆ ಹಾಗೂ ಉಪನ್ಯಾಸಕಿ ಎಂಬ ಕೀರ್ತಿಗೆ ಪಾತ್ರರಾದ ತಾರಾ ಪವಾರ ಅವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರತೀ ವರ್ಷವು ಅನೇಕ ಕಲಾಚಟುವಟಿಕೆಗಳು ಕಲಾಶಾಲೆಯಲ್ಲಿ ನಡೆಯುತಿದ್ದವು. ಅಂತಹ ಸಂದರ್ಭದಲ್ಲಿ ಈ ಕಲಾಶಾಲೆಗೆ ಪದ್ಮಶ್ರೀ ಡಾ. ಕೆ.ಕೆ. ಹೆಬ್ಬಾರ್, ಪದ್ಮಶ್ರೀ ಎಂ.ಆರ್. ಅಚರೇಕರ್ ಮುಂತಾದ ಜಗತ್ಪ್ರಸಿದ್ದ ಚಿತ್ರಕಲಾವಿದರು ಭೇಟಿನೀಡಿ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಈ ಕಲಾಶಾಲೆಯಲ್ಲಿ ಸಮಕಾಲೀನ ಕಲೆಯ ಕುರಿತು, ಹೊಸ ಹೊಸ ತಂತ್ರ, ವಿಧಾನಗಳ ಕುರಿತಾಗಿ ಚರ್ಚೆ ಮತ್ತು ಪ್ರಾತ್ಯಕ್ಷಿಕೆಗಳು

ನಡೆಯುತ್ತಾ ಬಂದಿವೆ. ಅಲ್ಲದೆ ಕಲಾಶಿಬಿರಗಳು, ಕಲಾಪ್ರದರ್ಶನಗಳು ಮೇಲಿಂದ ಮೇಲೆ ನಡೆಯುತ್ತಿರುತ್ತವೆ.

ಈ ಸಂಸ್ಥೆಯಿಂದ 'ಆರ್ಟ್ ಗೀಲ್ಡ್', 'My Contemparary', ಮತ್ತು 'ನನ್ನ ಸಿಲೋನ್' ಪುಸ್ತಕಗಳನ್ನು ಶ್ರೀ ಡಿ.ವಿ. ಹಾಲಬಾವಿಯವರು ಬರೆದು ಪ್ರಕಟಿಸಿದ್ದಾರೆ. ಅಲ್ಲದೆ 'ಚಿತಾಕ್ಷಿ' ಮತ್ತು 'ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು' ಎಂಬ ಡಾ.ಎಸ್.ಸಿ.ಪಾಟೀಲರು ಬರೆದ ಗ್ರಂಥಗಳು ಈ ಸಂಸ್ಥೆಯ ಹೆಮ್ಮೆಯ ಪ್ರಕಟಣೆಗಳಾಗಿವೆ.

ಪ್ರಸ್ತುತ ಈ ಕಲಾಶಾಲೆಯಲ್ಲಿ ಖ್ಯಾತ ಕಲಾವಿದರಾದ ಶ್ರೀಮತಿ ಗಾಯತ್ರಿ ದೇಸಾಯಿ ಪ್ರಾಚಾರ್ಯರಾಗಿದ್ದಾರೆ. ಇವರಿಗಿಂತಲೂ ಪೂರ್ವದಲ್ಲಿ ಪ್ರಾಚಾರ್ಯ ಹುದ್ದೆಯನ್ನು ಸುರೇಶ ಹಾಲಭಾವಿಯವರು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ಡಾ.ರೇಣುಕಾ ಮಾರ್ಕಾಂಡೆ, ಶ್ರೀ ಎಸ್.ಎಂ. ಲೋಹಾರ್, ಡಾ.ಬಿ.ಎಂ. ಪಾಟೀಲ, ಶ್ರೀ ಎನ್. ಎನ್. ಚನ್ನಣ್ಣನವರ, ಶ್ರೀ ಎನ್.ಕೆ ಹಾಲಕೇರಿ, ಶ್ರೀ ಸಿ.ಜಿ. ಪಾಟೀಲ ಮುಂತಾದವರು ಉಪನ್ಯಾಸಕರು ಹಾಗೂ ಆಡಳಿತ ಮಂಡಳಿಯ ಪ್ರೋತ್ಸಾಹದೊಂದಿಗೆ ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಕರ್ನಾಟಕದಲ್ಲಿರುವ ಕಲಾಶಾಲೆಗಳಲ್ಲಿ ಪ್ರಭುತ್ವವುಳ್ಳಂತಹ ಕಲಾಶಾಲೆಯಿದು. ಬೋಧನೆಯೇ ಇಲ್ಲಿನ ಮುಖ್ಯ ಉದ್ದೇಶ. ಇಲ್ಲಿನ ಗುರುಗಳು ವಿದ್ಯಾರ್ಥಿಗಳು ತಮ್ಮ ಶಾಲೆಯಿಂದ ಅಂದರೆ ಜೆ.ಜೆ. ಕಲಾಶಾಲೆಯಲ್ಲಿ ಯಾವರೀತಿಯಿಂದ ಹೊರಬರುತ್ತಾರೋ ಅದೇರೀತಿಯಲ್ಲಿ ನಮ್ಮ ಕರ್ನಾಟಕದ ಕಲಾವಿದ್ಯಾರ್ಥಿಗಳು ನಾಡಿನ ಕಲಾವಿದರಾಗಿ ಹೊರಬರಬೇಕು. ನಾಡಿಗೆ ಶ್ರೇಷ್ಠ ಕೊಡುಗೆಯನ್ನು ಕೊಡಬೇಕು. ಎಂಬಂತಹ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಬೋಧಿಸುತ್ತಾರೆ. ಹೀಗೆ ಪ್ರಾರಂಭವಾದಂತಹ ಈ ಕಲಾಶಾಲೆಯಲ್ಲಿ ಪಿ.ಎಸ್. ಕಡೇಮನಿಯವರು ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ನಂತರ ೧೯೭೪ರಲ್ಲಿ ಡಿ.ಎಂ.ಸಿ. ಪ್ರಥಮ ವರ್ಷಕ್ಕೆ ಪ್ರವೇಶ ಪಡೆದುಕೊಂಡರು. ತದನಂತರ ೧೯೭೭ರಲ್ಲಿ ಜಿ.ಡಿ ಆರ್ಟ್ ಮಾಸ್ಟರ್ ಮಾಡುವಾಗ ಡಿ.ವಿ ಹಾಲಭಾವಿ ಗುರುಗಳ ಮತ್ತು ಶ್ರೀ ಎಂ.ಆರ್ ಬಾಳೀಕಾಯಿ ಗುರುಗಳ ಅನುಭವದ ಮಾರ್ಗದರ್ಶನ ಪಡೆದುಕೊಂಡರು. ಅಲ್ಲದೇ ಪಿ.ಎಸ್. ಕಡೇಮನಿಯವರು. ಶಿಕ್ಷಣ ಪಡೆದುದೆಲ್ಲಾ ಸ್ಕೂಲ್ ಆಫ್ ಆರ್ಟ್‌ನಲ್ಲಿ, ಆದರೆ ಸರಕಾರಿ ಚಿತ್ರಕಲಾ ವಿದ್ಯಾಲಯದಲ್ಲಿ ವಸತಿಯನ್ನು ಪಡೆದು ಸತತ ಪರಿಶ್ರಮದೊಂದಿಗೆ ಕಲಾಸೇವೆಯನ್ನು ಮಾಡುತ್ತಾ ಬಂದರು. ಗುರುಗಳ ಪಾಲಿಗೆ ಪ್ರೀತಿಯ ಶಿಷ್ಯರಾಗಿ 'ರಾಜಾ' ಎಂದೇ ಕರೆಸಿಕೊಳ್ಳುತ್ತಿದ್ದರು. ಇವರು ಧಾರವಾಡದ ಮೂರು ಕಲಾಶಾಲೆಗಳ ಸಂಪರ್ಕವನ್ನು ಪಡೆದುಕೊಂಡು ಸಾಕಷ್ಟು ಭಾವಚಿತ್ರ ಹಾಗೂ ಭೂದೃಶ್ಯ ಚಿತ್ರಕಲೆಗಳನ್ನು ರಚಿಸಿ, ಕಲೆಯನ್ನು ಸಾಧ್ಯವಾದಷ್ಟು ಕರಗತ ಮಾಡಿಕೊಂಡಿದ್ದರು. ಈ ಮೂಲಕ ತಮ್ಮ ವಿಶ್ವಾಸವನ್ನು ವೃದ್ಧಿಸಿಕೊಂಡರು. ಆದರೆ ಇಷ್ಟಕ್ಕೇ ಕಲಿಕೆಯ ಹಸಿವು

ತೀರದಿದ್ದ ಸಂದರ್ಭದಲ್ಲಿ ತಮ್ಮ ಕಲಾ ಹವ್ಯಾಸದೊಂದಿಗೆ ೧೯೮೧ರಲ್ಲಿ ಧಾರವಾಡದ ಭಾರತೀಯ ಕಲಾ ಕೇಂದ್ರದಲ್ಲಿ ಆರ್ಟ್‌ಮಾಸ್ಟರ್(ಎ.ಎಂ.) ಪದವಿಯನ್ನು ಪಡೆದುಕೊಂಡರು.

ಕಡೇಮನಿಯವರು ಕಲಾಶಿಕ್ಷಣ ಪಡೆಯುತ್ತಿದ್ದ ಸಂದರ್ಭದಲ್ಲಿ ದಿನಂಪ್ರತಿ ಮೂಲಭೂತ ಅವಶ್ಯಕತೆಗೆ ಬೇಕಾಗುವಂತಹ ಬಣ್ಣ, ಪೇಪರ್, ಪೆನ್ಸಿಲ್, ಬ್ರಶ್ ಮುಂತಾದ ಸಲಕರಣೆಗಳ ಬೆಲೆಯು ಇಂದಿನ ದಿನಮಾನದ ಬೆಲೆಗೆ ಹೋಲಿಸಿದರೆ ತುಂಬಾ ವ್ಯತ್ಯಾಸಗಳಿದ್ದು ಅಂದು ಒಂದು ಕಲರ್ ಟ್ಯೂಬಿಗೆ ೨೫ ಪೈಸೆ ಮತ್ತು ಡ್ರಾಯಿಂಗ್ ಪೇಪರ್‌ಗೆ ೨೫ ಪೈಸೆ ಇತ್ತು. ತೈಲವರ್ಣಕ್ಕೆ ಸ್ವಲ್ಪ ಬೆಲೆ ಹೆಚ್ಚಿದ್ದುದರಿಂದ ಜಲವರ್ಣದಲ್ಲಿಯೇ ಕಲಾಕೃತಿಗಳನ್ನು ರಚಿಸುತ್ತಿದ್ದಂತಹ ಕಾಲವದು. ಭೂದೃಶ್ಯ ಮತ್ತು ಭಾವಚಿತ್ರಕ್ಕೆ ಆಗಿನ ಕಾಲದಲ್ಲಿ ಬೇಡಿಕೆ ಜಾಸ್ತಿ ಇದ್ದುದರಿಂದ ಕ್ರಿಯೇಟಿವ್ ಸೆನ್ಸ್ ಆಗಲಿ, ಈ ನವ್ಯ ಕಲಾ ಶೈಲಿಯಲ್ಲಿ ರಚಿಸಬೇಕೆಂಬ ಯಾವುದೇ ನಿಬಂಧನೆಗಳು ಈ ಕಲಾಶಾಲೆಯಲ್ಲಿರಲಿಲ್ಲ.

ಪಿ.ಎಸ್.ಕಡೇಮನಿಯವರು ಅಧ್ಯಯನ ಮಾಡುತ್ತಿರುವಾಗ ಪೂರ್ಣಾವಧಿಯಾಗಿ ಶ್ರೀಮತಿ ತಾರಾ ಪವಾರ ಅವರು ಪ್ರಚಾರ್ಯರಾಗಿದ್ದರು. ಸುರೇಶ ಹಾಲಭಾವಿ ಉಪನ್ಯಾಸಕರಾಗಿದ್ದರು. ಅಲ್ಪಾವಧಿ ಉಪನ್ಯಾಸಕರಾಗಿ ಗರಗ, ಬಡಿಗೇರ ಮತ್ತು ಮುಲ್ಲಾ ಅನ್ನುವವರು ಯಥಾದರ್ಶನವನ್ನು ಬಹಳ ಯಥಾವತ್ತಾಗಿ ಹೇಳಿಕೊಡುತ್ತಿದ್ದರು. ಇವರನ್ನು ಯಥಾದರ್ಶನಕ್ಕೆಂದೇ ಆ ಕಲಾಶಾಲೆಯವರು ನೇಮಕ ಮಾಡಿಕೊಂಡಿದ್ದರು. ಕಡೇಮನಿಯವರು ಪ್ರವೇಶ ಪಡೆದದ್ದು ಧಾರವಾಡ ಸ್ಕೂಲ್ ಆಫ್ ಆರ್ಟ್‌ನಲ್ಲಿ ಆದರೆ ರಾತ್ರಿ ವಸತಿ, ಊಟೋಪಚಾರ, ಸರಕಾರಿ ಚಿತ್ರಕಲಾ ಶಾಲೆಯಲ್ಲಿ. ಇದು 'ಸರಕಾರಿ ಚಿತ್ರಕಲಾ ಶಾಲೆ ಎನ್ನುವುದಕ್ಕಿಂತ ಬಾಳೀಯಾಯಿ ಗುರುಗಳ ಕಲಾಶಾಲೆ' ಎಂದು ಜನಜನಿತವಾಗಿತ್ತೆಂದು ಕಡೇಮನಿಯವರ ಮಾತುಗಳಿಂದ ತಿಳಿದುಬರುತ್ತದೆ.

ತಮ್ಮ ನೆಚ್ಚಿನ ಗುರುಗಳಲ್ಲಿ ಒಬ್ಬರಾದ ಎಂ.ಆರ್. ಬಾಳೀಕಾಯಿಯವರ ಕುರಿತು ಕಡೇಮನಿಯವರು ಹೀಗೆ ಹೇಳುತ್ತಾರೆ. "ಬಾಳೀಕಾಯಿ ಗುರುಗಳ ಬಗ್ಗೆ ಹೇಳಬೇಕೆಂದರೆ, ಈ ಚಿತ್ರಕಲಾ ಶಾಲೆಗಳಲ್ಲಿ ಸಾಕಷ್ಟು ಜನ ಉಪನ್ಯಾಸಕರಿದ್ದರು. ಆದರೆ ಬಾಳೀಕಾಯಿ ಗುರುಗಳಂತೆ ವಿದ್ಯಾರ್ಥಿಗಳನ್ನು ತಯಾರು ಮಾಡುವಂತಹ ಶಿಕ್ಷಕರು ಯಾರೂ ಇರಲಿಲ್ಲ. ಯಾಕೆಂದರೆ? ತಮ್ಮ ಮನೆಯಿಂದ ಊಟವನ್ನು ವಿದ್ಯಾರ್ಥಿಗಳಿಗೆ ತಂದುಕೊಟ್ಟು ಕಲಿಸುತ್ತಿದ್ದಂತ ಗುರುಗಳು ಅವರು."[೧] ಈಗಿನ ಶಿಕ್ಷಕರ ಮನಸ್ಥಿತಿ ಹಾಗೂ ತಮ್ಮ ಗುರುಗಳಾದ ಬಾಳೀಕಾಯಿ ಗುರುಗಳ ನಡೆನುಡಿಯನ್ನು ನೆನಪಿಸಿಕೊಂಡು ವಿಷಾದದಿಂದ ಹೇಳುತ್ತಾರೆ. ಹಾಗೆಯೇ ಬಾಳೀಕಾಯಿ ಗುರುಗಳ ಕಲಿಸುವಿಕೆಯ ಕ್ರಮವೂ ಕೂಡಾ ಅಷ್ಟೇ ಬೆರಗುಗೊಳಿಸುವಂತಹದ್ದು. ಅವರು ಒಮ್ಮೊಮ್ಮೆ ಬೆಳಗ್ಗೆ ಎಂಟು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೂ ಇದ್ದುಕೊಂಡು

ವಿದ್ಯಾರ್ಥಿಗಳೊಂದಿಗೆ ಬೆರೆತು ಕಲಾಕೃತಿ ರಚನಾ ವಿಧಾನ, ತಂತ್ರಗಳ ಕುರಿತು ಬೋಧನೆ ಮಾಡಿ ಮನೆಗೆ ಹೋಗುತ್ತಿದ್ದರು.

ಪಿ.ಎಸ್. ಕಡೇಮನಿಯವರ ಕಲಾ ಶಿಕ್ಷಣದ ಸಂದರ್ಭದಲ್ಲಿ ೨೨ ಜನ ವಿದ್ಯಾರ್ಥಿಗಳು ೧೯೭೪ರಲ್ಲಿ ಡಿ.ಎಂ.ಸಿ.ಗೆ ಪ್ರವೇಶ ಪಡೆದಿದ್ದರು. ಅವರಲ್ಲಿ ಕೆಲವೇ ಕೆಲವು ಆತ್ಮೀಯ ಶಿಷ್ಯ ಕಲಾವಿದರಲ್ಲಿ ಕಡೇಮನಿಯವರದ್ದು ಮಾತ್ರ. ಕಲಾವಿದರ ಸಾಲಿನಲ್ಲಿ ಕಂಡುಬರುವ ಹೆಸರು. ಉಳಿದ ೨೧ ಜನರಲ್ಲಿ ಮೊಗಳ್ಳಿ ಅನ್ನುವವರು ಮಾತ್ರ ಚಿತ್ರಕಲಾ ಶಿಕ್ಷಕರಾಗಿದ್ದಾರೆ. ಈ ೨೨ ಜನರಲ್ಲಿ ೪ ಜನ ಹೆಣ್ಣುಮಕ್ಕಳು. ೧೮ ಜನ ಗಂಡು ಹುಡುಗರು ಸಹಪಾಟಿಗಳಾಗಿದ್ದರು. ಕೊನೆ ವರ್ಷ ಬರುವಷ್ಟರ ಹೊತ್ತಿಗೆ ಉಳಿದದ್ದು ಕೇವಲ ಆರು–ಏಳು ಜನ ಮಾತ್ರ. ಅವರಲ್ಲಿ ಕಡೇಮನಿಯವರು ಹೇಳುವ ಹಾಗೆ "ನಾನು ಕಲಾವಿದನಂತಲ್ಲ ಸ್ವಲ್ಪ ಮಟ್ಟಿಗೆ ಚಿತ್ರ ಕಲಾಕೃತಿಗಳ ಮುಖಾಂತರ ಗುರುತಿಸಿಕೊಂಡಿದ್ದೇನೆ ಅನ್ನುವಂತ ಸಂತೋಷ ನನಗಿದೆ."೨ ಎಂದು ತಮ್ಮ ಸಂತೃಪ್ತಿಯ ಮಾತುಗಳನ್ನು ವ್ಯಕ್ತಪಡಿಸುತ್ತಾರೆ.

ಪಠ್ಯಕ್ರಮ

ಕಡೇಮನಿಯವರ ಕಲಿಕೆಯ ಸಂದರ್ಭದಲ್ಲಿ Anatomy ಅಂಗರಚನಾಶಾಸ್ತ್ರ, Portrait ಭಾವಚಿತ್ರ, Life ಪೂರ್ಣಭಾವಚಿತ್ರ, Painting ಸಂಯೋಜನೆ, Drawing ರೇಖಾಚಿತ್ರ, Indian Art ಕಲಾ ಇತಿಹಾಸ ಈ ವಿಷಯಗಳನ್ನು ಅವರಿಗೆ ಪಠ್ಯಕ್ರಮದಲ್ಲಿ ಹೇಳಿಕೊಡುತ್ತಿದ್ದರು. ಅಂಗರಚನೆಯ ಅಭ್ಯಾಸ, ಹೊರಗಡೆ ಹೋಗಿ ಚಿತ್ರಗಳನ್ನು ರಚಿಸುವುದು. ಹಾಗೂ Anatomy ಯ ಸಂಪೂರ್ಣ ಮಾಹಿತಿಯನ್ನು ಕೊಡುತ್ತಿದ್ದರು. ಇದರಿಂದ ಮನುಷ್ಯನ ಯಾವುದೇ ಭಾಗಗಳನ್ನು ಸರಳವಾಗಿ ಚಿತ್ರಿಸಬಹುದು. "ನಗ್ನಚಿತ್ರಗಳನ್ನು ಸಹ ಚಿತ್ರಿಸಲು ಕಲಿಸುತ್ತಿದ್ದರು. ಪ್ರತಿಯೊಂದು ವಿಷಯವನ್ನು ನಾವು ಗುರುತಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಹಾಗೆ ನಮಗೆ ಪಾಠಗಳನ್ನು ಅಧ್ಯಾಪಕರು ಹೇಳುತ್ತಿದ್ದರು." ಎಂದು ಕಡೇಮನಿಯವರು ನೆನಪಿಸಿಕೊಳ್ಳುತ್ತಾರೆ.

ಸಾಮಾನ್ಯವಾಗಿ ವಿದ್ಯಾರ್ಥಿ ದೆಸೆಯಲ್ಲಿರುವಾಗ ಹಲವಾರು ಸಿಹಿ ಕಹಿ ಘಟನೆಗಳು ನಡೆಯುತ್ತವೆ. ಅಂತಹದ್ದೊಂದು ಘಟನೆಯು ಪಿ.ಎಸ್. ಕಡೇಮನಿಯವರ ವ್ಯಾಸಂಗದ ಸಂದರ್ಭದಲ್ಲೂ ನಡೆದಿತ್ತು. ಆ ಸಂದರ್ಭದ ಕುರಿತಾಗಿ ಅವರ ಮಾತುಗಳಲ್ಲಿಯೇ ಕೇಳುವುದು ಸೂಕ್ತ. "ವಿಶೇಷವಾಗಿ ನಾವು ಕಹಿ ಘಟನೆಗಳಿಗೆ ಕೈ ಹಾಕಿದವರಲ್ಲ. ಅಂತಹ ಸಂದರ್ಭಗಳು ಯಾವುವೂ ಒದಗಿ ಬಂದಿಲ್ಲ. ನಮ್ಮ ಐದು ವರ್ಷದ ಶಿಕ್ಷಣದಲ್ಲಿ ನನ್ನ ಮಿತ್ರರು ಹಾಗೂ ಸಹಪಾಠಿಗಳಾಗಿರುವಂತಹ ಹೆಣ್ಣುಮಕ್ಕಳೂ ಎಲ್ಲರೂ ಕೂಡಿ ಸಹೋದರತ್ವದಿಂದ ಇರುತ್ತಿದ್ದೆವು. ಅನಂತರ ಕೊಡುಕೊಳ್ಳುವಿಕೆಯಲ್ಲಿ ಕೂಡಿ ಕೆಲಸ ಮಾಡುತ್ತಿದ್ದೆವು. ಅದರಿಂದಾಗಿ ಹೆಚ್ಚಿನ ವಿಷಯಗಳು ನಮ್ಮಿಂದ ಹೊರಹೊಮ್ಮುತ್ತಿದ್ದವು. ಕೆಟ್ಟ ಘಟನೆಗಳೆಂದರೆ ನನಗನ್ನಿಸಿದ ಮಟ್ಟಿಗೆ

ಮನೆತನದ ತೊಂದರೆ, ಕಷ್ಟದ ದಿನಗಳು ವಿದ್ಯಾರ್ಥಿ ಜೀವನದಲ್ಲಿ ಎಲ್ಲರಿಗೂ ಬರುತ್ತವೆ. ಅದೇ ತೆರನಾಗಿ ನನಗೂ ಕೂಡಾ ಇತ್ತು. ನನಗೂ ಒಂದೊಂದು ಸಂದರ್ಭದಲ್ಲಿ ಮನೆಯಲ್ಲಿ ಅವಿಭಕ್ತ ಕುಟುಂಬ ಇದ್ದರೂ ಕೂಡ ಪೋಸ್ಟ್ / ಎಂ.ಓ. ಮುಖಾಂತರ ಬರುವ ಹಣ ನಾಲ್ಕೈದು ದಿನ ತಡವಾಗಿ ಬಂದಾಗ ಉಪವಾಸ ಇದ್ದದ್ದೂ ಕೂಡ ಉಂಟು. ಅದೇ ಒಂದು ಸಲ ಮಾತ್ರ ಕಹಿ ಘಟನೆ ನಡೆದದ್ದು. ಯಾಕೆಂದರೆ ನಮ್ಮ ಜೀವನದಲ್ಲಿ ಅಂತಹ ಸನ್ನಿವೇಶಗಳು ಬಂದು ಹೋದಾಗ ನಾವು ಜಾಗೃತರಾಗುತ್ತೇವೆ."೩ ಎಂದು ತಮ್ಮ ಮನದಾಳದಲ್ಲಿ ಹುದುಗಿದ್ದ ನೋವನ್ನು ವ್ಯಕ್ತಪಡಿಸುತ್ತಾರೆ.

ನಂತರ ಕಲಿಕೆಯ ನವಚೈತನ್ಯದೊಂದಿಗೆ ಪಿ.ಯು.ಸಿ. ಮುಗಿಸಿಕೊಂಡು ೧೯೯೭ರಲ್ಲಿ ಪಿ.ಜಿ. ಡಿಪ್ಲೋಮಾ ಇನ್ ಆರ್ಟ್ ಹಿಸ್ಟರಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ವಿಜಾಪುರ ದಲ್ಲಿರುವ ಸ್ನಾತಕೋತ್ತರ ಅಧ್ಯಯನ ಕೇಂದ್ರದಿಂದ ಪಡೆದುಕೊಂಡರು. ಮುಂದೆ ಹತ್ತು ವರ್ಷಗಳ ನಂತರ ೨೦೦೭ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಬೋಧನೆಯ ಜೊತೆಗೆ ಚಿತ್ರಕಲೆಯಲ್ಲಿ ಎಂ.ವಿಎ. ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು.

ವೃತ್ತಿ ಜೀವನ

ಹುಟ್ಟಿಸಿದ ದೇವರು ಹೊಟ್ಟೆಪಾಡಿಗಾಗಿ ಪ್ರತಿಯೊಬ್ಬನಿಗೆ ಒಂದು ಶಕ್ತಿಯನ್ನು ಕೊಟ್ಟು ಭೂಮಿಗೆ ಕಳುಹಿಸುತ್ತಾರೆ. ಈ ಶರೀರವು ದೇವರಿಂದ ನಿರ್ಮಿಸಿದ ಅಮೂಲ್ಯ ಮತ್ತು ವಿಚಿತ್ರ ವಸ್ತುವಾಗಿದೆ. ಪುರಂದರದಾಸರು "ಮಾನವ ಜನ್ಮ ದೊಡ್ಡದು." ಎಂದಿದ್ದಾರೆ. ಮಾನವ ಶರೀರದಲ್ಲಿ ಅಂಥಹುದು ಏನಿದೆ? ಸಾಮಾನ್ಯವಾಗಿ ತಲೆಯಲ್ಲಿ ಬುದ್ದಿ, ಬುದ್ಧಿಯಲ್ಲಿ ಕಲ್ಪನೆ, ಕೇಶದಲ್ಲಿ ಆಕರ್ಷಣೆ, ಕಣ್ಣಿನಲ್ಲಿ ಕಾಂತಿ, ಕಿವಿಯಲ್ಲಿ ಗ್ರಹಣಶಕ್ತಿ, ಮೂಗಿನಲ್ಲಿ ಯೋಗ, ತುಟಿಗಳಲ್ಲಿ ನಗೆ, ರಸನೆಯಲ್ಲಿ ರಸಿಕತೆ, ದಂತದಲ್ಲಿ ಕಾಠಿಣ್ಯ, ಎದೆಯಲ್ಲಿ ಧೈರ್ಯ, ಬಾಹುವಿನಲ್ಲಿ ಶಕ್ತಿ, ಕಾಲಿನಲ್ಲಿ ಕುಣಿತ ಹಾಗೂ ಓಟ ಹೀಗೆ ನಾನಾ ಶಕ್ತಿಗಳನ್ನು ದೇವರು ನೀಡಿದ್ದಾನೆ. ಈ ದೇಹದಲ್ಲಿ ಅಗಾಧ ಅತ್ಯದ್ಭುತ, ಅವರ್ಣನೀಯ, ಅಗೋಚರ, ಅಗಮ್ಯ ಮತ್ತು ಅಪ್ರತಿಮ ಶಕ್ತಿಯಿದೆ. ಮಾನವ ದೇಹದ ಪ್ರತಿಯೊಂದು ಭಾಗದಲ್ಲಿ ಅದ್ಭುತ ಶಕ್ತಿ ಅಡಗಿದೆ. ಇದಕ್ಕೆ ಒಂದು ದೃಷ್ಟಾಂತವನ್ನು ವಿವರಿಸಬಹುದು. ದಂಡಕಾರಣ್ಯದಲ್ಲಿ ಬೆಳೆದ ಬಿದಿರು ಅನೇಕ ರೀತಿಯಿಂದ ಉಪಯೋಗಕ್ಕೆ ಬರುವುದು ಅರಮನೆಯಲ್ಲಿ ಕೊಳಲಾಗಿ ವಿರಾಜಿಸುತ್ತದೆ. ಬಿದಿರಿನಲ್ಲಿ ಧ್ವನಿಯಿದೆ. ಅದನ್ನು ಕತ್ತರಿಸಿ ತಂದು ಕೊಳಲು ತಯಾರಿಸಿ ಸಪ್ತರಂಧ್ರಗಳನ್ನು ಕೊರೆದು ಶ್ರುತಿಮಾಡಿ ಊದಿದರೆ ಸಪ್ತ ಸ್ವರಗಳು ಇಂಪಾಗಿ ಹೊರಡುತ್ತವೆ. ಹಾಗೆಯೇ ಈ ದೇಹ ದೇವರ ಕೈಯ್ಯಲ್ಲಿಂದ ಬಂದ ಒಂದು ಕೊಳಲು. ಇದನ್ನು ಒಳ್ಳೆಯ ಕಾರ್ಯಕ್ಕೆ ವಿನಿಯೋಗಿಸಬೇಕು.

ಇಂದಿನ ದಿನಗಳಲ್ಲಿ ಕಂಪ್ಯೂಟರ್, ಸಿಡಿಗಳು, ದೂರಶಿಕ್ಷಣ, ಟೆಲಿವಿಶನ್ ಮಾಧ್ಯಮಗಳ ಮೂಲಕ ಅದರಲ್ಲೂ ಇಂಟರ್‌ನೆಟ್ ಜಾಲದಲ್ಲಿ ಜ್ಞಾನದ ಸ್ಫೋಟವನ್ನು ನೋಡುತ್ತಿರುವ

ನಮಗೆ ಶಿಕ್ಷಕನ ಸ್ಥಾನಮಾನ ಮಸುಕಾಗಿ ಕಾಣುತ್ತಿರುವುದು ಸ್ವಾಭಾವಿಕ. ಆದರೆ ವಾಸ್ತವ ಬೇರೆ. ಪವಿತ್ರ ಹಾಗೂ ಪರಿಣಾಮಕಾರಿ ಗುರುಶಿಷ್ಯ ಸಂಬಂಧವನ್ನು ಯಾವ ವ್ಯವಸ್ಥೆಯಿಂದಲೂ ಬೇರ್ಪಡಿಸಲು ಸಾಧ್ಯವಿಲ್ಲ. ತನ್ನ ವೃತಿ ಮತ್ತು ವಿದ್ಯಾರ್ಥಿಗಳನ್ನು ಪ್ರೀತಿಸುವ ಶಿಕ್ಷಕ ಕೇವಲ ಭೋಧನೆ ಮಾಡುವುದಿಲ್ಲ. ಬದಲಾಗಿ ಆದರ್ಶಗಳನ್ನು ರೂಪಿಸುವ ಸ್ಫೂರ್ತಿಯ ಸೆಲೆಯಾಗುತ್ತಾನೆ. ಆತನ ನಡೆನುಡಿಗಳು ಪ್ರೇರಕ ಶಕ್ತಿಯಾಗಿ ಕೆಲಸ ಮಾಡುತ್ತವೆ. ಸಮಗ್ರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಾಲಾ ಕಾಲೇಜು ವಾತಾವರಣ ಅನಿವಾರ್ಯ. ವೈಚಾರಿಕ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳ ಪ್ರತಿಪಾದನೆ ಯಂತ್ರಗಳಿಂದ ಸಾಧ್ಯವೆನ್ನುವುದಾದರೆ, ನಮ್ಮ ಚರಿತ್ರೆ, ಕಲೆ, ಕಾವ್ಯ, ಸಾಹಿತ್ಯ, ಸಂಸ್ಕೃತಿ ಸಹೃದಯತೆ ಮೌಲ್ಯದ ನೆಲೆಗಳು ಏನೂ ಅಲ್ಲ ಎಂದು ಬಹಳ ಸರಳವಾಗಿ ಹೇಳಬಹುದು ನಮ್ಮ ಜೀವನದಲ್ಲಿ ಬಂದಿರುವ ಶಿಕ್ಷಕರ ನೆನಪು ಮಾಡಿಕೊಂಡಲ್ಲಿ ಹಲವು ಶಿಕ್ಷಕರು ಶಾಶ್ವತವಾಗಿ ಮನದಾಳದಲ್ಲಿ ಭದ್ರವಾಗಿ ನೆಲೆಯೂರಿರುವುದು ಸತ್ಯ. ಅಂಥವರಲ್ಲಿ ಕಡೇಮನಿಯವರೂ ಕೂಡ ಒಬ್ಬರು.

ಕಡೇಮನಿಯವರ ಕಾರ್ಯಕ್ಷೇತ್ರ ಚಿತ್ರಕಲಾ ಶಿಕ್ಷಕರಾದರೂ ಕೂಡ, ಸಮಾಜಿಕ ರಂಗದ ಹಲವಾರು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ಅಧ್ಯಯನದ ಈ ಭಾಗ ವೃತ್ತಿ ಜೀವನವಾಗಿರುವುದರಿಂದ ಅವರು ವೃತ್ತಿ ಜೀವನ ಪ್ರಾರಂಭಿಸಿದ ಸಂದರ್ಭ, ವೃತ್ತಿ ಜೀವನ ಪ್ರಾರಂಭಿಸಿದ ಕಲಾ ಶಾಲೆಯ ಆಗಿನ ಪರಿಸರ ಮತ್ತು ಪರಿಚಯ, ಅವರ ಬೋಧನಾ ಕ್ರಮ ಹಾಗೂ ಇತರ ಕಾರ್ಯಚಟುವಟಿಕೆಗಳ ಕುರಿತಾಗಿ ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಪಿ.ಎಸ್. ಕಡೇಮನಿಯವರ ವೃತ್ತಿ ಜೀವನವು ಪ್ರಮುಖ ಘಟ್ಟವೆಂದು ಹೇಳಬಹುದು. ಅವರು ಧಾರವಾಡದಿಂದ ಕಲಾ ಶಿಕ್ಷಣ ಮುಗಿಸಿಕೊಂಡು ಬಂದ ಮೇಲೆ ಬಾಗಲಕೋಟೆಯ ಶ್ರೀವಾಸುದೇವ ಎನಾಮಲ್ ಇಂಡಸ್ಟ್ರೀಸ್‌ನಲ್ಲಿ ಕಲಾವಿದರಾಗಿ ಕೆಲಸಕ್ಕೆ ಸೇರಿಕೊಂಡರು. ಮುಂಜಾನೆಯಿಂದ ಸಾಯಂಕಾಲದವರೆಗೆ ಬಿಟ್ಟು ಬಿಡದೆ ಕೆಲಸದ ಒತ್ತಡದಲ್ಲಿ ಸಿಲುಕಿಸಿಕೊಂಡರು ಕಲಾಕೃತಿ ರಚಿಸಲು ಸಮಯದ ಅಭಾವವಾಯಿತು. ಇದನ್ನರಿತ ಅವರು ಒಂದೇ ತಿಂಗಳಿನಲ್ಲಿ ಕೆಲಸಕ್ಕೆ ಬರಲಿಕ್ಕಾಗದು ಎಂದು ಹೇಳಿ ಮರಳಿ ವಿಜಾಪುರಕ್ಕೆ ಬಂದರು "ನೆನೆದವರ ಮನದಲ್ಲಿ ಎನ್ನುವ ಹಾಗೆ ಒಳ್ಳೆಯದಾಗುವ ಕಾಲ ಬಂದಾಗ ಎಲ್ಲವೂ ಅನುಕೂಲವಾಗುತ್ತದೆಂದು ಕೊಂಡಿದ್ದ ಕಡೇಮನಿಯವರು ಬಿ.ಎಲ್.ಡಿ.ಇ ಸಂಸ್ಥೆಯ ಮಾಧ್ಯಮಿಕ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕನಾಗಬೇಕೆಂದು ಪ್ರಯತ್ನಮಾಡಿ ಅದು ಆಗದೇ ಇದ್ದಾಗ ಬಹಳ ನಿರಾಸೆ ಹೊಂದಿ ಇನ್ನು ಯಾವತ್ತೂ ನಾನು ಚಿತ್ರಕಲಾವಿದನಾಗಲು ಅರ್ಜಿಹಾಕಬಾರದೆಂದು ಮನದಲ್ಲಿ ನೋವು ತುಂಬಿಕೊಂಡು ಕುಳಿತಿದ್ದರು. ಸ್ವಲ್ಪದಿನಗಳು ಕಳೆಯುವುದರಲ್ಲಿ ಯಾವ ಸಂಸ್ಥೆಯಿಂದ ನಿರಾಸೆ ಅನುಭವಿಸಿದ್ದರೋ ಅದೇ ಸಂಸ್ಥೆಯಿಂದ ಮತ್ತೊಂದು ಅವಕಾಶ ಒದಗಿ ಬಂತು. ಕರ್ನಾಟಕ ದಲ್ಲಿಯೇ ಪ್ರತಿಷ್ಠಿತ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯು ಕಡೇಮನಿಯವರನ್ನು ಕೈ ಮಾಡಿ

ಕರೆದಂತಾಯಿತು. ಅಲ್ಲಿ ನಾಡಿನ ಹಿರಿಯ ಕಲಾವಿದರಾದ ಶ್ರೀ ಸಿ.ಎನ್.ಪಾಟೀಲ ಅವರ ನಿರ್ದೇಶದಲ್ಲಿ ೧೯೭೯ ರಲ್ಲಿ ಶ್ರೀ ಸಿದ್ಧೇಶ್ವರ ಕಲಾ ಮಂದಿರವು ಪ್ರಾರಂಭವಾಗಿತ್ತು. ಉಪನ್ಯಾಸಕರ ಹುದ್ದೆ ತುಂಬಿಕೊಳ್ಳಲು ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಎ.ಎಂ.ಜಿ.ಡಿ ಆರ್ಟ ಮಾಡಿದವರು ಯಾರೂ ದೊರೆತಿರಲಿಲ್ಲ. ಈ ವಿದ್ಯಾಲಯದಲ್ಲಿ ಒಬ್ಬ ಉಪನ್ಯಾಸಕರು ಬೇಕಾಗಿದ್ದರು. ಕಡೇಮನಿಯವರಿಗೆ ನೌಕರಿ ಬೇಕಾಗಿತ್ತು ಹಿಗಿರುವಾಗ ನಿರ್ದೇಶಕರು ಆ ಸ್ಥಾನವನ್ನು ಹೊಂದಿಸಿದರು ಕಡೇಮನಿಯವರು ಉಪನ್ಯಾಸಕರಾಗಿ ಸೇವೆಗೆ ಸೇರುವ ಸಂದರ್ಭದಲ್ಲಿ ದಿ|ಬಿ.ಎಂ.ಪಾಟೀಲರು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದರು, ಅವರು ೧೯೮೦ ಜನವರಿಯಲ್ಲಿ ತಾತ್ಪೂರ್ತಿಕ ಹುದ್ದೆಗೆ ನೇಮಕಾತಿ ಪತ್ರವನ್ನು ಕಡೇಮನಿಯವರಿಗೆ ಕೊಟ್ಟ ಕೆಲಸಕ್ಕೆ ಹಾಜರಾಗಲು ಸೂಚಿಸಿದರು. ನಾಲ್ಕು ತಿಂಗಳು ತಾತ್ಪೂರ್ತಿಕವಾಗಿ ಸೇವೆಸಲ್ಲಿಸಿದ ಬಳಿಕ ಅರೆಕಾಲಿಕ ಉಪನ್ಯಾಸಕರಾಗಿ ಒಂದು ವರ್ಷ ಸೇವನ್ನು ಮುಂದುವರೆಸಿದರು. ನಂತರ ೧೯೮೨ ರಲ್ಲಿ ಪೂರ್ಣ ಪ್ರಮಾಣದ ಹುದ್ದೆಗೆ ಕಾಯಂ ಆಗಿ ನೇಮಕಾತಿ ದೊರೆಯಿತು. ಅವರ ವೃತ್ತಿ ಬದುಕನ್ನು ನೋಡುವುದಕ್ಕಿಂತ ಮೊದಲು ಅವರು ವೃತ್ತಿ ಬದುಕನ್ನು ಪ್ರಾರಂಭಿಸಿದ ಆ ಕಲಾ ಶಾಲೆಯ ಕುರಿತಾಗಿ ತಿಳಿದುಕೊಳ್ಳುವುದ ಅತ್ಯಾವಶ್ಯಕವಾಗಿದೆ.

ಶ್ರೀ ಸಿದ್ಧೇಶ್ವರ ಕಲಾ ಮಂದಿರದ ಕಿರು ಪರಿಚಯ

'ಶಿಕ್ಷಣ ಪ್ರಸಾರವೇ ಈ ಸಂಸ್ಥೆಯ ಗುರಿ' ಎಂಬ ಧ್ಯೇಯ ವಾಕ್ಯದೊಂದಿಗೆ ೧೯೧೦ ರಲ್ಲಿ ಸ್ಥಾಪಿತವಾದ ಬಿ.ಎಲ್.ಡಿ.ಇ ಸಂಸ್ಥೆ(ವಿಜಾಪುರ ಲಿಂಗಾಯಿತ ಶಿಕ್ಷಣ ಸಂಸ್ಥೆ) ಯು ೨೦೧೦ ರಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸಿಕೊಂಡಿದೆ. ಈ ಶಿಕ್ಷಣ ಸಂಸ್ಥೆಯಲ್ಲಿ ಸಾಮಾನ್ಯ ಶಿಕ್ಷಣ, ವೃತ್ತಿ, ಉಚ್ಚ ಶಿಕ್ಷಣ ಪ್ರಧಾನಕ್ಕೆ ಹಲವಾರು ಶಾಲೆ ಕಾಲೇಜುಗಳನ್ನು ಹಾಗೂ ಇತರ ಅಂಗ ಸಂಸ್ಥೆಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದೆ. ಈ ಶಿಕ್ಷಣ ಸಂಸ್ಥೆಯ ಪ್ರಗತಿಗೆ ಶ್ರಮಿಸಿದವರಲ್ಲಿ ಡಾ. ಫ.ಗು. ಹಳಕಟ್ಟಿ ಪೂಜ್ಯ ಶ್ರೀ ಬಂಥನಾಳ ಶ್ರೀಗಳು ಮತ್ತು ಶ್ರೀ ಬಿ.ಎಂ. ಪಾಟೀಲ ಅವರು ಪ್ರಮುಖರಾಗಿದ್ದಾರೆ. ಈ ಸಂಸ್ಥೆಯಲ್ಲಿ ಹಲವಾರು ಜ್ಞಾನಶಿಸ್ತಿನ ಶಿಕ್ಷಣ ದೊರೆಯುತ್ತಿತ್ತು. ಆದರೆ ಚಿತ್ರಕಲೆಯನ್ನು ಅಭ್ಯಾಸ ಮಾಡಲು ಈ ಜಿಲ್ಲೆಯ ವಿದ್ಯಾರ್ಥಿಗಳು ಗದಗ, ಧಾರವಾಡ, ಗುಲಬರ್ಗಾ ಹಾಗೂ ದೂರದ ಮುಂಬೈಗೆ ಹೋಗಿ ಕಲಿಯಬೇಕಾಗಿತ್ತು. ಇದನ್ನರಿತು ಬಿ.ಎಲ್.ಡಿ.ಇ. ಸಂಸ್ಥೆಯು ೧೯೭೯ರಲ್ಲಿ ಶ್ರೀ ಸಿದ್ಧೇಶ್ವರ ಕಲಾ ಮಂದಿರವನ್ನು ಸ್ಥಾಪಿಸಿತು.

ಈ ಕಲಾ ಶಾಲೆ ಪ್ರಾರಂಭವಾದ ನಂತರ ಇದರ ಉಸ್ತುವಾರಿ ನಿರ್ದೇಶಕರಾಗಿ ಗದುಗಿನ ಖ್ಯಾತ ಕಲಾವಿದರಾದ ಶ್ರೀ ಸಿ.ಎನ್. ಪಾಟೀಲ, ಎಸ್.ಎಸ್. ಹೈಸ್ಕೂಲ್ 'ಎ' ನಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದಂತಹ ಶ್ರೀ ಸಿ.ಬಿ. ಕಾಚಾಪೂರ, ಅದೇ ರೀತಿಯಾಗಿ ಎಸ್.ಎಸ್. ಹೈಸ್ಕೂಲ್ 'ಬಿ' ನಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಂ.ಎಸ್ ಜತ್ತಿಯವರು

ಅಲ್ಪಾವಧಿಯ ಸೇವೆ ಸಲ್ಲಿಸಿದರು. ಇವರೊಂದಿಗೆ ದೇಶಪಾಂಡೆಯವರು ಪಿ.ಡಿ.ಜೆ. ಹೈಸ್ಕೂಲಿನಲ್ಲಿ ಸೇವೆಸಲ್ಲಿಸುತ್ತಾ ಇಲ್ಲಿಯೂ ಅಲ್ಪಾವಧಿಯ ಸೇವೆಯನ್ನು ಸಲ್ಲಿಸಿದರು. ಇವರ ಜೊತೆಗೆ ಪಿ.ಎಸ್ ಕಡೇಮನಿಯವರು ೧೯೮೦ರಲ್ಲಿ ಸೇವೆಗೆ ಸೇರಿದ್ದು ೧೭ ಜನವರಿ ೧೯೮೯ರಲ್ಲಿ ಪೂರ್ಣಾವಧಿಯ ಉಪನ್ಯಾಸಕರಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿದ್ದಾರೆ.

ಕಲಾಶಾಲೆಯ ಪ್ರಾರಂಭದಲ್ಲಿ ೧೯೭೯-೮೦ನೇ ಸಾಲಿನಿಂದ ೧೯೮೨ರ ವರೆಗೆ ಒಂದು ವರ್ಷದ ಡಿ.ಟಿ.ಸಿ.(ಚಿತ್ರಕಲಾ ಶಿಕ್ಷಕರ ತರಬೇತಿ ವರ್ಗ ಪ್ರಾರಂಭಿಸಿ ೧೯೮೨-೮೩ ನೇ ಸಾಲಿಗೆ ರಾಜ್ಯ ಸರ್ಕಾರ ಹೊಸ ಅಭ್ಯಾಸ ಪತ್ರಿಕೆಯನ್ನು ಪ್ರಾರಂಭಿಸಿ ಡಿ.ಟಿ.ಸಿ ಬದಲಾಗಿ ಡಿ.ಎಂ.ಸಿ. (ಡ್ರಾಯಿಂಗ್ ಮಾಸ್ಟರ್ ಕೋರ್ಸ್)ಎಂಬ ಎರಡು ವರ್ಷದ ಕೋರ್ಸ್ ಪ್ರಾರಂಭವಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭ್ಯಾಸ ನಡೆಸಲು ಅನುವಾಯಿತು. ಮುಂದೆ ೧೯೮೮-೮೯ನೇ ಸಾಲಿಗೆ ಮೂರನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ವರ್ಗ ೧೯೯೦-೯೧ ನೇ ಸಾಲಿಗೆ ಅಭ್ಯಾಸ ಮಾಡಲು ಈ ಕಲಾ ಶಾಲೆಯು ಅನುವು ಮಾಡಿಕೊಟ್ಟಿತು.

ಹೀಗೆ ಪ್ರಾರಂಭವಾದ ಶ್ರೀ ಸಿದ್ಧೇಶ್ವರದ ಕಲಾ ಮಂದಿರದ ಬೆಳವಣಿಗೆಗೆ ಆಗಿನ ಪ್ರಾಚಾರ್ಯರಾಗಿದ್ದ ದಿ.ಸಿ.ಬಿ. ಕಾಚಾಪೂರ ಅವರ ಕಾರ್ಯ ಶ್ಲಾಘನೀಯವಾದದ್ದು. ಇವರ ಜೊತೆಗೆ ಶ್ರೀ ಎಂ.ಎಸ್. ಜತ್ತಿ ಮತ್ತು ಪಿ.ಎಸ್. ಕಡೇಮನಿಯವರೂ ಹೆಜ್ಜೆ ಹಾಕುತ್ತಾ ಕಲಾಶಾಲೆಯ ಪ್ರಗತಿಗೆ ಬಹಳಷ್ಟು ಶ್ರಮವಹಿಸಿ ದುಡಿದರು.

ಇಂತಹ ಪ್ರತಿಷ್ಠಿತ ಕಲಾಶಾಲೆಯಲ್ಲಿ ಪ್ರತಿ ವರ್ಷವೂ ಕೂಡ ನಾಡಿನ ಹೆಸರಾಂತ ಕಲಾವಿದರಿಂದ ಪ್ರಾತ್ಯಕ್ಷಿಕೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಸಮಕಾಲೀನ ಕಲೆಯ ರೂಪುರೇಷೆಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ./ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ಶ್ರೀ ಸಿದ್ಧೇಶ್ವರ ಕಲಾಮಂದಿರದಲ್ಲಿ ಪ್ರಾತ್ಯಕ್ಷಿಕೆಯನ್ನು ನಾಡಿನ ಹೆಸರಾಂತ ಕಲಾವಿದರು, ಸ್ಥಳೀಯ ಕಲಾವಿದರು, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕಲಾವಿದರು ಸಹಿತ ಇಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಅವರಲ್ಲಿ ಎಂ.ಬಿ. ಪಾಟೀಲ, ಜೆ.ಎಸ್. ಖಂಡೇರಾವ್, ಪೀಟರ್ ಲೂಯೀಸ್, ಆರ್.ಎಂ. ಹಡಪದ, ವಿಜಯ ಸಿಂಧೂರ, ಗೌರಿಶಂಖರ್, ಸಚ್ಚಿದಾನಾಗದೇವ, ಗೋಪಾಲ್, ಎಂ.ಸಿ.ಚಟ್ಟಿ, ಅಶೋಕ್ ಅಕ್ಕಿ, ವಿ.ಟಿ. ಕಾಳೆ, ಮತ್ತು ಜರ್ಮನ್ ದೇಶದ ಕಲಾವಿದ ಹೀಗೆ ಇನ್ನೂ ಅನೇಕ ಕಲಾವಿದರು ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಇದಲ್ಲದೆ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳನ್ನು ಕೂಡಾ ಈ ಕಲಾಶಾಲೆಯಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಪ್ರಸ್ತುತ ಶ್ರೀ ಸಿದ್ಧೇಶ್ವರ ಕಲಾಮಂದಿರದಲ್ಲಿ ಹೆಸರಾಂತ ಕಲಾವಿದರುಗಳಾದ ವಿ.ವಿ ಹಿರೇಮಠ, ಹೆಚ್.ಪಿ. ಕೇದ್ರಾಪೂರ, ಎಂ.ಎಂ. ಕನ್ನೂರ, ಪ್ರಕಾಶ ಖ್ಯಾಡದ, ಗಿರಿಜಾ ಬಿರಾದಾರ, ಮುಂತಾದವರು ಉಪನ್ಯಾಸಕರಾಗಿದ್ದಾರೆ. ಪ್ರಸ್ತುತ ಪ್ರಾಚಾರ್ಯರಾಗಿರುವ ಕಡೇಮನಿಯವರ

ಪ್ರೋತ್ಸಾಹ ಹಾಗೂ ಎಲ್ಲಾ ಅಧ್ಯಾಪಕ ವೃಂದದವರ ಸಹಕಾರದೊಂದಿಗೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಕಲಾಶಾಲೆಯಲ್ಲಿ ಅಧ್ಯಯನಗೈದ ವಿದ್ಯಾರ್ಥಿಗಳು ಇಂದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಲಾವಿದರಾಗಿ ತಾವು ಕಲಿತ ಕಲಾ ಶಾಲೆಗೆ ಹಾಗೂ ಗುರುಗಳಿಗೆ ಕೀರ್ತಿ ತರುವುದರೊಂದಿಗೆ ದೃಶ್ಯಕಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಇಂತಹ ಪ್ರತಿಷ್ಠಿತ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇರಿಕೊಂಡ ಪಿ.ಎಸ್. ಕಡೇಮನಿಯವರು ಇಂದಿಗೂ ಕೂಡ ಕಾರ್ಯನಿರ್ವಹಿಸುತ್ತಿದ್ದಾರೆ.

ಆದರ್ಶ ವಿದ್ಯಾರ್ಥಿಯಾದವನು ಆದರ್ಶ ಶಿಕ್ಷಕನಾಗುತ್ತಾನೆ. ಎಂಬ ಮಾತು ಅರ್ಥವಿಧಿತ. ಕಡೇಮನಿಯವರು ಧಾರವಾಡದಲ್ಲಿ ಓದುತ್ತಿದ್ದಾಗ ಎಲ್ಲ ಶಿಕ್ಷಕರ ಪ್ರೀತಿಗೆ ಪಾತ್ರರಾಗಿದ್ದರು. ನಂತರ ವಿಜಾಪುರಕ್ಕೆ ಬಂದು ಉಪನ್ಯಾಸಕರಾಗಿ ಸೇವೆಯನ್ನು ಆರಂಭಿಸಿದ ಮೇಲೆ ವಿದ್ಯಾರ್ಥಿಗಳ ಪಾಲಿಗೆ ನೆಚ್ಚಿನ ಗುರುಗಳೂ ಆದರು. ಈ ವಿದ್ಯಾಲಯದಲ್ಲಿ ಇನ್ನೋರ್ವ ಹಿರಿಯ ಕಲಾವಿದ ಉಪನ್ಯಾಸಕರಾದ ದಿ. ಎಂ.ಎಸ್. ಜತ್ತಿಯವರ ಸಹಕಾರ ಮತ್ತು ಮಾರ್ಗದರ್ಶನ ದೊರೆಯಿತು. ವಿದ್ಯಾರ್ಥಿಯಾಗಿ ಕಲಿತಿದ್ದಕ್ಕಿಂತಲೂ ಉಪನ್ಯಾಸಕರಾದ ಬಳಿಕ ಅನುಭವದಿಂದ ಹೊಸ ಹೊಸ ತಂತ್ರಗಳನ್ನು ಅಳವಡಿಸಿಕೊಂಡು ಭೋಧನೆ ಮಾಡುತ್ತಾ ಬಂದರು.

ವರ್ಗ ಬೋಧನೆಯನ್ನು ನಿಯಮಿತವಾಗಿ ಕಟ್ಟುನಿಟ್ಟಿನಿಂದ ಬೋಧಿಸುವುದು, ಶಾಲಾ ಅವಧಿಗೆ ಮುನ್ನ ಬರುವುದು, ಹಾಗೂ ನಂತರ ಇಲ್ಲಿನ ವಿದ್ಯಾರ್ಥಿಗಳೊಂದಿಗೆ ವಿದ್ಯಾರ್ಥಿಯಾಗಿ ಬೆರೆತು ಅವರಲ್ಲಿ ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ, ಅಭಿರುಚಿ, ಹೆಚ್ಚಿಸುತ್ತಾರೆ. ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ, ಶಿಸ್ತು, ಸೌಂದರ್ಯ ಪ್ರಜ್ಞೆ, ಕ್ರಿಯಾಶಿಲತೆ, ನಿರೀಕ್ಷಣೆ, ಸ್ಮರಣೆ, ಕಲ್ಪನೆ, ಸಂಯೋಜನೆ, ರೇಖ್ಯಾ ಲಾಲಿತ್ಯಗಳನ್ನು ಹಾಗೂ ವರ್ಣ ಸಂಯೋಜನೆ ಮುಂತಾದ ಕೌಶಲ್ಯಗಳನ್ನು ತಮ್ಮ ಪಾಠ ಬೋಧನೆಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಬೋಧಿಸುತ್ತಾರೆ. ಇವರ ವಿದ್ಯಾರ್ಥಿಗಳು ಇಂದಿಗೂ ಇವರನ್ನು ಸ್ಮರಿಸಿಕೊಂಡು ಭಕ್ತಿ ಗೌರವಗಳಿಂದ ಕಾಣುತ್ತಿರುವುದೇ ಇವರ ಸೇವೆಯ ಸಾರ್ಥಕಥೆಯನ್ನು ಬಿಂಬಿಸುತ್ತದೆ. ಇವರ ಮಾರ್ಗದರ್ಶನದಲ್ಲಿ ಕಲಿತವರು ಇಂದು ದೇಶ ವಿದೇಶಗಳಲ್ಲಿ ತಮ್ಮ ಕಲಾ ಪ್ರದರ್ಶನಗಳನ್ನು, ಪ್ರಾತ್ಯಕ್ಷಿಕೆಗಳನ್ನು, ಕಲಾಕ್ಷೇತ್ರಕ್ಕೆ ಇತರ ಸೇವೆಯನ್ನು ನೀಡುತ್ತಾ ದೇಶದ ಎಲ್ಲೆಡೆಗೂ ಪಸರಿಸುತಿದ್ದಾರೆ. ಕಲಿಸಿದ ಗುರುಗಳಿಗೆ, ಸಂಸ್ಥೆಗೆ ಕೀರ್ತಿ ತರುತ್ತಿದ್ದಾರೆ. ಅಂತಹ ಸಾಧನೆಗೆ ಪಾತ್ರರಾದ ವಿದ್ಯಾರ್ಥಿಗಳಲ್ಲಿ ಪ್ರಮುಖರಾದವರಲ್ಲಿ ದೇಶದ ಕಲಾವಿದರ ಸಾಲಿನಲ್ಲಿ ಸೇರ್ಪಡೆಯಾಗಿ ಅಂತಾರಾಷ್ಟ್ರೀಯ ಕಲಾವಿದರಾಗಿ ಎದ್ದುಕಾಣುತ್ತಿರುವ ವಿಜಾಪುರ ಜಿಲ್ಲೆಯ, ಸಿಂಧಗಿ ತಾಲೂಕಿನ ಈರಣ್ಣ ರುಕುಂಪೂರ (ದೆಹಲಿ), ಅವರು ಜಗದ್ವಿಖ್ಯಾತ ಕಲಾವಿದರ ಸಾಲಿನಲ್ಲಿ ಸೇರ್ಪಡೆಗೊಂಡಿದ್ದಾರೆ. ಇವರಂತೆ ಸುನೀಲ ಮಮದಾಪೂರ (ಬರೋಡ), ಎಂ.ಜಿ. ಹೆಗಡೆ (ಬೆಂಗಳೂರು), ರುಧ್ರಗೌಡ ಇಂಡಿ (ಬೆಂಗಳೂರು), ಸುಧೀರ್ ಪಡ್ನೀಸ್ (ದೆಹಲಿ), ರಾಘವೇಂದ್ರ ಪಾಟೀಲ, ಶ್ರೀಧರ ಚೌಹಾಣ, ಎಂ.ಎಂ.

ಕನ್ನೂರ, ಮಂಜುನಾಥ ಮಾನೆ, ಮಲ್ಲಪ್ಪಾ ಹಳ್ಳಿ, ಕೆ.ಕೆ. ಮಕಾಳಿ (ಹಂಪಿ), ಅನೀಲ ಈಜೇರಿ (ಭೂಪಾಲ), ಎನ್.ಎಮ್ ವಾಡೆ(ಬೆಂಗಳೂರು) ಮೊದಲಾದವರು ಇವರ ಮಾರ್ಗದರ್ಶನದಲ್ಲಿ ಬೆಳೆದು ದೃಶ್ಯಕಲಾ ಕ್ಷೇತ್ರಕ್ಕೆ ಕೀರ್ತಿ ತರುವಂತೆ ಬಾಳುತ್ತಿದ್ದಾರೆ.

ಕಡೇಮನಿಯವರು ತಮ್ಮ ಎಳೆಯ ವಯಸ್ಸಿನಲ್ಲಿಯೇ ಚಿತ್ರಕಲೆಯ ಬಗ್ಗೆ ಆಸಕ್ತಿ ಹೊಂದಿದ್ದರು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಭವಿಷ್ಯದಲ್ಲಿ ಹೆಸರಾಂತ ಕಲಾವಿದರಾಗುವ ಭರವಸೆಯನ್ನು ಮೂಡಿಸಿದವರಾಗಿದ್ದರು. ಚಿತ್ರಕಲೆಯಲ್ಲಿ ತಮ್ಮ ನಿಜವಾದ ಸಾಧನೆ ಆರಂಭವಾದದ್ದು ಶಿಕ್ಷಕ ವೃತ್ತಿಗೆ ಸೇರಿದ ನಂತರವೇ ಎಂದು ಹೇಳುವ ಕಡೇಮನಿಯವರು "ಕಲೆಯಲ್ಲಿ ಸಾಧಿಸುವುದು ಸಾಕಷ್ಟಿದೆ. ನಾನಿನ್ನೂ ಇದರಲ್ಲಿ ಚಿಕ್ಕ ಮಗು ಕಲೆಗಾಗಿ ಒಂದು ಜನ್ಮ ಕಳೆದರೂ ಸಾಲದು ಎನ್ನುತ್ತಾರೆ. ವಿದ್ಯಾರ್ಥಿಯಾಗಿದ್ದಾಗಿನಕ್ಕಿಂತಲೂ ಉಪನ್ಯಾಸಕರಾದ ಬಳಿಕ ಹಿರಿಯ ಕಲಾವಿದರಾದ ದಿ. ಶ್ರೀ ಎಂ.ಎಸ್. ಜತ್ತಿಯವರ ಮಾರ್ಗದರ್ಶನ ಹಾಗೂ ಕಲಾ ಶಾಲೆಯ ಹಿಂದಿನ ಪ್ರಾಚಾರ್ಯರಾದ ದಿ. ಶ್ರೀ ಕಾಚಾಪೂರ ಅವರ ಸಹಕಾರದೊಂದಿಗೆ ಕಲೆಯಲ್ಲಿ ಸಾಧನೆ ಮಾಡಿರುವುದು ಬಹುವಾಗಿದೆ."[೪] ಎಂದು ಅವರನ್ನು ನೆನೆಯುತ್ತಾರೆ.

ಉಪನ್ಯಾಸಕರಾಗಿ ಸೇರಿದ ಪ್ರಾರಂಭದ ದಿನಗಳಲ್ಲಿ ವಿದ್ಯಾರ್ಥಿಗಳೊಡನೆ ತುಂಬಾ ಹೊತ್ತು ಸಮಯ ಕಳೆದು ವೃತ್ತಿಯ ಜೊತೆಗೆ ಸಮಯ ಬಿಡುವು ಮಾಡಿಕೊಂಡು ಹಲವಾರು ನಾಟಕಗಳಲ್ಲಿ ಪಾತ್ರಮಾಡಿ, ಪ್ರಸಾಧನ ಹಾಗೂ ರಂಗಸಜ್ಜಿಕೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಕಲಾ ಶಾಲೆಯಲ್ಲಿ ಉಪನ್ಯಾಸವನ್ನು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಕಲಾಸೃಷ್ಟಿಯತ್ತ ಇಷ್ಟೊಂದು ಗಂಭೀರವಾಗಿ ಗಮನಕೊಡುತ್ತಿರಲಿಲ್ಲ. ಆದರೆ ಈಗ ಹಗಲು ರಾತ್ರಿಯೆನ್ನದೆ ಕಲಾಕೃತಿ ರಚನೆಯಲ್ಲಿ ತೊಡಗಿಕೊಂಡಿರುತ್ತಾರೆ. ಮುಖ್ಯವಾಗಿದೆ ಎನ್ನುತ್ತಾರೆ. ಪಿ.ಎಸ್. ಕಡೇಮನಿಯವರು ವೃತ್ತಿ ಬದುಕಿನ ಜೊತೆ ಜೊತೆಗೆ ಕಲಾಕೃಷಿಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಭಾವಚಿತ್ರಣ, ವ್ಯಕ್ತಿಚಿತ್ರಣ, ಸಂಯೋಜನೆ ರಚನೆಯಲ್ಲಿ ಗಮನಾರ್ಹ ರೀತಿಯಲ್ಲಿ ಕಲಾಕ್ರತಿಗಳನ್ನು ರಚಿಸಿದ್ದಾರೆ. ಇವರು ಕೆಲಸ ಮಾಡುತ್ತಿದ್ದ ಸಂಸ್ಥೆಯ ಆವರಣದಲ್ಲಿ ಒಬ್ಬ ವಿಕ್ಷಿಪ್ತ ವ್ಯಕ್ತಿ ಇರುತ್ತಿದ್ದ. ಒಂದುದಿನ ಅವನನ್ನು ಕೂರಿಸಿಕೊಂಡು ರಚಿಸಿದ ಜಲವರ್ಣ ಕೃತಿಯು ೧೯೮೮ರಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆಯಿತು. ಇದು ಒಂದು ಸಣ್ಣ ಉದಾಹರಣೆ ಮಾತ್ರ. ಇಂತಹ ಅನೇಕ ಸನ್ನಿವೇಶಗಳು ಅವರ ಕಲಾ ಸಾಧನೆಯಲ್ಲಿ ನಡೆದಿದೆ.

ಕಡೇಮನಿಯವರ ದಾಂಪತ್ಯ ಜೀವನ

ಈ ಅಧ್ಯಯಸ ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಪಿ.ಎಸ್. ಕಡೇಮನಿಯವರ ಸಾಂಸ್ಕೃತಿಕ ಪರಿಸರ, ಬಾಲ್ಯಜೀವನ, ಕಲಾಶಿಕ್ಷಣ ಮತ್ತು ವೃತ್ತಿಜೀವನದ ಕುರಿತಾಗಿ ಅಧ್ಯಯನ ಮಡಿಕೊಂಡು

ಬರುವಾಗ ಕೌಟುಂಬಿಕ ಜೀವನದ ಕುರಿತು ತಿಳಿದುಕೊಳ್ಳುವುದು ಅಷ್ಟು ಮುಖ್ಯವಾಗಿದೆ. ಪ್ರಪಂಚದ ಅನುಭವವು ಎಷ್ಟು ಮುಖ್ಯವೋ, ಪ್ರಾಪಂಚಿಕ ಜೀವನವೂ ಮುಖ್ಯವಾಗಿರುವುದು ಅದರ ಪ್ರತಿಬಿಂಭ ಸಮಾಜದಲ್ಲಿ ಕಾಣುವುದು. ಕಡೇಮನಿಯವರ ಕೌಟುಂಬಿಕ ಜೀವನವೂ ಕೂಡಾ ಅಷ್ಟೇ ಸುಂದರ, ಸಮಷ್ಟಿಯಿಂದ ಕೂಡಿರುತ್ತದೆ. ಸಂಸ್ಕೃತ ಸುಭಾಶಿತವು "ಹೆಂಡತಿಯು ಕಾರ್ಯದಲ್ಲಿ ಮಂತ್ರಿಯಂತೆ, ಸಂಕಟದಲ್ಲಿ ಮಿತ್ರನಂತೆ, ಶಯನದಲ್ಲಿ ರಂಭೆಯಂತೆ ಮತ್ತು ಸೇವೆಯಲ್ಲಿ ದಾಸಿಯಂತೆ ಆದರ್ಶ ಸತಿಯಾಗಿರಬೇಕು." ಎಂದು ವಿವರಿಸಿದೆ.

ಹೆಣ್ಣಿಲ್ಲದ ಬಾಳು ಬರುಡೆಂದು ಹೇಳಬಹುದು. ಹೆಣ್ಣು ಬಾಳಿಗೊಂದು ಅರ್ಥ, ಮೆರುಗು ಹಾಗೂ ಸ್ಥಿರತೆಯನ್ನೊದಗಿಸುವುದು. ಗಾಳಿಪಟಕ್ಕೊಂದು ಬಾಲ ಹೇಗೆ ಬೇಕೋ ಹಾಗೆಯೇ ಗಂಡಿಗೊಂದು ಹೆಣ್ಣು ಬೇಕು. ಇದು ಭಾರತ ಸಂಸ್ಕೃತಿಯ ಲಕ್ಷಣ. ಹೆಣ್ಣು ಮಾನವನಿಗೆ ಅಮೃತವೂ, ವಿಷವೂ ಆಗಬಹುದು. ಸುಖದ ಹಗಲು, ದುಃಖದ ರಾತ್ರಿ ಸಮವಾದರೆ ಬಾಳು ಸಮರಸವಾಗುವುದು. ಅಂತಹ ಸುಂದರ ದಾಂಪತ್ಯ ಜೀವನವನ್ನು ಕಡೇಮನಿಯವರ ಕುಟುಂಬದಲ್ಲಿ ಕಾಣಬಹುದು.

ಪಿ.ಎಸ್. ಕಡೆಮನಿಯವರು ೧೯೮೦ ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಶ್ರೀ ಸಿದ್ಧೇಶ್ವರ ಕಲಾ ಮಂದಿರದಲ್ಲಿ ಸೇವೆಗೆ ಸೇರಿಕೊಂಡ ಬಳಿಕ ಚಿಕ್ಕಪ್ಪ ಮತ್ತು ತಂದೆಯವರ ಮಾತು ಪಾಲಿಸುವುದರೊಂದಿಗೆ ೧೯೮೨ ರಲ್ಲಿ ತಮ್ಮ ೨೭ನೇ ವಯಸ್ಸಿನಲ್ಲಿ ಜಮಖಂಡಿ ತಾಲೂಕಿನ ಕಂಕಣವಾಡಿ ಗ್ರಾಮದ ತಮ್ಮ ಸಹೋದರಿಯ ಮಗಳನ್ನು ವಿವಾಹವಾದರು. ವಿವಾಹವಾಗು ವುದಕ್ಕಿಂತಲೂ ಮೊದಲು ಏನೋ ಸಾಧಿಸುವ ತವಕದಲ್ಲಿದ್ದ ಕಡೇಮನಿಯವರು ವಿವಾಹವನ್ನು ವಿರೋಧಿಸಿದ್ದು ಉಂಟು. ಮನೆಯಲ್ಲಿ ಹಿರಿಯರ ಆಜ್ಞೆಯಂತೆ ಅನಿವಾರ್ಯವಾಗಿ ಮದುವೆ ಮಾಡಿಕೊಳ್ಳಬೇಕಾಯಿತು. ಇವರ ಕೈಹಿಡಿದು ಬಂದ ಪತ್ನಿ 'ಅನ್ನಪೂರ್ಣ' ಕಲಾ ಪ್ರೋತ್ಸಾಹಕರಾಗಿ ಇವರನ್ನು ಕೃತಿ ರಚಿಸುವತ್ತ ಪ್ರೇರಣೆ ನೀಡಿದರು.

ಇವರು ಸುಖದ ಜೀವನ ಸಾಗಿಸುವುದಕಿಂತ ವಯಸ್ಸಾದ ತಮ್ಮ ತಾಯಿಯನ್ನು ತಮ್ಮೂರಾದ ಕುಮಠೆಯಿಂದ ವಿಜಾಪುರಕ್ಕೆ ಕರೆತಂದು ಅವರ ಮಾರ್ಗದರ್ಶನದಲ್ಲಿ ಹೆಜ್ಜೆ ಇಟ್ಟರು. ಪ್ರತಿಯೊಂದು ಕೃತಿಯನ್ನು ರಚಿಸುವಾಗಲೂ ತಾಯಿ ಮತ್ತು ಪತ್ನಿ ಕೆಲವೊಂದು ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಆತುರದಿಂದ ಹೇಳುತ್ತಿದ್ದರು. ಇಂತಹ ಸಂತೋಷದ ಚಿಕ್ಕ ಸಂಸಾರದಲ್ಲಿ ೧೯೮೬ ರಲ್ಲಿ ಹೆಣ್ಣುಮಗುವನ್ನು ಪಡೆದುಕೊಂಡರು. ತದನಂತರ ಮತ್ತೋರ್ವ ಹೆಣ್ಣುಮಗಳು ಜನಿಸಿದಳು. ಇಬ್ಬರು ಹೆಣ್ಣುಮಕ್ಕಳು ಹಿರಿಯರಾದರೆ, ಕಿರಿಯರಿಬ್ಬರು ಪುತ್ರರು. ಈ ನಾಲ್ಕು ಜನ ಮಕ್ಕಳಲ್ಲಿ ಹಿರಿಯ ಮಗಳು 'ವನಶ್ರೀ' ಎಂ.ಕಾಂ. ಪದವಿಯನ್ನು ಪಡೆದುಕೊಂಡು ಧಾರವಾಡಕ್ಕೆ ವಿವಾಹಮಾಡಿ ಕೊಟ್ಟಿದ್ದಾರೆ. ಎರಡನೆಯ ಮಗಳು 'ವರ್ಣಿಕಾ' ಬಿ.ಕಾಂ. ಪದವಿಯನ್ನು ಪಡೆದುಕೊಂಡಿದ್ದು ಮೂರನೆಯ ಮಗ 'ವರುಣ' ಪಿ.ಯು.ಸಿಯಲ್ಲಿ ವಿಜ್ಞಾನ

ವಿಷಯ ತೆಗೆದುಕೊಂಡು ಪ್ರಸ್ತುತ ಚಿತ್ರಕಲೆಯಲ್ಲಿ ಗುಲಬರ್ಗಾದ ಎಂ.ಎಂ.ಕೆ. ಕಾಲೇಜ್ ಆಫ್ ವಿಜುವಲ್ ಆರ್ಟ್ ನಲ್ಲಿ ಎಂ.ವಿ.ಎ. ಸ್ನಾತಕೋತ್ತರ ಪದವಿಯ ವ್ಯಾಸಂಗ ಮಾಡುತ್ತಿದ್ದಾರೆ. ನಾಲ್ಕನೆಯ ಮಗ 'ವಸಂತ' ಪಿ.ಯು.ಸಿ ಡಿಪ್ಲೋಮಾ ಅಭ್ಯಾಸದಲ್ಲಿದ್ದಾನೆ. ಈ ರೀತಿಯಾಗಿ ಇವರ ಕುಟುಂಬ ತುಂಬ ಮನ ಮನಸುಗಳ ಕುಟುಂಬ ಈಗ ವಿಜಾಪುರ ಶಿಕ್ಷಕರ ಬಡಾವಣೆಯ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಕಲಾ ಬದುಕು

ಪಿ.ಎಸ್. ಕಡೇಮನಿಯವರ ಕಲಾ ಬದುಕು ಪ್ರಾರಂಭವಾದದ್ದೇ ಒಂದು ಆಕಸ್ಮಿಕವೆಂದು ಹೇಳಬಹುದು. ಕಡೇಮನಿಯವರ ವೃತ್ತಿ ಬದುಕನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ದಿ. ಎಂ.ಎಸ್. ಜತ್ತಿಯವರ ಮಾರ್ಗದರ್ಶನ ಮತ್ತು ದಿ. ಶ್ರೀ ಸಿ. ಬಿ. ಕಾಚಾಪೂರ ಮತ್ತು ಗೆಳೆಯರಾದ ವಿದ್ಯಾಧರ ಸಾಲಿಯವರ ಪ್ರೋತ್ಸಾಹದೊಂದಿಗೆ ಕಲಾಬದುಕನ್ನು ಪ್ರಾರಂಭಿಸಿದರು. ಕಲಾ ಬದುಕಿನ ಕುರಿತು ಕಡೇಮನಿಯವರು ಹೇಳುವ ಹಾಗೆ 'ನೀವು ಈ ರೀತಿಯ ಕಲಾವಿದನಾಗುತ್ತೇನೆ ಎಂಬ ಕನಸು ಕಂಡಿದ್ದೀರಾ?' ಎಂದು ಪ್ರಶ್ನೆ ಮಾಡಿದಾಗ "ಇಲ್ಲ ಇಲ್ಲ ಆಗಿನ ಉದ್ದೇಶವೇನೆಂದರೆ ನನ್ನ ಬದುಕಿಗೋಸ್ಕರ ನನ್ನ ಮಾಧ್ಯಮಿಕ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರು ಇದ್ದರಲ್ಲಾ ಅದೇ ತೆರನಾಗಿ ನಾನು ಕೂಡಾ ಶಿಕ್ಷಕನಾಗಿ ನನ್ನ ಬದುಕನ್ನು ರೂಪಿಸಿಕೊಳ್ಳಬೇಕು ಅನ್ನುವುದು ಒಂದಾದರೆ ಎರಡನೆಯದು ಈ ಚಿತ್ರಕಲೆಯು ಪ್ರಸಾರ ಮಾಡಲಿಕ್ಕೆ ಒಂದು ಮಾಧ್ಯಮ ಒಬ್ಬ ಚಿತ್ರಕಲಾ ಶಿಕ್ಷಕನಾದರೆ ಒಂದು ವರ್ಗದ ನಲವತ್ತು ಜನ ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಅರಹಬಹುದಲ್ಲಾ ಅನ್ನುವಂತಹ ಉದ್ದೇಶದಿಂದ ಚಿತ್ರಕಲೆಯ ಶಿಕ್ಷಕನಾದೆನೇ ವಿನಃ, ಕಲಾವಿದನಾಗಬೇಕೆಂದುಕೊಂಡಿರಲಿಲ್ಲ."[೫] ಎಂದು ಹೇಳುವ ಕಡೇಮನಿ ಯವರು ವೃತ್ತಿ ಬದುಕಿನ ಜೊತೆಜೊತೆಗೆ ಕಲಾಸೃಷ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾವಿರಾರು ಕಲಾಕೃತಿಗಳನ್ನು ನಾಡಿಗೆ ನೀಡಿ ಕಲಾವಿದರೆನಿಸಿಕೊಂಡಿರುವುದು ಒಂದು ಅಚ್ಚರಿಯ ಸಂಗತಿ.

ಇಂದಿನ ಯಾಂತ್ರೀಕೃತ ಬದುಕಿನಲ್ಲಿ ಕಲಾವಿದರಾಗಿ ಗುರುತಿಸಿಕೊಳ್ಳುವುದು ಬಹು ಕಷ್ಟದ ಕೆಲಸ ಒಬ್ಬ ಉತ್ತಮ ಕಲಾವಿದನಾಗಬೇಕಾದರೆ ಸತತ ಪರಿಶ್ರಮ ಮತು ತಾಳ್ಮೆ ಅತ್ಯಗತ್ಯ. ಅದೆಷ್ಟೋ ಜನ ಕಲಾವಿದರು ವೃತ್ತಿಗೆ ಸೇರಿದ ನಂತರ ಕಲಾರಚನೆಯನ್ನೇ ಮರೆತಿರುವುದು ಶೋಚನೀಯ ಸಂಗತಿ. ಅಂತಹ ದಿನಮಾನಗಳಲ್ಲಿಯೂ ವೃತ್ತಿ ಮತ್ತು ಕಲಾ ಬದುಕಿನ ಸಂದರ್ಭದಲ್ಲಿ 'ಕಲೆ ಕಲೆಗಾಗಿಯೋ ಅಥವಾ ಕಲೆ ಬದುಕಿಗಾಗಿಯೋ ಎಂಬ ಸಿದ್ಧಾಂತ ಎದುರಾದಾಗ ಕಲೆ ಕಲೆಗಾಗಿಯೂ ಕಲೆ ಬದುಕಿಗಾಗಿಯೂ ಎಂಬ ತತ್ವ ಸಿದ್ಧಾಂತಕ್ಕೆ ನಿದರ್ಶನವೇ ಕಡೇಮನಿಯವರು. ಶಿಕ್ಷಕ ವೃತ್ತಿಯ ಜೊತೆಗೆ ಸಮಯದ ಬಿಡುವು ಮಾಡಿಕೊಂಡು ಸತತ ಕಲಾಕೃತಿಯ ರಚನೆಯನ್ನೇ ಜೀವನದ ಉಸಿರಾಗಿಸಿಕೊಂಡರು.

ಕಲೆ ಯಾವುದೇ ಇರಲಿ ಅದು ದೇವರಿತ್ತ ದೇಣಿಗೆ ಸತತ ಪರಿಶ್ರಮವು ಕಲಾವಿದನನ್ನು ಎತ್ತರಕ್ಕೆ ಒಯ್ಯುತ್ತದೆ. ಎಂಬುದು ಅಷ್ಟೇ ಸತ್ಯ. ಸತತ ಪರಿಶ್ರಮವು ಓರ್ವ ಕಲಾವಿದನನ್ನು 'ಲೋಕದರ್ಶನ' ಮಾಡುತ್ತದೆ. ವಿಜಾಪುರ ಜಿಲ್ಲೆಯಲ್ಲಿ ಅನೇಕ ಪ್ರತಿಭಾನ್ವಿತ ಕಲಾವಿದರಿದ್ದಾರೆ. ಇಲ್ಲಿ ಕಲೆ, ಸಂಸ್ಕೃತಿ ನಮ್ಮ ದಿನನಿತ್ಯದ ಕಾರ್ಯಗಳಲ್ಲಿ ಹಾಸು ಹೊಕ್ಕಾಗಿದೆ. ಇಂತಹ ಕಲೆಯನ್ನು ತಮ್ಮ ಉಸಿರಾಗಿಸಿ ಗ್ರಾಮೀಣ ಸೊಬಗನ್ನು ಸೆರೆಹಿಡಿಯುವ ಕಲಾವಿದ ಪಿ.ಎಸ್. ಕಡೇಮನಿಯವರು ರಾಜ್ಯದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರು.

ಈಗಿನ ಕಾಲದ ನಾಗರಿಕ ನವ್ಯ ಮಾದರಿಯಿಂದ ಪ್ರಯತ್ನಪೂರ್ವಕ ದೂರವಾಗಿದ್ದುಕೊಂಡು ನಿತ್ಯನವ್ಯವಾಗಿರುವ ನಮ್ಮ ಗ್ರಾಮೀಣ ಬದುಕಿನ ಸನಾತನವನ್ನು ಬಣ್ಣದ ಗೆರೆಗಳಲ್ಲಿ ಹಿಡಿದಿಡುವ ಇವರ ಪ್ರಯತ್ನ ಕಣ್ಣಿಗೆ ಕಟ್ಟುತ್ತದೆ. ಒಬ್ಬ ಕಲಾವಿದ ತನ್ನ ಬಾಲ್ಯದ ವಾಸ್ತವ, ವಿದ್ರತೆ, ಭಿನ್ನತೆಗಳ ಸೌಂದರ್ಯವನ್ನು ಪ್ರಾಮಾಣಿಕವಾಗಿ ಹೇಗೆ ಕಲಾತ್ಮಕವಾಗಿ ಕಣ್ಣುಳ್ಳವರ ಮುಂದೆ ತಂದು ನಿಲ್ಲಿಸಬಲ್ಲರು ಎಂಬುದಕ್ಕೆ ಕಡೇಮನಿಯವರೊಬ್ಬ ಆದರ್ಶ ಕುಂಚಿಗ ಅನ್ನಿಸುತ್ತದೆ. ಕುಂಚಿಗ ಎಂದರೆ ಕೈಯ್ಯಲ್ಲಿ ಕುಂಚ ಹಿಡಿದವರು ಅಷ್ಟೇ ಅಲ್ಲ. ಚಿಕ್ಕವರಿದ್ದಾಗ ತಾಯಿ ಕೊಟ್ಟಿದ್ದ ಕುಂಚಿಗೆ, ಕುಲಾಯಿ, ಕೌದಿ, ಕಂಬಳಿ, ಜಾಡಿಗಳನ್ನು ಇವತ್ತಿಗೂ ನೆನಪಿಟ್ಟವರು. ಅವುಗಳನ್ನು ಕಾಲದ್ರವ್ಯದ ನೂತನ ಹಳದಿಯ ತಮ್ಮದೇ ಆದ ಸಮುಮಿಶ್ರಣಗಳಲ್ಲಿ ಮೂಡಿಸಿದರು. ಹಳ್ಳಿಜನರ ನೋವುನಲಿವುಗಳನ್ನು ತೀರಾ ಹತ್ತಿರದಿಂದ ಕಂಡು ಸ್ಪಂದಿಸಿದ ಕಾರಣ ಸಹಜವಾಗಿ ಗ್ರಾಮೀಣ ಸೊಬಗು ಅವರಲ್ಲಿ ಎದ್ದು ಕಾಣುತ್ತದೆ. ದೇಶದ ಬೆನ್ನೆಲುಬಾದ ಮಣ್ಣಿನ ಮಗ ಅನ್ನದಾತನ ಬಗ್ಗೆ ಅಭಿಮಾನ, ಪ್ರೀತಿ ಮೂಡುವಂತೆ ಅವರು ತಮ್ಮ ಕಲಾವಸ್ತುಗಳನ್ನು ನಿರ್ವಹಿಸಿದ್ದಾರೆ.

ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲಿ ಕಲೆ ಅಡಗಿದೆ. ಚಿತ್ರಕಲೆಯ ಬಗ್ಗೆ ವಿಶ್ಲೇಷಣೆ ಮಡುತ್ತಾ ಹೋದರೆ ಈ ಹಿಂದಿನ ಶಿಲಾಯುಗದಿಂದಲೇ ಪ್ರಾರಂಭಿಸಿದರೆ ಅದರ ಚರಿತ್ರೆ ಹೇಳಲು ಸಮಯ ಸಾಲದು. ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ಹೊಸತನದ ವಾಂಛೆಯನ್ನು ವೈಜ್ಞಾನಿಕ ಮೂಸೆಯಲ್ಲಿ ಅರಳುತ್ತಿರುವ ಕಲೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಗ್ರಾಮಾಂತರ ಮಣ್ಣಿನ ವಾಸನೆಯೊಂದಿಗೆ ಸಂಸ್ಕೃತಿಯ ಉಳಿವಿಗಾಗಿ ಕಲೆ ತನ್ನ ಕಲೆಯಿಂದ ಪ್ರತಿಪಾದಿಸುವುದೇ ಕಡೆಮನಿಯವರ ಕಲಾಕೃತಿಗಳ ಮುಖ್ಯ ವಸ್ತು ವಿಷಯ.

೧೨ನೇ ಶತಮಾನದಿಂದಲೂ ಶರಣರ ಸಂಸ್ಕೃತಿಯ ಹಾಗೂ ವಿಶ್ವವಿಖ್ಯಾತಿ ಪಡೆದ ಗೋಲಗುಮ್ಮಟದ ಹೆಸರುವಾಸಿ ವಿಜಾಪುರದ ಶ್ರೀ ಸಿದ್ದೇಶ್ವರ ಕಲಾಮಂದಿರದ ಉಪನ್ಯಾಸಕರಾಗಿ, ಪ್ರಸ್ತುತ ಪ್ರಾಚಾರ್ಯರೂ ಆಗಿರುವ ಇವರ ಕಲಾ ಬದುಕು ಶ್ಲಾಘನೀಯವಾದುದು. ಇವರು ತಮ್ಮ ಉಪನ್ಯಾಸ ವೃತ್ತಿಯ ಜೊತೆಗೆ ದಿನದಿಂದ ದಿನಕ್ಕೆ ಹೊಸತನದ ಅನ್ವೇಷಣೆಯಲ್ಲಿ ಕಲಾಬದುಕು ಸಾಗಿಸಿಕೊಂಡು ಬರುತ್ತಿದ್ದಾರೆ. ಇವರ ಪ್ರತಿಯೊಂದು ಕಲಾಕೃತಿಯಲ್ಲಿಯೂ ಗ್ರಾಮಾಂತರ ಹಳ್ಳಿಗಾಡಿನ ಜೀವನದ ಒಳ ಹೊರ ಮೈಗಳು ಗೋಚರಿಸುತ್ತವೆ. ಅವರು

ಬಳಸುವ ಬಣ್ಣ ಕಣ್ಣಿಗೆ ತಂಪನ್ನು ಎರಚುವ ಮಿಶ್ರಮಾಧ್ಯಮ ಹಳ್ಳಿಯ ನೈಜ ಬದುಕಿನ ವಾಸ್ತವ್ಯ, ಸಂಸ್ಕೃತಿ, ಸಾಮಾಜಿಕ ಬಡತನದ ನಡುವೆ ಮಾತೃಪ್ರೀತಿ, ಪ್ರಾಣಿಪ್ರೀತಿಯ ಜೊತೆಗೆ ಯುವ ಹೃದಯದಲ್ಲಿ ಅಡಗಿದ ಪ್ರೀತಿ ಪ್ರೇಮ ಅಲ್ಲದೇ ಮಣ್ಣಿನ ವಾಸನೆಯನ್ನು ಬೆಡಗು ಬಿನ್ನಾಣದ ಜೊತೆ ಬಣ್ಣದಲ್ಲಿ ತೇಲಿಬಿಡುವಂತಹ ಸೃಜನಶೀಲ ಕ್ರಿಯೆ ಇವರ ಕಲೆಯಲ್ಲಿ ಕಲಾ ಬದುಕಿನ ಸಾವಿರಾರು ಕಲಾಕೃತಿಯ ಪ್ರಮುಖ ಅಂಶವೆಂದು ಹೇಖಬಹುದು.

ಇವರು ಮೊದಮೊದಲು ಜಲವರ್ಣದಲ್ಲಿಯೇ ಹೆಚ್ಚಾಗಿ ಕಲಾಕೃತಿಗಳನ್ನು ರಚಿಸುತ್ತಿದ್ದರು. ನಂತರದ ದಿನಗಳಲ್ಲಿ ಅಂದರೆ ವೃತ್ತಿ ಬದುಕನ್ನು ಪ್ರಾರಂಭಿಸಿದ ದಿನಗಳಿಂದ ಹೆಚ್ಚಾಗಿ ತೈಲವರ್ಣದಲ್ಲಿಯೇ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಹಳ್ಳಿಗೂ ಕಡೆಮನಿಯವರಿಗೂ ಬಿಡಲಾರದ ನಂಟು. ಗ್ರಾಮೀಣ ಸೊಗಡೇ ಇವರ ಕಲಾಕೃತಿಗಳ ಹೈಲೆಟ್. ಇಲ್ಲಿ ನಿತ್ಯದ ಗ್ರಾಮೀಣ ಬದುಕು ಮೈತಳೆಯುತ್ತದೆ. ಬಾಲ್ಯದ ನೆನಪುಗಳು, ಗೆಳೆಗುಂಟೆ, ಎತ್ತುಗಳು ಕಲೆಗಳಲ್ಲಿ ಸಮ್ಮಿಳಿತವಾಗಿವೆ. ಅವರು ೨೦೦೬ರಲ್ಲಿ 'ನನ್ನ ಹಳ್ಳಿ' ಎಂಬ ಶೀರ್ಷಿಕೆಯಡಿ ಹಳ್ಳಿಗಾಡು ಬದುಕಿನ ೨೦ ಕಲಾಕೃತಿಗಳನ್ನು ರಚಿಸಿದ್ದಾರೆ.

ಗ್ರಾಮೀಣ ಪ್ರದೇಶದ ಅಂಗುಲಂಗುಲಗಳನ್ನು ಚಿತ್ರಿಸುವುದರಲ್ಲಿ ಕಡೇಮನಿಯವರದ್ದು ಎತ್ತಿದ ಕೈ. ಎತ್ತಿನ ಜೊತೆ ಹೊರಟ ರೈತ, ಎಮ್ಮೆಯ ಹಾಲು ಹಿಂಡುವ ರೈತ, ಹೊಲದಲ್ಲಿ ಕೆಲಸ ಮಾಡುತ್ತಾ ಕುಳಿತಿರುವ ರೈತ, ಅವನ ಹೆಂಡತಿ, ಮಜ್ಜಿಗೆ ಕಡಿಯುವ ರೈತಾಪಿ ಹೆಣ್ಣುಮಗಳು ಹಾಗೂ ಅವಳ ಪೋರಿ, ಎತ್ತಿನ ಜೊತೆ ಮಗು, ಈ ಎಲ್ಲಾ ಕಲಾಕೃತಿಗಳಲ್ಲಿಯೂ ತಾಯಿ ಈರಮ್ಮಳ ಕೌದಿಯ ಕುಸುರಿ ಕೆಲಸದ ಚಿತ್ರಣ ಇದ್ದೇ ಇರುತ್ತದೆ. ಅಷ್ಟೇ ಏಕೆ? ಅವರು ಹೆಗಲಿಗೆ ಹಾಕುವ ಬ್ಯಾಗು ಕೂಡಾ ತಾಯಿಯ ಕೌದಿಯ ಚಿತ್ತಾರದ ಸೊಬಗಿನದು. ಇವರ ಮನೆಯಲ್ಲಿಯೂ ಎಲ್ಲೆಲ್ಲೂ ಅತ್ಯಂತ ಸೂಕ್ಷ್ಮ ಕುಸುರಿ ಕೆಲಸದ ಕೌದಿಯದೇ ದರ್ಬಾರು. ಕಡೇಮನಿಯವರಿಗೆ ಅವರ ತಾಯಿ ಗುರುವೂ ಹೌದು, ಮಮತೆಯ ಸಂಕೇತವೂ ಹೌದು.

ಅತಿ ಸಣ್ಣ ಸೂಕ್ಷ್ಮವೂ ಕೂಡ ಇವರ ಚಿತ್ರಣದಲ್ಲಿ ಬಿಟ್ಟುಹೋಗುವುದಿಲ್ಲ. 'ಎಲ್ಲಿಗೆ ಪಯಣ?' ಎಂಬ ಕಲಾಕೃತಿ ನೆರೆಹಾವಳಿಯಿಂದ ತತ್ತರಿಸಿದ ರೈತ ಮಹಿಳೆ ಗುಳೆ ಹೊರಟಿದ್ದಾಳೆ. ಗಂಟು ಹೊತ್ತುಕೊಂಡು ಮಗುವನ್ನು ಹೆಗಲಮೇಲೆ ಕೂರಿಸಿಕೊಂಡು ಚಿಂತೆಯನ್ನೇ ಹಾಸಿ ಹೊದ್ದಿರುವ ಅವಳ ಮುಖ, ಹಗ್ಗ ಹೆಣೆಯುತ್ತಿರುವ ಅಜ್ಜ, ಕೋಳಿಗಳು, ಹೊಗೆ ಆವರಿಸಿಕೊಂಡಿರುವ ಅಡುಗೆ ಮನೆ, ಪಕ್ಕದಲ್ಲಿ ಚಿಲುಮೆ ಒಂದು ನೈಜ ಕೃತಿ. ಕೌದಿ ಹೊಲೆಯುತ್ತಿರುವ ಅಜ್ಜಿ, ಹುಣ್ಣಿಮೆಯಲ್ಲಿ ಎತ್ತುಗಳ ಮೈತೊಳೆಯುತ್ತಿರುವ ರೈತ ಇವರ ಕಲಾ ಬದುಕಿನ ಪ್ರಮುಖ ಕಲಾಕೃತಿಗಳು. ಕಡೇಮನಿಯವರು ನಮ್ಮ ನಡುವಿನ ಅಪರೂಪದ ಕಲಾವಿದರು. "ಬಣ್ಣಗಳ ಮಿಶ್ರಣದ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿ ವಹಿಸಬೇಕು. ಪೇಂಟಿಂಗ್‌ನಲ್ಲಿ

ಮಿಕ್ಸಿಂಗ್ ಬಾಳ ಮುಖ್ಯ. ಪ್ರಖರವಾದ ಕಣ್ಣಿಗೆ ಹೊಡೆಯುವ ಬಣ್ಣ ಇಲ್ಲ. ಕಣ್ಣಿಗೆ ತಂಪಾದದ್ದು ಇದೆ." ಎನ್ನುತ್ತಾರೆ.

ಕಡೇಮನಿಯವರು ತೈಲವರ್ಣದಲ್ಲಿಯೇ ಹೆಚ್ಚಾಗಿ ಕಲಾಕೃತಿಗಳನ್ನು ರಚಿಸಿದ್ದರೂ ಕೂಡಾ, ಒಂದೇ ಮಾಧ್ಯಮಕ್ಕೆ ಅಂಟಿಕೊಳ್ಳದೆ ಪೆನ್ಸಿಲ್, ಜಲವರ್ಣ, ಆಕ್ರಲಿಕ್ ಪೋಸ್ಟರ್ ವರ್ಣ, ಪೇಸ್ಟಲ್ ಹೀಗೆ ಎಲ್ಲಾ ಮಾಧ್ಯಮದಲ್ಲಿಯೂ ಕೃತಿರಚನೆಯ ಕಡೆಗೆ ಗಮನಕೊಟ್ಟಿದ್ದಾರೆ. ಒಂದು ದಿನ ಕಲಾವಿದರು ಕೆಲಸದ ನಿಮಿತ್ತ ತಮ್ಮೂರಿನಿಂದ ಜಮಖಂಡಿಗೆ ಹೊರಟಿರುವಾಗ ಕೃಷ್ಣಾನದಿಗೆ ಅಡ್ಡಲಾಗಿ ಕಟ್ಟಿರುವ ಚಿಕ್ಕ ಪಡಸಲಗಿ ಸೇತುವೆ ಅಕ್ಕಪಕ್ಕದಲ್ಲಿನ ಬೃಹತ್ ಬಂಡೆಗಳು ನದಿನೀರಿನ ಸೆಳೆತಕ್ಕೆ ಕಲಾಕೃತಿಗಳಾಗಿ ಮಾರ್ಪಟ್ಟ ಬಂಡೆಗಳನ್ನು ನೋಡಿದ ಕಡೇಮನಿಯವರು ಆದೃಶ್ಯವನ್ನೇ ವಸ್ತುವಾಗಿರಿಸಿಕೊಂಡು 'ನದಿ' ಎನ್ನುವ ಶೀರ್ಷಿಕೆಯಲ್ಲಿ ಸುಮಾರು ೧೬ ಕಲಾಕೃತಿಗಳನ್ನು ರಚಿಸಿದ್ದಾರೆ. ಅಲ್ಲದೇ ಹಲವಾರು ಸೃಜನಾತ್ಮಕ ಮತ್ತು ಅಮೂರ್ತ ಕಲ್ಪನೆಯ ಚಿತ್ರಗಳನ್ನೂ ರಚಿಸಿದ್ದಾರೆ. ಆದರೆ ಇವುಗಳ ಸಂಖ್ಯೆ ಬಹಳ ಕಡಿಮೆ. ಹೀಗೆ ಹಲವರು ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದರೂ ಕೂಡ ಕಲಾವಿದರ ವೈಯಕ್ತಿಕ ಶೈಲಿ ಮತ್ತು ವೈಯಕ್ತಿಕ ಛಾಪು ಮೂಡಿದ್ದು ಮಾತ್ರ ಗ್ರಾಮೀಣ ಪರಿಸರದ ಜನರ ಬದುಕಿನ ಚಿತ್ರಣ ಮತ್ತು ಗ್ರಾಮೀಣ ಜಾನಪದ ಕಲೆಗಳ ಅಂಶಗಳು ವಸ್ತುವಾಗಿರುವ ಕಲಾಕೃತಿಗಳು ಕಡೇಮನಿಯವರನ್ನು ಹೆಚ್ಚು ಜನಪ್ರಿಯ ಕಲಾವಿದನೆಂದು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.

ಈ ಗ್ರಾಮೀಣ ವಿಷಯ ಆಯ್ಕೆ ಮಾಡಿರಲು ಈಗಿನ ಮಾಹಿತಿ ತಂತ್ರಜ್ಞಾನದ ದಿನಗಳಲ್ಲಿ ಮೊದಲಿನ ವಸ್ತು ವಿಷಯಗಳು ಗೌಣವಾಗುತ್ತಿರುವ ಸಂದರ್ಭ ಅರಿತಿರುವುದು ಒಂದಾದರೆ ಇನ್ನೊಂದು ಮುಂದಿನ ಪೀಳಿಗೆಗೆ ಇಂತಹ ಸಂಸ್ಕೃತಿ ಬಿಂಬಿಸಲ್ಪಡುವ ಚಿತ್ರಗಳನ್ನು ನೋಡಲು ಸಿಗಲಿ ಎಂಬ ಮತ್ತು ದೇಶಿಯ ಕಲೆಯು ಜೀವಂತವಾಗಿರಬೇಕು ಎನ್ನುವ ಹೆಬ್ಬಯಕೆಯಿಂದ ಮನಸ್ಸು ತಾನಾಗಿಯೇ ಕಡೆಮನಿಯವರಿಗೆ ಪ್ರೇರಣೆ ನೀಡಿತು.

ಗ್ರಾಮೀಣ ಬದುಕಿನ ಕೃತಿಗಳಿಂದ, ವಿಶ್ವವಿದ್ಯಾಲಯದಿಂದ, ಮತ್ತು ಬಿ.ಎಲ್.ಡಿ.ಇ. ಸಂಸ್ಥೆಯಿಂದ ಬದುಕಿಗೊಂದು ತಿರುವು ದೊರೆಯಿತೆಂದು ಹೇಳುವ ಕಡೇಮನಿಯವರು ಇದಕ್ಕೆ ಕಾರಣವೂ ಇದೆ. ಸಂಸ್ಥೆಯಲ್ಲಿ ಆಗಿನ ಅಧ್ಯಕ್ಷರಾಗಿದ್ದ ಶ್ರೀ ಬಿ.ಎಸ್. ಪಾಟೀಲ ಕಮತೆಯವರು ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಂ.ಬಿ. ಪಾಟೀಲರವರು ಬೆನ್ನು ಚಪ್ಪರಿಸಿ ಪ್ರೋತ್ಸಾಹಿಸಿದರು. ೨೦೦೦ ದಲ್ಲಿ 'ನನ್ನ ಹಳ್ಳಿ' ಎಂಬ ಶೀರ್ಷಿಕೆಯಡಿಯಲ್ಲಿ ಹಮ್ಮಿಕೊಂಡಿದ್ದ ಏಕವ್ಯಕ್ತಿ ಕಲಾಪ್ರದರ್ಶನ ಇವರೀರ್ವರೂ ವೀಕ್ಷಿಸಿದರು. ಮತ್ತು ಪ್ರದರ್ಶನಕ್ಕೆ ಇರಿಸಿದ್ದ ೨೦ ಕಲಾಕೃತಿಗಳಲ್ಲಿ ೧೧ ಕಲಾಕೃತಿಗಳನ್ನು ಸಂಸ್ಥೆಯ ಎನ್.ಆರ್.ಐ ಅತಿಥಿಗೃಹದಲ್ಲಿ ಹಾಕಲು ಆಯ್ಕೆ ಮಾಡಿಕೊಂಡರು. ಬಿ.ಎಲ್.ಡಿ.ಇ. ಸಂಸ್ಥೆಯಡಿಯಲ್ಲಿ ನಡೆಯುವ ಎಲ್ಲಾ ಶಾಲಾ

ಕಾಲೇಜುಗಳಿಗೆ ಮೂರು ಜನ ಪ್ರಮುಖರ ಭಾವಾಚಿತ್ರಗಳನ್ನು ರಚಿಸಲು ತಿಳಿಸಿದರು. ಅವರೆಂದರೆ ಸಂಸ್ಥೆಯಲ್ಲಿ ಅವಿರತವಾಗಿ ದುಡಿದು, ಹೆಮ್ಮರವಾಗಿ ಬೆಳೆಯಲು ಕಾರಣೀಭೂತರಾದ ಶ್ರೀ ಬಂಥನಾಳ ಶ್ರೀಗಳು, ಅದನ್ನು ಪ್ರೋತ್ಸಾಹಿಸಿ ಬೆಳೆಸಲು ಕಾರಣಿಕರ್ತರಾದ ಡಾ॥ ಫ.ಗು. ಹಳಕಟ್ಟಿಯವರು, ನಂತರ ಸಂಸ್ಥೆಯ ಚುಕ್ಕಾಣಿ ಹಿಡಿದು ಹಲವಾರು ಅಂಗಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ದಾಪುಗಾಲು ಇಟ್ಟಂತಹ ಸಚಿವರಾದ ದಿ. ಬಿ.ಎಂ. ಪಾಟೀಲರು, ಇವರುಗಳ ಭಾವಚಿತ್ರಗಳನ್ನು ಹಾಕುವ ಒಟ್ಟು ೧೫೦ಕ್ಕೂ ಹೆಚ್ಚು ಭಾವಚಿತ್ರ ರಚನೆಗೆ ಅನುಮತಿ ದೊರೆಯಿತು. ಆಗ ಕಡೇಮನಿಯವರಿಗೆ ಆದ ಆನಂದಕ್ಕೆ ಮಿತಿಯೇ ಇರಲಿಲ್ಲ. ಅಷ್ಟೇ ಅಲ್ಲದೇ ಸಂಸ್ಥೆಗೆ ಆಗಮಿಸಿದ ಗಣ್ಯರು, ಅಥಿತಿಗಳಿಗೆ ಬೇರೆ ಏನಾದರೂ ಉಡುಗೊರೆಯನ್ನು ಕೊಡುವುದಕ್ಕಿಂತ ಕಲಾಕೃತಿಗಳೇ ಲೇಸೆಂದು ಇವರ ಕಲಾಕೃತಿಗಳನ್ನೇ ಕೊಡುವ ಪರಂಪರೆಯನ್ನು ಮುಂದುವರಿಸಿ ಕೊಂಡು ಬಂದಿದ್ದಾರೆ.

ಜಗತ್ತಿನ ಮಾಹಿತಿ ತಂತ್ರಜ್ಞಾನದ ಹಿರಿಯಣ್ಣ ಅಮೇರಿಕಾದ ಶ್ರೀ ಬಿಲ್ಗೇಟ್ಸ್ ಸೀನಿಯರ್ ಮತ್ತು ಎಸ್. ಮಿನಿ ಗಾರ್ಡಿನರ್ ಹಾಗೂ ಮಿಸ್ ಹೆಲನೇ ಗಾಯ್ಕೆ ವಿಜಾಪುರಕ್ಕೆ ಬಂದಾಗ ಬಿ.ಎಲ್.ಡಿ.ಇ. ಸಂಸ್ಥೆಗೂ ಆಗಮಿಸಿದ್ದರು. ಇಂಥಹವರಿಗೆ ಏನು ಕಾಣಿಕೆ ಕೊಡಬೇಕೆಂಬ ಚಿಂತೆಯಲ್ಲಿದ್ದ ಶಾಸಕರು ಈಗಿನ ಜಲಸಂಪನ್ಮೂಲ ಸಚಿವರು, ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಎಂ.ಬಿ.ಪಾಟೀಲರಿಗೆ ಹೊಳೆದದ್ದು ಕಡೇಮನಿಯವರ ಕಲಾಕೃತಿಗಳು. ಅವರಿಗೆ ಕಡೇಮನಿಯವರ ಆರು ಕಲಾಕೃತಿಗಳನ್ನು ಕೊಟ್ಟು ಗೌರವಿಸಿದರು. 'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ?' ಎನ್ನುವ ಹಾಗೆ ವಿಜಾಪುರ ಮತ್ತು ಅಮೇರಿಕಾಕ್ಕೆ ಎತ್ತಣಿಂದೆತ್ತ ಸಂಬಂಧ? ಪ್ರಪಂಚದಲ್ಲಿಯೇ ಅಗರ್ಭ ಶ್ರೀಮಂತ ಬಿಲ್ಗೇಟ್ಸ್ ಸೀನಿಯರ್ ಅವರ ಮನೆಯಲ್ಲಿ ವಿಜಾಪುರದ ಕಡೇಮನಿಯವರ ಗ್ರಾಮೀಣ ಸಂಸ್ಕೃತಿ ಮತ್ತು ಗ್ರಾಮೀಣ ಸೊಗಡಿನ ಕಲೆಯನ್ನು ಪರಿಚಯಿಸುವ ವರ್ಣ ಕಲಾಕೃತಿಗಳು ಇಂದು ಅಲಂಕರಿಸಿವೆ. ಎಂದರೆ ಕಲಾವಿದರ ಹಿರಿಮೆಯ ಅರಿವು ನಮಗಾಗಬೇಕು.

ಬಿ.ಎಲ್.ಡಿ.ಇ. ಸಂಸ್ಥೆಯ ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಹೊಸವರ್ಷದ ಪ್ರಾರಂಭಕ್ಕೆ ಕಡೇಮನಿಯವರ ಆರು ಕಲಾಕೃತಿಗಳನ್ನು ಆಯ್ಕೆಮಾಡಿ, ಕ್ಯಾಲೆಂಡರ್ ಹೊರತಂದಿದ್ದಾರೆ. ಈ ರೀತಿ ಸಂಸ್ಥೆಯು ಇವರಿಗೆ ದೊಡ್ಡ ಮರದ ನೆರಳಿನಂತಾಗಿದೆ.

ಪಿ.ಎಸ್. ಕಡೇಮನಿಯವರು ತಮ್ಮ ವೃತ್ತಿಜೀವನ ಮತ್ತು ಕಲಾಬದುಕಿನಲ್ಲಿ ರಚಿಸಿದಂತಹ ಪ್ರಮುಖ ಭಾವಚಿತ್ರಗಳೆಂದರೆ: ಬಸವರಾಜ ರಾಜಗುರು, ವಿಶ್ವೇಶ್ವರಯ್ಯ, ಮದರ್ ತೆರೇಸಾ, ಸಿ.ವಿ. ರಾಮನ್, ರವೀಂದ್ರನಾಥ ಟ್ಯಾಗೋರ್, ಡಾ. ಫ.ಗು. ಹಳಕಟ್ಟಿ, ಬಸವಣ್ಣ, ಅಕ್ಕಮಹಾದೇವಿ, ಹರ್ಡೇಕರ್ ಮಂಜಪ್ಪ, ಇಳಕಲ್ಲಿನ ಮಹಾಂತ ಶ್ರೀಗಳು, ಬಂಥನಾಳ ಶ್ರೀಗಳು, ಸಿದ್ಧೇಶ್ವರ ಶ್ರೀಗಳು, ಶ್ರೀ ಬಿ.ಎಂ. ಪಾಟೀಲ, ದ.ರಾ. ಬೇಂದ್ರೆ, ವ್ಹಿ.ಜಿ. ಅಂದಾನಿ, ಸೋಮಶೇಖರ ಸಾಲಿ,

ಕಲಾವಿದ ಬಿ.ಎಂ. ಪಾಟೀಲ ಹೀಗೆ ಇನ್ನೂ ಸಾಕಷ್ಟು ಭಾವಚಿತ್ರಗಳು ಮನೆ ಮಠಗಳಲ್ಲಿ ಅವರ ಕಲಾಛಾಯೆಯನ್ನು ಬಿಂಬಿಸುತ್ತಿವೆ. ಅವರ ಕಲಾಕೃತಿಗಳನ್ನು ಸ್ವಾಮೀಜಿಯವರು ಹಾಗೂ ಭಾವೈಕ್ಯದ ಹರಿಕಾರರಾಗಿರುವ ಗದುಗಿನ ತೋಂಟದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮುಕ್ತಕಂಠದಿಂದ ಹೊಗಳಿ ಆಶೀರ್ವದಿಸಿದ್ದಾರೆ.

ಕಲಾಕೃತಿಗಳ ಸಂಗ್ರಹ

ಬಿಲ್ಗೇಟ್ಸ್ ಅಮೇರಿಕಾ, ಕ್ಯಾಥರೀನ್ ನೆಹ್ಲೆ ಕೆನಡಾ, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಮಾಜಿ ಸಚಿವರಾದ ಡಿ.ವಿ. ಇನಾಮ್‌ದಾರ. ಆರ್ಕಿಟೆಕ್ಟ್ ಶ್ರೀಮತಿ ರೇಖಾ ಶೆಟ್ಟರ ಧಾರವಾಡ, ಕೇಂದ್ರ ಲಲಿತ ಕಲಾ ಅಕಾಡೆಮಿ ದೆಹಲಿ, ರಿಜಿನಲ್ ಲಲಿತಕಲಾ ಅಕಾಡೆಮಿ ಮದ್ರಾಸ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಪ್ರಾಚ್ಯವಸ್ತು ಸಂಗ್ರಹಾಲಯ ಮೈಸೂರು, ಕೆ.ಕೆ. ಹೆಬ್ಬಾರ ಫೌಂಡೇಶನ್ ಮುಂಬೈ, ಐಫೆಕ್ಸ್ ದೆಹಲಿ, ಕುವೆಂಪು ಲಲಿತಕಲಾ ಮಹಾವಿದ್ಯಾಲಯ ದಾವಣಗೆರೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ಎನ್.ಆರ್.ಐ. ಕಟ್ಟಡ ವಿಜಾಪುರ ಮತ್ತು ಪಾಟೀಲ್ ಮೋಟಾರ್ಸ್ ವಿಜಾಪುರ ಹೀಗೆ ಕಡೆಮನಿಯವರ ಕಲಾಕೃತಿಗಳು ಇನ್ನೂ ಅನೇಕ ಸಂಘ ಸಂಸ್ಥೆಗಳಲ್ಲಿ ಸಂಗ್ರಹಗೊಂಡಿವೆ. ದೇಶ ವಿದೇಶ, ಸರಕಾರ ಮತ್ತು ಸರಕಾರೇತರ ಅನೇಕ ಸಂಘ ಸಂಸ್ಥೆಗಳಲ್ಲಿ ಇವರ ಕಲಾ ಕೃತಿಗಳು ಸಂಗ್ರಹಗೊಂಡಿವೆ.

ಸಂದ ಪ್ರಶಸ್ತಿಗಳು

೧೯೮೮ರಲ್ಲಿ ಮೈಸೂರು ದಸರಾದಲ್ಲಿ ಭಾವಚಿತ್ರಕ್ಕೆ ಪ್ರಥಮ, ೧೯೯೩ರಲ್ಲಿ ಯುವ ಕಲಾವಿದರ ರಾಜ್ಯಮಟ್ಟದ ಕಲಾಪ್ರದರ್ಶನದಲ್ಲಿ ಪ್ರಥಮ, ೧೯೯೫ರಲ್ಲಿ 'ಏಡ್ಸ್' ಕುರಿತು ರಾಜ್ಯಮಟ್ಟದ ಕಲಾಪ್ರದರ್ಶನದಲ್ಲಿ (ದಾವಣಗೆರೆ) ಪ್ರಥಮ, ೧೯೯೬ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದಲ್ಲಿ ದ್ವಿತೀಯ ಪ್ರಶಸ್ತಿ, ೨೦೦೪ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜಾಪುರ, ೨೦೧೧ರಲ್ಲಿ ಗುಲಬರ್ಗಾ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ೨೦೧೧ ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ (ಶಿವಮೊಗ್ಗ), ೨೦೧೩ರಲ್ಲಿ ಶ್ರೀ ಡಿ.ವಿ. ಹಾಲಭಾವಿ ರಾಷ್ಟ್ರೀಯ ಸನ್ಮಾನ (ಕುಂಚಕಲಾ ಶ್ರೀ) ಧಾರವಾಡ, ೨೦೧೪ರಲ್ಲಿ 'ಸಿದ್ಧೇಶ್ವರ ರತ್ನ' ಪ್ರಶಸ್ತಿ ಶ್ರೀ ಸಿದ್ಧೇಶ್ವರ ಸಂಸ್ಥೆ ವಿಜಾಪುರ.

ಪಿ.ಎಸ್. ಕಡೇಮನಿಯವರು ಹೀಗೆ ವೃತ್ತಿಬದುಕಿನ ಜೊತೆಗೆ ಕಲಾಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಅನೇಕ ಕಡೆಗಳಲ್ಲಿ ತಮ್ಮ ಚಿತ್ರಕಲಾ ಪ್ರದರ್ಶನ ನಡೆಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಹೈದರಾಬಾದ್, ಹುಬ್ಬಳ್ಳಿ, ಬೆಂಗಳೂರು, ಕೇರಳ ಹಾಗೂ ಧಾರವಾಡ ಹೀಗೆ ಒಟ್ಟು ಒಂಭತ್ತು

ಏಕವ್ಯಕ್ತಿ ಕಲಾಪ್ರದರ್ಶನಗಳು, ಹನ್ನೊಂದು ಸಮೂಹ ಕಲಾಪ್ರದರ್ಶನಗಳು, ಸುಮಾರು ನಲವತ್ತೆಂಟು ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೇ ಐವತ್ತೇಳು ಕಲಾಶಿಬಿರಗಳಲ್ಲಿ ಭಾಗವಹಿಸಿರುವುದರ ಜೊತೆಗೆ ರಾಜ್ಯಾದ್ಯಂತ ಕಲಾಶಾಲೆಗಳಲ್ಲಿ ಮತ್ತು ಇತರೆ ಕಾರ್ಯಕ್ರಮಗಳಲ್ಲಿ ಸುಮಾರು ಹದಿನೇಳು ಕಲಾ ಪ್ರತ್ಯಕ್ಷಿಕೆಗಳನ್ನು ನೀಡಿದ್ದಾರೆ.

ಪ್ರವೃತ್ತಿ

ಮಾನವನಲ್ಲಿ ಯಾವುದಾದರೂ ರೂಪಗಳಲ್ಲಿ ಕಲೆಗಳಿರುವುದು ಸಹಜವೆನ್ನಬಹುದು. ಅದು ಅವರ ಸುಪ್ತಮನಸ್ಸಿನಲ್ಲಿರುವುದು. ಅದನ್ನು ಅಭಿವೃದ್ಧಿಪಡಿಸಲು ಸೂಕ್ತ ಸಮಯ, ಸಂದರ್ಭ ಮತ್ತು ಅವಶ್ಯಕತೆಗಳು ಬೇಕಾಗಬಹುದು. ಮತ್ತು ಸೂಕ್ತವಾದ ಪರಿಸರ, ವಾತಾವರಣ ಕೂಡ ಕಲೆಯನ್ನು ಹೊರಹಾಕಲು ಒಂದು ಮಾರ್ಗವಾಗಬಹುದು. ಅಲ್ಲದೆ ಅಂತಹ ಅವಕಾಶ ಸಂದರ್ಭಗಳನ್ನು ಬಳಸಿಕೊಳ್ಳಲು ಸೂಕ್ತವಾದ ಮಾರ್ಗದರ್ಶನ, ವೇದಿಕೆ, ಪ್ರೋತ್ಸಾಹ ಮತ್ತು ಪ್ರೇರಣೆಗಳಿಂದ ಕಲೆಯು ಬೆಳವಣಿಗೆ ಹೊಂದುವುದು. ಆಗ ವ್ಯಕ್ತಿಯು ಬೆಳಕಿಗೆ ಬರುತ್ತಾನೆ. ಖ್ಯಾತಿಯನ್ನು ಹೊಂದುತ್ತಾನೆ. ಇದು ಎಲ್ಲರ ಜೀವನದಲ್ಲೂ ನಡೆಯುವುದಿಲ್ಲ. ಎಷ್ಟೋ ಜನ ತೆರೆಮರೆಯಲ್ಲಿಯೇ ಬದುಕು ಸಾಗಿಸುತ್ತಿದ್ದಾರೆ. ಇನ್ನೂ ಕೆಲವು ಕಲಾವಿದರು ಕಷ್ಟಪಟ್ಟು ಪರಿಶ್ರಮದಿಂದ ಮೇಲೆ ಬರುತ್ತಿರುತ್ತಾರೆ. ಅದು ನಾಟಕ, ಚಿತ್ರಕಲೆ, ಸಂಗೀತ, ನೃತ್ಯ, ಜನಪದ, ಸಿನಿಮಾ, ಶಿಲ್ಪಕಲೆ ಹೀಗೆ ಯಾವುದಾದರೂ ಸರಿ. ಅದು ಕಲೆಯ ಬೆಳವಣಿಗೆಗೆ ಪೂರಕ ವಾತಾವರಣ ಸ್ಪಂದನೆ, ಪ್ರೋತ್ಸಾಹ, ಅಭಿಮಾನ, ಪ್ರಶಂಸೆ, ಪುರಸ್ಕಾರ, ಸೌಜನ್ಯತೆಗಳೆಲ್ಲವೂ ಅವಶ್ಯಕವಾಗಿವೆ. ಎನ್ನುವುದು ನನ್ನ ಅಭಿಪ್ರಾಯ.

ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರಸ್ತುತ ಸಂದರ್ಭದಲ್ಲಿ ವ್ಯಕ್ತಿ ಅಧ್ಯಯನವಾಗಿ ಆರಿಸಿ ಕೊಂಡಿರುವ ಚಿತ್ರಕಲಾವಿದ ಪಿ.ಎಸ್. ಕಡೇಮನಿಯವರ ಪ್ರವೃತ್ತಿ ಜೀವನದ ಬಗ್ಗೆ ತಿಳಿದುಕೊಂಡು ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ. ಕಡೇಮನಿಯವರು ಬಹುಮುಖ ವ್ಯಕ್ತಿತ್ವದ ಕಲಾವಿದರು. ಏಕೆಂದರೆ? ಅವರು ವೃತ್ತಿಯಿಂದ ಚಿತ್ರಕಲಾ ಶಿಕ್ಷಕರಾದರೂ ವೃತ್ತಿ ಬದುಕಿನ ಜೊತೆಗೆ ಪ್ರವೃತ್ತಿಯಾಗಿ ಸಾಮಾಜಿಕ ಹಲವು ರಂಗಗಳಲ್ಲಿಯೂ ತೊಡಗಿಸಿಕೊಳ್ಳುವುದಲ್ಲದೇ ರಂಗಭೂಮಿ ಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಹಲವಾರು ನಾಟಕಗಳಲ್ಲಿ ನಟನೆಯನ್ನು ಮಾಡಿ ಅಮೋಘ ಅಭಿನಯ ಪ್ರದರ್ಶಿಸಿದ್ದಾರೆ.

ಕಡೇಮನಿಯವರ ನಟನಾ ಪ್ರತಿಭೆಯನ್ನು, ನಾಟಕಗಳಲ್ಲಿಯ ಅಭಿನಯವನ್ನು ಕಂಡು ಗುರುತಿಸಬಹುದು. ಈ ಹವ್ಯಾಸವೂ ಕೂಡಾ ಪ್ರೌಢಾವಸ್ಥೆಯಲ್ಲಿಯೇ ಇವರ ಜೀವನದಲ್ಲಿ ಬಂದಿದ್ದು. ವೃತ್ತಿಬದುಕಿಗೆ ಸೇರಿದ ಮೇಲೆ ಸೂಕ್ತ ವೇದಿಕೆ ಮತ್ತು ಸಹೋದ್ಯೋಗಿಗಳ ಸಹಕಾರ ಅಲ್ಲದೇ ನಾಟಕದ ಗೀಳನ್ನು ಹಚ್ಚಿಕೊಂಡ ಮಿತ್ರವರ್ಗ ಮುಂತಾದವರಿಂದ ಈ

ರಂಗದಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಸಾಮಾಜಿಕ, ಅಸಂಗತ ಮತ್ತು ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಾಮಾಜಿಕ ಮತ್ತು ಧಾರ್ಮಿಕ ಕಥಾ ಹಂದರವನ್ನು ಹೊಂದಿದ ಹಾಗೂ ಹಿಂದೆ ಆಗಿ ಹೋದ ಕೆಲವೊಂದು ಘಟನೆಗಳ ಸನ್ನಿವೇಷಗಳನ್ನು ಹೊಂದಿರುವ ಈ ನಾಟಕಗಳು ಸಾಕಷ್ಟು ಜನಮನ್ನಣೆಯನ್ನು ಪಡೆದಿವೆ. ಅಲ್ಲದೇ ಕಡೇಮನಿಯವರು ರಂಗವೈಭವ ಹವ್ಯಾಸಿ ನಾಟಕ ತಂಡದ ಸಂಸ್ಥಾಪಕ ಸದಸ್ಯರಾಗಿಯೂ, ವಿಜಾಪುರ ಕಲಾ ಸಂಘದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ನಂತರದ ದಿನಗಳಲ್ಲಿ ೧೯೯೩ರಲ್ಲಿ ವಿಜಾಪುರದ ನಾಟೇಶ್ವರ ಕಲಾ ಬಳಗದ ಉಪಾಧ್ಯಕ್ಷರಾಗಿ, ೧೯೯೮ರಲ್ಲಿ ಹಂದಿಗನೂರು ನಾಟಕ ಸಂಘದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಅಭಿನಯಿಸಿದ ನಾಟಕಗಳು

೧೯೯೧ರಲ್ಲಿ 'ಸೂರ್ಯ ಶಿಕಾರಿ', 'ನಮಗ ಯಾರೂ ಇಲ್ಲೋ ಎಪ್ಪಾ ಸಾಕ್ಷಿ', 'ಪರಿಹಾರ', 'ಸ್ತ್ರೀ ರತ್ನ', 'ದೇವರಿಗೆ ನೆನಪಿಲ್ಲ' ಎಂಬ ನಾಟಕಗಳು ಪ್ರಮುಖವಾದವುಗಳು. ಅಷ್ಟೇ ಅಲ್ಲದೇ ಹಲವಾರು ನಾಟಕಗಳಲ್ಲಿ ರಂಗಸಜ್ಜಿಕೆ, ಪ್ರಸಾಧನ, ವಸ್ತ್ರಾಲಂಕಾರಗಳಲ್ಲಿಯೂ ಕಡೇಮನಿಯವರು ತಮ್ಮ ಕಲಾಪ್ರತಿಮೆಯನ್ನು ಪ್ರದರ್ಶಿಸಿದ್ದಾರೆ.

ಕಡೇಮನಿಯವರ ವ್ಯಕ್ತಿತ್ವ

ಸುಸಂಸ್ಕೃತ ಪರಿಸರ, ತಂದೆ ಶಿದಗಿರಪ್ಪನವರ ಆದರ್ಶ ಕೃಷಿಕ ವೃತ್ತಿ, ಕ್ರಿಯಾತ್ಮಕ ಮನಸ್ಸು, ಸಾಮಾಜಿಕ ಸೇವಾ ಮನೋಭಾವ, ತಾಯಿಯ ಜಾನಪದ ಕಲೆ, ಸೃಜನಾತ್ಮಕ ಕಸೂತಿ ಕೆಲಸ ಇವುಗಳೆಲ್ಲವುಗಳ ಗಾಢ ಪ್ರಭಾವದಿಂದ ಪಿ.ಎಸ್. ಕಡೇಮನಿಯವರಲ್ಲಿ ಜೀವನ ನಿಷ್ಠೆ, ನಿರಾಡಂಬರ, ಸ್ಥಿತಪ್ರಜ್ಞೆ, ಸೌಜನ್ಯ, ಪ್ರಾಮಾಣಿಕತೆ, ಔದಾರ್ಯ, ಅಂತಃಕರಣೆ, ಕೃತಜ್ಞತೆ, ಸಾತ್ವಿಕತೆ, ಕಾರ್ಯತತ್ಪರತೆ, ಚೈತನ್ಯಶಿಲತೆ ಮುಂತಾದ ಸದ್ಗುಣಗಳು, ಬೆಳೆದು ಬಂದವು. 'ಕಲಾಕೃತಿಗಳನ್ನು ರಚಿಸಿದಂತೆ ಈ ಕಲಾವಿದರು ಸದ್ಗುಣಗಳನ್ನು, ಅಮೋಘ ವ್ಯಕ್ತಿತ್ವವನ್ನು ಸಂಪಾದಿಸಿದರು.' ಇದು ಕಡೇಮನಿಯವರ ಜೀವನದ ಪ್ರಮುಖ ಆಕರ್ಷಣೆ.

ಪಿ.ಎಸ್. ಕಡೇಮನಿಯವರ ವ್ಯಕ್ತಿತ್ವ ಮೇರುಗಿರಿಯಂತೆ ಮಹೋನ್ನತವಾದುದು. ಅವರ ಕಾರ್ಯಕ್ಷೇತ್ರ ಸೀಮಾತೀತವಾದುದು. ಅವರು ತೊಡಗಿಸಿಕೊಂಡ ಎಲ್ಲಾ ಕ್ಷೇತ್ರಗಳಲ್ಲಿ ಅಪರಿಮಿತ ಸಾಧನೆಗೈದಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಅವರ ವ್ಯಕ್ತಿತ್ವದ ಮುದ್ರೆ ಒತ್ತಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ವಿವರಿಸುವ ಅವರ ಗುಣವಿಶೇಷಗಳು ಹಿಂದೆ ಪ್ರಸ್ಥಾಪಿಸಿದ ಅವರ ಸಾಧನೆಗಳ ಸಾರ ಸರ್ವಸ್ವವಾಗಿವೆ. ಒಬ್ಬ ವ್ಯಕ್ತಿಯ ಸ್ವಭಾವದ ಗುಣವಿಶೇಷಗಳು ಆ ವ್ಯಕ್ತಿಯ ಬದುಕಿನ ಕ್ರಿಯೆಗಳನ್ನು ರೂಪಿಸುತ್ತವೆ. ಆದ್ದರಿಂದ ಕಡೇಮನಿಯವರ

ಕಲಾಕೃತಿಗಳ ಅಧ್ಯಯನಕ್ಕೆ ತೊಡಗುವ ಪೂರ್ವದಲ್ಲಿ ಅವರ ಮನಸ್ಥಿತಿ, ಸ್ವಭಾವಗಳನ್ನು ಗಮನಿಸುವುದು ಅಗತ್ಯವೆನಿಸುತ್ತದೆ.

"ಕಡೇಮನಿಯವರ ಬಹುಮುಖ ವ್ಯಕ್ತಿತ್ವವನ್ನು ಕುರಿತು ಬರೆಯಬೇಕಾದರೆ ಅದನ್ನು ಚಿಂತಿಸಿದಷ್ಟು ಅವರ ಆಳ ಎತ್ತರಗಳು ನಮ್ಮ ಆಳವನ್ನು ಮೀರಿ ಹೋಗುತ್ತವೆಂದು ಪ್ರಾಂಜಲವಾಗಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ವಿಶೇಷತಃ ಇಂದಿನ ಜೀವನಮೌಲ್ಯಗಳ ಅಧಃಪತನದ ಹಿನ್ನಲೆಯಲ್ಲಿ ಅವರು ನಡೆದುಬಂದ ದಾರಿ ಮತ್ತು ಇಟ್ಟುಕೊಂಡ ಆದರ್ಶ ಹಾಗೂ ತತ್ವನಿಷ್ಠೆಗಳು ಇನ್ನೂ ಉತ್ತುಂಗವೆನಿಸುತ್ತವೆ." ತಾವು ನಂಬಿದ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ತತ್ವನಿಷ್ಠೆಯ ಮನೋಬಲದಿಂದ ಅತ್ಯಂತ ಎತ್ತರದ ವ್ಯಕ್ತಿಗಳಾಗಿ ಬದುಕುತ್ತಿರುವುದು ಕಡೇಮನಿಯವರ ಹೆಗ್ಗಳಿಕೆಯಾಗಿದೆ.

ಅಡಿಟಿಪ್ಪಣಿಗಳು

೧. ಪಿ.ಎಸ್.ಕಡೇಮನಿಯವರೊಂದಿಗೆ ಸಂದರ್ಶನ, ೧೪.೦೨.೨೦೧೪

೨. ಪಿ.ಎಸ್.ಕಡೇಮನಿಯವರೊಂದಿಗೆ ಸಂದರ್ಶನ, ೧೪.೦೨.೨೦೧೪

೩. ಪಿ.ಎಸ್.ಕಡೇಮನಿಯವರೊಂದಿಗೆ ಸಂದರ್ಶನ, ೧೪.೦೨.೨೦೧೪

೪. ಪಿ.ಎಸ್.ಕಡೇಮನಿಯವರೊಂದಿಗೆ ಸಂದರ್ಶನ, ೧೪.೦೨.೨೦೧೪

೫. ಪಿ.ಎಸ್.ಕಡೇಮನಿಯವರೊಂದಿಗೆ ಸಂದರ್ಶನ, ೧೪.೦೨.೨೦೧೪

ಅಧ್ಯಾಯ ನಾಲ್ಕು

ರೇಖಾಚಿತ್ರಗಳು

ಅಧ್ಯಾಯ ನಾಲ್ಕು

ರೇಖಾಚಿತ್ರಗಳು

ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ವರ್ಣಚಿತ್ರ ಬೇರೆ, ರೇಖಾಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂಥ ಸಂದರ್ಭವಿರುತ್ತದೆ. ಭಾರತೀಯ ಚಿತ್ರಕಲೆಯಲ್ಲಿ ರೇಖೆಗೆ ಪ್ರಮುಖ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. ಚಿತ್ರಕಲೆ ತುಂಬಿಕೊಡುವ ಅರ್ಥ, ಸ್ವರೂಪ, ಪ್ರಕಾರ, ಗುಣಲಕ್ಷಣ ಇತ್ಯಾದಿ ಅಂಶಗಳು ಕುತೂಹಲಕಾರಿಯಾಗಿವೆ.

ಶಿಲಾಯುಗದ ಮಾನವರು ಗೋಡೆಯ ಮೇಲೆ, ಮೂಲೆಗಳ ಮೇಲೆ ಮಾಡಿರುವ ಇಂತಹ ರೇಖೆ ಅಥವಾ ಗೀರುಗಳಿಗೆ ಈ ಚಿತ್ತವೃತ್ತಿಯೇ ಕಾರಣ ಅಂದರೆ ರೇಖೆ ಒಂದು ಕಲ್ಪನಾವಸ್ತು ಎಂದು ಭಾವಿಸಿದರೂ ಅದನ್ನು ಮಾಧ್ಯಮವೆಂದು ತೆಗೆದುಕೊಂಡಾಗ ಅದಕ್ಕೆ ಒಂದು ವಿಶೇಷ ಚೈತನ್ಯ ಇರುವ ಸಂಗತಿ ಅನುಭವಕ್ಕೆ ಬರುತ್ತದೆ. ಚಿತ್ರಕಲೆಯ ಇತಿಹಾಸ ಆರಂಭವಾಗುವುದೇ ರೇಖಾಚಿತ್ರಗಳಿಂದ ಎನ್ನುವುದನ್ನು ಕಂಡುಕೊಂಡಿದ್ದೇವೆ.

ಪ್ರಪಂಚದ ಎಲ್ಲ ಕಡೆ ಚಿತ್ರಕಲೆಯು, ವರ್ಣಚಿತ್ರಕಲೆ ಮೂಲತಃ ರೇಖೆಯಿಂದ ಕಲ್ಪಿತವಾದುದು. ಮುಂದೆ ಪಾಶ್ಚಾತ್ಯ ದೇಶಗಳಲ್ಲಿ ವರ್ಣಪ್ರಧಾನವಾಗಿ ಚಿತ್ರ ರಚನೆ ಬೆಳೆದು ಬಂದರೂ ಕೂಡ ರೇಖೆಗೆ ಇರುವ ಸ್ಥಾನ ಕಡಿಮೆಯಾಗಲಿಲ್ಲ. ಆದರೆ ಪೌರ್ವಾತ್ಯ ಚಿತ್ರ ಸಂಪ್ರದಾಯದಲ್ಲಿ ರೇಖೆ ಅವಶ್ಯಕವಾದ ಮಾಧ್ಯಮವಾಗಿದೆ. ಚಿತ್ರವು ಮೂಲತಃ ರೂಪುಗೊಳ್ಳುವುದೇ ಇಲ್ಲಿ ರೇಖೆಯಿಂದ, ಅದರ ಒಳ ವಿವರಗಳು ಎದ್ದು ಕಾಣುವುದು ಮತ್ತು ಕಲಾಶಿಕ್ಷಣ ಆರಂಭಗೊಳ್ಳುವುದು ರೇಖೆಗಳ ಮೂಲಕವೇ ಆಗಿದೆ ಎಂಬುದು ಮರೆಯುವಂತಿಲ್ಲ.

ರೇಖೆಯ ಅರ್ಥ

ಬಿಂದುವಿನ ಚಲನೆಯ ಪಾತ್ರವೇ ರೇಖೆ. ರೇಖೆಗೆ ಉದ್ದವಿದೆ. ಅಗಲವಿಲ್ಲ. ಸಂಸ್ಕೃತದಲ್ಲಿ ರೇಖೆ, ಕನ್ನಡದಲ್ಲಿ, ಅಂಚು, ಗೀರು, ಗೆರೆ, ಮಾಲೆ, ಸಾಲು, ಪಂಕ್ತಿ, ಹುರಿ, ಪಥ ಮುಂತಾದ ಪದಗಳಿಂದ ಕರೆಯಲ್ಪಡುತ್ತದೆ. ಇಂಗ್ಲೀಷ್‌ನಲ್ಲಿ 'Line' ಎಂದು ಕರೆದರೂ ಸಂವಾದಿಯಾಗಿ

'Drawing' ಎಂದು ಕರೆಯಲಾಗುತ್ತದೆ. ರೇಖೆಯ ಕುರಿತಾಗಿ ಸಿದ್ದೇಶ್ವರ ಶ್ರೀಗಳು ಹೇಳುವಂತೆ "ಭೂಮಿತಿ ಗಣಿತದಲ್ಲಿ ಸುಂದರ ರೇಖೆಗಳು, ಭೂಮಿತಿಯಲ್ಲಿ ಎಲ್ಲವೂ ಬಿಂದುವಿನಿಂದ ವಿಸ್ತಾರ, ಕೋನ, ತ್ರಿಕೋನ, ಚೌಕೋನ ಎಲ್ಲದಕ್ಕೂ ರೇಖೆಗಳು ಬಿಂದುಗಳಿಂದ ರೇಖೆಗಳು. ಆದರೆ ಬಿಂದು ರೇಖೆ ಅಲ್ಲ, ಬಿಂದು ಬಿಟ್ಟರೆ ಏನೂ ಇಲ್ಲ, ಚಿತ್ರಕಾರ ಬ್ರಶ್ ಬಳಸಿ ಬಣ್ಣದಲ್ಲಿ ರಾವಣ, ರಾಮ, ಸೀತೆಯ ಚಿತ್ರ ಬರೆಯುತ್ತಾನೆ. ಚಿತ್ರಗಾರನ ಮನಸ್ಸು ರಾವಣ, ರಾಮ, ಸೀತೆಯರಂತೆ ಆಗಿಲ್ಲ. ಸಣ್ಣ ಸಣ್ಣ ಚುಕ್ಕೆಗಳಿಂದ ಚಿತ್ರ ನಿರ್ಮಾಣವಾಗಿದೆ."[೧] ಎಂದು ರೇಖೆಯ ಅರ್ಥ ಅಗತ್ಯತೆಯ ಕುರಿತು ತಮ್ಮ ಪ್ರವಚನ ಸಾರದಲ್ಲಿ ತಿಳಿಸುತ್ತಾರೆ.

ವಾಸ್ತವವಾಗಿ ನಿಸರ್ಗದಲ್ಲಿ ರೇಖೆ ಎಂಬುದಿಲ್ಲ. ಅದು ತಲಗಳ ಚಲನೆಯಿಂದ ಉಂಟಾಗುವ ಒಂದು ಭ್ರಮೆ ಎಂದು ಹೇಳುತ್ತಾರೆ. ಆದರೂ ದೃಶ್ಯಕಲೆಗಳಲ್ಲಿ ರೇಖಾ ಚಿತ್ರಕಲೆಯೇ ಅತ್ಯಂತ ಪ್ರಾಚೀನ ಎಂದು ಊಹಿಸಲು ಆಧಾರಗಳಿವೆ. ವರ್ಣಚಿತ್ರಗಳಿಗಿಂತಲೂ ಶಿಲ್ಪಗಳಿಗಿಂತಲೂ ಮೊದಲು ಕಾಣಿಸಿಕೊಂಡಿದ್ದು ರೇಖಾಚಿತ್ರಗಳು.

ರೇಖಾ ಚಿತ್ರಕಲೆಯನ್ನು ಒಂದು ಸ್ವಯಂಪೂರ್ಣ ಕಲೆಯೆಂದು ಭಾವಿಸುವ ಪರಿಕಲ್ಪನೆ ಇತ್ತೀಚಿನದು. ಆಧುನಿಕ ಎನ್ನಬಹುದಾದದ್ದು ಏಕೆಂದರೆ ಪ್ರಾಚೀನ ಕಾಲದಲ್ಲಿ ವರ್ಣ ಚಿತ್ರಗಳಿಗಿಂತ ಅದು ಭಿನ್ನ ಎಂದು ಭಾವಿಸಿರಲಿಲ್ಲ.

ದೃಶ್ಯಕಲಾವಿದರಿಗೆ ರೇಖಾಚಿತ್ರ ಕರಗತವಾಗಬೇಕಾದುದು ಅತ್ಯವಶ್ಯಕವಾಗಿದೆ. ಆ ನಂತರವಷ್ಟೇ ಬಣ್ಣ ತುಂಬುವ ಕೆಲಸ "ಯಾವುದೇ ಆಕಾರಗಳನ್ನು ಮೊದಲಿಗೆ ರಚಿಸುವ ರೇಖಾ ಚಿತ್ರದಲ್ಲಿಯೇ ಆ ಕಾರಣ ರೇಖಾಚಿತ್ರವೇ ದೃಶ್ಯಾನುಭವಕ್ಕೆ ಅದರಲ್ಲೂ ಚಿತ್ರಕಲೆಗೆ ತಳಹದಿ" ಎಂದು ವಿಶ್ವಕೋಶ ಹೇಳುತ್ತದೆ. ೧೭೭೨ರಲ್ಲಿ ಪಿಸ್ಸಿರೋ ಎಂಬ ಕಲಾವಿದ ರೇಖಾಚಿತ್ರವೇ ವರ್ಣಚಿತ್ರದ ಜನಕ' ಎಂದು ಘೋಷಿಸಿದ. ಭಾರತದಲ್ಲಿಯೂ ಚಿತ್ರಕಲೆಯಲ್ಲಿ ರೇಖೆಗೆ ಪ್ರಥಮ ಸ್ಥಾನವಿದೆ. ಶಿಲ್ಪಶಾಸ್ತ್ರ ಗ್ರಂಥದಲ್ಲಿ "ರೇಖಾಂ ಪ್ರಶಂಸಂತಿ ಆಚಾರ್ಯಃ" ಚಿತ್ರಕರ್ಮದಲ್ಲಿ ರೇಖಾ ಪಾತ್ರವೇ ಮೊದಲ ಹೆಜ್ಜೆ ಎಂದು ಪ್ರೊ.ಎಸ್.ಕೆ.ರಾಮಚಂದ್ರರಾಯರು ಹೇಳುತ್ತಾರೆ. ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ ಭಿತ್ತಿಯ ಸಿದ್ಧತೆಯ ನಂತರ ಮೊದಲಿಗೆ ಹಾಕುವ ಕರಡು ನಕ್ಷೆಯನ್ನು ಆಕಾರ 'ಮಾತೃಕಾ ಲೇಖಾನಾ' ಎಂದೂ ಬಣ್ಣವನ್ನು ತುಂಬಿದ ಮೇಲೆ ಅಂತಿಮ ರೇಖೆಯನ್ನು ಅರಗಿನ ಬಣ್ಣದಲ್ಲಿ ಹಾಕುತ್ತಿದ್ದು ಅದಕ್ಕೆ ಕಾವ್ಯಗಳಲ್ಲಿ "ಲಾಕ್ಷಾರಸ ರೇಖಾ ಶುದ್ಧಿ" ಎಂದು ಕರೆದಿದೆ. ವಿಷ್ಣು ಧರ್ಮೋತ್ತರ ಪುರಾಣದಲ್ಲಿ "ರೇಖಾಮ್ ಪ್ರಶಂಸತಾಚಾರ್ಯ" ಎಂದು ರೇಖೆಗಳು ನಿಪುಣ ಕಲಾವಿದನೊಬ್ಬ ಅತ್ಯುನ್ನತ ಸಾಧನೆ ಎನ್ನುವ ಉಲ್ಲೇಖವಿದೆ.

ಕಲಾವಿದನೊಬ್ಬ ತನ್ನ ಅಂತರಂಗದ ತುಮುಲಗಳನ್ನು ಅಭಿವ್ಯಕ್ತಿಗೆ ರೇಖೆಗಳನ್ನು ದುಡಿಸಿಕೊಂಡಾಗ ಮೂರ್ತಗೊಳ್ಳುವ ರೂಪಗಳೇ ರೇಖಾಚಿತ್ರಗಳು, ಬಣ್ಣಗಳ ಆಡಂಬರವಿಲ್ಲದೆ,

ಯಾವ ಕಟ್ಟಳೆಗೂ ಒಳಪಡದೆ ಸಹಜ ಸ್ಫೂರ್ತಿಯಿಂದ ಸೃಷ್ಟಿಗೊಳ್ಳುವ ಈ ರೇಖಾಚಿತ್ರಗಳು ಕಲಾವಿದನ ಒಳ ಜಗತ್ತಿಗೆ ನೈಜ ನಿರೂಪಣೆಗಳಾಗಿರುತ್ತವೆ.

ಸಾಮಾನ್ಯವಾಗಿ ಚಿತ್ರಕಲಾ ಕಲಿಕೆಯು ಒಂದು ರೇಖಾಚಿತ್ರದಿಂದಲೇ ಆರಂಭವಾಗಿರುತ್ತದೆ. ಜಗತ್ತಿನ ಬಹುತೇಕ ಚಿತ್ರಕಲಾವಿದರೆಲ್ಲ ರೇಖಿಸುತ್ತಲೇ ಕಲಾವಿದರಾಗಿ ರೂಪುಗೊಂಡಿದ್ದಾರೆ. ಹಾಗೆಂದರೂ ವರ್ಣಲೇಪನವಿಲ್ಲದ ಶುದ್ಧ ರೇಖಾಚಿತ್ರಗಳಿಂದಲೇ ವಿಶೇಷವಾದ ಪ್ರಸಿದ್ಧಿ ಪಡೆದ ಕಲಾವಿದರು ತುಂಬ ವಿರಳ ಎಂದೇ ಹೇಳಬೇಕು. ಹಿಂದೆ ರೇಖಾಚಿತ್ರಗಳನ್ನು ಪೂರ್ಣ ಪ್ರಮಾಣದ ಕಲಾಕೃತಿಗಳೆಂದು ಭಾವಿಸುತ್ತಿರಲಿಲ್ಲ. ಆದರೆ ಇಂದು ರೇಖಾಚಿತ್ರ ರಚನೆಯೂ ಒಂದು ಸೃಜನಶೀಲ ಸೃಷ್ಟಿ ಕ್ರಿಯೆಯಾಗಿದೆ. ಹೀಗಾಗಿ ಅತ್ಯಂತ ಸರಳವಾದ ರೇಖಾಚಿತ್ರವೂ ಒಂದು ವರ್ಣಚಿತ್ರದಷ್ಟೇ ಮಹತ್ವ ಪಡೆಯುತ್ತದೆ. ಹೀಗೆಂದ ಮಾತ್ರಕ್ಕೆ ರೇಖಿಸುವವರಲ್ಲಿ ರೇಖಾ ರೂಪಗಳು ರೇಖಾ ಚಿತ್ರಗಳಾಗಲಾರವು ಯಾರು ರೇಖೆಗಳ ಮೇಲೆ ವಿಶೇಷವಾದ ಪ್ರಭುತ್ವವನ್ನು ಸಾಧಿಸಿ ಹದವರಿತು ಬಳಸಬಲ್ಲರೋ ಅಂಥವರಿಗೆ ಮಾತ್ರ ಅವು ಅಡಿಯಾಳಾಗುತ್ತವೆ. ಅಂದಾಗ ಮಾತ್ರ ಅವರ ನಿರಪೇಕ್ಷಿತ ಗೀಟುಗಳೂ ಕೂಡ ರೇಖಾ ಚಿತ್ರಗಳಾಗಿ ಮೈದಳೆಯಲು ಸಾಧ್ಯವಾಗುತ್ತದೆ.

ರೇಖೆ ಮನಸ್ಸಿನ ನೈಜ ಭ್ರಾಮಕ ಕಲ್ಪನೆಗಳಿದ್ದು ಅದಕ್ಕೆ ಮೂರ್ತರೂಪ ಕೊಡುವ ಶಕ್ತಿ ಇದೆ. ಒಂದು ಸ್ಕೆಚ್ ಅಂದರೆ ಗೆರೆಯಲ್ಲಿ ಕಲಾವಿದನ ಪರಿಶೀಲನಾ ಪರಿತತ್ವ, ತಾನು ನೋಡಿದ ವಸ್ತುವಿನ ಬಗೆಗಿನ ಅವನ ಪ್ರತಿಕ್ರಿಯೆ ಮತ್ತು ಕುಂಚ ಅಥವಾ ಪೆನ್ಸಿಲು, ಪೆನ್ನುಗಳೊಂದಿಗೆ ಬೆಸೆದುಕೊಂಡ ಅವನ ಕುಶಲತೆ ಅವನನ್ನು ದುಡಿಸಿಕೊಂಡ ರೀತಿ ಇವೆಲ್ಲ ಮುಖ್ಯವಾಗುತ್ತವೆ.

ಪಾಶ್ಚಾತ್ಯರಲ್ಲಿ ಲಿಯೋನಾರ್ಡೊಡ ವಿಂಚಿ, ರ್‍ಯಾಪೆಲ್, ರೂಬೆನ್ಸ್, ಮೈಕೆಲ್ ಎಂಜಲೋ, ವ್ಯಾನ್‌ಗೋ, ಪಾಲ್‌ಕ್ಲೀ, ಪಿಕಾಸೋ ಇತ್ಯಾದಿ ಕಲಾವಿದರು ಭಾರತದಲ್ಲಿ ಕೆ.ಕೆ.ಹೆಬ್ಬಾರ, ಚೌವ್ಹಾ, ಲಕ್ಷ್ಮಣ ಗೌಡ, ಆರ್.ಎಂ.ಹಡಪದ್, ಜಯರಾಮ್ ಪಾಟೀಲ ವ್ಹಿ.ಬಿ.ಹಿರೇಗೌಡರ, ಶಂಕರ ಪಾಟೀಲ, ಸುಲ್ತಾನ ಅಲಿ, ಆದಿಮೂಲಂ, ಗಜ್ಜರ್ ರಾಮೇಶ್ವರ ಬ್ರೂಟಾ, ಆರ್ನೆವಾಜ್, ಅರ್ಪಿತಾ ಸಿಂಗ್ ಹೀಗೆ ಅನೇಕ ಜನರು ಕಲಾಕೃತಿ ನಿರ್ಮಾಣ ಮಾಡಿದ್ದಾರೆ. ಇವರಲ್ಲಿ ಕೆ.ಕೆ. ಹೆಬ್ಬಾರರ ಹೆಸರು ಮೇಲ್ಪಂಕ್ತಿಯಲ್ಲಿರುವುದು.

ಕಡೇಮನಿಯವರು ಕೂಡ ಒಬ್ಬ ಉತ್ತಮ ವರ್ಣಚಿತ್ರ ಕಲಾವಿದರು. ಉತ್ತಮ ರೇಖಾಚಿತ್ರ ಕಲಾವಿದರೂ ಹೌದು. ನಾಡಿನ ಪ್ರಮುಖ ರೇಖಾಚಿತ್ರ ಕಲಾವಿದರಲ್ಲಿ ಇವರು ಗುರುತಿಸಿ ಕೊಳ್ಳದಿದ್ದರೂ ಸಹಿತ ಸಾಂದರ್ಭಿಕವಾಗಿ ರಚಿಸಿರುವಂತಹ ರೇಖಾ ಚಿತ್ರಗಳು ಅವರ ಕಲೆಯ ಜೀವಾಳ ಇವರ ರೇಖಾಚಿತ್ರಗಳನ್ನು ಗಮನಿಸಿದಾಗ ಇವರು ಕೂಡ ಒಬ್ಬ ಉತ್ತಮ ರೇಖಾಚಿತ್ರಕಲಾವಿದರೆಂದು ಹೇಳಿದರೆ ತಪ್ಪಾಗಲಾರದು ನಮ್ಮ ನಾಡಿನ ಅದರಲ್ಲೂ ಉತ್ತರ

ಕರ್ನಾಟಕದ ಗ್ರಾಮೀಣ ಪರಿಸರದ ಜನಪದ ಕಲೆಯ ಅಂತಃಸತ್ವವನ್ನು ಆಳ-ಅಗಲವನ್ನು ತಿಳಿದುಕೊಂಡು ಕಲಾಕೃತಿ ರಚಿಸುವ ಕಡೇಮನಿಯವರು ನಮ್ಮ ಜನಪದ ಕಲೆಯ ಗುಣಲಕ್ಷಣ ಹಾಗೂ ಗ್ರಾಮೀಣ ಜನರ ಬದುಕಿನ ನಿತ್ಯದ ಕಾರ್ಯಕೆಲಸಗಳೇ ತಮ್ಮ ಕಲಾಕೃತಿಯಲ್ಲಿ ಒಡಮೂಡಿಸಿರುವುದನ್ನು ಗಮನಿಸಬಹುದು. ಭಾರತೀಯ ಕಲಾಶೈಲಿಯಲ್ಲಿ ಪ್ರಮುಖವಾಗಿ ಕಂಡುಬರುವುದು ರೇಖೆಯದೇ ಪ್ರಧಾನ ಪಾತ್ರ ಆದ್ದರಿಂದ ಕಡೇಮನಿಯವರ ರೇಖಾಚಿತ್ರಗಳೂ ಪ್ರಮುಖ ಪಾತ್ರವಹಿಸುವುದರಿಂದ ಅವರ ರೇಖಾಚಿತ್ರಗಳು ಈ ಅಧ್ಯಯನದಲ್ಲಿ ಅವರ ರೇಖಾಚಿತ್ರಗಳ ವಸ್ತು ವಿಷಯ, ಬಳಸಿದ ಮಾಧ್ಯಮ ರಚಿಸಿರುವ ಸಂದರ್ಭ ಹಿನ್ನೆಲೆಯೊಂದಿಗೆ ಅಧ್ಯಯನ ಮಾಡುವುದು ಸೂಕ್ತವಾಗಿದೆ.

ಬೌದ್ಧಿಕತೆಯು ಕಡೇಮನಿಯವರ ರೇಖಾಚಿತ್ರಗಳ ಮೌಲ್ಯಯುತ ತಿರುವುಗಳು. ಅವರು ತಮ್ಮ ಕಲಾ ಜೀವನದ ಉದ್ದಕ್ಕೂ ಎಡಬಿಡದೇ ರಚಿಸಿದ ಚಿತ್ರಗಳು ಸಾವಿರಾರು. ಅವರ ಕಲಾಸೃಷ್ಟಿಯಲ್ಲಿ ಮೊದಲ ಆಯ್ಕೆ ರೇಖಾಚಿತ್ರಗಳು. ಅಪಾರ ವೈವಿಧ್ಯವಿರುವ ಇವರ ಕಲಾ ಸೃಷ್ಟಿಯಲ್ಲಿ ಒಂದನ್ನೊಂದು ಹೋಲುವಂತಹ ಕೃತಿಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ಅದರ ಪ್ರತಿಯೊಂದು ರೇಖಾಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಕೃತಿ ಇನ್ನೊಂದು ಕೃತಿಗೆ ಅನ್ವಯವಾಗದಿರುವಷ್ಟು ಬೇರೆಯದೇ ಎನಿಸುತ್ತದೆ. ಏಕೆಂದರೆ ಪ್ರತಿಯೊಂದು ರೇಖಾಚಿತ್ರವೂ ವಿಭಿನ್ನ ಶೈಲಿ, ತಂತ್ರವನ್ನು ವಿಷಯಗಳನ್ನು ಅಳವಡಿಸಿಕೊಂಡು ಪ್ರಯೋಗಶೀಲ ನೆಲೆಯಲ್ಲಿ ಲೋಕಾರ್ಪಣೆಗೊಂಡಿದೆ. ಹೀಗಾಗಿ ಅವರ ಪ್ರತಿಯೊಂದು ಕಲಾಕೃತಿಯಲ್ಲೂ ವೈವಿಧ್ಯತೆ ಮೈವೆತ್ತಿರುತ್ತದೆ. ಕಡೇಮನಿಯವರ ರೇಖಾಚಿತ್ರಗಳ ಪ್ರಭಾವಗಳು ಅವರ ವರ್ಣಚಿತ್ರಗಳಲ್ಲಿ ಕಾಣದಿದ್ದರೂ, ಆಯಾ ಕಾಲದ ವರ್ತಮಾನ ವಿಚಾರಗಳಿಗೆ ತಕ್ಕಂತೆ ತಮ್ಮ ತುಡಿತಗಳನ್ನು ರೇಖೆ, ವರ್ಣ ಇತ್ಯಾದಿ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದ ಅವರ ಚಿತ್ರಗಳು ಅಂದಿನ ಬದುಕಿನ ಜೀವಧ್ವನಿಯಾಗಿ ರೂಪುಗೊಂಡವುಗಳಾಗಿವೆ.

ಕಡೇಮನಿಯವರ ರೇಖಾಚಿತ್ರಗಳಲ್ಲಿ ಗ್ರಾಮೀಣ ಪರಿಸರ, ಸುತ್ತಮುತ್ತಲಿನ ನಿಸರ್ಗ ಇವರ ರೇಖಾ ಚಿತ್ರಗಳಲ್ಲಿ ಮೂಡಿಬರುವುದರ ಮೂಲಕ ಹೊಸ ಹೊಸ ಕುತೂಹಲಗಳನ್ನು ಇಲ್ಲಿನ ರೇಖಾಚಿತ್ರಗಳಲ್ಲಿ ಕಂಡುಬರುತ್ತದೆ. ಇಲ್ಲಿಯವರೆಗೆ ಸಾವಿರಾರು ರೇಖಾಚಿತ್ರಗಳನ್ನು ರಚಿಸಿರುವ ಕಡೇಮನಿಯವರು ಅವುಗಳಲ್ಲಿ ಪ್ರಮುಖವಾಗಿ 'ನಾ ನೋಡಿದ ನದಿ' ವ್ಯಕ್ತಿ ಭಾವಚಿತ್ರಗಳು, ಸಂಯೋಜನಾ ಚಿತ್ರಗಳು, ದೈನಂದಿನ ರೇಖಾಚಿತ್ರಗಳು ಅಲ್ಲದೆ ಗ್ರಾಮೀಣ ಜನರ ಕೆಲಸ ಕಾರ್ಯದ ವಿವಿಧ ಮುಖಗಳು ಲಾಲಿತ್ಯಪೂರ್ಣವಾದವು. ಅಲ್ಲದೆ ನಯ ನಾಜೂಕಿನಿಂದ ಕೂಡಿವೆ. 'ನದಿ' ಎನ್ನುವ ಶೀರ್ಷಿಕೆಯ ರೇಖಾಚಿತ್ರಗಳು ಚಿಂತನೆಯ ದಾರ್ಶನಿಕ ಗುಣಗಳನ್ನು ಪ್ರಕಟಪಡಿಸುವ ಚಿತ್ರಗಳಾಗಿದ್ದು, ಈ ಚಿತ್ರಗಳಲ್ಲಿ ರೇಖೆಗಳು ಕಂಡುಬರುವುದಿಲ್ಲ ವಾದರೂ ಕೂಡ ಚಿಂತನ ಶೀಲತೆಯಿಂದ ಕೂಡಿದವುಗಳಾಗಿವೆ.

ರೇಖೆಯಲ್ಲಿ ಕಲಾವಿದನು ನೋಡಿದ ವಸ್ತುವಿನ ಬಗೆಗಿನ ಅವರ ಪ್ರತಿಕ್ರಿಯೆ ಮತ್ತು ಕುಂಚ, ಪೆನ್ಸಿಲ್, ಪೆನ್ನುಗಳೊಂದಿಗೆ ಬೆಸೆದುಕೊಂಡು ಅವನ ಕುಶಲತೆ ಅವುಗಳನ್ನು ದುಡಿಸಿಕೊಂಡ ರೀತಿ ಇವೆಲ್ಲ ಮುಖ್ಯವಾಗುತ್ತವೆ. ಪಿ.ಎಸ್.ಕಡೇಮನಿ ಅವರ ರೇಖಾಚಿತ್ರಗಳು ಒಂದೇ ಮಾಧ್ಯಮವನ್ನು ದುಡಿಸಿಕೊಂಡಿರುವುದು ಅದರಲ್ಲೇ ವಿಶಿಷ್ಟತೆಯನ್ನು ಸಾಧಿಸಿರುವುದು ಕಂಡುಬರುವುದಿಲ್ಲವಾದರೂ, ಹೆಚ್ಚಾಗಿ ಪೆನ್ಸಿಲ್ ಮಾಧ್ಯಮದಲ್ಲಿ ರಚಿಸಿರುವಂತಹ ರೇಖಾಚಿತ್ರಗಳನ್ನು ನೋಡಬಹುದಾಗಿದೆ.

ಕಡೇಮನಿಯವರು ಪೆನ್ಸಿಲ್ ಮಾಧ್ಯಮದಲ್ಲಿ ರಚಿಸಿರುವಂತಹ ಕೃಷ್ಣಾನದಿ ದಂಡೆಯ ಬಂಡೆಗಳ ಚಿತ್ರಗಳನ್ನು ಸೃಜನಾತ್ಮಕ ರೀತಿಯಲ್ಲಿ 'ನದಿ' ಎನ್ನುವ ಶೀರ್ಷಿಕೆಯಡಿಯಲ್ಲಿ ಸುಮಾರು ೧೬ ರೇಖಾಚಿತ್ರಗಳನ್ನು ರಚಿಸಿರುವುದು ಗಮನಾರ್ಹ ಅಂಶವಾಗಿದೆ. ಗ್ರಾಮೀಣ ಪರಿಸರದಲ್ಲಿನ ಪ್ರಭಾವಗಳು ಕಡೇಮನಿಯವರ ಬಹುತೇಕ ಕಲಾಕೃತಿಗಳಲ್ಲಿ ಪುನರಾವರ್ತನೆಯಾಗಿರುವುದರಿಂದ ಪ್ರತಿ ಚಿತ್ರಗಳಲ್ಲಿ ಆ ಜನಪದ ಅಂಶಗಳು ಹೊಸ ವಿನ್ಯಾಸವನ್ನು ನೋಡುಗರಿಗೆ ಪರಿವರ್ತಿಸುತ್ತದೆ. ಕಡೇಮನಿಯವರ ಚಿತ್ರಗಳ ಸಂಯೋಜನೆ ನಿರ್ದಿಷ್ಟ ಸೀಮೆಯೊಳಗೆ ರಚಿತವಾಗದೇ ಕಾಗದದ ಅವಕಾಶವನ್ನು ಚಿತ್ರದ ಸಾಂದರ್ಭಿಕತೆಗೆ ತಕ್ಕಂತೆ ದುಡಿಸಿಕೊಳ್ಳುವ ಕಲಾ ಕೌಶಲ್ಯವನ್ನು ಪಡೆದಿವೆ ಎಂಬುದನ್ನು ಇಲ್ಲಿ ರೇಖಾ ಚಿತ್ರಗಳ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಸೈದ್ಧಾಂತಿಕ ನಿಲುವುಗಳ ಪ್ರಕೃತಿಯ ಮೂಲ ಮನುಷ್ಯನಲ್ಲಿ ಅರಳುವ ವಿವಿಧ ಬಗೆಯ ಕ್ರಿಯೆಗಳು ಸಮಾಜದಲ್ಲಿನ ಓರೆಕೋರೆಗಳ ವಿಡಂಬನೆ, ವ್ಯಂಗ್ಯ, ಟೀಕೆ, ಧಾರ್ಮಿಕ ಅಂಧತ್ವ ಕುರಿತಾದ ಚಿಂತನೆಯ ಪ್ರತಿಫಲನವಿಲ್ಲದಿದ್ದರೂ ಇಲ್ಲಿನ ರೇಖಾಚಿತ್ರಗಳು ಗ್ರಾಮೀಣ ಪರಿಸರ ಮತ್ತು ಸುತ್ತಮುತ್ತಲಿನ ನಿಸರ್ಗವು ಇವರ ರೇಖಾಚಿತ್ರಗಳಲ್ಲಿ ಮೂಡಿಬಂದಿವೆ.

ಕಲಾವಿದನ ಕೌಶಲ್ಯವನ್ನು ಅನುಭವದ ಪಕ್ವತೆಯನ್ನು ನಿಖರವಾಗಿ ಗುರುತಿಸಲು ರೇಖಾಚಿತ್ರಗಳೇ ಪ್ರಧಾನ ಮಾನದಂಡವಾಗುತ್ತದೆ ಎಂಬುದನ್ನು ಇಲ್ಲಿನ ರೇಖಾ ಚಿತ್ರಗಳ ಅಧ್ಯಯನದಿಂದ ಸ್ಪಷ್ಟಗೊಳಿಸಲಾಗಿದೆ.

ಪಿ.ಎಸ್.ಕಡೇಮನಿಯವರ ರೇಖಾಚಿತ್ರದ ಪ್ರತಿಭೆಯನ್ನು ಅವರು ತಮ್ಮ ಬಾಲ್ಯದಲ್ಲಿಯೇ ತೋರ್ಪಡಿಸಿದ್ದಾರೆ. ಅಸಂಖ್ಯೆ ರೇಖಾಚಿತ್ರಗಳನ್ನು ರಚಿಸಿದ್ದು ಅವುಗಳಲ್ಲಿ ಲಭ್ಯವಾದಂತಹ ರೇಖಾಚಿತ್ರಗಳನ್ನು ಆಯ್ಕೆ ಮಾಡಿಕೊಂಡು ಅವುಗಳಲ್ಲಿ ಭಾವಚಿತ್ರ ಮತ್ತು ಸೃಜನಾತ್ಮಕ ನಿಸರ್ಗ ರೇಖಾಚಿತ್ರಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧. ಭಾವಚಿತ್ರಗಳು

೨. ಸೃಜನಾತ್ಮಕ ನಿಸರ್ಗ ರೇಖಾಚಿತ್ರಗಳು

೧. ಭಾವಚಿತ್ರಗಳು

ಕಡೇಮನಿಯವರ ಈ ರೇಖಾಚಿತ್ರಗಳು ಪೆನ್ಸಿಲ್ ಮತ್ತು ಮಾಧ್ಯಮದಲ್ಲಿ ರಚನೆಗೊಂಡಿದ್ದು. ಕಡಿಮೆ ಗೆರೆಗಳಲ್ಲಿಯೇ ನೆರಳು ಬೆಳಕಿನಲ್ಲಿ ವ್ಯಕ್ತಿಯ ಭಾವಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಅಲ್ಲದೇ ವ್ಯಕ್ತಿಯ ಮುಖದಲ್ಲಿ ಒಂದು ರೀತಿಯ ಜೀವಕಳೆಯನ್ನು ತುಂಬುವಲ್ಲಿ ಸ್ವಂತಿಕೆಯಿದೆ. ಇವೆಲ್ಲಾ ಭಾವಚಿತ್ರಗಳು ಹೆಚ್ಚಾಗಿ ಕಲಾಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ರೇಖಾಚಿತ್ರದ ರಚನೆಯನ್ನು ತಿಳಿಸಿಕೊಡುವ ಸಂದರ್ಭದಲ್ಲಿ ರಚಿಸಿದಂತವುಗಳಾಗಿವೆ. ಇವುಗಳು ಸಹಜ ಗಂಭೀರ ಮುಖಭಾವವನ್ನು ಹೊಂದಿದ್ದು ಇವುಗಳನ್ನು ತಮ್ಮ ರೇಖಾ ಕೌಶಲ್ಯದಿಂದಾಗಿ ಅತ್ಯಂತ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ.

೨. ಸೃಜನಾತ್ಮಕ ನಿಸರ್ಗ ರೇಖಾ ಚಿತ್ರಗಳು

ಪ್ರಕೃತಿಯಿಂದ ಸ್ಫೂರ್ತಗೊಳ್ಳದವರು ಯಾರಿದ್ದಾರೆ! ಅದರಲ್ಲೂ ಕಲಾವಿದರನ್ನಂತೂ ಅದು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ.

ಅವರ ನೂರಾರು ಭಾವಗಳು ಭಿನ್ನ ಋತು ಲಕ್ಷಣಗಳು ಕ್ಷಣ ಕ್ಷಣಕ್ಕೂ ಬದಲಾಗುವ ಚಂಚಲ ಪ್ರವೃತ್ತಿ ಎಲ್ಲವೂ ಕಲಾವಿದರ ಕೃತಿಗೆ ಒದಗಿದ ವಿಷಯಗಳೇ ಇತ್ತೀಚಗೆ ಇದರೊಂದಿಗೆ ಪರಿಸರ ನಾಶದ ಭೀತಿಯು ಸೇರಿಕೊಂಡು ಅದೂ ಸಹ ಕಲಾಕೃತಿಗಳಿಗೆ ಗ್ರಾಸವಾಗಿದೆ. ತುಂಬ ವಿಶೇಷವೇನೆಂದರೆ ಪ್ರತಿಯೊಬ್ಬ ಕಲಾವಿದನೂ ತನ್ನದೇ ಅನನ್ಯ ರೀತಿಯಲ್ಲಿ ಪ್ರಕೃತಿಗೆ ಪ್ರತಿಕ್ರಿಯಿಸುತ್ತಾನೆ ಎಂಬುದಕ್ಕೆ ಪಿ.ಎಸ್.ಕಡೇಮನಿಯವರ ಸೃಜನಾತ್ಮಕ ನಿಸರ್ಗ ರೇಖಾಚಿತ್ರಗಳೇ ಉತ್ತಮ ನಿದರ್ಶನಗಳಾಗುತ್ತವೆ.

ಕಡೇಮನಿಯವರು ಪ್ರಕೃತಿ ಚಿತ್ರವನ್ನು ತಮ್ಮ ರೇಖೆಗಳಲ್ಲಿ ಸೆರೆಹಿಡಿಯುವ ಪರಿ ಅದರ ಕಲಾಕೌಶಲ್ಯವನ್ನು ರೇಖೆಗಳೊಂದಿಗೆ ಅವರ ಪ್ರೀತಿಯನ್ನು ಆಸಕ್ತಿಯನ್ನು ಸಾರುವಂತಿದೆ. ಅವರು ಪ್ರಕೃತಿ ದೃಶ್ಯ ಸರಣಿ 'ನದಿ' ಎನ್ನುವ ಶೀರ್ಷಿಕೆಯ ಸರಣಿಚಿತ್ರಗಳು ಮೋಹಕವಾಗಿ ರೇಖಾಚಿತ್ರಗಳಲ್ಲಿ ಮೂಡಿವೆ. ಕಡೇಮನಿಯವರು ತಮ್ಮ ಕೆಲಸದ ನಿಮಿತ್ಯ ತಮ್ಮೂರಾದ ಕುಮಠೆಯಿಂದ ಜಮಖಂಡಿಗೆ ಹೋಗುತ್ತಿರುವಾಗ ದಾರಿಮಧ್ಯದಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿರುವ ಚಿಕ್ಕಪಡಸಲಗಿ ಸೇತುವೆಯ ಅಕ್ಕಪಕ್ಕದಲ್ಲಿರುವ ಕಲ್ಲುಬಂಡೆಗಳು ನೀರಿನ ಸೆಳೆತಕ್ಕೆ ನಯವಾಗಿ ಅಮೂರ್ತರೂಪ ಪಡೆದಿರುವುದನ್ನು ಕಂಡುಕೊಂಡ ಕಡೇಮನಿಯವರು ತಮ್ಮ ಕಲ್ಪನಾ ಅಭಿವ್ಯಕ್ತಿಗೆ ಸೃಜನಾತ್ಮಕ ರೂಪಕೊಟ್ಟು ರಚಿಸಿರುವಂತಹ ರೇಖಾಚಿತ್ರಗಳೇ ಈ 'ನದಿ'ಸರಣಿಯ ರೇಖಾಚಿತ್ರಗಳು.

ಈ ಸರಣಿ ರೇಖಾಚಿತ್ರಗಳಲ್ಲಿ ಪ್ರಮುಖವಾಗಿ ನೆರಳು-ಬೆಳಕಿನ(ಕಪ್ಪು-ಬಿಳುಪಿನ) ಆಯಾಮ ವನ್ನು ನೀಡಿ ರಚಿಸಿದಂತವುಗಳಾಗಿದ್ದು, ಯಾವುದೇ ರೀತಿಯ ನಿರ್ದಿಷ್ಟ ರೇಖೆಗಳು ಕಂಡು

ಬರುವುದಿಲ್ಲ. ಪೇಪರಿನ ಅವಕಾಶದಲ್ಲಿ ಪೆನ್ಸಿಲ್ ಮಾಧ್ಯಮವನ್ನು ಬಳಸಿಕೊಂಡು ರಚನೆ ಮಾಡಿದ್ದಾರೆ. ಪ್ರತಿಯೊಂದು ಕೃತಿಯಲ್ಲಿಯೂ ವಿಭಿನ್ನ ರೀತಿಯ ಸಂಯೋಜನ ಮಾಡಿದ್ದಾರೆ.

ಪ್ರಸ್ತುತ ರೇಖಾಚಿತ್ರ ಒಂದರಲ್ಲಿ ಕಂಡುಬರುವಂತೆ ಮೋಡ ಕವಿದ ವಾತಾವರಣದಲ್ಲಿ ಮಳೆ ಹನಿ ಬೀಳುತ್ತಿರುವಂತೆ ಕಂಡುಬಂದರೆ ಪ್ರಕೃತಿದತ್ತ ಶಾಂತವಾದ ವಾತಾವರಣದಲ್ಲಿ ಕಲ್ಲುಬಂಡೆ ಮಧ್ಯೆ ಬೆಳ್ಳಕ್ಕಿಗಳ ಗುಂಪು ಆಹಾರ ಹುಡುಕಾಟದಲ್ಲಿ ನಿರತವಾಗಿರುವುದು, ವಿಭಿನ್ನ ರೀತಿಯ ಸಸ್ಯರಾಶಿಯನ್ನು ತಮ್ಮದೇ ಆದಂತಹ ವೈಯಕ್ತಿಕ ಭಾವಾಭಿವ್ಯಕ್ತಿಗೆ ಹೊಂದಿಕೊಳ್ಳುವಂತೆ ನಯವಾದ ಸಂಯೋಜನೆಯನ್ನು ಈ ರೇಖಾಚಿತ್ರದಲ್ಲಿ ಕಂಡುಕೊಂಡಿದ್ದಾರೆ.

ಚಿತ್ರ ಎರಡರಲ್ಲಿ ಕಂಡುಬರುವಂತೆ ತೆಳು ಮೋಡ ಕವಿದ ವಾತಾವರಣದಲ್ಲಿ ಚಿತ್ರದ ಮುಕ್ಕಾಲು ಭಾಗದಲ್ಲಿ ನದಿ ತಟದ ಕಲ್ಲುಬಂಡೆಗಳನ್ನು ಚಿತ್ರಿಸಿದ್ದಾರೆ. ವಿಶಿಷ್ಟ ರೀತಿಯ ಸಂಯೋಜನೆ, ವಿಭಿನ್ನ ರೂಪ ಪಡೆದಿರುವ ಬಂಡೆಗಳು, ಗಿಡ ಮರಗಳು ಕಡೇಮನಿಯವರ ಕಲ್ಪನಾ ಸಾಮರ್ಥ್ಯದ ಕನಸಿನ ರೂಪಗಳಂತೆ ಮೂಡಿಬಂದಿವೆ. ಈ ಎಲ್ಲ ಕೃತಿಗಳಲ್ಲಿ ಮೃಧುತ್ವ ಮತ್ತು ಶುಚಿತ್ವವನ್ನು ಕಾಪಾಡಿಕೊಂಡಿರುವ ಕಡೇಮನಿಯವರು ಪ್ರತಿಯೊಂದು ಭಾಗವನ್ನು ಗಮನಕೊಟ್ಟು ರಚಿಸಿರುವುದು ಕಂಡುಬರುತ್ತದೆ. ಪಾಶ್ಚಾತ್ಯ ಸರ್‍ರಿಯಾಲಿಸಂ ಶೈಲಿಯ ಪ್ರಭಾವ ಈ ಕೃತಿಗಳಲ್ಲಿ ಕಂಡುಬರುತ್ತದೆ.

ಕಡೇಮನಿಯವರ ರೇಖಾಚಿತ್ರಗಳ ಅಧ್ಯಯನದಿಂದ ಕಂಡುಬರುವ ಪ್ರಮುಖ ಅಂಶಗಳೆಂದರೆ

ಇಲ್ಲಿರುವ ರೇಖಾಚಿತ್ರಗಳು ಪೆನ್ನು ಹಾಗೂ ಪೆನ್ಸಿಲ್ ಮಾಧ್ಯಮದಲ್ಲಿ ರಚಿಸಿದ್ದು ಚಿತ್ರಗಳು ವೈವಿಧ್ಯಮಯವಾದ ವಿಷಯಗಳನ್ನೊಳಗೊಂಡಿವೆ.

'ನದಿ' ಎನ್ನುವ ಶೀರ್ಷಿಕೆಯ ರೇಖಾಚಿತ್ರಗಳಲ್ಲಿ ಪಿ.ಎಸ್.ಕಡೇಮನಿಯವರ ವ್ಯಕ್ತಿತ್ವದ ಮೃಧುತ್ವ, ತೀಕ್ಷ್ಣಬುದ್ಧಿ ಮತ್ತು ಸೂಕ್ಷ್ಮತೆ ಎತ್ತಿ ತೋರಿಸುವಂತವುಗಳಾಗಿವೆ.

ಕೆಲವು ಆಕೃತಿಗಳು ಲಯ, ಚಲನೆಯಿಂದ ಕೂಡಿವೆ.


ಭಾವಚಿತ್ರ ಮತ್ತು ದೈನಂದಿನ ರೇಖಾಚಿತ್ರಗಳಲ್ಲಿ ಸಮಯಪ್ರಜ್ಞೆ ಮತ್ತು ರೇಖೆಗಳಲ್ಲಿನ ಹಿಡಿತವನ್ನು ಸಾಧಿಸಿರುವುದು ಕಂಡುಬರುತ್ತದೆ.

ಇವರ ಒಟ್ಟು ರೇಖಾಚಿತ್ರಗಳು ಸೌಂದರ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ನಿಸರ್ಗ, ವ್ಯಕ್ತಿ, ಸಮಾಜ ಇವುಗಳ ನಿಕಟ ಸಂಬಂಧಗಳ ಸೂಕ್ಷ್ಮತೆಯನ್ನು ಅವರ ರೇಖಾಚಿತ್ರಗಳ ಹಿನ್ನೆಲೆಯ ಮೂಲಕ ಗುರುತಿಸಲಾಗಿದೆ.


ಅಡಿಟಿಪ್ಪಣಿ

೧. ಸಿದ್ದೇಶ್ವರ ಸ್ವಾಮಿಗಳು, ಪ್ರವಚನಸಾರ, **ಕುರಕ್ಷೇತ್ರ ಪತ್ರಿಕೆ,** ೧೬.೦೯.೨೦೧೧, ಪು.೬









■ ಸೃಜನಾತ್ಮಕ ನಿಸರ್ಗ ರೇಖಾ ಚಿತ್ರಗಳು



































ಅಧ್ಯಾಯ ಐದು

ವರ್ಣಚಿತ್ರಗಳು

ಅಧ್ಯಾಯ ಐದು

ವರ್ಣಚಿತ್ರಗಳು

ಚಿತ್ರಕಲೆ ಪ್ರಕೃತಿಯಲ್ಲಿ ಅಸಾಮಾನ್ಯವಾದ ಬೆಳವಣಿಗೆ. ಆದರೆ ಅದನ್ನೇ ಪೂರ್ಣವಾಗಿ ಅನುಸರಿಸಿದೆ ಎಂಬ ಭ್ರಮೆ ಮೂಡಿಸುವುದು. ಒಂದು ಚತುರ ಕೃತಿ ಪ್ರಕೃತಿಯಲ್ಲಿ ಪದಾರ್ಥಗಳಿಗೆ ತ್ರಿಪರಿಮಾಣಗಳಿವೆ. ಆದರೆ ಉದ್ದ, ಅಗಲ, ಎರಡೇ ಪರಿಮಾಣಗಳಲ್ಲಿ ತ್ರಿಪರಿಮಾಣವನ್ನು ಸೂಚಿಸುವುದು ಚಿತ್ರಕಲೆಯ ಮುಖ್ಯ ಸೂತ್ರ. ಕಲೆಯಲ್ಲಿ ಮೂರು ತಂತ್ರಗಳು ಹಿಂದಿನಿಂದಲೂ ಬಳಕೆಯಲ್ಲಿವೆ. ಒಂದು ಯಥಾದೃಷ್ಟಿ ರೂಪಣ, ಎರಡು ನೆರಳು ಬೆಳಕಿನ ಸಂಯೋಜನೆ ಮತ್ತು ಮೂರನೆಯದು ವರ್ಣವಿನ್ಯಾಸ, ಚಿತ್ರಕಲೆಯಲ್ಲಿ ಎರಡು ವಿಧ, ವರ್ಣಚಿತ್ರ ಮತ್ತು ರೇಖಾಚಿತ್ರ, ಟೆಂಪರಾ, ಜಲವರ್ಣ, ತೈಲವರ್ಣ, ಆಕ್ರಾಲಿಕ್ ಪೇಸ್ಟಲ್ ಮುಂತಾದ ಮಾಧ್ಯಮಗಳಿಂದ ಚಿತ್ರರಚನೆ ಮಾಡುವುದು, ಇತ್ತೀಚೆಗೆ ಚಿತ್ರಕಲೆಯಲ್ಲಿ ಅನೇಕ ಪ್ರಯೋಗ ನಡೆದು, ಅನೇಕ ಹೊಸ ವಿಧಾನಗಳನ್ನು ಅಳವಡಿಸಿದ್ದಾರೆ. ವಿಜ್ಞಾನದ ಹೊಸ ಅವಿಷ್ಕಾರಗಳನ್ನು ನಾನಾ ರೀತಿಯಲ್ಲಿ ಹೊಸ ತಂತ್ರಗಳಿಗಾಗಿ ಉಪಯೋಗಿಸಲಾಗುತ್ತದೆ.

ಕಲಾಕೃತಿಗಳಲ್ಲಿ ವರ್ಣಗಳ ಬಳಕೆಯು ಅತ್ಯಂತ ಮುಖ್ಯವಾದುದಾಗಿದೆ. ಕಲಾವಿದನ ಭಾವನೆಗಳನ್ನು, ಕಲಾಕೃತಿಗಳಲ್ಲಿ ರೇಖೆಗಳ ಮೂಲಕ ತೋರಿಸಿದಾಗ ಬಣ್ಣಗಳಿಂದ ಅವುಗಳಲ್ಲಿನ ಅರ್ಥವನ್ನು ತೋರಿಸುತ್ತದೆ. ಒಂದೊಂದು ಬಣ್ಣಕ್ಕೂ ತನ್ನದೇ ಆದಂತಹ ಗುಣಗಳನ್ನು ಹೊಂದಿದೆ. ಈ ಬಣ್ಣಗಳ ಬಳಕೆ ಹೇಗೆ ಬಂದಿದೆ ಎಂದರೆ. ಇತಿಹಾಸ ಪೂರ್ವ ಆದಿಮಾನವ ಪ್ರಾಣಿಗಳ ರಕ್ತದಿಂದಲೂ, ಸಸ್ಯಗಳಿಂದಲೂ ಬಣ್ಣಬಣ್ಣದ ಕಲ್ಲುಗಳನ್ನು ಕುಟ್ಟಿ ಪುಡಿ ಮಾಡಿ ಬಣ್ಣವನ್ನು ಚಿತ್ರಗಳಿಗೆ ಲೇಪನ ಮಾಡಿ ಅದರ ಅಂದವನ್ನು ಹೆಚ್ಚಿಸಿದನು. ಹೀಗೆ ಜೊತೆಗೆ ಅದು ತನ್ನ ಜೀವನದ ಒಂದು ಭಾಗವಾಗಿ ಉಳಿಸಿಕೊಂಡು ಬಂದನು. ಒಂದು ರೀತಿಯಿಂದ ಹೇಳುವುದಾದರೆ ತನ್ನ ಕಲಾಕೃತಿಗಳಲ್ಲಿ ಸೌಂದರ್ಯವನ್ನು ಹೆಚ್ಚಿಸುವ ಮತ್ತು ಸೌಂದರ್ಯಾಭಿವ್ಯಕ್ತಿಯಿಂದ ಇನ್ನಷ್ಟು ಆನಂದಿಸಲು, ಬಳಸಿಕೊಂಡಿರುವ ಮಾಧ್ಯಮ ಬಣ್ಣ ಎನ್ನಬಹುದು.

ವಿಜ್ಞಾನಿಗಳ ಅನ್ವೇಷಣೆಯ ಪ್ರಕಾರ ಮಾನವರಿಗೆ ಮಾತ್ರ ಬಣ್ಣಗಳ ಲೋಕವನ್ನು ಕಾಣಬಲ್ಲಂಥ ಕಣ್ಣುಗಳಿವೆ. ಇದಕ್ಕೆ ಕಾರಣ ಮನುಜನ ನಯನಗಳಲ್ಲಿರುವ ಶಕಲಾ ಹಾಗೂ ಶಂಖರಗಳೆಂದು ಕೂಡ ನಮಗೆ ಜೀವ ವಿಜ್ಞಾನವು ತಿಳಿಸಿದೆ. 'ಬಣ್ಣ' ಎಂಬ ಶಬ್ದವು ಸಂಸ್ಕೃತದ ವರ್ಣದಿಂದ ಉದಯಿಸಿದ ತದ್ಭವವೆಂಬುದು ಸಾಬೀತಾಗಿದೆ. ವರ್ಣ ಎಂಬುದಕ್ಕೆ 'ಆಯ್ದ' ಎಂಬ ಅರ್ಥವನ್ನು ಕೆಲವರು ನಿರ್ವಚಿಸುವುದುಂಟು.

"ವರ್ಣ ಚಿತ್ರವು" ಭಾರತೀಯರಿಗೆ ಹೊಸದೇನಲ್ಲ ಅನೇಕ ಪ್ರಾಚೀನ ಉದ್ಗ್ರಂಥಗಳಲ್ಲಿ ಇವುಗಳ ಉಲ್ಲೇಖವುಂಟು. 'ಪದ್ಮಸಂಹಿತೆ'ಯ ಚತುರ್ದಶಾಧ್ಯಾಯದಲ್ಲಿರುವ ಕೆಲವು ಶ್ಲೋಕಗಳಲ್ಲಿ ವರ್ಣಸಂಬಂಧ ವಿಷಯ ವಿಪುಲವಾಗಿರುವುದನ್ನು ನೋಡಬಹುದು.

ಶ್ಲೋ॥ ವರ್ಣ ಲೇಪಂ ತತಃ ಕುರ್ಯಾಚ್ಛಿಲ್ಪಿ ಶಾಸ್ತ್ರ ವಿಚ್ಚಣ್ಯೈಃ ।
ಶ್ವೇತಃ ಪೀತಂ ಅಥಂ ರಕ್ತಂ ಹರಿತಂ ಕೃಷ್ಣ ಮೇವಚ ॥೧॥
ಪಂಚವರ್ಣಂ ಪೃಥಿವ್ಯಾದಿವರ್ಣಾಮಧಿ ದೇವತಾಃ ।
ಉತ್ತಮಾ ಧಾತಾನಾಃ ಪ್ರೋಕ್ರಾಃ ಮಧ್ಯಮಾ ವೃಕ್ಷ ಸಂಭವಃ ॥

ಇದರ ಅರ್ಥ : ಶಿಲ್ಪ ಕಲಾ ಕುಶಲರು ವರ್ಣಲೇಪನ ಕೈಗೊಳ್ಳಬೇಕಾಗತಕ್ಕದ್ದು.

೧. ಶ್ವೇತ = ಬಿಳಿ
೨. ಪೀತ = ಹಳದಿ
೩. ರಕ್ತ = ಕೆಂಪು
೪. ಹರಿತ = ಎಲೆ ಹಸಿರು
೫. ಕೃಷ್ಣ = ಕಪ್ಪು

ಈ ಬಗೆಯ ಐದು ಬಣ್ಣಗಳುಂಟು ಈ ಬಣ್ಣಗಳಿಗೆ ಪೃಥಿವಿಯೇ ಮೊದಲಾದ ಪಂಚಭೂತಗಳೇ ದೇವತೆಗಳು ಇವುಗಳಲ್ಲಿ ಗೈರಿಕಾದಿ ಧಾತುಗಳಿಂದ ಉತ್ಪನ್ನವಾದವು ಉತ್ತಮ ವರ್ಣಗಳು ಸಸ್ಯವರ್ಗದಿಂದ ಸಿದ್ಧವಾದುವು. ಮಧ್ಯಮ ಇವುಗಳ ಸಮ್ಮಿಶ್ರಣದಿಂದಾದ ವರ್ಣಗಳು ಅಧಮ ಹೀಗೆ ಮೂರು ಷಡಂಗಳುಂಟು.[೧]

'ಬಣ್ಣ ಎಂಬುದು ಮನುಷ್ಯನ ಜೀವನದ ಒಂದು ಅವಿಭಾಜ್ಯ ಅಂಗ. ಅವನು ತನ್ನ ನಿತ್ಯ ಜೀವನದಲ್ಲಿ ಅಂದರೆ ಎಷ್ಟು ವಿಧದಲ್ಲಿ ಈ ಬಣ್ಣವನ್ನು ಉಪಯೋಗಿಸಿಕೊಂಡಿದ್ದಾನೆಂದು ಹೇಳಲು ಕಷ್ಟ ಸಾಧ್ಯ. ಅಂದರೆ ಅವನ ಹುಟ್ಟಿನಿಂದ ಸಾವಿನವರೆಗೆ ಅವನ ನೋವಿನಲ್ಲೂ ನಲಿವಿನಲ್ಲೂ ಈ ಬಣ್ಣ ತನ್ನ ಪಾತ್ರವನ್ನು ವಹಿಸಿಕೊಂಡಿದೆ. ತಾನು ಉಡುವ ಬಟ್ಟೆ ಸೇವಿಸುವ ಆಹಾರ, ಪರಿಸರದಲ್ಲಿ ಎಲ್ಲಿ ಯಾವ ರೀತಿಯ ಬಣ್ಣಗಳನ್ನು ಉಪಯೋಗಿಸಿಕೊಳ್ಳಬೇಕೆಂದು ಪ್ರಕೃತಿಯೊಂದಿಗೆ ತನ್ನ ಬಣ್ಣಗಳ ಕೃತಕ ಸಂಯೋಜನೆ ಮಾಡಿ ತನ್ನ ಜೀವನಕ್ಕೆ ಅರ್ಥವನ್ನು

ಕಂಡುಕೊಂಡಿದ್ದಾನೆ. ಕೆ.ವಿ.ಕಾಳೆಯವರು ಬಣ್ಣಗಳ ಬಗ್ಗೆ ತಮ್ಮ ಕೃತಿಯಲ್ಲಿ ಹೀಗೆ ಹೇಳುತ್ತಾರೆ. "ತಿನ್ನಲು ಆಹಾರ, ಕುಡಿಯಲು ನೀರು, ಉಡುವ ಬಟ್ಟೆ ಹಾಗೂ ವಾಸಿಸುವ ಮನೆ ಇಷ್ಟೇ ಬದುಕು ಎಂದಾದರೆ ಅದು ಅರ್ಥವಿಲ್ಲದ ಬದುಕಾದೀತು. ಜೀವನ ಅರ್ಥಪೂರ್ಣವಾಗಬೇಕಾದರೆ ಬಣ್ಣ ಮಯವಾಗಬೇಕು" ಹೀಗೆ ಬಣ್ಣಮಯವಾದ ಬದುಕು ಸುಂದರವಾಗಿ ಕಾಣುತ್ತದೆ. ಅಲ್ಲಿ ಸೌಂದರ್ಯ ಅಭಿವ್ಯಕ್ತಗೊಳ್ಳುತ್ತದೆ ಎನ್ನಬಹುದು.

ಚಿತ್ರಕಲೆಯಲ್ಲಿ ಬಣ್ಣವು ಕಲಾಕೃತಿಗಳ ಜೀವಾಳ. ಕಲಾವಿದನಿಗೆ, ಭಾವನೆಗಳಿಗೆ ಜೀವ ತುಂಬುವ ಪ್ರಾಣವಾಯು. ಈ ಬಣ್ಣಗಳು ಕಲಾವಿದರ ಭಾವಾಭಿವ್ಯಕ್ತಿಗಳಿಗೆ ಸರಳವೂ, ಸುಲಭವೂ ಆದ ಮಾಧ್ಯಮಗಳಾಗಿರುತ್ತವೆ.

ಕಲಾವಿದನ ಕೌಶಲ್ಯ, ಜಾಣ್ಮೆ, ಬುದ್ಧಿಮತ್ತೆ, ಅಧ್ಯಯನಗಳನ್ನು ಅವಲಂಬಿಸಿ ಕಲಾಕೃತಿಯ ಶ್ರೇಷ್ಠತೆಯ ಮಟ್ಟವನ್ನು ನಿರ್ಧರಿಸಬಹುದು. ಅಲ್ಲದೆ ಸಾಹಿತ್ಯದಲ್ಲಿ ಮಾತ್ರ ರಸ ಸಿದ್ಧಾಂತಗಳು ಸೀಮಿತವಾಗಿರದೆ, ಚಿತ್ರಕಲೆಗೂ ಸಂಬಂಧಿಸಿದ್ದಾಗಿರುತ್ತದೆ. ರಸಗಳು ಒಂಭತ್ತು ಎಂದು ಹೇಳುತ್ತಾರೆ. ಕಲಾಕೃತಿಗಳಲ್ಲಿ ಈ ಒಂಬತ್ತು ರಸಗಳು ಒಟ್ಟಿಗೆ ಬರದೇ ಒಂದೊಂದು ಮಾತ್ರ ಅದರಲ್ಲಿ ನಾವು ಕಾಣಲು ಸಾಧ್ಯ. ಆದರೆ ಪ್ರತಿಯೊಬ್ಬ ಕಲಾವಿದ ಈಗಿನ ಸೃಜನಶೀಲ ಕಲಾಕೃತಿಗಳಲ್ಲಿ ತನಗೆ ಬಣ್ಣಗಳ ಅರ್ಥವನ್ನು ವಿಷಯ ನೋಡದೇ ಚಿತ್ರಿಸತೊಡಗಿದ್ದರೆ ಹಿಂದಿನ ತಲೆಮಾರಿನ ಕಲಾವಿದರುಗಳಲ್ಲಿ ತಮ್ಮ ಮನಸ್ಸಿನ ಮೇಲೆ ಬೀರಿರುವ ಪ್ರಭಾವಕ್ಕೆ ತಕ್ಕನಾಗಿ ಚಿತ್ರಿಸಿ ಇದೇ ಬಣ್ಣವನ್ನು ಹಾಕಬೇಕೆಂದು ನಿರ್ಧರಿಸಿ ರಚಿಸುತ್ತಿದ್ದರು. ಅಂತಹ ಕಲಾಕೃತಿಗಳಲ್ಲಿ ಮಾತ್ರ ಈ ರಸಗಳನ್ನು ಹೆಚ್ಚಾಗಿ ಕಾಣಲು ಸಾಧ್ಯವಾಗುತ್ತದೆ ಎನ್ನಬಹುದು. ಹೀಗೆ ಒಂದು ಕಲಾಕೃತಿಯು ನಿರ್ಮಾಣವಾಗಬೇಕಾದರೆ ಬಣ್ಣಗಳ ಜೊತೆಗೆ ರಸಗಳೂ ಅದರಲ್ಲಿ ಪೂರಕವಾಗಿ ಬಳಸಿಕೊಂಡ ಜಾಣ್ಮೆ ಅಭಿವ್ಯಕ್ತಿ ಕೌಶಲ್ಯಗಳು ಕಲಾವಿದನಿಗಿರಬೇಕು. ಈ ರೀತಿಯ ಅಂಶಗಳು ಅವರಲ್ಲಿ ಕಂಡುಬಂದಾಗ ಅದು ಒಂದು ಉತ್ತಮ ಕಲಾಕೃತಿ ಎನಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕಲಾವಿದ ಪಿ.ಎಸ್.ಕಡೇಮನಿಯವರು ರಚಿಸಿದ ಅನೇಕ ಚಿತ್ರಗಳಲ್ಲಿ ಈ ರಸಗಳ ಪರಿಕಲ್ಪನೆಯನ್ನು ಸ್ವಲ್ಪ ಮಟ್ಟಿಗೆ ಕಾಣಬಹುದು. ಏಕೆಂದರೆ ಅವರೂ ಕೂಡ ಈ ಆಧುನಿಕ ತಂತ್ರಶೈಲಿಯಲ್ಲಿ ಚಿತ್ರ ರಚನೆ ಮಾಡಿರುವುದು ಇದಕ್ಕೆ ಕಾರಣ. ಅವರು ತಮ್ಮ ಕಲಾ ಬದುಕಿನಲ್ಲಿ ಅನೇಕ ವರ್ಣಚಿತ್ರಗಳನ್ನು ವಿವಿಧ ಮಾಧ್ಯಮಗಳಲ್ಲಿ ವಿಭಿನ್ನ ವಿಷಯಗಳನ್ನೊಳಗೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳನ್ನು ವಿಷಯಾನುಸಾರವಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೇ ಈ ಅಧ್ಯಾಯವು ಒಟ್ಟು ಅಧ್ಯಯನದ ಕೇಂದ್ರ ಬಿಂದುವಾಗಿರುವುದರಿಂದ ಮಹತ್ವ ಪೂರ್ಣವಾಗಿದೆ.

ಪಿ.ಎಸ್.ಕಡೇಮನಿಯವರ ವರ್ಣಚಿತ್ರಗಳು

೫.೧. ಸಂಯೋಜನ ಚಿತ್ರಗಳು

೫.೧.೧. ಸೃಜನೇತರ ಸಂಯೋಜನ ಚಿತ್ರಗಳು

೫.೧.೨. ಸೃಜನಾತ್ಮಕ ಸಂಯೋಜನ ಚಿತ್ರಗಳು

೫.೨. ಭಾವ ಚಿತ್ರಗಳು

೫.೨.೧. ರೂಪದರ್ಶಿ ಆಧಾರಿತ ಭಾವಚಿತ್ರಗಳು

೫.೨.೨. ಛಾಯಚಿತ್ರ ಆಧಾರಿತ ಭಾವಚಿತ್ರಗಳು

೫.೩. ನಿಸರ್ಗ ಚಿತ್ರಗಳು

೫.೩.೧. ಹಂಪಿ ಪರಿಸರದ ಐತಿಹಾಸಿಕ ಸ್ಮಾರಕಗಳು

೫.೩.೨. ವಿಜಾಪುರ ಪರಿಸರದ ಐತಿಹಾಸಿಕ ಸ್ಮಾರಕಗಳು

೫.೧. ಸಂಯೋಜನಾ ಚಿತ್ರಗಳು

ಕಡೇಮನಿಯವರು ತಮ್ಮ ಬದುಕಿನುದ್ದಕ್ಕೂ ಅನೇಕ ಸಂಯೋಜನ ಸರಣಿ ಚಿತ್ರಗಳನ್ನು ರಚಿಸಿದ್ದು, ಸೃಜನೇತರ ಸಂಯೋಜನ ಚಿತ್ರಗಳಲ್ಲಿ ಪ್ರಮುಖವಾಗಿ ಗ್ರಾಮೀಣ ಜನಜೀವನವನ್ನು ಕುರಿತು ಮಾಡಿರುವ ಚಿತ್ರಗಳು, ಗ್ರಾಮೀಣ ಪರಿಸರದ ಆಚರಣೆಗಳ ಕುರಿತು ಮಾಡಿರುವ ಚಿತ್ರಗಳು ಕಂಡುಬರುತ್ತವೆ. ಸೃಜನಾತ್ಮಕ ಸಂಯೋಜನ ಚಿತ್ರಗಳಲ್ಲಿ ಆಧುನಿಕ ಸಂವೇದನೆಯ ಚಿತ್ರಗಳನ್ನು ಕಾಣಬಹುದು. ಹೆಚ್ಚಿನ ಸರಣಿ ಚಿತ್ರಗಳು ಭಾರತದ ದೇಶೀಯ ಕಲೆಯ ಅಂತಃಸತ್ವವನ್ನು ಪ್ರತಿನಿಧಿಸಬಲ್ಲ ಕಲಾಕೃತಿಗಳಾಗಿದ್ದು, ಅವರ ಅಂತಃಕರಣದಿಂದ ಈ ಕಲಾಕೃತಿಗಳು ಮೂಡಿಬಂದಿವೆ.

೫.೧. ಸೃಜನೇತರ ಸಂಯೋಜನ ಚಿತ್ರಗಳು

೫.೧.೧. ತಾಯಿ ಪ್ರೀತಿ: ಕಲಾವಿದರು ತಮ್ಮೂರ ಹೊರಗೆ ಅಲೆಮಾರಿಗಳು ರಸ್ತೆ ಬದಿಗೆ ಕೌದಿಯಿಂದ ವಸತಿ ನಿರ್ಮಾಣ ಮಾಡಿಕೊಂಡು ಅದರಲ್ಲಿ ವಾಸಿಸುವ ಜೀವನದ ಗತಿಯನ್ನು ಚಿಕ್ಕವರಿದ್ದಾಗ ಊರ ಹೊರಗಡೆ ಚಿನ್ನಿದಾಂಡು, ಗೋಲಿ ಆಟ ಆಡುವ ಸಂದರ್ಭದಲ್ಲಿ ನೋಡಿದ, ತಾಯಿಯು ತನ್ನ ಮಗಳನ್ನು ಮುಂದೆ ಕೂಡಿಸಿಕೊಂಡು ತಲೆ ಬಾಚುತ್ತಿದ್ದಳು ಮತ್ತು ಇನ್ನೊಂದು ತನ್ನ ಚಿಕ್ಕ ಮಗುವಿಗೆ ಹಾಲುಣಿಸುತ್ತಿದ್ದ ಅಂದಿನ ಆ ಸನ್ನಿವೇಶ ನೆನಪಿನಂಗಳದಿಂದ ಕಲಾಕೃತಿಯಾಗಿ ಹೊರ ಹೊಮ್ಮಿದೆ. ತಾಯಿ ಪ್ರೀತಿ ಸಿರಿವಂತ-ಬಡವ ಭೇದ-ಭಾವಗಳಿಲ್ಲದ ತನ್ನಾತ್ಮದಿಂದ ಉಕ್ಕಿ ಬಂದಿರುವಂತಹದ್ದು.

೩ ೧/೨ X ೩ ೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೩ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವಂತದ್ದಾಗಿದೆ. ಸಾಮಾಜಿಕ ಬದುಕಿನ ಎಳೆಯನ್ನು ನೆನಪಿಸುವ ಈ ಚಿತ್ರವು ತಾಯಿತನದ ಪ್ರೀತಿಯನ್ನು ಬಿಂಬಿಸುವಂತಿದೆ. ದೇಶೀಯತೆಯ ಪ್ರತಿಬಿಂಬ ಕಲಾವಿದರ

ದೃಷ್ಟಿ ಈ ಚಿತ್ರದಲ್ಲಿ ವ್ಯಕ್ತಗೊಂಡಿದ್ದು ವಿಶೇಷವಾಗಿ ಹಾಲುಣಿಸುತ್ತಲೇ ತನ್ನ ಇನ್ನೊಬ್ಬ ಮಗಳ ತಲೆಬಾಚುವ ಕಾರ್ಯದಲ್ಲಿ ಮಗ್ನಳಾಗಿದ್ದಾಳೆ. ಚಿತ್ರ ದೇಶಿಯತೆಯನ್ನು ಬಿಂಬಿಸುತ್ತದೆ. ಮಗು ಹಾಲು ಕುಡಿಯುತ್ತಿದ್ದರೂ ಹಾಕಿದ ಸೆರಗು ನೀಟಾಗಿದೆ. ಮಗುವಿನ ಕಡೆಗೆ ಲಕ್ಷವಿಲ್ಲದೆ ತಲೆಕೂದಲನ್ನು ನೋಡದೆ ನೆಲವನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ಅಷ್ಟೇ ಅಲ್ಲದೆ ತಲೆ ಬಾಚಿಕೊಳ್ಳುತ್ತಿರುವ ಹುಡುಗಿಯೂ ಸಹ ನಿರ್ಜೀವವೆಂಬಂತೆ ತೋರುತ್ತದೆ. ಆದರೂ ಸಹ ಚಿತ್ರದ ರೂಪುರೇಷೆ, ವರ್ಣಗಳ ಸಂಯೋಜನೆ, ಮಹಿಳೆಯ ವಸ್ತ್ರ ವಿನ್ಯಾಸ, ಉಡುಗೆ, ತೊಡುಗೆಗಳ ದೇಶೀಯ ನೆಲೆಯನ್ನು ಮೆಚ್ಚುವಂತಿದೆ.

೫.೧.೨. ಬೆಳಗು: ಕೋಳಿ ಕೂಗಿತು, ಬೆಳಗಾಯಿತು, ಎದ್ದೇಳಿ ಎಂದು ಸೂಚನೆ ನೀಡಿತು. ಚುಮ ಚುಮು ಬೆಳಕಿನಲ್ಲಿ ತಾಯಿ ಎದ್ದು ಕುಳಿತು, ಅವಳ ಮುದ್ದು ಮೊಗದ ಮಗು ತಾಯಿಯೊಂದಿಗೆ ಎದ್ದು ಪಿಳಿ ಪಿಳಿ ಕಣ್ಣು ಬಿಡುವಂತಿದೆ. ಹಳ್ಳಿಯ ಜನಪದದಿಂದ ಕೂಡಿದ, ತಾನೆ ಹೊಲಿದ ಕೌದಿಯ ಸಂಯೋಜನೆ, ಮೈಮೇಲಿದೆ. ಕೌದಿಯ ಸುಖ ಅದನ್ನು ಬಳಸಿ ಹೊದ್ದವರಿಗೇನೇ ಗೊತ್ತು. ಇದರಲ್ಲಿ ಇನ್ನೊಂದು ವಿಶೇಷವೆಂದರೆ, ಈಗ ತಾನೆ ಏಳುವ ಮೊದಲು ಮಗು ತಾಯಿಯ ಎದೆ ಹಾಲನ್ನುಂಡಿರುವಂತೆ. ಅವಳ ಅರೆ ನಗ್ನಾವಸ್ಥೆಯ ಸ್ತನದ ಚಿತ್ರಣ, ಕತ್ತಲೆಯಲ್ಲಿ ಬೆಳಕನ್ನು ಪಡೆಯಲು ಹತ್ತಿರದಲ್ಲಿಯೇ ಚಿಮಿಣಿ, ಮಣ್ಣಿನ ಪಾತ್ರೆಗಳು, ಕತ್ತಲೆಯನ್ನು ಹೊಡೆದೊಡಿಸಿ ಬೆಳಕು ನೀಡುತ್ತಿರುವ ಸೂರ್ಯನ ಉದಯ ಹಾಗೂ ಹಳ್ಳಿಯ ಜನಪದ ಕಲೆಯು ಅವರ ಹಿಂಬದಿ ಗೋಡೆಯ ಮೇಲೆ ಹುರಮಂಜು ಸುಣ್ಣದಿಂದ ರಚಿತಗೊಂಡಿರುವುದನ್ನು ಕಾಣಬಹುದು. ಹಿನ್ನೆಲೆಯಲ್ಲಿ ತೆಳು ನೀಲಿವರ್ಣದ ಸಂಯೋಜನೆಯ ಬೆಳಕನ್ನು ಸೂಚಿಸುತ್ತದೆ.

೧೨/೨ X ೩ ಅಡಿ ಅಳತೆಯ ಈ ಕಲಾಕೃತಿಯು ೨೦೦೪ರಲ್ಲಿ ತೈಲವರ್ಣಮಾದಲ್ಲಿ ರಚನೆಯಗಿದೆ. ಪ್ರಸ್ತುತ ಕಲಾಕೃತಿಯು ಗದುಗಿನ ನಿವೃತ್ತ ಎಸ್.ಪಿ.ಯವರ ಮನೆಯಲ್ಲಿ ಸಂಗ್ರಹಗೊಂಡಿದೆ.

೫.೧.೩. ವಯಸ್ಸಿನ ಗುಟ್ಟು: ಇಳಿ ವಯಸ್ಸು ಬೆನ್ನು ಬಾಗಿದೆ. ಆದರೆ ತನ್ನ ದಿನನಿತ್ಯದ ಕೆಲಸ ಕಾರ್ಯಗಳನ್ನು ತಾನೇ ಮಾಡಿಕೊಳ್ಳುವುದು ಸ್ವಚ್ಛತೆಯಲ್ಲಿ ಪ್ರಾಮುಖ್ಯತೆ. ಚಿಕ್ಕ ಗುಡಿಸಲಿನ ಒಳಗೆ ಅಡುಗೆಯ ಕಾಯಕದಲ್ಲಿ ತೊಡಗಿರುವುದು ಹೊರಗಿನ ಬೆಳಕು, ಚಾಚಿ ಮುದುಕಿಯ ಮುಖಕ್ಕೆ ತಾಗಿರುವಂತೆ ಬಿಳಿವರ್ಣದ ಛಾಯೆ, ಕತ್ತಲೆಯನ್ನು ಹೊಡೆದೊಡಿಸಿತು ಎಂದು ಸಂತೋಷದಲ್ಲಿ ಮುದುಕಿ "ತನ್ನ ಮೊಮ್ಮಗಳಿಗೆ ಭಾವೀ ಜೀವನದಲ್ಲಿ ಕಷ್ಟಗಳೂ ಬಾರದಿರಲಿ, ಆಯುರರೋಗ್ಯ, ವೃದ್ಧಿಯಾಗಲಿ ಎಂದು ಊಹಿಸಿಕೊಂಡು ಸ್ವತಃ ಅಡುಗೆ ತಯಾರಿಸಿ ಉಣಬಡಿಸುತ್ತಿದ್ದಾಳೆ. ಅಜ್ಜಿಗೆ ಕೆಲಸದಲ್ಲಿ ಸಹಾಯಕವಾಗಲು ಏನೋ ಕೊಡುತ್ತಿದ್ದಾಳೆ ಎನ್ನುವಂತಹ ನೈಜ ದೃಶ್ಯಗಳ ಸಂಯೋಜನೆಯು ನೆರಳು ಬೆಳಕು ಛಾಯೆಯಲ್ಲಿ ಮೂಡಿಬಂದಿದೆ.

೩ X ೩ ೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೬ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚನೆ ಮಾಡಲ್ಪಟ್ಟಿದೆ. ಇಲ್ಲಿ ಸಂಯೋಜಿಸಲ್ಪಟ್ಟ ವರ್ಣಗಳು ಪ್ರಶಾಂತತೆಯನ್ನು ಸೂಚಿಸುವಂತಿದೆ. ಅಜ್ಜಿಯ ನೀಲಿಬಣ್ಣದ ಸೀರೆ, ಗುಳದಗುಡ್ಡದ ಕಣ, ಕೈಯಲ್ಲಿನ ಸೌಟು ಇವು ದೇಶೀಯತೆಯ ಪ್ರತೀಕವೆಂಬಂತೆ ತೋರ್ಪಡಿಸುತ್ತದೆ. ಹಿನ್ನೆಲೆಯಲ್ಲಿ ಬೆಳಕನ್ನು ತೆರೆ ಮರೆಯಿಂದ ಬೆಳಕು ಹರಿದು ಬಂದಂತೆ ತೋರುತ್ತದೆ. ನೈಜತೆಯ ಒಲೆಯ ದೃಶ್ಯ ಸಹೃದಯನನ್ನು ಸೆಳೆದುಕೊಳ್ಳುವಂತಿದೆ. ಈ ಕೃತಿಯು ಬಿ.ಎಲ್.ಡಿ.ಇ. ಸಂಸ್ಥೆಯ ಎನ್.ಆರ್.ಐ.ಗೆಸ್ಟ್ ಹೌಸ್‌ನಲ್ಲಿ ಸಂಗ್ರಹಗೊಂಡಿದೆ.

೫.೧.೪. ಆತುರ: ಕಡೇಮನಿಯವರು ಚಿಕ್ಕವರಿದ್ದಾಗ ನೋಡಿದ ಸನ್ನಿವೇಶವನ್ನು ತಮ್ಮ ಕೃತಿಗಳಲ್ಲಿ ಒಡ ಮೂಡಿಸುತ್ತಿದ್ದರು. ಅವರೇ ಹೇಳುವಂತೆ "ನಾನು ಚಿಕ್ಕವನಾಗಿದ್ದಾಗ ಹಳ್ಳಿಯಲ್ಲಿ ನನ್ನ ತಾಯಿ ದೊಡ್ಡ ಬೀಸುಕಲ್ಲಿಗೆ ಕುಳಿತು ಜೋಳ ಬೀಸಿ ಹಿಟ್ಟು ತೆಗೆಯುತ್ತಿದ್ದಳು. ನಂತರ ಅದರಿಂದ ಅಡುಗೆ. ಈ ಬೀಸುವ ಸಂದರ್ಭ ಹೇಗಿತ್ತೆಂದರೆ ಬೀಸು ಕಲ್ಲಿನ ಸ್ವರದಲ್ಲಿ ತಾಯಿ ಹಾಡುತ್ತ, ತನ್ನ ಕಂದನನ್ನು ತೊಡೆಯ ಮೇಲೆ ಮಲಗಿಸುತ್ತಿದ್ದಳು. ಆ ಸ್ವರ ಮತ್ತು ಅವಳ ಹಾಡಿಗೆ ಹಠ ಮಾಡುತ್ತಿದ್ದ ಮಗು ಕೂಡ ನಿದ್ರೆಗೆ ಜಾರುತ್ತಿದ್ದು, ಇದೇ ನೆನಪು ಪ್ರಸ್ತುತ ಕೃತಿಗೆ ಕಾರಣ.

ಈ ಕಲಾಕೃತಿಯಲ್ಲಿ ತಾಯಿಗೆ ಹಿಟ್ಟು ತೆಗೆದು ಅಡುಗೆ ಮಾಡುವ ಆತುರ, ಮಗುವಿಗೆ ತನ್ನ ಹೊಟ್ಟೆ ತುಂಬಿಕೊಳ್ಳುವ ಆತುರ, ಮಗುವಿಗೆ ಜೋ ಜೋ ಲಾಲಿ ಹಾಡಿ ಮಲಗಿಸಲು ಮೇಲೊಂದು ಜೋಳಿಗೆ, ಅದರಲ್ಲಿ ಚಿತ್ತಾರದ ಕೌದಿ, ಮುಂದೆ ಅಡಕಲು ಗಡಿಗೆಗಳು, ಮನೆ ಬೆಳಗುವ ಹಳೆಯ ಕಂದೀಲು, ಜೋಳ ತುಂಬಿದ ಕಪ್ಪು ಬಣ್ಣದ ಬುಟ್ಟಿ, ಸಂಯೋಜಿಗೊಂಡು ಈ ಕಲಾಕೃತಿಯು ಇಂದಿನ ಯಾಂತ್ರೀಕೃತ ಬದುಕಿನಲ್ಲಿ ಕಾಣೆಯಾಗಿರುವ ಈ ಗ್ರಾಮೀಣ ವಸ್ತುಗಳನ್ನು ಕಾಲಗರ್ಭದಿಂದ ಹೊರತೆಗೆದು ಕಲಾಕೃತಿಯಾಗಿಸಿರುವುದು ಕಡೇಮನಿಯವರ ಹೆಗ್ಗಳಿಕೆಗೆ ಪಾತ್ರವಾಗಿದೆ. ಬೀಸುಕಲ್ಲು ಸ್ತಬ್ಧವಾಗಿದ್ದರೂ ಚಲನೆಯ ರೂಪ ಪಡೆದಿರುವಂತೆ ವರ್ಣ ಸಂಯೋಜನೆ ಮಾಡಲಾಗಿದೆ. ಬೂದು ಬಣ್ಣ ಮತ್ತು ತೆಳು ಹಳದಿ, ಹಸಿರು ಬಣ್ಣ ಹಿನ್ನೆಲೆಯಲ್ಲಿ ಹೊಂದಿರುವ ಈ ಕೃತಿಯಲ್ಲಿ ಮುಖ್ಯ ಆಕೃತಿಗೆ ತಕ್ಕಂತೆ ಮೇಳೈಸಿದೆ.

೨೧/೨ X ೩ ಅಡಿ ಅಳತೆಯ ಕೃತಿಯು ೨೦೦೩ರಲ್ಲಿ ತೈಲವರ್ಣ ಮಾಧ್ಯಮದಲಿ ರಚಿಸಲಾಗಿದೆ. ಪ್ರಸ್ತುತ ಇದು ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ ಅವರ ಬೆಂಗಳೂರು ನಿವಾಸದ ಸಂಗ್ರಹದಲ್ಲಿದೆ.

೫.೧.೫. ಹಾಲು ಮತ್ತು ಬೆಣ್ಣೆ: ಈ ಕಲಾಕೃತಿಯು ಪೂರ್ಣ ಕೆಂಪು ವರ್ಣದಲ್ಲಿ ಮೂಡಿಬಂದಿದ್ದು, ಬೆಳಗಿನ ಜಾವದ ಸನ್ನಿವೇಶವನ್ನು ಸೂಚಿಸುತ್ತದೆ. ಹಳ್ಳಿಗಳಲ್ಲಿ ರಾತ್ರಿ ಮಲಗುವಾಗ ಹಾಲಿಗೆ ಹೆಪ್ಪು ಹಾಕಿ ಬೆಳಗಿನ ಜಾವ ಅದನ್ನು ಕಡೆಯುತ್ತಾರೆ. ಇದರಲ್ಲಿ ಎರಡು ಪ್ರಕಾರಗಳು ಒಂದು ದೊಡ್ಡ ಕಡೆಗೋಲಿನಿಂದ ಹಗ್ಗದ ಹುರಿಯಿಂದ ಕಂಬದ ಬದಿಗಿಟ್ಟು ಹೆಣ್ಣುಮಗಳು ಬಾಗಿ

ಕಡೆಯುವುದು. ಇನ್ನೊಂದು ಕಡಗೋಲು ಈ ಚಿತ್ರದಲ್ಲಿರುವುದು ಕೈ ಕಡಗೋಲಿನಿಂದ ಕಡೆದು ಬೆಣ್ಣೆ ತೆಗೆಯುವ ಸನ್ನಿವೇಶ. ತಾಯಿಯು ಇಲಕಲ್ ಸೀರೆ, ಗುಳೇದಗುಡ್ಡ ಬಣ್ಣ ತೊಟ್ಟು, ಪುಟ್ಟ ಮಗುವನ್ನು ಸಂತೈಸುವಲ್ಲಿ ಮಗ್ನಳಾಗಿದ್ದಾಳೆ. ಇಲ್ಲಿ ಮುಖ್ಯವಾಗಿ ಕಾಣಬರುವುದು. ಬೆಕ್ಕು ಅಡಕಲು ಗಡಿಗೆಗಳ ಮೇಲೆ ಕಳ್ಳ ನೋಟ ಬೀರುತ್ತಿದ್ದು, ಅದರ ಚರ್ಮದ ಮೇಲಿನ ಬಣ್ಣಗಳು ಆಕರ್ಷಿಸುವಂತಿದೆ. ಹಿಂಬದಿಯಲ್ಲಿ ಹಳದಿ ಮಿಶ್ರಿತ ಕೆಂಪು ಬಣ್ಣದ್ದಾಗಿದ್ದು, ಅದಕ್ಕೆ ಪೂರಕವಾಗುವಂತೆ ಮಗುವಿನ ಚಿಕ್ಕ ಕೌದಿಯನ್ನು ನೇತು ಹಾಕಿರುವುದು ಮೇಲೆ ಸಂಯೋಜಿಸಲ್ಪಟ್ಟಿದೆ. ಕೌದಿಯ ಚಿತ್ತಾರ ಅವಳ ಸೀರೆ ದೇಶೀ ನೆಲೆಯ ಪ್ರತೀಕವೆಂಬಂತಿದೆ.

೩ X ೩೧/೨ ಅಡಿ ಅಳತೆಯ ಈ ಕಲಾಕೃತಿಯ ಸಂಯೋಜನಾ ಪೂರ್ಣತೆಯಿಂದ ಕೂಡಿದೆ. ೨೦೦೪ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದು ಪ್ರಸ್ತುತ ಕಲಾಕೃತಿಯು ಡಾ.ಮನ್ನಿಕೇರಿಯವರ ಸಂಗ್ರಹದಲ್ಲಿದೆ.

೫.೧.೬. ನನ್ನಹಳ್ಳಿ(ಬೆಳಗು): ಈ ಕಲಾಕೃತಿಯ ವರ್ಣ ರಂಜಿತವಾದ ಕೆಂಪು ಮತ್ತು ಬೂದು ವರ್ಣಗಳಿಂದ ಸಂಯೋಜಿಸಲ್ಪಟ್ಟಿದೆ. ಬೆಳಗಿನ ಜಾವದಲ್ಲಿ ತಾಯಿ ತನ್ನ ಕಂದಮ್ಮನ ಮುಂಜಾನೆಯ ಕಾರ್ಯಕ್ಕೆ ರಸ್ತೆ ಬದಿಗೆ ತಂದು ನಿಲ್ಲಿಸಿರುವಂತೆ ತೋರುತ್ತಿದ್ದು, ಹಳ್ಳಿಯ ಮಕ್ಕಳ ಪರಿಸ್ಥಿತಿಯೇ ಹೀಗೆ. ಮಗು ಹಠಮಾರಿಯಾಗಿ ಅಳುತ್ತಿರುವ ಸ್ಥಿತಿಗೆ ತಾಯಿ ತನ್ನೆರಡು ಕೈಗಳಿಂದ ಸಂತೈಸಿ ತನ್ನ ಪ್ರೀತಿಯ ಮಗುವಿಗೆ ನಾಯಿಯನ್ನು ತೋರಿಸುತ್ತ ಎದುರುಮುಖವಾಗಿ ಕುಳಿತಿರುವುದಾಗಿದೆ. ಈ ಸನ್ನಿವೇಶ ಗಮನಿಸುತ್ತಿರುವಂತೆ ನಾಯಿಯ ಮುಖವನ್ನು ವ್ಯಕ್ತಿಯ ಕಡೆಗೆ ತಿರುಗಿಸಲಾಗಿದ್ದು, ನೈಜ ಚಿತ್ರಣ ಒಡಮೂಡಿದ್ದಾಗಿದೆ. ಇಂತಹ ಸನ್ನಿವೇಶಗಳು ಹಳ್ಳಿಗಳಲ್ಲಿ ಸರ್ವೇ ಸಾಮಾನ್ಯವಾದುದು. ಈ ಕಲಾಕೃತಿಯನ್ನು 'ನನ್ನ ಹಳ್ಳಿ' ಎನ್ನುವ ಶೀರ್ಷಿಕೆಯಡಿಯಲ್ಲಿ ರಚಿಸಿರುವಂತಹದ್ದಾಗಿದೆ. ಗ್ರಾಮೀಣ ಪರಿಸರದ ನೈಜ ಚಿತ್ರಣದ ಅನುಭವದ ಹಿನ್ನೆಲೆ ಮೂಡಿಬಂದಿರಬಹುದು. ಹಿನ್ನೆಲೆಯಲ್ಲಿ ಕೌದಿ ಸಂಯೋಜನೆಯೊಂದಿಗೆ ತಮ್ಮ ವೈಯಕ್ತಿಕ ಛಾಪು ಎದ್ದು ಕಾಣುತ್ತದೆ.

೩ X ೩ ಅಡಿ ಅಳತೆಯ ಈ ಕಲಾಕೃತಿಯು ೨೦೦೩ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಪ್ರಸ್ತುತ ಈ ಕೃತಿ ಬಿ.ಎಲ್.ಡಿ.ಇ. ಸಂಸ್ಥೆಯ ಎನ್.ಆರ್.ಐ.ಗೆಸ್ಟ್ ಹೌಸ್‌ನಲ್ಲಿದೆ.

೫.೧.೭. ಉದ್ಯೋಗ, ವಿಶ್ರಾಂತಿ: ಕತ್ತಲೆಯೊಂದಿಗೆ ಬೆಳಕಿನ ಕಡೆಗೆ ಎಂಬ ಪರಿಕಲ್ಪನೆಯಲ್ಲಿ ರಚಿತವಾದ ಈ ಕಲಾಕೃತಿಯಲ್ಲಿ ರುದ್ರ ಮನಸ್ಸಿನ ಮನುಷ್ಯ ತನ್ನ ದಿನನಿತ್ಯದ ಕಾಯಕ ಹಾಲು ಮಾರುವುದು, ದನಿವಾದಾಗ ವಿಶ್ರಾಂತಿ, ಆ ಸಮಯದಲ್ಲಿ ತನ್ನ ಕಂದನಿಗೆ ಪ್ರೀತಿ.

ಹಿನ್ನೆಲೆಯ ಕಪ್ಪು ವರ್ಣದ ಕತ್ತಲೆ ಕಳೆದು ಹೊಸ ದಿನ ಬರಲಿ ಸಂಕಷ್ಟಗಳು ದೂರವಾಗಲಿ ಎಂಬ ಚಿಂತೆಯಲ್ಲಿ ತಂಬಾಕು ಸೇದುತ್ತ ಕುಳಿತಿದ್ದಾನೆ. ಕೆಂಪು ವರ್ಣದ ಹಿನ್ನೆಲೆಯಲ್ಲಿ ನಾಯಿ ಮತ್ತು ಮಗು ಆ ಚಿಂತೆಯಲ್ಲಿ ಪಾಲ್ಗೊಂಡಂತೆ ಕಾಣಬರುತ್ತದೆ.

ಮಿಶ್ರವರ್ಣ ಬಳಕೆಯಿದ್ದರೂ ಕೂಡ ಶಾಸ್ತ್ರಬದ್ದ ಸಂಯೋಜನೆ ಕಂಡುಬರುತ್ತದೆ. ಬಿಳಿ ಬಟ್ಟೆ ತೊಟ್ಟಿರುವ ವ್ಯಕ್ತಿಯ ಮುಖಭಾವದಲ್ಲಿ ಚಿಂತೆಯೇ ಹಾಸು ಹೊಕ್ಕಿರುವಂತೆ ತೋರುತ್ತದೆ.

೩ X ೩ ೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೫ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚನೆ ಮಾಡಿದ್ದಾರೆ. ಚಿತ್ರಕಲಾ ಪರಿಷತ್‌ನ ಕಲಾ ಪ್ರದರ್ಶನ ಸಂದರ್ಭದಲ್ಲಿ ಮಾರಾಟಗೊಂಡಿರುವ ಈ ಕಲಾಕೃತಿಯು ಅನಾಮಧೇಯ ಮನೆಯಲ್ಲಿ ಸಂಗ್ರಹಗೊಂಡಿದೆ.

೫.೧.೮. ಕತ್ತೆ ಮದುವೆ: ಹಳ್ಳಿಗಾಡಿನಲ್ಲಿ ಮಳೆಯಾಗಿಲ್ಲ ಎಂದರೆ ಈಗಲೂ ಅಲ್ಲೊಂದು ಇಲ್ಲೊಂದು ಕಡೆಗಳಲ್ಲಿ ಗಂಡು ಮತ್ತು ಹೆಣ್ಣು ಕತ್ತೆಗಳಿಗೆ ಮದುವೆ ಮಾಡಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅನುಭವಿಸಿ ರಚಿಸಿದ ಈ ಕೃತಿಯು ಎರಡು ಕತ್ತೆಗಳಿಗೆ ಬಟ್ಟೆ ತೊಡಿಸಿ, ಅಗಸಿಯ ಬಾಗಿಲ ಮುಂದೆ ಹಾರ ಹಾಕಿ ಮದುವೆ ಮಾಡಿರುವಂತೆ ಕಾಣಬರುತ್ತದೆ. ಮುನ್ನೆಲೆಯಲ್ಲಿ ಕುಳಿತ ರೈತನು ಇನ್ನೇನು ಮಳೆ ಬರುತ್ತದೆಂಬ ಆಶಯದಂತೆ ಮುಖದಲ್ಲಿನ ಆಶಯ ಭಾವನೆ, ಕೈಗಳೆರಡು ಮೊಳಕಾಲು ಮೇಲಿಟ್ಟು, ಧರೆಯೆಡೆ ಕೈಚಾಚಿರುವಂತೆ ಸೂಚಿಸಲಾಗಿದೆ. ಮೋಡ ಕವಿದ ವಾತಾವರಣದಂತೆ ಹಿನ್ನೆಲೆಯಲಿ ತಿಳಿ ಹಳದಿ ಮತ್ತು ಕಂದು ಕಪ್ಪು ಬಣ್ಣಗಳ ಸಂಯೋಜನೆ ಎದ್ದು ಕಾಣುತ್ತದೆ. ಕತ್ತೆಗಳ ಮೇಲಿರುವ ಬಟ್ಟೆಗಳು ಸಾಂಪ್ರದಾಯಿಕವಾಗಿ ನಡೆದುಕೊಂಡುಬಂದ ಆಚರಣೆಗಳ ಹಿನ್ನೆಲೆಯಲ್ಲಿ ರಚಿಸಿರುವಂತಹದ್ದಾಗಿದೆ.

೨ ೧/೨ X ೩ ಅಡಿ ಅಳತೆಯ ಈ ಕಲಕೃತಿಯು ೧೯೯೨ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಪ್ರಸ್ತುತ ಕೃತಿಯು ಧಾರವಾಡದಲ್ಲಿದೆ.

೫.೧.೯. ಮಣ್ಣೆತ್ತಿನ ಅಮವಾಸೆ: ಹಳ್ಳಿಗಳಲ್ಲಿ ಕಾರ ಹುಟ್ಟಣಿಮೆಯ ನಂತರ ಬರುವ ಮಣ್ಣೆತ್ತಿನ ಅಮವಾಸೆಯಂದು ಮಣ್ಣು ಪೂಜೆ ಮಾಡುತ್ತಾರೆ. ಅಂತಹ ಒಂದು ಸಂದರ್ಭವನ್ನು ಆಧರಿಸಿ, 'ನನ್ನ ಹಳ್ಳಿ' ಎಂಬ ಶೀರ್ಷಿಕೆಯಡಿ ರಚಿತವಾದ ಕೃತಿಗಳಲ್ಲಿ ಇದು ಒಂದು.

ಕಾರಾಹುಣ್ಣಿಮೆಗಿಂತ ಪೂರ್ವದಲ್ಲಿ ಮಳೆಗಾಲ ಪ್ರಾರಂಭ. ಈ ದಿನಗಳಿಗೆ ರೈತರು ತಮ್ಮ ಭೂಮಿಯನ್ನು ಹದಗೊಳಿಸಿ ಬೆಳೆ ಮಾಡುವ ತವಕದಲ್ಲಿರುತ್ತಾರೆ. ಅದಕ್ಕೆ ಪೂರ್ವದಲ್ಲಿ ಕಾರ ಹುಣ್ಣಿಮೆಗೆ ದುಡಿಯುವ ಎತ್ತುಗಳಿಗೆ ಶೃಂಗರಿಸಿ ಬಣ್ಣ ಹಚ್ಚಿ ಮೆರವಣಿಗೆ ಮಾಡಿ ಯಾವ ಫಸಲು ಹೆಚ್ಚು ಬೆಳೆಯುತ್ತವೆ ಎಂದು ತಿಳಿದುಕೊಳ್ಳುತ್ತಾರೆ. ನಂತರ ಬರುವುದೇ ಮಣ್ಣೆತ್ತಿನ ಅಮವಾಸೆ. ಈ ಅಮವಾಸೆಗೆ ಮಣ್ಣಿನಿಂದ ತಯಾರಿಸಿದ ಎತ್ತುಗಳನ್ನು ಮನೆಯ ಜಗಲಿಯ ಮೇಲಿಟ್ಟು ಪೂಜಿಸುತ್ತಾರೆ. ಅಂದರೆ ಭೂಮಿಯನ್ನು ಪೂಜಿಸಿದಂತೆ ಈ ಹಿನ್ನೆಲೆಯಲ್ಲಿ ರಚಿತವಾದ ಈ ಕೃತಿಯ ಹಿನ್ನೆಲೆಯಲ್ಲಿ ಮನೆ, ಜನಪದ ಕಲೆಯ ಚಿತ್ತಾರದ ಆಕೃತಿಗಳು, ಅದರ ಹಿನ್ನೆಲೆಯಲ್ಲಿ ಹುಣ್ಣಿಮೆಯ ಚಂದ್ರ, ಬೆಳದಿಂಗಳ ಬೆಳಕಿನಂತ ವರ್ಣ ಸಂಯೋಜನೆಯು ನೈಜತೆಯನ್ನು ತೋರುತ್ತದೆ. ಗ್ರಾಮೀಣರ ಪರಿಕಲ್ಪನೆಯ ಸೂರ್ಯ ಚಂದ್ರರ ಆಕೃತಿಗಳು. ಬಾಗಿಲಿಗೆ ಹಸಿರು

ತೋರಣ, ಮಿತವಾದ ವರ್ಣ ಬಳಕೆಯನ್ನು ಮಾಡಿರುವ ಕಡೇಮನಿಯವರು ಸಂಯೋಜನಾ ಬದ್ಧತೆಯಿಂದಿರುವುದ ಎದ್ದು ಕಾಣುತ್ತದೆ.

೨ X ೨೧/೨ ಅಡಿ ಅಳತೆಯ ಈ ಕೃತಿಯು ತೈಲವರ್ಣ ಮಾಧ್ಯಮದಲ್ಲಿ ೨೦೦೬ರಲ್ಲಿ ರಚಿಸಿರುವುದಾಗಿದ್ದು, ಬೆಂಗಳೂರಿನ ಅನಾಮಧೇಯ ಶ್ರೀಮಂತನ ಮನೆಯ ಸಂಗ್ರಹದಲ್ಲಿದೆ.

೫.೧.೧೦. ಕಾರ ಹುಣ್ಣಿಮೆ: ಮಳೆಗಾಲದ ಪ್ರಾರಂಭ ಎತ್ತುಗಳಿಗೆ ಹಬ್ಬ ರೈತನಿಗೆ ಖುಷಿ ಕೊಡುವ ಕಾಲ. ಇಡೀ ವರ್ಷವೆಲ್ಲ ಶ್ರಮ ವಹಿಸಿದ ರೈತ ಈ ಕಾರ ಹುಣ್ಣಿಮೆಯೆಂದು ತನ್ನ ಎತ್ತುಗಳಿಗೆ ಬಣ್ಣ ಹಚ್ಚಿ ಊರಲ್ಲಿ ಮೆರವಣಿಗೆ, ಸ್ಪರ್ಧೆ ಇತ್ಯಾದಿಗಳನ್ನು ಹಮ್ಮಿಕೊಂಡು ಸಡಗರವನ್ನಾಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ರಚಿಸಿರುವ ಕೃತಿಯಲ್ಲಿ ಎತ್ತುಗಳ ಹೆಸರು ಸೂರ್ಯ, ಚಂದ್ರರೆಂಬಂತೆ ಬಣ್ಣದಲ್ಲಿ ತೋರಿಸಲಾಗಿದೆ. ಈ ಕಲಾಕೃತಿಯಲ್ಲಿ ಸಂಯೋಜನೆಗೊಂಡಿರುವ ವ್ಯಕ್ತಿ ಮತ್ತು ಎತ್ತುಗಳ ಆಕೃತಿಗಳು ಪ್ರಮಾಣಬದ್ಧವಾಗಿ ರಚನೆಯಾಗಿದ್ದರೂ ಮುಖದ ಭಾವನೆಗಳಲ್ಲಿ ಹಿನ್ನಡೆ ಕಾಣಿಸುವಂತಿದೆ.

೩ X ೩೧/೨ ಅಡಿ ಅಳತೆಯ ಈ ಕಲಾಕೃತಿಯು ತೈಲವರ್ಣ ಮಾಧ್ಯಮದಲ್ಲಿ, ೧೯೯೨ರಲ್ಲಿ ರಚನೆ ಮಾಡಲಾಗಿದೆ. ಪ್ರಸ್ತುತ ಬಿ.ಎಲ್.ಡಿ.ಇ. ಗೆಸ್ಟ್‌ಹೌಸ್‌ನಲ್ಲಿ ಸಂಗ್ರಹಗೊಂಡಿದೆ.

೫.೧.೧೧. ಸೂರ್ಯೋದಯ: ರಾತ್ರಿ ಕಳೆದು ಬೆಳಕು ಮೂಡುವ ಸಮಯ. ಪ್ರಾಣಿ, ಪಕ್ಷಿ, ಮನುಷ್ಯರು ತಮ್ಮ ತಮ್ಮ ಮುಂಜಾನೆಯ ಅವಧಿಯ ಕಾರ್ಯಗಳನು ಮುಗಿಸಿ, ಕೆಲಸ ಮಾಡಲು ಮುಂದಾಗುತ್ತಿರುವಂತ ಸನ್ನಿವೇಶಗಳನ್ನೊಳಗೊಂಡ ಕೃತಿಯಲ್ಲಿ ಸೂರ್ಯೋದಯ ಮತ್ತು ಸೂರ್ಯಸ್ತಗಳನ್ನು ಸೂಚಿಸುವುದಾಗಿದೆ. ಗ್ರಾಮೀಣ ಜನರಿಗೆ ಇದು ನೈಜವಾಗಿ, ನಿತ್ಯ ಕಾಣುವುದು. ಆದರೆ ಶಹರದ ಜನರಿಗೆ ಈ ಒಂದು ಸುಂದರ ಅನುಭವವನ್ನು ಪಡೆಯಲು ಸ್ವಲ್ಪ ಕಷ್ಟಸಾಧ್ಯ. ಗ್ರಾಮೀಣ ಪರಿಸರವೇ ಚೆನ್ನ ಎಂಬ ಹಿನ್ನೆಲೆಯಲ್ಲಿ ರಚಿಸಿರುವ ಈ ಕೃತಿಯಲ್ಲಿ ಹಳದಿ ಮತ್ತು ಕಂದು ಕೆಂಪು ಬಣ್ಣವನ್ನು ಹೊಂದಿದ್ದು, ಕಂದುಗೆಂಪು ಮತ್ತು ಬಿಳಿ ಎತ್ತುಗಳು ಆಗ ತಾನೇ ಎದ್ದು ನಿಂತಿರುವಂತೆ ಚಿತ್ರಿಸಿರುವುದನ್ನು ಕಾಣಬಹುದು. ಅವುಗಳ ಪಕ್ಕದಲ್ಲಿ ಬೆಳಗಿನ ಸೂರ್ಯನ ಕಿರಣಗಳಿಗೆ ಹೂವುಗಳು ಅರಳುತ್ತಿರುವಂತೆ, ಅಲ್ಲಲ್ಲಿ ಚಿಕ್ಕ ಚಿಕ್ಕ ಕುಂಚದ ಎಳೆತಗಳು, ಸೂರ್ಯನ ಕಿರಣಗಳೆಂಬಂತೆ, ಹಳದಿ, ಬಿಳಿ, ವರ್ಣದ ಬೀಸುಗಳು, ಅತೀ ಸೂಕ್ಷ್ಮ ರೀತಿಯಲ್ಲಿ ಗ್ರಹಿಸಿ ಅಭಿವ್ಯಕ್ತಗೊಂಡಂತ ಕೃತಿಯಾಗಿದೆ. ಕಲಾವಿದರು ತಮ್ಮದೇ ಆದ ಶೈಲಿಯಲ್ಲಿ ಕೌದಿಯ ರೂಪದ ಬಣ್ಣಗಳ ತೇಪೆಗಳನ್ನು ಅಲ್ಲಲ್ಲಿ ಕಂಡರಿಸಿದ್ದಾರೆ. ಒಟ್ಟಾರೆ ಕೃತಿಯು semy modernಗೆ ಹತ್ತಿರವಾಗಿದ್ದು ಸುಂದರ, ಆಕರ್ಷಕ ಸಂಯೋಜನೆಯಿಂದ ಕೂಡಿದೆ.

೨೧/೨ X ೩ ಅಡಿ ಅಳತೆಯ ಈ ಕೃತಿಯು ತೈಲವರ್ಣ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡಿದ್ದು, ೨೦೧೧ರಲ್ಲಿ ರಚನೆ ಮಾಡಲಾಗಿದೆ. ಇದು ಕಲಾವಿದರ ಸಂಗ್ರಹದಲ್ಲಿದೆ.

೫.೧.೧೨. ಗೋದೂಳಿ ಸಮಯ: ಸಾದು ಮುಖದ ಆಕಳು ಅದನ್ನು ನೋಡಿದರೆ ಪೂಜ್ಯ ಭಾವನೆ ಬರುವಷ್ಟು. ಮುಖದ ಮೇಲೆ ಲಕ್ಷಣವನ್ನು ಕೊಡಲಾಗಿದೆ. ಕಪ್ಪು ಬಣ್ಣದ ಆಕಳು ಅದೇ ವರ್ಣದ ಮುದ್ದು ಕರು ಕೂಡ ಅದನ್ನೇ ಹೋಲುವಂತೆ ಚಿತ್ರಿಸಲಾಗಿದೆ. ರೈತ ಹಸುವಿನ ಹಾಲು ಕರೆಯುವಲ್ಲಿ ನಿರತನಾಗಿದ್ದಾನೆ. ಇದು ಗೋಧೂಳಿ ಸಮಯದ ಸನ್ನಿವೇಶವಾಗಿದೆ. ಹಿನ್ನೆಲೆಯಲ್ಲಿ ಕಪ್ಪು ಮತ್ತು ಹಳದಿ ಬಣ್ಣದ ವರ್ಣ ಸಂಯೋಜನೆಯು ಮುಖ್ಯ ಆಕೃತಿಗೆ ಪೂರಕವಾಗಿರುವಂತೆ ಚಿತ್ರಿಸಲಾಗಿದೆ. ಕರುವಿನ ಹಿಂಬದಿಯಲ್ಲಿ ತೆಳು ಹಳದಿ ಬಣ್ಣ ಪ್ರಕರವಾದ ಬೆಳಕು ಗೋಧೂಳಿಯನ್ನು ಪ್ರತಿನಿಧಿಸಿದರೆ ಆಕಳ ಹಿಂದಿರುವ ಕಪ್ಪು ವರ್ಣವು ಈಗ ತಾನೆ ಕತ್ತಲು ಕವಿಯಲಿದೆ ಎನ್ನುವ ಹಾಗೆ ಭಾಸವಾಗುವಂತೆ ಕಡೆಮನೆಯವರು ವರ್ಣಸಂಯೋಜನೆ ಮಾಡಿದ್ದಾರೆ.

೨೦೦೫ರಲ್ಲಿ ರಚನೆಯಾದ ಈ ಕಲಾಕೃತಿಯು ೩ X ೩½ ಅಡಿ ಅಳತೆಯ ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ನನ್ನ ಮನೆ, ನನ್ನ ಹಸು, ನನ್ನ ಕರು ಇವೆಲ್ಲವು ಕಂಡ ನನ್ನ ನೆನಪು ಎಂಬಂತಹ ಸಂದರ್ಭದೊಂದಿಗೆ ಮೂಡಿಬಂದ ಕಡೇಮನಿಯವರ ಈ ಕಲಾಕೃತಿಯು ಕಲಾವಿದರ ಮನೆಯ ಮುಂದಿನ ಮುಖ್ಯದ್ವಾರದ ಬದಿಯ ಗೋಡೆಗೆ ನೇತು ಹಾಕಿದೆ.

೫.೧.೧೩. ಬದುಕು: ನಗರ ಬದುಕಿಗಿಂತ ಹಳ್ಳಿಯ ಬದುಕೇ ಸುಂದರ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಹಳ್ಳಿಗಳಲ್ಲಿ ಪ್ರತಿಯೊಂದು ಮನೆಗೆ ಒಂದು ಹಸು ಅಥವಾ ಎಮ್ಮೆ, ಆಡು ಮುಂತಾದ ಪ್ರಾಣಿ, ಪಕ್ಷಿಗಳನ್ನು ಸಾಕುತ್ತಾರೆ. ಅವುಗಳಿಂದ ಒಳ್ಳೆಯ ಆದಾಯ ಪಡೆಯುತ್ತಾರೆ. ಮತ್ತು ಶಹರದಲ್ಲಿ ಬರುವ ಪಾಕೀಟು ಹಾಲು ನಮ್ಮ ಹಳ್ಳಿಯ ರೈತರ ಸಾಕು ಪ್ರಾಣಿಗಳಿಂದಲೇ. ಆದರೆ ಶಹರದ ಮಕ್ಕಳಿಗೆ ಹಾಲು ಎಲ್ಲಿಂದ ಬರುತ್ತದೆ? ಎಂದು ಕೇಳಿದರೆ ಪಾಕೇಟಿನಿಂದ ಎಂದು ಉತ್ತರ ದೊರೆಯುತ್ತದೆ. ಏಕೆಂದರೆ ಹಾಲು ಕರೆಯುವುದನ್ನು ಅವರು ಕಂಡಿರುವುದೇ ಇಲ್ಲ. ಇಂತಹ ಯಾಂತ್ರಿಕೃತ ಬದುಕನ್ನು ಜೀವಿಸುತ್ತಾರೆ. ನಮಗೆ ಗ್ರಾಮೀಣ ಪರಿಸರವೇ ಮರಿಚೀಕೆ ಆಗಿರುವುದು ಎಂಬಂತೆ ಕಡೇಮನಿಯವರು ಈ ಕಲಾಕೃತಿಯಲ್ಲಿ ಹಾಲು ಕರೆದು ಮನಸ್ಸನ್ನು ಹಗುರು ಮಾಡಿಕೊಂಡಂತಿದೆ. ಹಳದಿ ಬಣ್ಣದ ಹಿನ್ನೆಲೆಯನ್ನು ಹೊಂದಿರುವ ಈ ಕೃತಿಯಲ್ಲಿ ಸಮಯಕ್ಕೆ ಪ್ರಾಧಾನ್ಯತೆ ಕೊಟ್ಟು ರಚಿಸಿರುವುದು ಕಂಡುಬರುತ್ತದೆ. ದೊಡ್ಡ ದೊಡ್ಡ ಕುಂಚದ ಎಳೆತಗಳು ಕಲಾವಿದರ ಕುಂಚದ ಮೇಲಿನ ಹಿಡಿತ ಮತ್ತು ಕೌಶಲ್ಯ ಪೂರ್ಣ ಬುದ್ಧಿ ಸಾಮರ್ಥ್ಯದ ವ್ಯಕ್ತಿಗತ ಮೌಲ್ಯವನ್ನು ತಿಳಿಸುವಂತಹ ಕಲಾಕೃತಿ ಇದಾಗಿದೆ.

೩ X ೩½ ಅಡಿ ಅಳತೆಯ ಈ ಕೃತಿಯು ತೈಲವರ್ಣ ಮಾಧ್ಯಮದಲ್ಲಿ ೨೦೦೬ರಲ್ಲಿ ರಚನೆ ಮಾಡಿರುವುದಾಗಿದೆ. ಬಿಜಾಪುರ ಬೃಹತ್ ಉದ್ಯೋಗಸ್ಥ ಲೋಣಿ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ.

೫.೧.೧೪. ಸಂಜೆ ಹೊತ್ತು: ಬುಟ್ಟಿ ಹೊತ್ತಿರುವ ಅಜ್ಜ ಬಗಲಿಗೊಂದು ತಟ್ಟೆ, ಕಲ್ಲು ಭೂಮಿ ಅದರಡಿಯಲ್ಲಿ ಕಿರುದಾರಿ, ತನ್ನ ಎಮ್ಮೆಯ ಮೇಲೆ ಮೊಮ್ಮಗನನ್ನು ಕೂಡಿಸಿಕೊಂಡು ಬರುತ್ತಿರುವುದು. ಸಾಯಂಕಾಲದ ಸಮಯ, ಸೂರ್ಯನ ಕಿರಣಗಳು ಕಲ್ಲು ಬಂಡೆಗಳ ಮೇಲೆ ಒರಗಿದೆ. ಯಾಕೊ ಎಮ್ಮೆ ಬೆದರಿದಂತೆ ತೋರುತ್ತದೆ. ಮೇಲೆ ಕುಳಿತ ಹುಡಗ ಗಾಬರಿಗೊಂಡಿರುವಂತಹ ಮುಖಭಾವ ಹಿಂಬದಿಯಲ್ಲಿಯ ಗಿಡದ ಮೇಲೆ ಅಸ್ಪಷ್ಟವಾಗಿ ಕಾಣುವ ಬಿಳಿ ಪಕ್ಷಿಯೊಂದು ಇಣುಕಿ ನೋಡುತ್ತಿದೆ. ಆಕಾಶದಲ್ಲಿಯ ಕೇಸರಿ ವರ್ಣದ ಬಳಕೆಯು ಸಾಯಂಕಾಲದ ಸೂರ್ಯಾಸ್ತವನ್ನು ಸೂಚಿಸುತ್ತದೆ. ಸೌಮ್ಯವರ್ಣವನ್ನು ಒಳಗೊಂಡಿರುವ ಈ ಕಲಾಕೃತಿಯು ಸಹೃದಯನಿಗೆ ಹತ್ತಿರವಾಗುವಂತಹ ಸಂಯೋಜನೆಯನ್ನು ಒಳಗೊಂಡಿದೆ.

೩ X ೩೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೫ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವಂತಹದ್ದಾಗಿದೆ. ನನ್ನ ಎಮ್ಮೆ, ನನ್ನ ಮೊಮ್ಮಗ, ನನ್ನ ಭೂಮಿ ನಡೆದು ಬಂದ ದಾರಿ ಎಂಬ ಪರಿಕಲ್ಪನೆಯಲ್ಲಿ ಮೂಡಿ ಬಂದ ಈ ಕಲಾಕೃತಿಯು ಬಿ.ಎಲ್.ಪಿ.ಇ. ಸಂಸ್ಥೆಯ ಫ.ಗು.ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಂಗ್ರಹಗೊಂಡಿದೆ.

೫.೧.೧೫. ಪಶುಪಾಲನೆ: ಪಶುಸಂಗೋಪನೆಯ ನೆಲೆಯನ್ನು ಸೂಚಿಸುವ ಕಲಾಕೃತಿಯಾಗಿದೆ. ಕೃಷಿ ಬದುಕಿನ ವಿನ್ಯಾಸವನ್ನು ಸೂಕ್ಷ್ಮವಾಗಿ ಅವಲೋಕಿಸಬಹುದಾಗಿದೆ. ಹಾಗೂ ಎತ್ತಿನ ರೂಪ ಹಾಗೂ ಆಕರದಲ್ಲಿನ ಸಮಾರೋಪತೆ, ಕಟ್ಟಿದ ಸರಪಳಿ, ಮೇವಿನ ಬಟ್ಟಿ ಕೆಲಸದಲ್ಲಿ ನಿರತನಾದ ಪಾಲನ ದೃಷ್ಟಿ ಇತ್ಯಾದಿಗಳು. ರಚನಾಕ್ರಮದಲ್ಲಿ ವಿಶೇಷವೆನಿಸುತ್ತದೆ. ಆದರೆ ಕಲಾವಿದರ ಒಲವು ಎತ್ತಿನ ಗುಣಾವಗುಣಗಳನ್ನು ಹೇಳುತ್ತದೆಯೇ? ಪಾಲನ ಪಾತ್ರವನ್ನು ಹೇಳುತ್ತದೆಯೇ? ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತಿಲ್ಲ. ಹಾಗೂ ಮೇವಿನ ಮೇಲೆ ದೃಷ್ಟಿಯನ್ನು ಹಾಯಿಸದ ಎತ್ತುಗಳ ಕಣ್ಣುಗಳು ಇನ್ನೊಂದು ಏನನ್ನೋ ಬಯಸಿದಂತೆ ಭಾಸವಾಗುತ್ತದೆ. ಇಲ್ಲಿ ಚಿತ್ರಿಸಲಾದ ವ್ಯಕ್ತಿಯ ಮೇಲೆ ಕಲಾವಿದರು ಗಮನ ಪೂರ್ಣವಾಗಿ ರೂಪಿತವಾಗಿಲ್ಲ ಎಂಬುದು ಗೋಚರವಾಗುತ್ತದೆ. ತೆಳು ನೀಲಿ ಬಣ್ಣದ ಹಿನ್ನೆಲೆ, ಎತ್ತಿನ ಕೊಟ್ಟಿಗೆಯ ಗುಡಿಸಲು, ಕೆಳಗಡೆಯಲ್ಲಿ ಹಳದಿ ಬಣ್ಣದ ಬಳಕೆಯು ಮುಖ್ಯ ಆಕೃತಿಗೆ ಪೂರಕವಾಗುವಂತೆ ಬಳಕೆಯಾಗಿರುವುದಲ್ಲದೆ, ಕಲಾವಿದರ ವೈಯಕ್ತಿಕ ರಚನಾ ತಂತ್ರ, ಶೈಲಿ, ವರ್ಣಸಂಯೋಜನೆ ಮೂಡಿ ಬಂದಿದೆ. ಕತ್ತಲೆಗೆ ಬೆಳಕಿನ ಕಂದೀಲು ಹಿನ್ನೆಲೆಯ ವರ್ಣ ಸಂಯೋಜನೆಯಲ್ಲಿ ಲೀನವಾಗಿರುವಂತೆ ತೋರಿಸಲಾಗಿದೆ.

೫.೧.೧೬. ರೈತ ಮತ್ತು ಎತ್ತುಗಳು: ಕೃಷಿ ಬದುಕು, ಪಶು ಹಾಗೂ ಮಾನವ ಸಂಬಂಧವನ್ನು ನಿರೂಪಿಸುವ ಈ ಕಲಾಕೃತಿಯು ಬಣ್ಣಗಳ ಸಮ್ಮಿಳಿತ ಹಾಗೂ ರಚನಾ ವಿನ್ಯಾಸದಲ್ಲಿ ತುಂಬ ಸೊಗಸಿನಂತೆ ತೋರುತ್ತದೆ. ಅಷ್ಟೇ ಅಲ್ಲದೆ ಮುಂಜಾನೆಯ ಮುಸುಕಿನ ನೈಜತೆಗೆ ಕೊಂಚವು ದೋಷವಿಲ್ಲದಂತೆ ವರ್ಣಸಂಯೋಜನೆ ಮಾಡಿರುವುದು ಕಲಾವಿದನ ಜಾಣ್ಮೆಗೆ ಮೆಚ್ಚುವಂತದ್ದೆ ಸೂರ್ಯ ಮೂಡುವ ದಿಕ್ಕಿಗೆ ಮೊಗದೋರಿರುವ ವ್ಯಕ್ತಿಯ ಮುಂಡಾಸು ಸೂರ್ಯನ ಹುಟ್ಟುವಿಕೆಯ

ಸಂದರ್ಭವನ್ನು ಪ್ರತಿನಿಧಿಸಿದಂತಿದೆ. ಹಾಗೂ ಎತ್ತುಗಳ ರೂಪ ಮೈಮೇಲಿನ ತನ್ನ ಕಲ್ಪನೆಯ ಚುಕ್ಕೆಗಳು ಹೊರಸತ್ಯ ಬಿಂಬಿಸಿದಂತೆ ತೋರುತ್ತದೆ. ಹಿನ್ನೆಲೆಯ ತೆಳು ನೀಲಿ ಮಿಶ್ರಿತ ಬಿಳಿ ಬಣ್ಣ ಮುಖ್ಯ ಆಕೃತಿಗೆ ಪೂರಕವಾಗಿ ಬಳಸಿರುವುದನ್ನು ಕಾಣಬಹುದು.

೩.೧.೧೭. ರೈತ ಮತ್ತು ಮಹಿಳೆ: ಈ ಚಿತ್ರವು ಕೌಟುಂಬಿಕ ಆಯಾಮವನ್ನು ಬಿಂಬಿಸುತ್ತದೆ. ಸಂಜೆ ಹೊತ್ತು ಎಂಬುವುದು ಹಿನ್ನೆಲೆಯ ಮಸುಕಾದ ನೀಲಿವರ್ಣದ ಬಾನಿನಿಂದ ಗೋಚರವಾಗುತ್ತದೆ. ಹಾಗೂ ಸ್ತ್ರೀ ಪುರುಷನ ಸಂಭಾಷಣೆಯ ಸನ್ನಿವೇಶವಿಲ್ಲದೆ, ಅಷ್ಟೇ ಅಲ್ಲದೆ, ಮಗುವಿಗೆ ಹಾಲು ಉಣಿಸುತ್ತಿರುವ ಮಹಿಳೆ ಗಂಡಸಿಗೆ ಬೆನ್ನು ಹಾಕಿ ಕುಳಿತುಕೊಂಡಿದ್ದಾಳೆ. ಇಲ್ಲಿ ನಮಗೆ ಸ್ಪಷ್ಟವಾಗುವುದು ಇವರಿಬ್ಬರು ಗಂಡ-ಹೆಂಡತಿಯಲ್ಲ, ಅದರ ಬದಲಾಗಿ ನೆರೆ ಹೊರೆಯವನು ಆಗಿರಬಹುದು. ಸಂಬಂಧಿಯೂ ಆಗಿರಬಹುದು. ಆಕೆಯೇ ಇಲ್ಲಿರುವ ಸಾಮಾನ್ಯ ಗ್ರಹಿಕೆಯಾಗಿದೆ. ಪೂರ್ಣ ಕಲಾಕೃತಿಯು ನೀಲಿವರ್ಣದಲ್ಲಿ ರಚನೆಯಾಗಿರುವುದು ಒಂದು ವಿಶೇಷ.

ಈ ಕಲಾಕೃತಿಯು ೨೦೦೫ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚನೆಯಾಗಿದೆ.

೩.೧.೨. ಸೃಜನಾತ್ಮಕ ಸಂಯೋಜನ ಚಿತ್ರಗಳು

೩.೧.೨.೧. ಶೀರ್ಷಿಕೆ ರಹಿತ ಕಲಾಕೃತಿ: ಈ ಕಲಾಕೃತಿಯು ಹೆಣ್ಣು-ಗಂಡಿನ ಸ್ವರೂಪವನ್ನು ಹಣ್ಣಿನ ಮೂಲಕ ವ್ಯಕ್ತಪಡಿಸುತ್ತ, ಪಡಿಸಿದ ನಿಲುವು ವಿಭಿನ್ನ ಹಾಗೂ ಕುತೂಹಲವೆನಿಸುತ್ತದೆ. ಬಣ್ಣ ಸಮ್ಮಿಳಿತ ಹಾಗೂ ರಚನಾ ನೆಲೆಗಳು ಅಪ್ಯಾಯಮಾನವಾಗಿದೆ. ಯೋನಿ, ಶಿಶ್ನ, ಮೊಲೆಗಳನ್ನು ಹಣ್ಣಿನ ಮೂಲಕ ಕಲ್ಪಿಸಿಕೊಂಡು, ಒಂದೊಂದಕ್ಕೊಂದು ಸಂಧಿಸುವಂತೆ ಸಂಯೋಜಿಸಿದ್ದು, ಕಲಾವಿದನ ಸೃಜನಶೀಲತೆಯ ಪ್ರತಿರೂಪವನ್ನು ಕಾಣಬಹುದು. ಈ ಚಿತ್ರವು ಇಡೀ ಮನುಜ ಜಗತ್ತಿನ ಲೋಪ ಅಲೋಪಗಳನ್ನು ನೆನಪಿಸಿ ಪ್ರಶ್ನಿಸುವಲ್ಲಿ ಯಶಸ್ಸು ಕಾಣುತ್ತದೆ ಎನ್ನಬಹುದು. ಅಂಗದ ನೆಲೆಯಲ್ಲಿ ಜಗತ್ತು ಬಿಂಬಿಸ ಹೊರಟ ಕಲಾವಿದರು ದೇಹವನ್ನು, ಮನಸ್ಸನ್ನು ಪ್ರತಿನಿಧಿಸುವಲ್ಲಿ ಸೋಲುತ್ತಾರೆ ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ.

೨೦೦೪ರಲ್ಲಿ ರಚನೆಯಾದ ಈ ಕಲಾಕೃತಿಯು ತೈಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಹಿನ್ನೆಲೆಯಲ್ಲಿ ದಟ್ಟವಾದ ಕಪ್ಪು ಬಣ್ಣವನ್ನು ಹೊಂದಿದ್ದು ಮೋಡದ ಘರ್ಷಣೆಗೆ ಮಳೆ ಜಿನುಗುತ್ತಿರುವಂತೆ ಚಿತ್ರಿಸಲಾಗಿದೆ.

೩.೧.೨.೨. ಲಂಬಾಣಿ ಮಹಿಳೆ: ಲಂಬಾಣಿ ಮಹಿಳೆಯ ಕಪ್ಪು ವರ್ಣದ ಮುಖ, ಮೂಗಿನಲ್ಲಿ ನತ್ತು, ಹಣೆ ಮೇಲೆ ಕೆಂಪು ಕುಂಕುಮ, ಮುಖಕ್ಕೆ ಹೊದಿಕೆ ಹಾಕಿಕೊಂಡ ವಸ್ತ್ರ ವಿನ್ಯಾಸ ಕೆಂಪು ಹಳದಿ, ವರ್ಣಗಳಿಂದ ಅಲಂಕೃತಗೊಂಡಿದೆ. ಹೊದಿಕೆ ಬಟ್ಟೆ ನಾಣ್ಯಗಳಿಂದ ಅಲಂಕರಿಸಿದ ಸಂಯೋಜನೆಯನ್ನು ಕಲಾವಿದರು 'ಲಂಬಾಣಿ ಜನ ನೃತ್ಯ ಮಾಡುತ್ತಿರುವ ಸಂದರ್ಭದಲ್ಲಿ ಕಂಡ ದೃಶ್ಯವನ್ನು ಇಲ್ಲಿ ಸೃಜನಾತ್ಮಕ ರೀತಿಯಲಿ ನಿರೂಪಿಸಿದ್ದಾರೆ.

೧೨ X ೧೬ ಇಂಚಿನ ಅಳತೆಯ ಈ ಕಲಾಕೃತಿಯು ೨೦೧೧ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಈ ಕಲಾಕೃತಿಯು ಕಲಾವಿದರ ಸಂಗ್ರಹದಲ್ಲಿದೆ.

೫.೧.೨.೩. ಮೋಡ ಮತ್ತು ಸೂರ್ಯ: ಸಂಜೆಯಾಗುತ್ತಿದ್ದಂತೆ ಕಪ್ಪು ಮೋಡದ ಮುಸುಕಿನಿಂದ ಹೊರ ಬಂದ ಸೂರ್ಯ ಸಂಜೆ ಕೆಂಪು ಸುತ್ತಿಕೊಂಡಿದೆ. ತುಂತುರು ಹನಿ ಅರ್ಧಂಬರ್ಧ ಕಾಮನಬಿಲ್ಲು ಇಬ್ಬರು ಬಾಲಕರು, ಸುತ್ತ ಕಪ್ಪು ವರ್ಣ, ಹೂವುಗಳು ಅರಳಿದಂತೆ ಕಾಣುತ್ತಿವೆ. ಒಟ್ಟಿನಲ್ಲಿ ನಿಸರ್ಗದ ಒಂದು ಸನ್ನಿವೇಶವನ್ನು ಇಲ್ಲಿ ಚಿತ್ರಿಸಿರುವುದು ಕಾಣಬಹುದಾಗಿದೆ.

೧೨ X ೧೬ ಇಂಚಿನ ಅಳತೆಯ ಈ ಕಲಾಕೃತಿಯು ಪೇಪರ್ ಮೇಲೆ ಜಲವರ್ಣದಿಂದ ರಚಿಸಿರುವಂತಹದ್ದಾಗಿದೆ. ೧೯೯೬ರಲ್ಲಿ ರಚಿಸಲಾದ ಕೃತಿಯನ್ನು ಪುಸ್ತಕದ ಮುಖಪುಟದ ಸಂಯೋಜನೆಗೆ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಈ ಕಲಾಕೃತಿಯು ಸಂಗಮೇಶ ಬಾಗೇವಾಡಿಯವರ ಸಂಗ್ರಹದಲ್ಲಿದೆ.

೫.೧.೨.೪. ಯೋಗ : ಮನಸ್ಸು ಯಾವಾಗಲೂ ಶಾಂತ, ಸ್ವಚ್ಛ, ಸದೃಢದಿಂದ ಕೂಡಿರಬೇಕಾದರೆ ಒಳಗೆ ಹುದುಗಿದ ವಿಚಾರ ಲಹರಿಗಳನ್ನು ಏಕಚಿತ್ತದಿಂದ ತಂದು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು. ನಿಸರ್ಗದ ಹಸಿರು ಬಣ್ಣ ಯಾವತ್ತೂ ಮನಸ್ಸಿಗೆ ಮುದ ನೀಡುವಂತಹದ್ದು. ಅದರ ಮಡಿಲಲ್ಲಿ ನಾವು ಎಲ್ಲವನ್ನು ಮರೆತು ಶಾಂತವಾಗಿ ಕುಳಿತಿರುವ ಸನ್ನಿವೇಶ ಆಗ ದ್ವಂದ್ವಗಳೆಲ್ಲ ದೂರ ಸರಿದು ನಮ್ಮ ಮನಸ್ಸು ಉಲ್ಲಾಸಗೊಳ್ಳುತ್ತದೆ. ಇದರಿಂದ ಮಕ್ಕಳಂತೆ ಸದಾ ಉತ್ಸುಕತೆಯಿಂದ ಇರಲು ಸಹಕಾರಿಯಾಗುತ್ತದೆ.

ಪ್ರಸ್ತುತ ಈ ಕಲಾಕೃತಿಯಲ್ಲಿ ಕಲಾವಿದರು ತಮ್ಮ 'ದಿನನಿತ್ಯದ ಮೊದಲನೆಯ ಕಾರ್ಯದ ಕುರಿತಾಗಿ 'ಯೋಗ'ವನ್ನು ತಮ್ಮ ಕಲಾಕೃತಿಯಾಗಿಸಿದ್ದಾರೆ. ಮೂರ್ತರೂಪಕ್ಕೆ ಅಮೂರ್ತದ 'ಟಚ್' ಕೊಟ್ಟಿರುವ ಕೃತಿಯಲ್ಲಿ ಪ್ರಖರ ವರ್ಣಗಳನ್ನು ಬಳಸಿದ್ದರೂ ಕಲಾವಿದರ ಕೌಶಲ್ಯಪೂರ್ಣ ಮಿಶ್ರಣದಿಂದಾಗಿ ಅವುಗಳ ಪ್ರಖರತೆ ಕಡಿಮೆಯಾಗಿದೆ. ಧ್ಯಾನಕ್ಕೆ ಕುಳತಿರುವ ಆಕೃತಿಯ ಮುಖದ ಮುಂದೆ ಕುಂಚದ ದೊಡ್ಡ ದೊಡ್ಡ ಎಳೆತದಿಂದ ಆಕೃತಿಯನ್ನು ಅಸ್ಪಷ್ಟಗೊಳಿಸಿದ್ದರೂ ಕೂಡ ಯೋಗದ ಅನುಭವವನ್ನು ಕೊಡುವಂತಿದೆ.

೨X೨ ೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೯ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ.

೫.೧.೨.೫. ಚೌಕಟ್ಟಿನೊಳಗೆ: ಕಪ್ಪು ಬಿಳುಪು ವರ್ಣಗಳ ಮೇಳೈಕೆಯಿಂದ ರಚಿಸಿದ ಕೃತಿ ಒಂದು ಚೌಕಟ್ಟಿನಲ್ಲಿ ಕಲಾವಿದರದೇ ಸ್ವ ಭಾವಚಿತ್ರವಿದೆ. ಚೌಕಟ್ಟಿನ ಹೊರಗೆ ನಾನಾ ಮುಖಗಳು ಬಾಲ್ಯಾವಸ್ಥೆಯಿಂದ ಮುಪ್ಪಾವಸ್ಥೆಯವರೆಗೆ ಬಂದು ಹೋಗುವ ಹಲವಾರು ಸಮಸ್ಯೆ, ಘಟನೆಗಳಿಗೆ ತಲೆ ಎತ್ತಿ ನಿಲ್ಲಬೇಕೆಂಬುದನ್ನು ತೋರಿಸುವ ಕೃತಿ ಇದಾಗಿದೆ. ಜೀವನದಲ್ಲಿ ಸುತ್ತ ಕತ್ತಲೆ ಹೆಣೆದು

ಕೊಂಡಿದ್ದರೂ ಬೆಳಕೊಮ್ಮೆ ಕಾಣಲೇಬೇಕು. ಅದೇ ರಾತ್ರಿ ಇದ್ದಲ್ಲಿ ಹಗಲು ಇರುತ್ತದೆ. ದುಃಖ-ಅಸಂತೋಷಗಳಿದಲ್ಲಿ ಸುಖ ಸಂತೋಷಗಳು ಬಂದೇ ಬರುತ್ತವೆ ಎಂದು ಸೂಚಿಸುವ ಈ ಕಲಾಕೃತಿಯಲ್ಲಿ ಪ್ರಖರವಾದಂತಹ ವರ್ಣಸಂಯೋಜನೆ ಮಾಡಿದ್ದಾರೆ.

೨X೨೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೬ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚನೆ ಮಾಡಿದ್ದಾರೆ. ಇಲ್ಲಿ ಕಲಾವಿದರು ತಮ್ಮ ಮನಸ್ಸಿನ ತೊಳಲಾಟದ ಭಾವನೆಗಳ ವಿವಿಧ ಮುಖಗಳನ್ನು ಹೊರ ಹಾಕಿದ್ದಾರೆ. ಕಲಾಕೃತಿಯು ಕಲಾವಿದರ ಸಂಗ್ರಹದಲ್ಲಿದೆ.

೫.೧.೨.೬. ಶಾರ್ಪ್: ತೆಳ್ಳಗಿನ ಹಸಿರು ಭೂಮಿ ಅದರಲ್ಲಿ ಒಂದು ಹಸಿರು ಪಾಪಸುಕಳ್ಳಿ ಬೆಳೆಯುತ್ತಿದೆ. ಅದು ತನ್ನ ಮೈತುಂಬ ಅತ್ಯಂತ ಸೂಕ್ಷ್ಮ ಮುಳ್ಳುಗಳನ್ನು ಹೊಂದಿದೆ. ಅವು ಕಣ್ಣಿಗೆ ಕಾಣದಷ್ಟು 'ಶಾರ್ಪ್' ಇರುವುದನ್ನು ಕಲಾವಿದರು ತಮ್ಮದೇ ಪರಿಕಲ್ಪನೆಯಲ್ಲಿ ಮುಳ್ಳನ್ನು ತೋರಿಸದೇ ಬಿಳಿವರ್ಣದಿಂದಲೇ ಅದರ ಪರಿಣಾಮವನ್ನು ಮೂಡಿಸಿದ್ದಾರೆ. ಹಿನ್ನೆಲೆಯ ತೆಳು ನೀಲಿ ಮಿಶ್ರಿತ ಬಿಳಿ ಬಣ್ಣವು ಮುಖ್ಯ ಆಕೃತಿಗೆ ಪೂರಕವಾಗುವಂತೆ ವರ್ಣ ಸಂಯೋಜನೆ ಮಾಡಿರುವುದು ಕಂಡುಬರುತ್ತದೆ.

೧೬ X ೨೦ ಇಂಚು ಅಳತೆಯ ಈ ಕಲಾಕೃತಿಯು ೧೯೯೩ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದು ಬಿಜಾಪುರದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಯುವ ಕಲಾವಿದರ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಕೃತಿ ಇದಾಗಿದೆ.

೫.೧.೨.೭. ಓಜೋನ್ ಹೋಲ್: ಈ ಕಲಾಕೃತಿಯಲ್ಲಿ ಮಾಧ್ಯಮಗಳ ಮುಖಾಂತರ ಬಂದ ತಾಪಮಾನದ ಕುರಿತಾದ ವರದಿಗಳನ್ನು ಓದಿ ಮಾಡಿದಂತಹ ಕಲಾಕೃತಿಯಾಗಿದೆ.

ಕಪ್ಪು ಆಕಾಶದಲ್ಲಿ ಉಗ್ರರೂಪದ ಸೂರ್ಯ, ಶಾಂತ ಮತ್ತು ತಂಪು ವರ್ಣದ ಬೂದು ಬಣ್ಣ ಅದರ ಮಧ್ಯವೊಂದು ರೇಖೆ ಅದನ್ನು ದಾಟಿ ಬರುತ್ತಿರುವ ಮತ್ತೊಂದು ರೇಖೆ. ಇವು ಸೂರ್ಯನ ಪ್ರಖರ ಕಿರಣಗಳು, ಅವುಗಳು ಬಂದು ಭೂಮಿಯಲ್ಲಿ ಬೆಳೆದಿರುವ ಸಸಿ ಒಣಗಿ ನಿಂತಿರುವುದು, ತಾಪ ತಡೆಯಲಾರದೆ ಒಂದು ಕೈ ಮೇಲೆ ಮಾಡಿದೆ. ಮುಂದೆ ಘಟಿಸುವ ಉಗ್ರರೂಪದ ಅನುಭವವನ್ನು ನೀಡುವ ಕೆಂಪು ವರ್ಣದ ಹಿನ್ನೆಲೆ. ಅದು ಭೂಮಿಯಲ್ಲಿ ಹರಡುತ್ತಿದೆ. ಯುವಕನೊಬ್ಬ ಚಿಟ್ಟೆಯಂತೆ ಹಾರುವ ಮನಸ್ಥಿತಿಯಲ್ಲಿ ಬೆಂದಿದ್ದಾನೆ. ಕಪ್ಪೆಯು ಶಕೆಯ ತಾಪಕ್ಕೆ ಗಾಳಿಗೆ ಮೈಯೊಡ್ಡಿ ಕುಳಿತಿರುವಂತೆ ರಚಿಸಲಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಬಹು ಚರ್ಚಿತ ವಿಷಯವಾದ ಜಾಗತಿಕ ತಾಪಮಾನದ ವಸ್ತು ವಿಷಯವನ್ನು ಕಲಾವಿದರು ತಮ್ಮ ಮನದಾಳದ ತುಡಿತವನ್ನು ಕಲಾಕೃತಿಯಾಗಿಸಿ ಜನರಲ್ಲಿ ಅದರ ಅರಿವು ಮೂಡಿಸಲು ಹೊರಟಿರುವಂತಿದೆ.

೨X೨ ೧/೨ ಅಡಿ ಅಳತೆಯ ಈ ಕಲಾಕೃತಿಯು ೨೦೦೯ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವಂತದ್ದಾಗಿದೆ.

೫.೧.೨.೮. ನನ್ನ ಮನೆ: ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ರಸ್ತೆ ಬದಿಗೆ ಒಂದು ಒಣಗಿದ ಮರ ನಿಂತಿತ್ತು. ಪಕ್ಷಿಯೊಂದು ಅದರಲ್ಲಿಯೇ ವಾಸವಾಗಿರುವುದನ್ನು ಗಮನಿಸಿದ ಕಡೇಮನಿಯವರು ಆ ಆನಂದದ ಅನುಭೂತಿಯನ್ನು ಇಲ್ಲಿ ಕಲಾಕೃತಿಯಾಗಿಸಿದ್ದಾರೆ.

ಇಲ್ಲಿ ಒಂದು ಒಣಗಿದ ಮರದ ಮೇಲೆ ಹಕ್ಕಿಯೊಂದು ತನ್ನ ಬಾಯಲ್ಲಿ ಕಾಳನ್ನು ಹಿಡಿದು ತನ್ನ ಮರಿಗಳಿಗೆ ಆಹಾರ ಒದಗಿಸುವ ಸಂದರ್ಭ ಅದು. ಅದೇ ಗಿಡದ ಪೊದೆಯಲ್ಲಿ ತನ್ನ ಗೂಡು ಇದೆ ಎಂದು ಸೂಚಿಸುವಂತೆ ಮುಖಮಾಡಿ ಕುಳಿತಿದೆ. ಈ ಹಿಂದೆ ಹಸಿರಾಗಿದ್ದ ಈ ಮರ ಹಲವಾರು ಪಕ್ಷಿಗಳಿಗೆ ಆಶ್ರಯ ನೀಡಿದ್ದು ಈಗ ಒಣಗಿ ನಿಂತಿದೆ. ಹಿನ್ನೆಲೆಯ ಸಂಜೆ ಹೊತ್ತಿನ ಮೋಡ ಕವಿದಂತೆ ಕಂಡುಬರುವ ವರ್ಣಸಂಯೋಜನೆಯಲ್ಲಿ ಒಣಗಿದ ಮರದ ಪಕ್ಕದಲ್ಲಿಯೇ ಇನ್ನೊಂದು ಒಣಗಿದ ಮರವಿದೆ. ಎರಡರ ನಡುವೆ ಜೇಡರ ಹುಳು ಒಂದು ಬಲೆಯನ್ನು ಹೆಣೆದು ತನ್ನ ಗೂಡು ತಯಾರಿಸಿಕೊಂಡಿರುವಂತೆ ಚಿತ್ರಿಸಲಾಗಿದೆ. ಹಿಂದೆ ಹಸಿರಾಗಿದ್ದ ಗಿಡಕ್ಕೆ ಪೂಜಿಸಿ ಸುತ್ತಿದ ದಾರ ಇನ್ನೂ ಮರೆಯಾಗಿಲ್ಲವೆಂಬಂತೆ ಕಡೇಮನಿಯವರು ತಮ್ಮ ಗುಣಾತ್ಮಕ ಸಂಯೋಜನೆ ಈ ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ.

೨ X ೨೧/೨ ಅಡಿ ಅಳತೆಯ ಕಲಾಕೃತಿಯು ೨೦೦೬ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚನೆ ಮಾಡಿದ್ದಾರೆ. ಪ್ರಸ್ತುತ ಈ ಕೃತಿಯು ಧಾರವಾಡದ ಪ್ರೊ.ಬಿ.ಬಿ.ಬಿರಾದಾರ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ.

೫.೧.೨.೯. ಬಾರೋ ಸಾಧನಕೇರಿಗೆ: ಕರ್ನಾಟಕ ಲಲಿತ ಕಲಾ ಆಕಾಡೆಮಿಯು ಧಾರವಾಡದಲ್ಲಿ ಹಮ್ಮಿಕೊಂಡ ಕಲಾಶಿಬಿರದಲ್ಲಿ ರಚಿಸಲಾದ ಕಲಾಕೃತಿಯಿದು. ವರಕವಿ ದ.ರಾ.ಬೇಂದ್ರೆಯವರ 'ಬಾರೋ ಸಾಧನಕೇರಿಗೆ' ಎನ್ನುವ ನುಡಿಗಳಿಗನುಸಾರವಾಗಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ದಟ್ಟ ಕಪ್ಪು ವರ್ಣದಲ್ಲಿ ಬೂದುಬಣ್ಣದ ಆಕಾಶ ಹೊಂದಿರುವ ಕೃತಿಯಲ್ಲಿ ಹೂಗಳಿಂದ ತುಂಬಿದ ನಿಸರ್ಗ ಯಾವತ್ತು ಮೋಡಗಳಿಂದ ಆವರಿಸಿರುವಂತೆ ಧಾರವಾಡದ ಪರಿಸರವನ್ನು ಕಲಾವಿದರು ಅನುಭವಿಸಿ, ಆಸ್ವಾದಿಸಿ ಕೃತಿಗಿಳಿಸಿದ್ದಾರೆ. ದಟ್ಟ ಹಸಿರು ಪರಿಸರದಲ್ಲಿ ದ.ರಾ.ಬೇಂದ್ರೆಯವರ ಮನೆ, ಹೆಜ್ಜೇನು ಗೂಡು ಮತ್ತು ಮುಂಬದಿಯಲ್ಲಿ ಕೆರೆಯನ್ನು ಅಮೂರ್ತ ರೂಪದಲ್ಲಿ ಮೂರ್ತ ರೂಪವನ್ನು ತೋರಿಸಲು ಪ್ರಯತ್ನಿಸಿದ್ದಾರೆ. ಈ ಕೃತಿಯಲ್ಲಿ ಅಬ್‌ಸ್ಟ್ರಾಕ್ಟ್ ತಂತ್ರಗಳನ್ನು ಒಳಗೊಂಡಿದ್ದರೂ ನೈಜತೆಯ ಕಲ್ಪನೆ ಮೂಡಿಸಿರುವಂತೆ ತೋರುತ್ತದೆ.

೨೧/೨ X ೩ ಅಡಿ ಅಳತೆಯ ಈ ಕಲಾಕೃತಿಯು ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಪ್ರಸ್ತುತ ಈ ಕಲಾಕೃತಿ ದ.ರಾ.ಬೇಂದ್ರೆ ಭವನದಲ್ಲಿದೆ.



ಸೃಜನೇತರ ಸಂಯೋಜನ ಚಿತ್ರಗಳು



ತಾಯಿ ಪ್ರೀತಿ



ಬೆಳಗು



ವಯಸ್ಸಿನ ಗುಟ್ಟು



ಆತುರ



ಹಾಲು ಮತ್ತು ಬೆಣ್ಣೆ



ನನ್ನ ಹಳ್ಳಿ (ಬೆಳಗು)



ಉದ್ಯೋಗ, ವಿಶ್ರಾಂತಿ





ಕತ್ತೆ ಮದುವೆ



ಮಣ್ಣೆತ್ತಿನ ಅಮವಾಸಿ



ಕಾರ ಹುಣ್ಣಿಮೆ





ಸೂರ್ಯೋದಯ



ಗೋಧೂಳಿ ಸಮಯ



ಬದುಕು





ಸಂಜೆ ಹೊತ್ತು



ಪಶುಪಾಲನೆ





ರೈತ ಮತ್ತು ಎತ್ತುಗಳು



ರೈತ ಮತ್ತು ಮಹಿಳೆ

ಸೃಜನಾತ್ಮಕ ಸಂಯೋಜನಾ ಚಿತ್ರಗಳು



ಶೀರ್ಷಿಕೆ ರಹಿತ ಕಲಾಕೃತಿ



ಲಂಬಾಣಿ



ಮೋಡ ಮತ್ತು ಸೂರ್ಯ



ಕಾಮನ ಬಿಲ್ಲು



ಯೋಗಿ



ಚೌಕಟ್ಟಿನೊಳಗೆ



ಶಾರ್ಪ



ಓಜೋನ್ ಹೋಲ್



ನನ್ನ ಮನೆ



ಬಾರೋ ಸಾಧನಕೇರಿಗೆ

೫.೨. ಭಾವಚಿತ್ರಗಳು

ಭಾವಚಿತ್ರವೆಂದರೆ ನಿಜವಾದ ಅಥವಾ ಕಾಲ್ಪನಿಕ ಜೀವಂತ ಅಥವಾ ಸತ್ತವ್ಯಕ್ತಿ ಒಬ್ಬರ ಚಿತ್ರ, ಸೆಲ್ಪ್ ಅಥವಾ ರೇಖಾಚಿತ್ರ, ಛಾಯಾಚಿತ್ರ ಮೂಡಿಬರುವ ಪ್ರತಿಬಿಂಬವೆಂದು, ಆಂಗ್ಲ ಭಾಷೆಯಲ್ಲಿ 'Portrait' ಎಂದು ಕರೆಯುತ್ತಾರೆ.

"ಲ್ಯಾಟಿನ್ ಭಾಷೆಯ ಕ್ರಿಯಾಪದ Protohoವನ್ನು ಮಧ್ಯಯುಗದಲ್ಲಿ 'ಪುನರ್‌ಸೃಷ್ಟಿಸು' ಅಥವಾ 'ನಕಲು ಮಾಡು' ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. ೧೮ನೆಯ ಶತಮಾನದಲ್ಲಿ ಫ್ರೆಂಚ್ ಭಾಷೆಯ Po(u)rtrair ಬಳಕೆಯಲ್ಲಿಲ್ಲದೆ ಹೋಯಿತು. 'Portrait' ೧೨ನೆಯ ಶತಮಾನದಿಂದ ಬಳಕೆಯಲ್ಲಿದೆ. 'Portrai(c)ture' ೧೨ ಮತ್ತು ೧೩ನೆಯ ಶತಮಾನಗಳಿಂದ ಬಳಕೆಯಲ್ಲಿದೆ. ಹೀಗಾಗಿ ಇಂಗ್ಲೀಷಿನ "Portray" "Portrait" ಮತ್ತು 'Portriture' ಜರ್ಮನ್ ಭಾಷೆಯ 'Portrat' ಮತ್ತು ರಷ್ಯನ್ ಭಾಷೆಯ 'Portret' ಪದಗಳೂ ಬಳಕೆಯಲ್ಲಿವೆ."[೨]

ಈ ಭಾವಚಿತ್ರ ರಚನೆಯು ಆ ಕಾಲದಲ್ಲಿ ತೀರ ಸಾಧಾರಣ ಕೆಲಸವಾಗಿತ್ತು. ಮತ್ತು ಇಂದಿನಂತಲ್ಲದೆ ಅಂದು ಭಾವಚಿತ್ರ ರಚನೆಯು ಕಲಾವಿದನ ವೃತ್ತಿ ಗೌರವಯುತವಾದ ಪ್ರಮುಖ ಅಂಗವಾಗಿತ್ತು. ಇಂದು ಭಾವಿಚಿತ್ರ ರಚನೆಕಾರನ ವೃತಿಯನ್ನು ಯಾರೂ ಗೌರವದಿಂದ ನೋಡುವುದಿಲ್ಲ. ಹಾಗೂ ಭಾವಚಿತ್ರ ರಚನೆ ವಾಣಿಜ್ಯ ಕಲೆಯ ಒಂದು ಭಾಗವಾಗಿ ಗುರುತಿಸುವ ಸಂಪ್ರದಾಯ ಬೆಳೆದು ನಿಂತಿದೆ. ಭೂದೃಶ್ಯ ರಚನೆ, ಒಳಾಂಗಣ ಸೌಂದರ್ಯಕಾರನ ವೃತ್ತಿಗಳ ತರಹ, ಇಂಥಲ್ಲಿ ಚಿತ್ರಕಾರರು ಶ್ರೀಮಂತರೊಂದಿಗೆ, ಸಾಮಾಜಿಕ ಚಟುವಟಿಕೆ ಸಂಪರ್ಕಗಳು ಅವನ ಚಿತ್ರ ರಚನಾ ಕೌಶಲ್ಯಕ್ಕಿಂತ ವಿಶೇಷ ಮೇಲುಗೈ ಪಡೆಯುತ್ತವೆ. ಆದರೆ ಆ ಕಾಲದ ಭಾವಚಿತ್ರ ರಚನೆಕಾರರನ್ನು ಯಾರೂ ಕೀಳಾಗಿ ಕಾಣುತ್ತಿರಲಿಲ್ಲ. ಮಾನವೀಯ ವ್ಯಕ್ತಿತ್ವದ ಶೀಲ, ಚಾರಿತ್ರಿಕ ವೈವಿಧ್ಯತೆಗಳನ್ನು ದಾಖಲಿಸುವುದಷ್ಟೇ ಅವನ ಕೆಲಸವಾಗಿತ್ತು.

ಪ್ರಸ್ತುತ ದಿನಮಾನಗಳಲ್ಲಿ ಕಾಸಿದ್ದವರು ಯಾರು ಬೇಕಾದರು ಭಾವಚಿತ್ರವನ್ನು ಬರೆಸಿಕೊಳ್ಳ ಬಹುದಾದ್ದರಿಂದ ಪ್ರತಿಯೊಂದು ದೊಡ್ಡ ಕುಟುಂಬದಲ್ಲೂ ಆ ಮನೆತನದ ಸದಸ್ಯರ ಭಾವಚಿತ್ರಗಳ ಖಾಸಗಿ ಸಂಗ್ರಹವೊಂದು ಇರುತ್ತಿದ್ದು, ಅದು ಆ ಮನೆತನದ ರೀತಿ, ನೀತಿ, ಪ್ರತಿಷ್ಠೆಗಳನ್ನು ಬಿಂಬಿಸುತ್ತಿತ್ತು. ಹಲವು ಚಿಕ್ಕಮಕ್ಕಳ ಚಿತ್ರವಿರುವ ಮನೆಯೆಂಬುದು ಆ ಕುಟುಂಬವು ಸ್ತ್ರೀಯರ ಮೇಲಾಡಳಿತದಲ್ಲಿದೆ ಎಂಬುದನ್ನು ಸೂಚಿಸಿದರೆ, ಗಂಭೀರ ಪಕ್ವವಾದ ವೃದ್ಧರ ಚಿತ್ರಗಳಿರುವ ಮನೆಗಳು ಅಂತಹ ಕುಟುಂಬಕ್ಕೆ ತಮ್ಮ ಮನೆತನದ ಚಾರಿತ್ರಿಕ ಪ್ರಾಮುಖ್ಯತೆಯ ಅರಿವಿತ್ತೆಂಬುದನ್ನು ಸೂಚಿಸುವುದು. ಅಂಥ ಸಂಸಾರದ ಪ್ರತಿಯೊಬ್ಬರೂ ಚಿತ್ರ ಬರೆಸಿಕೊಳ್ಳುವ ತನ್ನ ಸರದಿಗಾಗಿ ಕಾಯುತ್ತಿದ್ದ. ಆ ವ್ಯಕ್ತಿ ತನ್ನ ಕಾರ್ಯದಿಂದ ಸಂಸಾರದಲ್ಲಿ ಒಂದು ಸ್ಥಾನ ದಕ್ಕಿಸಿಕೊಳ್ಳುವವರೆಗೂ ನಿರೀಕ್ಷಣೆ ಮಾಡುತ್ತಿದ್ದ. ಅವನೇ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗುವ ಸಂಭವದಲ್ಲಿ ಈ ಚಿಂತೆ

ಇರುತ್ತಿರಲಿಲ್ಲ. ಭಾವಚಿತ್ರಗಳು ಬಹಳ ದುಬಾರಿ ಹಾಗೂ ಅಪಾರ ಶ್ರಮ, ಸಮಯವನ್ನು ಬೇಡುವ ಸಂಗತಿಯಾದ್ದರಿಂದ ಈ ಕಷ್ಟಗಳು ಎದುರಗುತ್ತಿದ್ದವು.

ರಚಿಸಲು ಬಹಳ ಚಿತ್ರಗಳಿದ್ದಷ್ಟೇ ಕಾರಣಗಳೂ ಇದ್ದವು ರಾಜರು ಪ್ರಜೆಗಳಿಗೆ ತಮ್ಮ ಮುಖ ಪರಿಚಯ ತಿಳಿಯಲೆಂದು ಭಾವಚಿತ್ರ ಬರೆಯಿಸುತ್ತಿದ್ದರು. ಈ ಚಿತ್ರಗಳನ್ನು ಆಗಿಂದ್ದಾಗ್ಗೆ ಪ್ರತಿಗಳನ್ನು ಮಾಡಬೇಕಾಗುತ್ತಿತ್ತು. ಭಾವಚಿತ್ರಗಳನ್ನು ಒಂದು ಕುಟುಂಬದಿಂದ ಮತ್ತೊಂದಕ್ಕೆ ಗೌರವಾರ್ಥವಾಗಿಯೋ, ಯುವರಾಜನ, ಯುವರಾಣಿಯರ ಭಾವಚಿತ್ರಗಳನ್ನು ಮದುವೆ ಮಾತುಕತೆಯ ಮುನ್ನ ಪೀಠಿಕೆಯಾಗಿಯೋ ವಿನಿಮಯ ಮಾಡಿಕೊಳ್ಳಲಾಗುತ್ತಿತ್ತು. ಖಾಸಗಿ ಭಾವಚಿತ್ರ ಸಂಗ್ರಹಾಲಯವು ಮನೆತನದ ತಲೆಮಾರಿನ ದಾಖಲೆಯಂತೆ ಕೆಲಸ ಮಾಡುತ್ತಿತ್ತು.

ವಿಕ್ಟೋರಿಯನ್ ಸಮಯದಲ್ಲಿ ಡಾಗೆರೋ ಟೈಪ್‌ಗಳನ್ನು (ಛಾಯಾ ಸಂಗ್ರಹದ ಮೊದಲ ಅವಸ್ಥೆಗೆ ಈ ಹೆಸರು) ಸಂಬಂಧಿಕರ ಮನೆಗೆ ಕಳುಹಿಸುವ ವಾಡಿಕೆ ಇತ್ತು. ಇಂದು ಭಾವಚಿತ್ರಗಳನ್ನು ತೆಗೆಯುವ ಛಾಯಾಗ್ರಾಹಕರಿರುವ ಭರವನ್ನು ನೋಡಿದರೆ, ಆ ಕಾಲದಲ್ಲಿ ಕಲಾವಿದರು ರಚಿಸಿದ ಭಾವಚಿತ್ರಗಳ ಸಂಖ್ಯೆ ಆಶ್ಚರ್ಯ ತರುವುದಿಲ್ಲ. ಏಕೆಂದರೆ ಛಾಯಾಗ್ರಹಣದ ಅನ್ವೇಷಣೆಗೆ ಮೊದಲು ಭಾವಚಿತ್ರ ರಚನೆಯೆಂಬುದು ಪ್ರತಿಯೊಬ್ಬ ಕಲಾವಿದನಿಗೂ ಮಾಡಲು ಕಲಿಯಬೇಕಾಗಿದ್ದು ಕೆಲಸವಾಗಿತ್ತು.

ಭಾವಚಿತ್ರ ರಚನೆ ನೋಡುಗನಿಗೆ ಸಾಧಾರಣವೆನಿಸಿದರೂ, ಕಲಾವಿದನಿಗೆ ಎರಡೂ ಸುಲಭದ ಕೆಲಸವಾಗಿರಲಿಲ್ಲ. ಇತರ ರೀತಿಯ ಚಿತ್ರರಚನೆಗಳನ್ನು ಪೂರ್ಣ ಕೋಣೆಯಲ್ಲಿ ಅಲ್ಲವಾದರೂ ಮನಸ್ಸಿನ ಮೂಲೆಯೊಂದರಲ್ಲಿ ಚಿಂತಿಸುತ್ತಲೇ ಚಿತ್ರ ಪೂರ್ಣವಾದ ಮೇಲೆ ಅದನ್ನು ಸಾರ್ವಜನಿಕ ಟೀಕೆಗೆ ತೆಗೆದಿಡಬೇಕು. ಆದರೆ ಭಾವಚಿತ್ರ ಪ್ರದರ್ಶನ. ಜನರ ಮುಂದೆ ಹಾಡುವ ಗಾಯಕನಂತೆ, ನಟಿಸುವ ನಟನಂತೆ, ಪ್ರೇಕ್ಷಕರಿಂದ ತತಕ್ಷಣ ಪ್ರತಿಕ್ರಿಯೆ ಲಭಿಸುತ್ತದೆ. ಇಲ್ಲಿ ಕಲಾವಿದ ತನ್ನ ನಿರ್ಧಾರಗಳೊಂದಿಗಷ್ಟೇ ಅಲ್ಲದೆ ರೂಪದರ್ಶಿಯ ವ್ಯಕ್ತಿತ್ವದೊಂದಿಗೂ ಸೆಣಸಬೇಕಾಗುತ್ತದೆ. ಚಿತ್ರರಚನೆಯ ಸಾಮಾನ್ಯ ಸಮಸ್ಯೆಗಳೊಂದಿಗೆ ಇಲ್ಲಿ ಚಿತ್ರದ ವಸ್ತುವೇ ಚಿತ್ರ ಪ್ರಥಮ ಟೀಕಾಕಾರನು, ವಿಮರ್ಶನೂ ಆಗುವ ಸಂಗತಿ ಬಹಳ ಸಂಕಟಕ್ಕೀಡು ಮಾಡುತ್ತದೆ. ಮುಂದುವರಿದು ರೂಪದರ್ಶಿಯನ್ನು ಚಿತ್ರಿಸುವುದಷ್ಟೇ ಅಲ್ಲದೆ ಅವನನ್ನು ತೃಪ್ತಿಪಡಿಸಬೇಕು, ಸಂತೋಷಪಡಿಸಬೇಕು.

ಭಾವಚಿತ್ರವು ಎಲ್ಲ ಚಿತ್ರಣದಂತಲ್ಲ. ಇಲ್ಲಿ ಮುಂದೆ ಇರುವ ರೂಪದರ್ಶಿಯಾಗಿರಬಹುದು ಅಥವಾ ಛಾಯಾಚಿತ್ರವಾಗಿರಬಹುದು ಅದನ್ನು ಕಣ್ಣಿಗೆ ಕಂಡಂತೆ ನೆರಳು ಬೆಳಕು ತುಂಬಿಸಿ ಚಿತ್ರಿಸುವುದಲ್ಲ ಅಥವಾ ನಿಗದಿತ ಅಂಗಾಂಗಗಳನ್ನು ಹೊಂದಿದ ಮನುಷ್ಯರೂಪದ ಸಾಮಾನ್ಯ ಚಿತ್ರಣವೂ ಅಲ್ಲ, ರೂಪದರ್ಶಿಯನ್ನು, ಛಾಯಾಚಿತ್ರವನ್ನು ಹೋಲದಿದ್ದರೆ, ಅದು ಒಳ್ಳೆಯ

ಭಾವಚಿತ್ರವಲ್ಲ. ಆದರೆ ಇಲ್ಲಿ ರೂಪದರ್ಶಿಯ ಬಾಹ್ಯದ ರೂಪರೇಷೆಗಳ ಹೋಲಿಕೆಯಷ್ಟನ್ನೇ ಹಿಡಿದಿಡುವುದಿಲ್ಲ, ಅವನ ಒಟ್ಟಾರೆ ವ್ಯಕ್ತಿತ್ವದ, ಶೀಲದ ಪಡೆಯಾಡಬೇಕು. ಇಷ್ಟಾದರೂ ಆ ಚಿತ್ರವ್ಯಕ್ತಿಯ ಪೂರ್ಣಪ್ರತಿಬಿಂಬವಾಗುವುದೇ ಇಲ್ಲ. ಕೇವಲ ಒಂದು ದೃಷ್ಟಿಕೋನದಿಂದ ನೋಡಿ ದಾಖಲಿಸಿದ ಅಂಕನೆಯಾಗುತ್ತದೆ. ಆದರೆ ಛಾಯಾಚಿತ್ರಗ್ರಹಣಕ್ಕೆ ಇಷ್ಟು ಸಾಧ್ಯವಾಗದು. ಏಕೆಂದರೆ ಅದು ತನ್ನ ರೆಪ್ಪೆ ತೆಗೆದು ಮುಚ್ಚುವಷ್ಟರಲ್ಲಿ ಕಂಡ ಭಾವದ, ನೆರಳು ಬೆಳಕಿನ ವರ್ಣದ ಹಂಚಿಕೆಯನ್ನು ದಾಖಲಿಸುತ್ತದೆ.

ಸಾಮಾನ್ಯವಾಗಿ ರೂಪದರ್ಶಿಯಾಗಿ ಕುಳಿತವರು ಹೆಚ್ಚು ಪ್ರಭಾವವನ್ನು ವರ್ಚಸ್ಸನ್ನು ಬೀರುತ್ತಾರೆ. ಮೇಲಾಗಿ ಸಾಹುಕಾರನು, ಪ್ರತಿಷ್ಠರು ಮಾತ್ರ ಚಿತ್ರವನ್ನು ಬರೆಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಅದಕ್ಕಾಗಿ ಅವರು ಧನವನ್ನು ಸಹ ನೀಡುತ್ತಾರೆ. ಏನೇ ಆದರೂ ರೂಪದರ್ಶಿಯಾದವರಿಗೆ ಹಿಡಿಸಿದ ಸರಿಕಾಣದ ಚಿತ್ರವನ್ನು ನೇತು ಹಾಕುವ ಪ್ರಶ್ನೆಯೇ ಇಲ್ಲ. ಈ ಎಲ್ಲ ಕಾರಣಗಳಿಂದ ರೂಪದರ್ಶಿಗೆ ಚಿತ್ರವನ್ನು ವಿಮರ್ಶಿಸುವ, ಅಳೆಯುವ ಪ್ರಥಮ ಅವಕಾಶ ದೊರೆಯುತ್ತದೆ. ಆದರೆ ಒಮ್ಮೊಮ್ಮೆ ಚಿತ್ರಕಾರ ಕೂಡ ಸಮರ್ಥನಾಗಬಲ್ಲ, ಹೇಗೆಂದರೆ ಕಲಾವಿದನ ಹಿಂದೆ ಅವನನ್ನು ಬೆಂಬಲಿಸುವ ಒಂದು ವೃತ್ತಿಪರ ಸಂಸ್ಥೆಯಿದ್ದರೆ, ಕೂಟವಿದ್ದರೆ, ಚಿತ್ರಕಾರ ಸಾಮಾಜಿಕ ಸ್ಥರದಲ್ಲಿ ತೀರ ಕೆಳಗಿದ್ದು, ಅವನ ಅಭಿಪ್ರಾಯಗಳು ಮೇಲ್ವರ್ಗದ ಗಿರಾಕಿಗಳಿಗೆ ಸ್ವಲ್ಪದಕ್ಕೆಯನ್ನುಂಟು ಮಾಡುವ ಸ್ಥಿತಿಯಲ್ಲಿದ್ದರೆ, ಚಿತ್ರಕಾರನ ಸ್ಥಾನ ಸಮಾಜದಲ್ಲಿ ಬಹಳ ಪ್ರಭಾವಿಯಾಗಿದ್ದು ಅವನಿಂದ ಚಿತ್ರ ಬರೆಯಿಸಿಕೊಳ್ಳುವುದೊಂದು ಪ್ರತಿಷ್ಠೆಯ ಕುರುಹಾಗಿದ್ದರೆ ಅಥವಾ ಕಲಾವಿದನ ವಯಸ್ಸು, ಗ್ರಹಿಕೆ, ಜ್ಞಾನ ಇವು ಹೆಚ್ಚಿದ್ದರೂ ಸಹ ಕಲಾವಿದನ ಮೇಲುಗೈಯಾಗುತ್ತದೆ.

ನವ್ಯ ಕಲೆಯ ಉಗಮದೊಂದಿಗೆ ಕಲಾವಿದ ತನ್ನ ಸ್ವಾತಂತ್ರ್ಯವನ್ನು ತೀವ್ರತರದಲ್ಲಿ ಸ್ಥಾಪಿಸ ಹತ್ತಿದ ಈ ಸ್ವಾತಂತ್ರ್ಯದ ಭಾವ ಹಾಗೂ ಚಿತ್ರಕಲೆಯು ತನ್ನ ದಾಖಲಿಸುವ ಆಸಕ್ತಿ ಕಾರ್ಯಗಳು ಛಾಯಾಗ್ರಹಣಕ್ಕೆ ಬಿಟ್ಟುಕೊಟ್ಟಂದಿನಿಂದ ಭಾವಚಿತ್ರ ರಚನೆ ಕಮ್ಮಿಯಾಯಿತೆನ್ನಬಹುದು. ಅಷ್ಟೇ ಅಲ್ಲ, ದಿನಗಟ್ಟಲೇ ಕುಳಿತು ಬರೆಯುವ, ಬರೆಸಿಕೊಳ್ಳುವ ಚಿತ್ರಕ್ಕಿಂತ ಕ್ಷಣಮಾತ್ರದಲ್ಲಿ ರೂಪವನ್ನು ದಾಖಲಿಸುವ ಛಾಯಾಗ್ರಹಣಕ್ಕೆ ಹೆಚ್ಚು ಸುಲಭ ಹಾಗೂ ಶ್ರಮ, ಸಮಯ ಉಳಿತಾಯಕ್ಕೆ ದಾರಿಯಾಗಿ ಎಲ್ಲ ವರ್ಗದ ಜನರೂ ಛಾಯಾಚಿತ್ರದೆಡೆಗೆ ನುಗ್ಗಿದರು. ಇಂದಿಗೂ ಪ್ರತಿಷ್ಠಿತ ವರ್ಗದಲ್ಲಿ ಭಾವಚಿತ್ರಗಳನ್ನು ಕಲಾವಿದರಿಂದ ಬರೆಸಿಕೊಳ್ಳುವ ಒಂದಿಷ್ಟು ಸಂಪ್ರದಾಯ ಉಳಿದುಕೊಂಡು ಬಂದಿರುವುದು ಸಂತೋಷದಾಯಕ ಸಂಗತಿ.

"ಭಾವಚಿತ್ರದ ಕುರಿತಾಗಿ ನಮ್ಮ ಪ್ರಾಚೀನ ಗ್ರಂಥಗಳಾದ 'ನಗ್ನ ಜಿತನ' 'ಚಿತ್ರಲಕ್ಷಣ'ದಲ್ಲಿ ಚಕ್ರವರ್ತಿಗಳ ಚಿತ್ರರಚನೆಯ ವಿವರಗಳಿದ್ದರೆ. 'ವಿಷ್ಣುಧರ್ಮೋತ್ತರ'ದ ಚಿತ್ರಸೂತ್ರದಲ್ಲಿ ವಿವಿಧ ವರ್ಗದ ವ್ಯಕ್ತಿಗಳನ್ನು ಹೇಗೆ ಚಿತ್ರಿಸಬೇಕೆಂಬ ಸೂಚನೆಗಳಿವೆ. 'ನಾರದ ಶಿಲ್ಪ'ದಲ್ಲಿ ಭಾವಚಿತ್ರದ

ಪ್ರಸ್ತಾಪವಿದೆ. ಭವಭೂತಿಯ ಉತ್ತರರಾಮ ಚರಿತ್ರೆ, ವರಾಹ ಮಿಹಿರನ 'ಬೃಹತ್ ಸಂಹಿತೆ', ಕಾಳಿದಾಸನ ಕಾವ್ಯಗಳಲ್ಲಿ ಭಾವಚಿತ್ರ ಪರಂಪರೆಯು ಮುಂದುವರಿದಿದೆ. 'ಶುತ್ರ ನೀತಿಸಾರ'ದಲ್ಲಿ ಭಾವಚಿತ್ರದ ಅಸ್ವರ್ಗೀಯತೆಯ ಬಗ್ಗೆ ಪ್ರಸ್ತಾಪಿಸಲಾಗಿದೆ.

೧೧ ಮತ್ತು ೧೨ನೆಯ ಶತಮಾನದ ಹೊಯ್ಸಳರ ಕಾಲದಲ್ಲಿ ಭಾವಚಿತ್ರ ಪ್ರಕಾರ ಶ್ರೀಮಂತವಾಗಿತ್ತು. ಹಾಗಾಗಿಯೇ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಭಾವಚಿತ್ರಗಳ ಉಲ್ಲೇಖ ಸಾಕಷ್ಟಿದೆ. ಕನ್ನಡ ಕವಿಗಳಾದ ಪೊನ್ನ, ರುದ್ರಭಟ್ಟರು. ಚೀರಘಟ್ಟಿ ಎಂಬ ಜನಪ್ರಿಯ ಕಲಾವಿದನ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಹಾಗೆಯೇ 'ಚಾಂದೋಗ್ಯ ಉಪನಿಷ್ಯತ್', 'ಮೈತ್ರೇಯಿಯ', 'ಉತ್ತರ–ತಂತ್ರ'ಗಳ ಸಾಲಿನಲ್ಲಿ 'ಲಂಕಾವತಾರ ಸೂತ್ರ', 'ಶಿವತತ್ವ ರತ್ನಾಕರ'ಗಳನ್ನೂ ಭಾವ–ಭಾವ ಚಿತ್ರ–ದೈವೀಕರಣ ದೃಷ್ಟಿಗಳಿಂದಾಗಿ ಗಮನಿಸಬಹುದು".[೩]

ಹೀಗೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಭಾವಚಿತ್ರ ರಚನಾ ಸಂಪ್ರದಾಯವನ್ನು ನಮ್ಮಲ್ಲಿ ಎರಡು ರೀತಿಯ ಭಾವಚಿತ್ರ ಪ್ರಕಾರಗಳನ್ನು ಗುರುತಿಸಲಾಗಿದೆ. ಮರಣದ ನಂತರ, ಪುರೋಹಿತ ಸಂಪ್ರದಾಯ ಮತ್ತು ಉದಾತ್ತ ಭಾವನೆಗಳನ್ನು ಹೊಂದಿ ಮೂಡಿಬರುವ ಭಾವಚಿತ್ರಗಳು ಒಂದು ಬಗೆಯಾದರೆ, ಜೀವ ಪರವಾದ, ಮತ, ಧರ್ಮಗಳಿಗೆ ಸಂಬಂಧಿಸಿದ ರಸಭಾವತಿರೇಕದ ಭಾವಚಿತ್ರಗಳು ಮತ್ತೊಂದು ಬಗೆಯವು ಎಂದು ಈ ಎರಡು ಪ್ರಕಾರದ ಭಾವಚಿತ್ರಗಳನ್ನು ಕಾಣಬಹುದು.

ಭಾವಚಿತ್ರ ಎಂದರೆ? ವಿಶಾಲ ಅರ್ಥದಲ್ಲಿ ಹೇಳುವುದಾದರೆ ಕಡೇಮನಿಯವರು ತಮ್ಮ ಭಾವಚಿತ್ರಗಳಲ್ಲಿ ತೈಲವರ್ಣ, ಆಕ್ರಾಟಿಕ್, ಪೊಸ್ಟರ್ ವರ್ಣ, ಪೆನ್ಸಿಲ್, ಪೇಪ್ಟಲ್ ಮುಂತಾದ ವಿವಿಧ ಮಾಧ್ಯಮಗಳನ್ನು ಸಮರ್ಪಕವಾಗಿ ದುಡಿಸಿಕೊಂಡಿದ್ದಾರೆ. ಇವರ ಭಾವಚಿತ್ರಗಳಲ್ಲಿ ಎರಡು ರೀತಿಯ ವಿಧಾನಗಳನ್ನು ಕಾಣಬಹುದು. ಒಂದು ವರ್ಣಗಾರಿಕೆಯಲ್ಲಿ 'ಸ್ಮೂತ್ ಎಫೆಕ್ಟ್' (ನುಣುಪಾದ) ಎರಡನೆಯದು 'ಪ್ಯಾಟ್‌ವರ್ಕ್' ತೇಪೆ ತರಹದ ಬಣ್ಣ ಹಾಕಿರುವುದು. ಜನಸಾಮಾನ್ಯರ ವಾಣಿಜ್ಯ ಭಾವಚಿತ್ರಗಳಲ್ಲಿ ನುಣುಪುಗಾರಿಕೆಯನ್ನು ತೋರಿಸಿದ್ದು. ರೂಪದರ್ಶಿಗಳ ಆಧಾರಿತ ಮತ್ತು ತಾವು ಕಲಿಯುವಾಗ/ಕಲಿಸುವ ಸಂದರ್ಭದಲ್ಲಿ ಹಾಗೂ ಕಲಾಶಿಬಿರ, ಕಲಾ ಪ್ರಾತ್ಯಕ್ಷಿ ನೀಡುವ ಸಂದರ್ಭದಲ್ಲಿ ತಮ್ಮ ಅಂತರಾಳದ ವಿಭಿನ್ನವಾದ ಭಾವನೆಗಳನ್ನು ಅಭಿವ್ಯಕ್ತಿಯ ಭಾವಚಿತ್ರದ ಸಂದರ್ಭದಲ್ಲಿ ತೇಪೆ ಹಾಕಿ ವಿವಿಧ ವರ್ಣಗಳನ್ನು ಲೇಪಿಸಿರುವುದು ಕಂಡುಬರುತ್ತದೆ.

ಇವರು ರಚಿಸಿದ ಕೆಲವು ಪ್ರಮುಖ ಭಾವಚಿತ್ರಗಳನ್ನು ಎರಡು ರೀತಿಯಾಗಿ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

೫.೨.೧. ರೂಪದರ್ಶಿ ಆಧಾರಿತ ಭಾವಚಿತ್ರಗಳು

೫.೨.೨. ಛಾಯಾಚಿತ್ರ ಆಧಾರಿತ ಭಾವಚಿತ್ರಗಳು

೫.೨.೧. ರೂಪದರ್ಶಿ ಆಧಾರತಿ ಭಾವಚಿತ್ರಗಳು

೫.೨.೧.೧. ವಿಕ್ಷಿಪ್ತ ವ್ಯಕ್ತಿಯ ಭಾವಚಿತ್ರ: ೧೯೮೮ರಲ್ಲಿ ರಚಿಸಿರುವಂತಹ ಈ ಭಾವಚಿತ್ರವು ರೂಪದರ್ಶಿ ಆಧಾರಿತ ಭಾವಚಿತ್ರವಾಗಿದೆ. ಕಡೇಮನಿಯವರು ತಮ್ಮ ಸಂಸ್ಥೆಯ ಆವರಣದಲ್ಲಿ ಒಬ್ಬ ವಿಕ್ಷಿಪ್ತ ವ್ಯಕ್ತಿ ಇರುತ್ತಿದ್ದ ಅವನನ್ನು ಕೂಡಿಸಿ ಚಿತ್ರಿಸಿದ ಜಲವರ್ಣ(ಪೋಸ್ಟರ್ ವರ್ಣ)ದ ಈ ಕೃತಿಯು ೧೯೮೮ರಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದಂತಹ ಭಾವಚಿತ್ರವಾಗಿದೆ.

ಪೇಪರ್‌ನ ಅವಕಾಶದಲ್ಲಿ ಪೋಸ್ಟರ್ ವರ್ಣದಿಂದ ರಚಿಸಿರುವ ಕೃತಿಯಲ್ಲಿ ಕುಂಚದ ಎಳೆತಗಳು ವಿಶಿಷ್ಟವಾಗಿ ಮೂಡಿಬಂದಿವೆ. ಹಿನ್ನೆಲೆಯ ತೆಳು ಹಳದಿಯ ಮೇಲೆ ತಮಗೆ ಬೇಕಾದ ರೀತಿಯಲ್ಲಿ ಭಾವಚಿತ್ರ ಸಂಯೋಜನೆ ಮಾಡಿರುವುದು ಕಂಡುಬರುತ್ತದೆ. ಹಳದಿಬಣ್ಣದ ಬಟ್ಟೆ ತೊಟ್ಟಿರುವ ವ್ಯಕ್ತಿಯು ತಲೆಯ ಮೇಲೆ ಅದೇ ವರ್ಣದ ಟೋಪಿ ಧರಿಸಿದ್ದಾನೆ. ಹಿನ್ನೆಲೆಯ ಬಣ್ಣ ಮತ್ತು ವಸ್ತ್ರದ ಬಣ್ಣ ಎರಡೂ ಒಂದೇ ಇದ್ದರೂ ಅವುಗಳು ಬೇರೆ ಬೇರೆ ಎನ್ನುವಂತೆ ನೆರಳು ಬೆಳಕಿನ ವ್ಯತ್ಯಾಸವನ್ನು ಕುಂಚದ ದೊಡ್ಡ ದೊಡ್ಡ ಎಳೆತಗಳನ್ನು ಭಾವಚಿತ್ರಕ್ಕೆ ಹೊಂದಿಕೊಳ್ಳುವಂತೆ ನೆರಳು–ಬೆಳಕನ್ನು ಕ್ರೂಢೀಕರಿಸಿರುವುದು ಕಡೇಮನಿಯವರ ತಂತ್ರದ ಬಹುಮುಖ್ಯ ಅಂಶವಾಗಿದೆ.

ವಿಕ್ಷಿಪ್ತ ವ್ಯಕ್ತಿಯ ಮುಖದಲ್ಲಿನ ಹಾವ, ಭಾವಗಳನ್ನು ಯಥಾವತ್ತಾಗಿ ಮೂಡಿಬರುವಂತೆ ಕಡೇಮನಿಯವರು ತಮ್ಮ ವರ್ಣ ವಿನ್ಯಾಸ ಮತ್ತು ಕುಂಚದ ಎಳೆತಗಳ ಮೇಲೆ ಹಿಡಿತ ಸಾಧಿಸಿದ್ದು ವಿಭಿನ್ನ ಆಯಾಮದಲ್ಲಿ ಕುಂಚದ ಎಳೆತಗಳು ಮೂಡಿರುವುದು ಕಂಡುಬರುತ್ತದೆ. ಬಿಳಿ ಗುಡ್ಡ ಹೊಂದಿರುವ ವ್ಯಕ್ತಿಯ ಮುಖ ಮುಖಭಾವದಲ್ಲಿ ತೀಕ್ಷ್ಮ ನೋಟ, ಎದ್ದು ಕಾಣುತ್ತದೆ.

೫.೨.೧.೨. ಎಂ.ಎ.ಚಟ್ಟಿಯವರ ಭಾವಚಿತ್ರ: ಈ ಭಾವನಚಿತ್ರವು ಕ್ಯಾನವಾಸಿನ ಮೇಲೆ ತೈಲವರ್ಣ ಮಾಧ್ಯಮದಿಂದ ರಚಿಸಿದಂತಹ ಕಲಾಕೃತಿಯಾಗಿದೆ. ಈ ಕಲಾಕೃತಿಯಲ್ಲಿ ನೆರಳು ಬೆಳಕಿನ ಆಯಾಮವನ್ನು ಸ್ಪಷ್ಟವಾಗಿ ತೋರಿಸಿದ್ದು, ಕಲಾವಿದರ ಜಾಣ್ಮೆಯನ್ನು, ಸೂಕ್ಷ್ಮ ಗ್ರಹಿಕೆಯನ್ನು ಪ್ರದರ್ಶಿಸುತ್ತದೆ. ತಲೆಯ ರುಮಾಲನ್ನು ಹಿಂಬದಿಯ ವರ್ಣದ ಬಣ್ಣದಲ್ಲಿಯೇ ತಮಗೆ ಬೇಕಾದ ಭಾಗದಲ್ಲಿ ಬಣ್ಣವನ್ನು ಲೇಪಿಸಿ ರುಮಾಲಿನ ಆಕಾರವನ್ನು ಕೊಟ್ಟಿದ್ದಾರೆ. ಗಾಢ ಹಳದಿ ಬಣ್ಣದ ಕೋಟಿನ ಮೇಲೆ ದೊಡ್ಡ ಕುಂಚದ ಎಳೆತದಿಂದ ಬಟ್ಟೆಯ ನೀರಿಗೆಗಳನ್ನು ಎಳೆದಿದ್ದು, ಆಕೃತಿಗೆ ಹೊರ ರೇಖೆಯನ್ನು ಎಳೆದಿದ್ದು ಸ್ಪಷ್ಟವಾಗಿ ತೋರುತ್ತದೆ. ಮುಖಭಾವವನ್ನು ವಯಸ್ಸಿಗನುಗುಣವಾಗಿ ಬಣ್ಣಗಳನ್ನು ಬಳಸಿಕೊಂಡಿದ್ದಾರೆ. ಈ ಕಲಾಕೃತಿಯಲ್ಲಿ ಭಾವಚಿತ್ರದ ನೈಜತೆಯು ಮತ್ತು ವ್ಯಕ್ತಿತ್ವವನ್ನು ಹಿಡಿದಿಟ್ಟಿದ್ದು ಇದರ ಒಂದು ವಿಶೇಷತೆ ಎನ್ನಬಹುದು.

೫.೨.೧.೩. ವ್ಯಕ್ತಿ ಭಾವಚಿತ್ರ: ಈ ಭಾವಚಿತ್ರವು ಸಿದ್ಧೇಶ್ವರ ಕಲಾಮಂದಿರದಲ್ಲಿ ಸೇವೆಗೆ ಸೇರಿದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ಮಾಡಿತೋರಿಸಿದಂತಹ ಭಾವಚಿತ್ರವಾಗಿದೆ. ೧೫X೨೪

ಇಂಚಿನ ನಾರ್ವೆ ಪೇಪರ್ ಮೇಲೆ ಜಲವರ್ಣ ಮಾಧ್ಯಮದಲ್ಲಿ ೧೯೮೫ರಲ್ಲಿ ಚಿತ್ರಿಸಿರುವಂತಹದ್ದಾಗಿದೆ. ಹಿನ್ನೆಲೆಯಲ್ಲಿ ಪೇಪರನ್ನು ಖಾಲಿ ಬಿಟ್ಟು ತಮಗೆ ಬೇಕಾದ ಭಾಗದಲ್ಲಿ ಜಲವರ್ಣದಿಂದ ಕುಂಚದ ದೊಡ್ಡ ದೊಡ್ಡ ಎಳೆತಗಳಿಂದ ರೂಪದರ್ಶಿಯನ್ನು ಸ್ಫುಟವಾಗಿ ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ಬಿಳಿಬಣ್ಣದ ಬಟ್ಟೆದ ಬಟ್ಟೆ ಧರಿಸಿರುವ ರೂಪದರ್ಶಿಯ ಮುಖಭಾವನೆಗೆ ತಕ್ಕಂತೆ ನೆರಳು ಬೆಳಕಿನ ವ್ಯತ್ಯಾಸವನ್ನು ತೋರಿಸಲಾಗಿದೆ. ಬಟ್ಟೆಯ ನೀರಿಗೆ ಬೆಳಕಿನ ಲಕ್ಷಣಗಳನ್ನು ತೋರಿಸಿದ್ದು ತುಂಬ ವಿಶಿಷ್ಟವಾಗಿದೆ. ವ್ಯಕ್ತಿಯ ಮುಖದಲ್ಲಿ ಅವರ ವಯೋಮಾನವನ್ನು ಸೂಚಿಸುವಂತೆ ಕಪ್ಪನೆಯ ಕೂದಲು ವಿನ್ಯಾಸ ಸ್ಪಷ್ಟವಾಗಿ ತೋರಿಸಲಾಗಿದೆ.

೫.೨.೧.೩. ವ್ಯಕ್ತಿ ಭಾವಚಿತ್ರ: ಈ ಭಾವಚಿತ್ರವು ಕ್ಯಾನವಾಸಿನ ಅವಕಾಶದಲ್ಲಿ ತೈಲವರ್ಣ ಮಾಧ್ಯಮದಿಂದ ರಚಿಸಲಾಗಿದೆ. ಇದರ ಬಣ್ಣದ ಬಳಕೆಯು ಎಲ್ಲಕ್ಕಿಂತಲೂ ಭಿನ್ನವಾಗಿ ಮೂಡಿ ಬಂದಿದೆ. ಕುಂಚದ ಪ್ಯಾಚ್‌ಗಳನ್ನು ಇಡುತ್ತ ಹೋಗಿದ್ದಾರೆ. ಅದರಲ್ಲಿಯೇ ನೆರಳು ಮತ್ತು ಬೆಳಕನ್ನು ಬೇರ್ಪಡಿಸಿದ್ದು, ಕೆಂಪು ವರ್ಣವನ್ನು ಹೆಚ್ಚಾಗಿ ಬಳಸಿದ್ದಾರೆ. ಈ ಭಾವಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಬೆಳಕಿನ ತೀವ್ರತೆಯನ್ನು ಇಲ್ಲಿ ಬಳಕೆಯಾಗಿರುವ ವರ್ಣಗಳಿಂದ ಗಮನಿಸಬಹುದು. ತಲೆಕೂದಲಿಗೆ ಒಂದೇ ಬಣ್ಣದಿಂದ ತೋರಿಸದೇ ಕಪ್ಪು ಮಿಶ್ರಿತ ಕಂದುಗೆಂಪು ಬಣ್ಣವನ್ನು ಬಳಸಿದ್ದಾರೆ.

೫.೨.೨. ಛಾಯಾಚಿತ್ರ ಆಧಾರಿತ ಭಾವಚಿತ್ರಗಳು

೫.೨.೨.೧. ಗ್ರಾಮೀಣ ವ್ಯಕ್ತಿಯ ಭಾವಚಿತ್ರ: ಈ ಭಾವಚಿತ್ರವು ಬೇಡಿಕೆಯ ಹಿನ್ನೆಲೆಯಲ್ಲಿ ರಚಿಸಿರುವಂತಹ ಕೃತಿಯಾಗಿದೆ. ೧೦/೩ X ೨ ಅಡಿ ಅಳತೆಯು ಭಾವಚಿತ್ರವು ಕ್ಯಾನ್‌ವಾಸ್ ಮೇಲೆ ತೈಲವರ್ಣ ಮಾಧ್ಯಮ ಹೊಂದಿದ್ದು ೨೦೧೨ರಲ್ಲಿ ರಚಿಸಲಾಗಿದೆ. ಕಪ್ಪು ಮಿಶ್ರಿತ ನೀಲಿಬಣ್ಣದ ಹಿನ್ನೆಲೆಯಲ್ಲಿ ಬಿಳಿ, ಅಂಗಿ, ಬಿಳಿ ರುಮಾಲು ಧರಿಸಿದ ಇಳಿವಯಸ್ಸಿನ ಗ್ರಾಮೀಣ ಪರಿಸರದ ವ್ಯಕ್ತಿಯನ್ನು ಸ್ಪುಟವಾಗಿ ಎದ್ದು ಕಾಣುವಂತೆ ಛಾಯಚಿತ್ರದ ಮಾದರಿಯಲ್ಲಿ ವರ್ಣಸಂಯೋಜನೆ ಮಾಡಲಾಗಿದೆ. ನೀಟಾಗಿ ತೀಡಿರುವ ಮೀಸೆ, ಕಂಬದಂತಹ ಮೂಗು ಅವನ ಸ್ವಭಾವಕ್ಕೆ ತಕ್ಕಂತಹ ದಿರಿಸುಗಳನ್ನು ತೊಟ್ಟಿರುವ ವ್ಯಕ್ತಿಯನ್ನು ಕಡೇಮನಿಯವರು ತಮ್ಮದೇ ಆದ ಹಿತ-ಮಿತವರ್ಣಗಳನ್ನು ಬಳಸಿರುವುದು ಅವರ ಕಲಾಪ್ರಜ್ಞೆಗೆ ಹಿಡಿದ ಕೈಗನ್ನಡಿಯಂತೆ ಕೃತಿ ಮೂಡಿಬಂದಿದೆ.

ಚಿತ್ರದಲ್ಲಿರುವ ವ್ಯಕ್ತಿಯ ಪ್ರತಿಯೊಂದು ಸ್ವಭಾವಗಳನ್ನು ಮತ್ತು ಮುಖದ ಮೇಲಿನ ಉಬ್ಬು-ತಗ್ಗುಗಳನ್ನು ಗಮನದಲ್ಲಿಟ್ಟುಕೊಂಡು ವರ್ಣಸಂಯೋಜನೆ ಮಾಡಿರುವುದು ಕಂಡುಬರುತ್ತದೆ. ವ್ಯಕ್ತಿಯ ಕಣ್ಣಿನ ಕಾಂತಿ, ಕಡೇಮನಿಯವರ ಕುಂಚದ ಸೂಕ್ಷ್ಮ ಎಳೆತದಿಂದ ಜೀವಂತಿಕೆಯ ನೈಜ ಸ್ವರೂಪ ತೆರೆದು ಕೊಂಡಿದೆ.

೫.೨.೨.೨. ಕೋ. ಚೆನ್ನಬಸಪ್ಪನವರ ಭಾವಚಿತ್ರ: ಈ ಭಾವಚಿತ್ರವು ೨೦೧೩ರಂದು ಬಿಜಾಪುರದಲ್ಲಿ ನಡೆದ ೭೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ರಚನೆಯಾಗಿದ್ದು,

ಈ ಹಿನ್ನೆಲೆಯಲ್ಲಿ ಕಡೇಮನಿಯವರು ಸಾಂದರ್ಭಿಕವಾಗಿ ನಾಡಿನ ಹಲವಾರು ಹಿರಿಯ ಕಲಾವಿದರ, ಸಾಹಿತಿಗಳ ಗಣ್ಯವ್ಯಕ್ತಿಗಳ ಭಾವಚಿತ್ರಗಳನ್ನು ತಮ್ಮ ಸಂಗ್ರಹಕ್ಕಾಗಿ ರಚಿಸುತ್ತಿದ್ದಾರೆ. ಅವುಗಳಲ್ಲಿ ಬಿಜಾಪುರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಕೋ ಚೆನ್ನಬಸವನವರ ಭಾವಚಿತ್ರವೂ ಒಂದು.

೧½X೨ ಅಡಿ ಅಳತೆಯ ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ಈ ಕೃತಿ ರಚನೆ ಮಾಡಲಾಗಿದೆ. ಕೃತಿಯಲ್ಲಿ ಬಳಕೆಯಾಗಿರುವ ಬಣ್ಣಗಳು ಮೃಧು ಧೋರಣೆ ಹೊಂದಿರುವಂತಹ ಮಿತವರ್ಣಗಳಲ್ಲಿಯೇ ನೆರಳು–ಬೆಳಕನ್ನು ನಯ ನಾಜೂಕಿನ ಸುಕ್ಕು, ಗುಳ್ಳೆ, ಮಚ್ಚೆ, ಮೊಡವೆ, ಏನನ್ನೂ ಬಿಡದೇ ಎಲ್ಲವನ್ನು ಚಿತ್ರಿಸುವ ರೀತಿಯಲ್ಲಿಯೇ ಛಾಯಾಚಿತ್ರವನ್ನು ಮೀರಿದಲ್ಲದೆ, ಇಂದಿನ ಡಿಜಿಟಲ್ ತಂತ್ರಜ್ಞಾನವೂ ನಾಚಿಕೊಳ್ಳುವಂತೆ ಪಿಕ್ಸೆಲ್‌ಗಳು ಅನ್ನಿಸುವಂತಹ ಅಂಶಗಳನ್ನು ತಂದು, ಇಡೀ ಚಿತ್ರ ಅನೇಕ ಅಸಂಬಂಧಿತ ಗುರುತುಗಳ ಜೋಡಣೆ ಎಂಬಂತೆ ಚಿತ್ರಿಸಿದ್ದಾರೆ. ಹತ್ತಿರದಿಂದ ನೋಡಿದಾಗ ಬರೀ ಬಣ್ಣದ ಗುರುತುಗಳಂತೆ ಕಾಣುವ ಇವು ದೂರದಲ್ಲಿ ನಿಂತು ನೋಡಿದಾಗ ಎಲ್ಲ ವಿವರಗಳೂ ತಂತಮ್ಮ ಜಾಗದಲ್ಲಿರುವ ಒಂದು ಸಂಪೂರ್ಣ ಭಾವಚಿತ್ರದಂತೆ ಕಾಣುತ್ತದೆ. ಹಾಕಿರುವ ಕನ್ನಡಕದ ಪಾರದರ್ಶಕ ಗಾಜುಗಳ ವರ್ಣಬಳಕೆ, ಮುಗುಳ್ನಗೆ, ನಗೆಯ ಸಾಂಕೇತಿಕ ಕೆನ್ನೆಯ ಗೆರೆಗಳು ನೋಡುಗನನ್ನು ಮಂತ್ರಮುಗ್ಧರನ್ನಾಗಿಸುವಂತಿದೆ. ತಲೆ ಕೂದಲುಗಳನ್ನು ಒಂದೇ ವರ್ಣದಿಂದ ತೋರಿಸದೆ, ಕೆಲವು ಬಣ್ಣಗಳ ಮಿಶ್ರಣದಿಂದ ಕೂದಲಿನ ಒಂದೊಂದು ಎಳೆಯನ್ನು ಎಣಿಕೆ ರೂಪದಲ್ಲಿ ಕುಂಚವನ್ನು ಎಳೆದಿದ್ದು ಕಡೇಮನಿಯವರ ಸೂಕ್ಷ್ಮ ಕುಸೂರಿ ಕೆಲಸ. ಈ ಭಾವಚಿತ್ರದಲ್ಲಿ ಒಡಮೂಡಿದೆ.

೫.೨.೨.೩. ದ.ರಾ.ಬೇಂದ್ರೆಯವರ ಭಾವಚಿತ್ರ: ಈ ಭಾವಚಿತ್ರವು ಕ್ಯಾನ್‌ವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವುದಾಗಿದೆ. ಕೃತಿಯಲ್ಲಿ ವರಕವಿ ಬೇಂದ್ರೆಯವರ ಇಳಿ ವಯಸ್ಸಿನ ಮುಖದಲ್ಲಿನ ಸುಕ್ಕು ಚರ್ಮದ ಸಂಕುಚಿತ ವೃದಾಪ್ಯದ ಗುರುತುಗಳನ್ನು ಸೂಕ್ಷ್ಮ ರೀತಿಯಲ್ಲಿ ಚಿತ್ರಿಸಿರುವ ಕಡೇಮನಿಯವರು, ಬೇಂದ್ರೆಯವರ ಶಾಂತ ಸ್ವಭಾವದ ಮುಖದಲ್ಲಿ ಏನೋ ನಿರೀಕ್ಷೆಯ ಭಾವವೆಂಬಂತೆ ನೋಡುತ್ತಿರುವಂತಿದೆ. ಕಪ್ಪು ಕನ್ನಡಕದ ಪಾರದರ್ಶಕ ಗಾಜಿನಲ್ಲಿನ ಸೌಮ್ಯ ನೋಟ, ಎಳೆ ಎಳೆಯಾಗಿ ಬಿಡಿಸಿರುವುದಲ್ಲದೆ ಗಾಳಿಗೆ ತೂರಿಕೊಂಡಂತಹ ಕೂದಲು ರಚನೆಕಾರನ ಕಲಾನೈಪುಣ್ಯದ ಪ್ರತೀಕದ ಆಳ–ವಿಸ್ತಾರವನ್ನು ಸೂಚಿಸುವಂತಿದೆ. ನೀಲಿ ಕೋಟು ಧರಿಸಿರುವ ಬೇಂದ್ರೆಯವರ ಈ ಭಾವಚಿತ್ರಕ್ಕೆ ಹೊಂದಿಕೆಯಾಗುವಂತಹ ಹಳದಿ ಬಣ್ಣದ ಹಿನ್ನೆಲೆ, ಭಾವಚಿತ್ರಕ್ಕೆ ಮೆರಗು ತಂದಿದೆ. ಮುಖದಲ್ಲಿ ತೇಪೆಯಾಕಾರದಲ್ಲಿ ಬಣ್ಣಗಳನ್ನು ಚಿತ್ರಿಸಿದ್ದರೂ ಕೂಡ ಕಡೇಮನಿಯವರ ಸೃಜನಾತ್ಮಕ ಕೌಶಲ್ಯಪೂರ್ಣ ವರ್ಣ ಬಳಕೆ, ವೈಯಕ್ತಿಕ ಶೈಲೀಕರಣ ಕಂಡುಬರುತ್ತದೆ. ಬೇಂದ್ರೆಯವರು ನಮ್ಮಿಂದ ದೂರವಾಗಿದ್ದರೂ ಈ ಕೃತಿಯಲ್ಲಿ ನಮಗೆ ಹತ್ತಿರವಾಗಿರುವಂತೆ ತೋರುತ್ತದೆ.

೫.೨.೨.೪. ಅಜ್ಜಿಯ ಭಾವಚಿತ್ರ: ಕೆಂಪು ಕುಂಕುಮವಿಟ್ಟು, ರೇಷ್ಮೆ ಸೀರೆಯುಟ್ಟುಕೊಂಡಿರುವ ಅಜ್ಜಿಯ ಭಾವಚಿತ್ರವನ್ನು ೨೦೧೫ರಲ್ಲಿ ಕಾನ್‌ವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚನೆ ಮಾಡಿದ್ದು, ತುಂಬ ಏಕತಾನತೆಯ ಮೇಲೆ ರಚಿಸಿದ ಸಾಧ್ಯತೆಗಳನ್ನು ಈ ಚಿತ್ರದ ಗುಣಗಳೇ ಹೇಳುತ್ತವೆ. ನಯವಾದ ಕುಂಚದ ಬೀಸುಗಳು ಚಿತ್ರಕ್ಕೆ ಹಚ್ಚಿನ ಜೀವಂತಿಕೆಯ ಭಾವವನ್ನು ತುಂಬಿವೆ. ಭಾವಚಿತ್ರವೇ ವ್ಯಕ್ತಿಯ ವಯೋಮಾನವನ್ನು ಹೇಳುವ ಸಾಮರ್ಥ್ಯವನ್ನು ಪಡೆದಿರುವುದೂ ಈ ಚಿತ್ರದ ವಿಶೇಷತೆ. ಹಳದಿ ಬಣ್ಣದ ರೇಷ್ಮೆ ಸೀರೆ ಉಟ್ಟ ಅಜ್ಜಿಯು ಸುಕ್ಕು ಗಟ್ಟಿದ ಮುಖದ ನೀರಿಗೆಗಳನ್ನು ಯಥಾರ್ತ ರೀತಿಯಲ್ಲಿ ಪ್ರತಿಯೊಂದು ಭಾಗವನ್ನು ಸೂಕ್ಷ್ಮವಾಗಿ ಗಮನಿಸಿ ರಚಿಸಿದ್ದಾರೆ. ಹಣೆಯಲ್ಲಿನ ಕುಂಕುಮ ಬೊಟ್ಟು, ಮೂಗಲ್ಲಿನ ಮೂಗೂತಿ, ಕಿವಿಯೋಲೆ, ಹಲ್ಲಿನ ಕಪ್ಪು ಬಣ್ಣದ ಹೊಳಪು, ಕೊರಳಲ್ಲಿನ ಹಾರಗಳು. ನೈಜತೆಗೆ ಹತ್ತಿರವೆಂಬಂತೆ ರಚಿಸಿರುವುದು ಬೆರಗುಗೊಳಿಸುವಂತಿದೆ. ಹಿನ್ನೆಲೆಯಲ್ಲಿ ಏಕ ರೀತಿಯ ವರ್ಣವು ಭಾವಚಿತ್ರದ ಮುಖವನ್ನು ಮೃಧುತ್ವದ ಭಾವನೆಯನ್ನು ತರಲು ಸಹಕರಿಸಿದೆ. ಕುಂಚದ ಬೀಸುಗಳು ಮುಖದಲ್ಲಿನ ಚರ್ಮದ ಗತಿಗೆ ಪೂರಕವಾಗಿಯೇ ಸಾಗಿರುವುದರಿಂದ ಭಾವಚಿತ್ರ ವಾಸ್ತವಕ್ಕೆ ಹತ್ತಿರವಾಗುತ್ತದೆ. ಹಿನ್ನೆಲೆಯಲ್ಲಿ ತೆಳು ಬೂದು ಬಣ್ಣವನ್ನು ತುಂಬಿದೆ.

ಈ ಭಾವಚಿತ್ರವನ್ನು ಗಮನಿಸಿದಾಗ ಕಡೇಮನಿಯವರು ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಬಂದಿರುವುದರಿಂದ ಅಲ್ಲಿನ ಮಹಿಳೆಯರ ಅಲಂಕಾರ, ಉಡುಗೆ, ತೊಡುಗೆಗಳ ಕುರಿತು ಗಂಭೀರವಾಗಿ ಅಧ್ಯಯನ ಮಾಡಿರುವುದಕ್ಕೆ ಈ ಭಾವಚಿತ್ರ ಸಾಕ್ಷಿಯಾದಂತಿದೆ.

೫.೨.೨.೫. ವ್ಯಕ್ತಿಭಾವಚಿತ್ರ: ೨೦೧೨ರಲ್ಲಿ ರಚಿಸಲಾದ ಈ ಭಾವಚಿತ್ರ ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮ ಬಳಸಿಕೊಳ್ಳಲಾಗಿದೆ. ಚಿತ್ರದಲ್ಲಿರುವ ವ್ಯಕ್ತಿಯ ಮುಖ ಚಹರೆಯ ಮೇಲೆ ಕೆಂಪು ಮಿಶ್ರಿತ ಹಳದಿ ಬಣ್ಣವನ್ನು ಬಳಸಿದ್ದಾರೆ. ಕನ್ನಡಕದ ಹಿಂದಿನ ಹಸನ್ಮುಖಿ ಕಣ್ಣುಗಳು, ಅಗಲವಾದ ಮುಖ, ಬಿಳಿ ಬಣ್ಣದ ಅಂತಿಯನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಬೂದುಬಣ್ಣವನ್ನು ಭಾವಚಿತ್ರಕ್ಕೆ ಸಂಯೋಜನೆಯಾಗಿ ಬಳಸಲಾಗಿದೆ. ತುಂಬ ಪರಿಶ್ರಮದಿಂದ ರಚಿಸಿರುವ ಸಾಧ್ಯತೆಗಳನ್ನು ಈ ಭಾವಚಿತ್ರದ ಗುಣಗಳೇ ಹೇಳುತ್ತವೆ. ಕುಂಚದ ಬೀಸುಗಳು ಚಿತ್ರಕ್ಕೆ ಹೆಚ್ಚಿನ ಜೀವಂತಿಕೆಯ ಭಾವವನ್ನು ತುಂಬಿವೆ. ಸಾಮಾನ್ಯವಾಗಿ ಕಡೇಮನಿಯವರು ತಮ್ಮ ಭಾವಚಿತ್ರಗಳಲ್ಲಿ ವ್ಯಕ್ತಿಯ ವ್ಯಕ್ತಿತ್ವವನ್ನು ಮತ್ತು ಮನಸ್ಸಿಗೆ ಹಿತವೆನಿಸುವ ವರ್ಣಗಳನ್ನು ಹೆಚ್ಚು ಬಳಸಿಕೊಂಡು ಬಂದಿದ್ದಾರೆ. ಇಂತಹ ಭಾವಚಿತ್ರದಂತಹ ಭಾವಚಿತ್ರಗಳು ಅನೇಕ ನಿದರ್ಶನವಾಗುತ್ತವೆ. ವಿವರಕ್ಕೆ ನಿಲುಕುವ ಇಲ್ಲಿನ ಭಾವಚಿತ್ರದಲ್ಲಿ ರಮಣೀಯ ಕುಂಚದ ಸ್ಪರ್ಶವಿದೆ. ಭಾವದಲ್ಲಿ ಮಿಂಚಿನಂತಹ ಸ್ಪಷ್ಟತೆ ಇದೆ. ಈ ಕಲಾಕೃತಿಯಲ್ಲಿ ಜೀವಂತಿಕೆಯ ಕೂದಲುಗಳು ಬಣ್ಣಗಳ ಜೊತೆಗೆ ಮೇಳೈಸಿಕೊಂಡಿವೆ.

೫.೨.೨.೬. ವಿ.ಜಿ.ಅಂದಾನಿಯವರ ಭಾವಚಿತ್ರ: ೨೦೧೨ರಲ್ಲಿ ರಚನೆಯಾದ ಈ ಭಾವಚಿತ್ರವು ತೈಲವರ್ಣ ಮಾಧ್ಯಮದಲ್ಲಿ ಕ್ಯಾನವಾಸ್ ಮೇಲೆ ರಚಿಸಲಾಗಿದೆ. ಸಾಂದರ್ಭಿಕವಾಗಿ ರಚಿಸಲಾದ

ಕೃತಿಯಲ್ಲಿ ಅಂದಾನಿಯವರ ನಗುಮೊಗ ಭಾವದ ಛಾಯಾಚಿತ್ರವನ್ನು ಆಧರಿಸಿ ರಚನೆ ಮಾಡಲಾಗಿದೆ. ಅಂದಾನಿಯವರು ಬಾಚಿಕೊಳ್ಳುವ ಸಂಯೋಜನೆಗೆ ತಕ್ಕಂತೆ ಕಡೇಮನಿಯವರ ಕುಂಚವು ಕೂಡ ಸಂಬಂಧವೆಂಬಂತೆ ವರ್ಣಗಳ ಬಳಕೆ, ಕುಂಚದ ಎಳೆತಗಳು ಸಂಯೋಜನೆಗೊಂಡಿವೆ. ವ್ಯಕ್ತಿಯ ಪ್ರಮಾಣ ಬದ್ಧತೆ ಸರಿಯಾಗಿದ್ದು, ನೋಟದಲ್ಲಿ ತೀಕ್ಷ್ಣತೆ, ಬಟ್ಟೆಯ ನೆರಿಗೆಗಳು, ನಗುತ್ತಿರುವ ಮುಖಭಾವ, ಕಟ್ ಮಾಡಿರುವ ಮೀಸೆ, ಎಲ್ಲವನ್ನು ಎಳೆ ಎಳೆಯಾಗಿ ಚಿತ್ರಿಸಿದ್ದು, ಬೂದು ಬಣ್ಣದ ಅಂಗಿಯನ್ನು ತೋರಿಸಲಾಗಿದೆ. ಅಂದಾನಿಯವರ ಬಾಹ್ಯ ಚಹರೆಗೆ ಕಡೇಮನಿಯವರು ಪ್ರಾಧಾನ್ಯತೆಯನ್ನು ನೀಡಿದ್ದಾರೆ. ಕಣ್ಣಿನ ಕೆಳಭಾಗದ ರೆಪ್ಪೆಗಳ ಸುಕ್ಕುಗಳು ಪೂರಕವಾಗಿಯೇ ಸಾಗಿರುವುದರಿಂದ ಪೂರ್ಣಭಾವಚಿತ್ರ ವಾಸ್ತವಕ್ಕೆ ಹತ್ತಿರವಾಗುತ್ತದೆ.

೫.೨.೨.೭. ಸೋಮಶೇಖರ ಸಾಲಿಯವರ ಭಾವಚಿತ್ರ: ಈ ಕಲಾಕೃತಿಯನ್ನು ೨೦೦೭ರಲ್ಲಿ ೧ ೧/೨ X ೨ ಅಡಿ ಅಳತೆಯ ಕ್ಯಾನ್‌ವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಕಲಾವಿದ ಕಡೇಮನಿಯವರು ಸಾಂದರ್ಭಿಕವಾಗಿ ರಚಿಸಿರುವ ಭಾವಚಿತ್ರದಲ್ಲಿ ನಾಡಿನ ಹಿರಿಯ ಕಲಾವಿದ ದಿವಂಗತ ಸೋಮಶೇಖರ ಸಾಲಿಯವರ ಮುಗುಳು ನಗೆಯ ಛಾಯಾಚಿತ್ರವನ್ನು ಆಧರಿಸಿ ಚಿತ್ರಿಸಿರುವಂತದ್ದಾಗಿದೆ.

ಸೌಮ್ಯ ಸ್ವಭಾವದ ಸಾಲಿಯವರ ಭಾವಚಿತ್ರದಲ್ಲಿ ಕನ್ನಡಕಧರಿಸಿ ಬಿಳಿಬಟ್ಟೆ ತೊಟ್ಟಿದ್ದಾರೆ. ವಿವರವಾದ ಭಾವಚಿತ್ರ ರಚನೆಯ ತತ್ವಗಳನ್ನು ಯಥಾವತ್ತಾಗಿ ಪಾರದರ್ಶಕವಾಗಿ ಮತ್ತು ಅಪಾರ ದರ್ಶಕವಾಗಿ ಬಳಸಿಕೊಳ್ಳುತ್ತ ರೂಪದರ್ಶಿಯ ಬಾಹ್ಯ ಚಹರೆಗೆ ಪ್ರಾಧಾನ್ಯತೆ ನೀಡಿದ ಉತ್ತಮ ನಿರ್ವಹಣೆಯ ಭಾವಚಿತ್ರವಿದು. ಆಯತಾಕೃತಿಯ ಕ್ಯಾನವಾಸ್‌ನಲ್ಲಿ ಚಿತ್ರವನ್ನು ಸಂದರ್ಭೋಚಿತವಾಗಿ ಸಂಯೋಜಿಸಿದ ಕ್ರಮವನ್ನು ಇಲ್ಲಿ ಕಾಣುತ್ತೇವೆ. ಹಿನ್ನೆಲೆಯಲ್ಲಿ ಬಳಸಿದ ನೀಲಿವರ್ಣ ಪ್ರಖರವಾಗಿರುವ ಗುಣವನ್ನು ಹೊಂದಿದ್ದರೂ ಸಾಲಿಯವರ ಚಿತ್ರಕ್ಕೆ ಹೊಂದಾಣಿಕೆಯಾಗುತ್ತದೆ. ರೂಪದರ್ಶಿಯ ಬಟ್ಟೆಯ ನೀರಿಗೆಗಳನ್ನು ವರ್ಣದಲ್ಲಿ ತೋರಿಸಿರುವ ಸಾಧ್ಯತೆಗಳು ಕಾಣಬಹುದಾಗಿದೆ.

೫.೨.೨.೮. ಎಂ.ಬಿ.ಪಾಟೀಲರ ಭಾವಚಿತ್ರ : ಇದು ಛಾಯಾಚಿತ್ರ ಆಧಾರಿಸಿಕೊಂಡು ರಚಿಸಿರುವಂತಹ ಭಾವಚಿತ್ರವಾಗಿದೆ. ನಾಡಿನ ಹಿರಿಯ ಕಲಾವಿದರಲ್ಲಿ ಒಬ್ಬರಾದ ವಿಜಾಪುರದ ಎಂ.ಬಿ.ಪಾಟೀಲರ ಭಾವಚಿತ್ರವಾಗಿದ್ದು, ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚನೆಯಾಗಿದೆ.

೧ ೧/೨ X ೨ ಅಡಿ ಅಳತೆಯ ಭಾವಚಿತ್ರವು ಪಾಶ್ಚಾತ್ಯ ಕಲಾಶೈಲಿಯ ನೆರಳು-ಬೆಳಕಿನ ಸಂಯೋಜನೆ ಹೊಂದಿದ್ದು, ಭಾವಚಿತ್ರದ ಅರ್ಧ ಮುಖಕ್ಕೆ ಮಾತ್ರ ಬೆಳಕಿನ ಆಯಾಮವನ್ನು ತೋರಿಸಲಾಗಿದೆ. ಇನ್ನರ್ಧ ಭಾಗ ಕಲಾಕೃತಿಯ ಹಿನ್ನೆಲೆಯ ವರ್ಣಸಂಯೋಜನೆಯೊಂದಿಗೆ ಕೂಡಿಕೊಂಡಿರುವಂತೆ ಮೂಡಿಸಲಾಗಿದೆ. ಈ ಪದ್ಧತಿಯು ಪಾಶ್ಚಾತ್ಯ ಕಲಾ ಶೈಲಿಯಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಕಡೇಮನಿಯವರಿಗೂ ಪಾಶ್ಚಾತ್ಯ ಕಲಾ ಶೈಲಿಯ ಪ್ರಭಾವ ಬೀರಿರುವುದು

ಈ ಭಾವಚಿತ್ರದಲ್ಲಿ ಒಡಮೂಡಿರುವುದನ್ನು ಕಾಣಬಹುದು. ಬಿಳಿ ಬಟ್ಟೆ ತೊಟ್ಟಿರುವ ಎಂ.ವಿ.ಪಾಟೀಲರ ಭಾವಚಿತ್ರದಲ್ಲಿ ಅದೇನೊ ತಲ್ಲೀನತೆಯ ಮುಖಭಾವವನ್ನು ಕಡೇಮನಿಯವರು ತಮ್ಮ ಕುಂಚದ ಮಾಂತ್ರಿಕ ಶಕ್ತಿಯಿಂದ ಆ ಭಾವನೆಗಳನ್ನು ಸೆರೆ ಹಿಡಿದಿದ್ದಾರೆ.

೫.೨.೨.೯. ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯವರ ಭಾವಚಿತ್ರ: ಫ.ಗು.ಹಳಕಟ್ಟಿಯವರು ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾಗಿ, ದಕ್ಷ ಆಡಳಿತಗಾರರಾಗಿ ೧೯೧೦ರಲ್ಲಿ ಬಿ.ಎಲ್.ಡಿ.ಇ(ಬಿಜಾಪುರ ಲಿಂಗಾಯಿತ ಅಭಿವೃದ್ಧಿ ಶಿಕ್ಷಣ ಸಂಸ್ಥೆ)ಯನ್ನು ನಾಗರೀಕರ ನೆರವಿನೊಂದಿಗೆ ಸ್ಥಾಪಿಸಿದರು. ಇದರ ಸ್ಥಿರತೆ ಹಾಗೂ ಬೆಳವಣಿಗೆಗಾಗಿ ಹಳಕಟ್ಟಿಯವರು ಜಿಲ್ಲೆಯ ತುಂಬ ವ್ಯಾಪಕವಾಗಿ ಸಂಚರಿಸಿದರು. ಇವರ ಜೊತೆಗೆ ಕೈಜೋಡಿಸಿ ಕರ್ನಾಟಕದಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯನ್ನು ಹೆಮ್ಮರವಾಗಿ ಬೆಳೆಯಲು ಕಾರಣೀಭೂತರಾದ ಶ್ರೀ ಬಂಥನಾಳ ಶ್ರೀಗಳು, ನಂತರ ಸಂಸ್ಥೆಯ ಚುಕ್ಕಾಣಿ ಹಿಡಿದು ಹಲವಾರು ಅಂಗಸಂಸ್ಥೆಗಳನ್ನು ಹುಟ್ಟು ಹಾಕುವಲ್ಲಿ ಪ್ರಗತಿ ಸಾಧಿಸಲು ದಾಪುಗಾಲು ಇಟ್ಟು, ಮಾಜಿ ಸಚಿವರಾದ ದಿ.ಬಿ.ಎಂ.ಪಾಟೀಲರು ಈ ಮೂವರು ಜನ ಗಣ್ಯರ ಭಾವಚಿತ್ರಗಳು ಇಂದು ಬಿ.ಎಲ್.ಡಿ.ಇ. ಸಂಸ್ಥೆಯ ಪ್ರತಿಯೊಂದು ಕಛೇರಿಯಲ್ಲಿ, ಶಾಲಾ-ಕಾಲೇಜುಗಳಲ್ಲಿ ರಾರಾಜಿಸುತ್ತಿವೆ. ಅವುಗಳಲ್ಲಿ ಡಾ.ಫ.ಗು.ಹಳಕಟ್ಟಿಯವರ ಭಾವಚಿತ್ರವೂ ಒಂದು.

ಪ್ರಸ್ತುತ ಈ ಭಾವಚಿತ್ರವು ಫ.ಗು.ಹಳಕಟ್ಟಿಯವರದ್ದಾಗಿದ್ದು, ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವುದಾಗಿದ್ದು, ಸೌಮ್ಯ ಸ್ವಭಾವದ ಹಳಕಟ್ಟಿಯ ಈ ಚಿತ್ರದಲ್ಲಿ ಕಪ್ಪು ಕೋಟು, ಬಿಳಿ ಪೇಟ ಧರಿಸಿರುವಂತೆ ಚಿತ್ರಿಸಲಾಗಿದೆ. ಗಾಂಧೀಜಿಯನ್ನು ನೆನಪಿಸುವಂತಿರುವ ಕನ್ನಡಕ ಈ ಭಾವಚಿತ್ರದ ಮುಖ್ಯ ಆಕರ್ಷಣೆ. ಈ ಚಿತ್ರವನ್ನು ೨೦೦೬ರಲ್ಲಿ ರಚಿಸಿದ್ದು, ಛಾಯಾಚಿತ್ರ ಮಾದರಿಯ ವರ್ಣಸಂಯೋಜನೆಯನ್ನು ಕೃತಿಯಲ್ಲಿ ಬಳಸಲಾಗಿದೆ. ಹಿನ್ನೆಲೆಯಲ್ಲಿ ಕಪ್ಪು ಮಿಶ್ರಿತ ಕೆಂಪು ಬಣ್ಣವು ಮುಖ್ಯ ಆಕೃತಿಗೆ ಮೆರಗು ತರುವಂತೆ ಬಳಕೆಯಾಗಿದೆ. ಹಳಟ್ಟಿಯವರ ಮುಖದ ಭಾವನೆಗಳನ್ನು ಅರ್ಥಮಾಡಿಕೊಂಡಂತಿರುವ ಕಡೇಮನಿಯವರು ಯಥಾರ್ಥ ಭಾವ ಸಂಯೋಜನೆಗೊಂಡಿರುವುದು ಕಡೇಮನಿಯವರು ಭಾವಚಿತ್ರದಲ್ಲಿ ಪರಿಪೂರ್ಣತೆ ಸಾಧಿಸಿರುವಂತೆ ತೋರುತ್ತದೆ.

೫.೨.೨.೧೦. ಬಿ.ಎಂ.ಪಾಟೀಲರ ಭಾವಚಿತ್ರ: ೨೦೧೨ರಲ್ಲಿ ರಚಿಸಿದ ಈ ಭಾವಚಿತ್ರವು ಮಾಜಿಸಚಿವರು ಬಿ.ಎಲ್.ಡಿ.ಸಂಸ್ಥೆಯ ಬೆಳವಣಿಗೆಗೆ ಕಾರಣೀಭೂತರೂ ಆದ ದಿ.ಬಿ.ಎಂ.ಪಾಟೀಲರ ಭಾವಚಿತ್ರವನ್ನು ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಇದು ಬೇಡಿಕೆಯ ಹಿನ್ನೆಲೆಯ ಕಲಾಕೃತಿಯಾಗಿದ್ದು, ಛಾಯಾಚಿತ್ರ ಮಾದರಿಯಲ್ಲಿ ವರ್ಣಸಂಯೋಜನೆ ಮಾಡಲಾಗಿದೆ. ಕಲಾವಿದರು ತಮ್ಮ ಭಾವಾಭಿವ್ಯಕ್ತಿಯನ್ನು ತೋರಿಸಿರುವುದರ ಜೊತೆಗೆ ವ್ಯಕ್ತಿಯ ಹಿನ್ನೆಲೆಯಲ್ಲಿ ನೀಲಿ ಬಣ್ಣದಿಂದ ಸಮತಲವಾಗಿ ಮಿಶ್ರಣ ಮಾಡಿದ್ದಾರೆ. ಬಿಳಿ ಬಟ್ಟೆ ತೊಟ್ಟಿರುವ ಬಿ.ಎಂ.ಪಾಟೀಲರ

ಮುಖಭಾವದಲ್ಲಿ ಅವರ ಜೀವನ ಶೈಲಿ, ನಡೆ, ನುಡಿ, ತೀಕ್ಷ್ಣ ಯೋಚನೆ ಈ ಎಲ್ಲ ಗುಣ ಲಕ್ಷಣಗಳನ್ನು ಕಡೇಮನಿಯವರು ತಮ್ಮ ತಂತ್ರಶೈಲಿಯ ಮೂಲಕ ಅಭಿವ್ಯಕ್ತಿಸಿದ್ದಾರೆ.

೫.೩. ನಿಸರ್ಗ ಚಿತ್ರಗಳು

ಪ್ರತಿಯೊಬ್ಬ ಕಲಾವಿದನು ಸಹಜವಾಗಿಯೇ ನಿಸರ್ಗದಿಂದ ಪ್ರಭಾವಿತನಾಗಿರುತ್ತಾನೆ. 'ನಿಸರ್ಗ ಚಿತ್ರಗಳನ್ನು' 'ಪ್ರಕೃತಿ ಚಿತ್ರಗಳು', 'ಭೂದೃಶ್ಯ ಚಿತ್ರಗಳು' ಎಂಥಲೂ ಕರೆಯುತ್ತಾರೆ. ಆಂಗ್ಲಭಾಷೆಯಲ್ಲಿ ಇದನ್ನು 'ಲ್ಯಾಂಡ್ ಸ್ಕೇಪ್' ಎಂದು ಕರೆಯುತ್ತಾರೆ.

ಪ್ರಕೃತಿಗೆ ಹತ್ತಿರವಾದ, ನೇರವಾದ ಅಭಿವ್ಯಕ್ತಿಗೆ ಲ್ಯಾಂಡ್‌ಸ್ಕೇಪ್ ಎಂದು ೧೫ನೆಯ ಶತಮಾನದಿಂದಲೇ ಕರೆಯಲಾಗುತ್ತಿದೆ. ಗ್ರಾಮೀಣ ದೃಶ್ಯ ಎಂಬರ್ಥದಲ್ಲಿ ಡಚ್ ಪದದಿಂದ ಈ ಪದ ಹುಟ್ಟಿಕೊಂಡಿದೆ. ದೃಶ್ಯಗಳ ಅಲಂಕೃತ ಚಿತ್ರಗಳು ಇಂದು ನಾವು ಲ್ಯಾಂಡ್‌ಸ್ಕೇಪ್ ಎಂದು ಕರೆಯುವ ಭೂದೃಶ್ಯಗಳು ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿದೆ. ಭೂದೃಶ್ಯ ಚಿತ್ರಣ ತನ್ನದೇ ಆದ ಪೂರ್ಣ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡಿದ್ದು, ಪುನರುಜ್ಜೀವನ(೧೫–೧೬ನೆಯ ಶತಮಾನದಲ್ಲಿ ಎಂದು ಹೇಳಬಹುದು. ೧೯ನೆಯ ಶತಮಾನದ ಅಂತ್ಯ ಹಾಗೂ ೨೦ನೆಯ ಶತಮಾನದ ಆರಂಭದಲ್ಲಿ ಭಾರತದ ರಾಜಾ ರವಿವರ್ಮನ ತೈಲವರ್ಣ ಚಿತ್ರಗಳು ಅಲ್ಲಿ ಓಲಿಯೋಗ್ರಾಫ್ ಕೃತಿಗಳಲ್ಲಿ ಭೂದೃಶ್ಯ ಕಲೆ ವೈಭವೀಕರಣಗೊಂಡಿರುವುದು ಕಂಡುಬರುತ್ತದೆ.

ನಿಸರ್ಗ ಚಿತ್ರದಲ್ಲಿ ಒಬ್ಬ ಕಲಾವಿದನ ಅನುಭವ, ಸೌಂಧರ್ಯ ಪ್ರಜ್ಞೆ, ಕಲಾಪ್ರಕ್ಷೆ, ಆಯಾ ಕಲಾವಿದನ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡುತ್ತದೆ. ಹತ್ತು ಜನ ಕಲಾವಿದರಿಗೆ ಒಂದೇ ನಿಸರ್ಗ ದೃಶ್ಯವನ್ನು ಚಿತ್ರಿಸಲು ಹೇಳಿದರೆ ಆ ಹತ್ತು ಜನ ಕಲಾವಿದರು ವಿಭಿನ್ನವಾಗಿಯೇ ಚಿತ್ರಿಸುತ್ತಾರೆ. ರುಮಾಲೆ ಚನ್ನಬಸವಯ್ಯನವರ ದೃಷ್ಟಿಯಲ್ಲಿ ನಿಸರ್ಗ ದೃಶ್ಯವು ಬೇರೆಯಾಗಿ ಕಂಡರೆ ಹಡಪದರ ದೃಷ್ಟಿಯಲ್ಲಿ, ಪಿ.ಆರ್.ತಿಪ್ಪೇಸ್ವಾಮಿ, ಕೆ.ವೆಂಕಟಪ್ಪ, ಕೆ.ಎಸ್.ಖಂಡೇರಾವ್ ಅವರವರ ದೃಷ್ಟಿಯಲ್ಲಿ ನಿಸರ್ಗವು ಬೇರೆ ಬೇರೆ ದೃಷ್ಟಿಯಲ್ಲಿಯೇ ಕಂಡುಬಂದಿರುವುದನ್ನು ಗಮನಿಸಬಹುದು. ಹಾಗೆಯೇ ಕಡೆಮನಿಯವರ ನಿಸರ್ಗ ಚಿತ್ರಗಳು ಇದಕ್ಕೆ ಹೊರತಾಗಿಲ್ಲ ಎನ್ನಬಹುದು. ಅವರ ತೈಲವರ್ಣ ಮಾಧ್ಯಮದಲ್ಲಿ ರಚಿಸಿದ ನಿಸರ್ಗ ಚಿತ್ರಗಳು ಅಬ್‌ಸ್ಟ್ರಾಕ್ ಮಾದರಿಯ ಚಿತ್ರ ಶೈಲಿಗೆ ಹತ್ತಿರವಾಗಿವೆ. ಹಾಗೆಯೇ ಜಲವರ್ಣ ಮಾಧ್ಯಮದ ನಿಸರ್ಗ ಚಿತ್ರಗಳಲ್ಲಿ ಸಾಂಕೇತಿಕತೆಗೆ ಹೆಚ್ಚಿನ ಮಹತ್ವ ಕೊಟ್ಟಂತೆ ಕಂಡುಬರುತ್ತದೆ. ಅವರ ಪ್ರತಿಭೆ ಎದ್ದು ಕಾಣುವುದು ಕೂಡ ಜನವರ್ಣ ಮಾಧ್ಯಮದಲ್ಲಿ. ಈ ನಿಟ್ಟಿನಲ್ಲಿ ಅವುಗಳ ಅಧ್ಯಯನದಲ್ಲಿ ಸಂಕ್ಷಿಪ್ತ ಮಾದರಿಯ ಸ್ಥಳಗಳ ಪರಿಚಯದೊಂದಿಗೆ ವೈವಿಧ್ಯತೆಯನ್ನು ತಿಳಿಸಲಾಗಿದೆ.

ಕಡೇಮನಿಯವರು ತಮ್ಮ ಕಲಾಬದುಕಿನ ಸಂದರ್ಭದಲ್ಲಿ ನೂರಾರು, ನಿಸರ್ಗ ಚಿತ್ರಗಳನ್ನು ರಚಿಸಿದ್ದು, ಅವುಗಳಲ್ಲಿ ತೈಲವರ್ಣ, ಆಕ್ರಲಿಕ್ ಮಾಧ್ಯಮದಲ್ಲಿ ಕಂಡುಬರುತ್ತವೆ. ವಿವಿಧ ನೆಲೆಗಳಿಗೆ

ಹೋಗಿ ವೈವಿಧ್ಯಮಯ ನಿಸರ್ಗ ದೃಶ್ಯಗಳನ್ನು ಸೆರೆಹಿಡಿದಿದ್ದಾರೆ. ಅವುಗಳಲ್ಲಿ ಕೆಲವೊಂದು ಮುಖ್ಯವಾದವುಗಳ ಸ್ಥಳಗಳಲ್ಲಿನ ಚಿತ್ರಗಳನ್ನು ಮಾತ್ರ ಆಯ್ದುಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

೫.೩.೧. ಹಂಪಿ ಪರಿಸರ ನಿಸರ್ಗ ದೃಶ್ಯಗಳು

೫.೩.೨. ವಿಜಾಪುರ ಪರಿಸರ ನಿಸರ್ಗ ದೃಶ್ಯಗಳು

೫.೩.೧. ಹಂಪಿ ಪರಿಸರದ ಐತಿಹಾಸಿಕ ಕಟ್ಟಡಗಳ ದೃಶ್ಯಗಳು

ಕಡೇಮನಿಯವರು ತಮ್ಮ ಕಲಾಜೀವನದ ಸಂದರ್ಭದಲ್ಲಿ ಹಂಪಿಗೆ ಅನೇಕ ಬಾರಿ ವಿವಿಧ ಸಂದರ್ಭಗಳಲ್ಲಿ ಭೇಟಿ ನೀಡಿದ್ದು ಅಲ್ಲಿನ ಸ್ಮಾರಕಗಳಿಂದ ಆಕರ್ಷಣೆಗೊಂಡಿದ್ದಾರೆ. ಕಲಾವಿದರಿಗೆ ಪ್ರಕೃತಿಗೆ ಮಾರುಹೋಗುವುದು ಸಹಜ. ಅಂತಹುದರಲ್ಲಿ ಜಗತ್ಪ್ರಸಿದ್ಧ ಹಂಪಿಯ ಐತಿಹಾಸಿಕ ಸ್ಥಳಗಳನ್ನು ನೋಡಿದಾಗ ಯಾವ ಕಲಾವಿದನಿಗಾದರೂ ಚಿತ್ರಿಸುವ ಹುಮ್ಮಸ್ಸು ಹುಟ್ಟಿಸುತ್ತದೆ. ಅಂತೆಯೇ ಕಡೇಮನಿಯವರು ಹಂಪಿಯ ಹಲವು ಐತಿಹಾಸಿಕ ಸ್ಮಾರಕಗಳ ನೆಲೆಗಳನ್ನು ಕ್ಯಾನವಾಸ್, ಪೇಪರಿನ ಅವಕಾಶದಲ್ಲಿ ತೈಲವರ್ಣ, ಜಲವರ್ಣ, ಮತ್ತು ಆಕ್ರಲಿಕ್ ವರ್ಣದಲ್ಲಿಯೂ ರಚಿಸಿದ್ದು ಅವರ ಕಲಾ ಪ್ರೌಢಿಮತೆಗೆ ಮೆಚ್ಚುವಂತದ್ದು. ಅವುಗಳಲ್ಲಿ ಮುಖ್ಯವಾಗಿ ವಿರೂಪಾಕ್ಷ ದೇವಾಲಯದ ಗೋಪುರ, ತುಲಾಭಾರ ಮಂಟಪ ಹೀಗೆ ಹತ್ತು ಹಲವು ದೃಶ್ಯಗಳನ್ನು ತಮ್ಮ ಕುಂಚಗಳಿಂದ ಮೂಡಿಬಂದಿವೆ.

ಕಡೇಮನಿಯವರ ಈ ಎಲ್ಲ ಹಂಪಿಯ ದೃಶ್ಯಗಳಲ್ಲಿ ಒಂದೊಂದು ಕೃತಿಯೂ ಕೂಡ ವಿಭಿನ್ನ ತಂತ್ರ ಶೈಲಿಯಲ್ಲಿ ರಚನೆಗೊಂಡಿವೆ. ಜಲವರ್ಣ ಮಾಧ್ಯಮದಲ್ಲಿ ರಚಿಸಿರುವ ಕೃತಿಗಳು ನೈಜತೆಗೆ ಹೆಚ್ಚು ಹತ್ತಿರವೆಂಬಂತೆ ಕಂಡರೆ, ತೈಲವರ್ಣ, ಅಕ್ರೆಲಿಕ್ ವರ್ಣದ ಕೃತಿಗಳಲ್ಲಿ ಅಬ್‌ಸ್ಟ್ರ್ಯಾಕ್ಟ್ ಮಾದರಿಯ ಕುಂಚದ ತೇಪೆ ತೇಪೆ ಆಕಾರವನ್ನು ಮೂಡಿಸಿರುವುದು ಕಂಡುಬರುತ್ತದೆ ಒಟ್ಟಾರೆ ಎಲ್ಲ ಕೃತಿಗಳು ವಿಭಿನ್ನ ತಂತ್ರ ಶೈಲಿ ಮಾದರಿಯಲ್ಲಿ ಮೂಡಿಬಂದಿವೆ.

೫.೩.೨. ಬಿಜಾಪುರ ಪರಿಸರದ ಐತಿಹಾಸಿಕ ಸ್ಥಳಗಳ ಪ್ರಶ್ನೆಗಳು

ಜಗತ್ತಿನ ಬೃಹತ್ ಎರಡು ಗುಮ್ಮಟಗಳಲ್ಲಿ ಒಂದಾದ ಗೋಲಗುಮ್ಮಟವು ಕರ್ನಾಟಕದ ರಾಜ್ಯದ ಬಿಜಾಪುರ ಜಿಲ್ಲೆಯಲ್ಲಿದೆ. ಆದಿಲ್‌ಶಾಹಿ ವಂಶಸ್ಥರು ಕಟ್ಟಿಸಿರುವ ಈ ಗುಮ್ಮಟ ಜನಾಕರ್ಷಣೆಯ ಕೇಂದ್ರವಾಗಿದೆ. ಅಲ್ಲದೆ ಅನೇಕ ರಾಜರು, ಮುಸ್ಲಿಂ ದೊರೆಗಳು ಆಳಿದ್ದು, ಹಲವು ಐತಿಹಾಸಿಕ ಸ್ಮಾರಕಗಳ ಬೀಡು. ಇವು ನಮ್ಮ ನಾಡಿಗೆ ಗಣನೀಯ ಕೊಡುಗೆಯನ್ನು ನೀಡಿದ್ದಾರೆ. ಇಂತಹ ನಾಡಲ್ಲಿ ಬೆಳೆದ ಪಿ.ಎಸ್.ಕಡೇಮನಿಯವರು ಕಲಾಶಿಕ್ಷಣ ಪಡೆಯುವ ಸಂದರ್ಭದಲ್ಲಿ ಡಿ.ಡಿ.ಪಿ.ಹಾಲಭಾವಿಯವರ ಮತ್ತು ರುಮಾಲೆ ಚನ್ನಬಸವಯ್ಯನವರ ಚಿತ್ರಗಳಿಂದ

ಪ್ರಭಾವಿತಗೊಂಡು ವಿದ್ಯಾರ್ಥಿ ಯಾಗಿದ್ದಾಗಲೇ ಹಲವು ಮಾಧ್ಯಮಗಳಲ್ಲಿ ನಿಸರ್ಗ ಚಿತ್ರಗಳನ್ನು ರಚನೆಗೈದಿದ್ದಾರೆ. ನಂತರ ಬಿಜಾಪುರದಂತಹ ಐತಿಹಾಸಿಕ ಕ್ಷೇತ್ರಕ್ಕೆ ಬಂದು ನೆಲೆಸಿ ಬಿ.ಎಲ್.ಡಿ.ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ನಡೆಯುವ ಸಿದ್ದೇಶ್ವರ ಕಲಾಮಂದಿರದಲ್ಲಿ ಕಲಾಶಿಕ್ಷಕರಾಗಿ ಸೇರಿಕೊಂಡರು. ಇದರಿಂದ ಇನ್ನಷ್ಟು ಕಲಾಕೃತಿ ರಚನೆಗೆ ಅವಕಾಶಗಳು ಒದಗಿಬಂದವು. ಪ್ರತೀ ವಾರದ ಅಂತ್ಯದಲ್ಲಿ ಶನಿವಾರದಂದು ವಿದ್ಯಾರ್ಥಿಗಳೊಂದಿಗೆ ತಾವು ಆ ಸ್ಥಳಗಳಿಗೆ ಹೋಗಿ ನಿಸರ್ಗ ಚಿತ್ರರಚನೆಗೆ ತೊಡಗುತ್ತಿದ್ದರು. ಈ ಹಿನ್ನೆಲೆಯಲ್ಲಿ ಬಿಜಾಪುರದಲ್ಲಿನ ಅನೇಕ ಐತಿಹಾಸಿಕ ಸ್ಮಾರಕಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ರೂಪಿಸಿದ್ದು, ಅಂತಹುಗಳಲ್ಲಿ ಗೋಳುಗುಮ್ಮಟ, ಬಾರಾಕಾಮಾನ, ಇಬ್ರಾಹಿಂ ರೋಜಾ, ಸಾತ್‌ಮಂಜಲ್, ಜಲ್‌ಮಹಲ್‌ಗಳಾಗಿವೆ.

ಕಡೇಮನಿಯವರ ರಚನಾ ವಿಧಾನದಲ್ಲಿ ದಿ.ಹಾಲಭಾವಿಯವರ ತಂತ್ರ ಶೈಲಿಯ ಕೆಲವು ಪ್ರಭಾವಗಳನ್ನು ಕಾಣುತ್ತೇವೆ. ಹೆಚ್ಚಾಗಿ ಜಲವರ್ಣ, ಮಾಧ್ಯಮದಲ್ಲಿ ಚಿತ್ರಿಸಿದ್ದು ವಿಶಿಷ್ಟ ಬಣ್ಣಗಳ ಶೈಲಿ, ಮೈವಳಿಕಗಳ ಸಂಯೋಜನೆಯಿಂದ ಕೂಡಿವೆ.

ಅಡಿಟಿಪ್ಪಣಿಗಳು

೧. ಹೂಗಾರ ಎಸ್.ಕೆ., **ಕಲೆ ಮತ್ತು ಹಬ್ಬ,** ಪು.೧೫

೨. ಸುಬ್ರಹ್ಮಣ್ಯಂ ಕೆ.ವಿ., **ಮುಖಗಳೊಂದಿಗೆ ಮುಖಾಮುಖಿ,** ಪು.೧೦

೩. ಅದೇ, ಪು.೨, ೩

ರೂಪದರ್ಶಿ ಆಧಾರಿತ ಭಾವಚಿತ್ರಗಳು



ವಿಕ್ಷಿಪ್ತ ವ್ಯಕ್ತಿಯ ಭಾವಚಿತ್ರ



ಎಂ.ಎ.ಚಟ್ಟಿಯವರ ಭಾವಚಿತ್ರ



ಭಾವಚಿತ್ರ 1



ಭಾವಚಿತ್ರ 2


ಛಾಯಾಚಿತ್ರ ಆಧಾರಿತ ಭಾವಚಿತ್ರಗಳು



ಗ್ರಾಮೀಣ ವ್ಯಕ್ತಿಯ ಭಾವಚಿತ್ರ



ಕೋ. ಚನ್ನಬಸಪ್ಪ



ದ.ರಾ. ಬೇಂದ್ರೆ



ಅಜ್ಜಿಯ ಭಾವಚಿತ್ರ



ವ್ಯಕ್ತಿ ಭಾವಚಿತ್ರ



ವಿ.ಜಿ.ಅಂದಾನಿ



ಸೋಮಶೇಖರ ಸಾಲಿ



ಎಂ.ಬಿ.ಪಾಟೀಲ




ಡಾ.ಫ.ಗು. ಹಳಕಟ್ಟಿ



ಬಿ.ಎಂ. ಪಾಟೀಲ

ಹಂಪಿ ಪರಿಸರದ ನಿಸರ್ಗ ಚಿತ್ರಗಳು









ವಿಜಾಪುರ ಪರಿಸರದ ಜಲವರ್ಣದ ನಿಸರ್ಗ ಚಿತ್ರಗಳು







ಅಧ್ಯಾಯ ಆರು

ಕಲಾಕೃತಿಗಳ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ ಆರು

ಕಲಾಕೃತಿಗಳ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಭಾರತೀಯ ಚಿತ್ರಕಲೆಗೆ ಪ್ರಪಂಚದಲ್ಲಿ ವಿಶಿಷ್ಟವಾದ ಸ್ಥಾನವಿದೆ. ಸಾವಿರಾರು ವರ್ಷಗಳ ವೈವಿಧ್ಯಮಯ ಸಂಸ್ಕೃತಿ, ನಾಗರಿಕತೆ ಮತ್ತು ಪರಂಪರೆ ಹೊಂದಿದ ನೆಲೆವೀಡು ಭಾರತ. ಹೀಗಾಗಿ ಇಲ್ಲಿಯ ಕಲೆಗೆ ಹತ್ತು ಹಲವು ಮುಖಗಳು ಈ ಪರಂಪರೆ ಆದಿಮಾನವನಿಂದ ಆರಂಭಗೊಂಡು ಇಂದಿನ ಆಧುನಿಕ ಮಾನವರವರೆಗೆ ಹಾಸಿಕೊಂಡಿದೆ. ಉನ್ನತ ಕಲಾವಂತಿಕೆ ಭಾರತೀಯ ಕಲೆಯ ಮೂಲಗುಣ. ವಿಭಿನ್ನ ಧರ್ಮ, ನಡವಳಿಕೆ, ಆಚರಣೆ, ತಮ್ಮ ಕಲೆಯನ್ನು ಶ್ರೀಮಂತಗೊಳಿಸಿದೆ. ಆಧುನಿಕ ಕಲೆಯವರೆಗೆ ಹಲವು ತಂತ್ರ, ಶೈಲಿ, ಸಿದ್ಧಾಂತಗಳನ್ನು ಒಳಗೊಂಡು ಬೆಳೆಯುತ್ತ ಬಂದಿದೆ. ಸಮೃದ್ಧಿಗೊಂಡಿದೆ. ವೈಚಾರಿಕ, ನಿಶ್ಚಯಿತೆ ಇವೆರಡನ್ನೂ ಸಮನ್ವಯಗೊಳಿಸಿ ಅನುವಿಭವಿಸುವ ವ್ಯಕ್ತಿ ಮೂಲವಾದ ಕಲಾಯೋಗವೇ ಭಾರತೀಯ ಕಲಾವಿದನ ಸಿದ್ಧಿ ಎನಿಸುವುದು ಎನ್ನುವಂತೆ ಕಡೆಮನಿಯವರು ಕಲಾಕೃತಿಗಳಲ್ಲಿ ದೇಶೀ ಸೊಗಡನ್ನು ಅಭಿವ್ಯಕ್ತಿಸಿದ ರೀತಿ ಅನುಪಮವಾಗಿದೆ. ಬದುಕಿನ ವೈವಿಧ್ಯಮಯ ಮಜಲುಗಳ ಪ್ರಭಾವದಿಂದ ಬದಲಾಗುವ ಕಲಾವಿದ ತನ್ನ ಬದುಕಿನ ವಿವಿಧ ಘಟ್ಟಗಳಲ್ಲಿ ವಿಭಿನ್ನ ಸಂವೇದನೆಗಳಿಗೆ ಒಳಗಾಗಿ ವೈವಿಧ್ಯಮವಾಗಿ ಸೃಷ್ಟಿಸುವಂತೆ ಕಡೇಮನಿಯವರ ಕಲಾಕೃತಿಗಳಲ್ಲೂ ವೈವಿಧ್ಯತೆಯನ್ನು ಕಾಣುತ್ತೇವೆ. ಚಿತ್ರಕಲೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಕಲಾವಿದರಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಮಾಧ್ಯಮ ಮತ್ತು ತಂತ್ರಗಳಿಗೆ ಮಾರು ಹೋಗುವುದು ಸ್ವಾಭಾವಿಕ ಅಂಶವಾಗಿದೆ.

ಚಿತ್ರಕಲೆಯ ಹಿನ್ನೆಲೆಯಲ್ಲಿ ತಂತ್ರ ಮತ್ತು ಶೈಲಿಯು ಒಂದು ಸ್ವಭಾವಿಕ ಕ್ರಿಯೆಯಾಗಿ ಇಂದಿನ ದಿನಗಳಲ್ಲಿ ಗುರುತಿಸುವುದು ಸಾಮಾನ್ಯವಾಗಿದೆ. ಆದರೆ ಪ್ರಭಾವ, ಪ್ರೇರಣೆಗಳು ಸಾಮಾನ್ಯ ಮಾನವರನ್ನು ವಿಶಿಷ್ಟ ಕೀರ್ತಿವಂತರನ್ನಾಗಿ ಮಾಡುವ ಸ್ವಯಂ ಪ್ರೇರಿತ ಸಾಧನೆಗಳು ಮಾನವರ ಮನಸ್ಸುಗಳನ್ನು ಅದ್ಭುತ ಸಾಧನೆಗಾಗಿ ಕೇಂದ್ರೀಕರಿಸಲು ಮನಸ್ಸಿನ ಚಂಚಲತೆ ನಿವಾರಿಸಲು ಸ್ಫೂರ್ತಿ ಪ್ರೇರಣೆಗಳು ಅತ್ಯಗತ್ಯ. ಒಂದೇ ಮನೆತನದ ಪಾಂಡವ-ಕೌರವರಲ್ಲಿ ದ್ವೇಷ, ವೈರತ್ವ ಭಾವನೆಗಳ ಉಗಮಕ್ಕೆ ಮತ್ತು ಮಹಾಭಾರತ ಯುದ್ಧಕ್ಕೆ ಜೂಜಾಟ ದ್ರೌಪದಿಯರು

ಸ್ಫೂರ್ತಿ ಪ್ರೇರಣೆ ಆದರು. ಋಷಿ ಆಶ್ರಮದ ಕನ್ನಿಕೆ ಶಾಕುಂತಲೆಯನ್ನು ಪ್ರೀತಿಸಲು ದುಶ್ಯಂತ ರಾಜನಿಗೆ ಮೋಹ ಮರುಳತನ ಪ್ರೇರಣೆಗೆ ಸ್ತ್ರೀ ರೂಪ ಸ್ನೇಹಸಂಗ ಸ್ಫೂರ್ತಿ ನೀಡಿತು. ಹರಿಶ್ಚಂದ್ರ ರಾಜನು ಅರಮನೆಯನ್ನು ತ್ಯಜಿಸಲು ಮಸಣವನ್ನು ಕಾವಲು ಮಾಡುವಂತೆ 'ಸತ್ಯ' ಭಾವನೆ ಪ್ರೇರೆಪಿಸಿತು. ಪಾಶ್ಚಿಮಾತ್ಯರ ಜನ ಜೀವನಗಳ ದೃಷ್ಟಾಂತಗಳಲ್ಲಿ ಸ್ಫೂರ್ತಿ ಪ್ರೇರಣೆಗಳು ಹೇರಳ ಶಾಮ್ಸನ್‌ನ ಅದ್ಭುತ ಶಕ್ತಿಯನ್ನು ನಷ್ಟಗೊಳಿಸಲು ಲಾಯಿಡಲಾಳ ಕೂದಲು ಕತ್ತರಿಸುವ ಕತ್ತರಿ ಪ್ರೇರಿತವಾಯಿತು. ಅಥೆಲೋ–ಡೆಸ್ಡಿಮೊನಾರ ಸುಂದರನಂದದ ದಾಂಪತ್ಯ ಜೀವನವು ನಾಶವಾಗಲು ಪರಸ್ಪರರಲ್ಲಿ ಸಂಶಯಭಾವ ಪ್ರೇರಿತವಾಯಿತು. ಅರಸನಾದ ಕಿಂಗಲಿಯರ ತುರಂಗದಲ್ಲಿ ಸಾಯಲು ಅವನ ಹೆಣ್ಣುಮಕ್ಕಳಿಬ್ಬರಲ್ಲಿ ಕ್ರೂರ ಪೆನ್ನುಲಿ ಗುಣ ಪ್ರೇರಣೆ ಆಯಿತು. ಇವೆಲ್ಲ ಸಾಹಿತ್ಯ ಪುರಾಣಗಳ ದೃಷ್ಟಾಂತಗಳು.

ನಮ್ಮ ಎದುರಿನಲ್ಲೇ ಪ್ರತಿನಿತ್ಯ ನೋಡುವ, ಕೇಳುವ ಮತ್ತು ಹೆಮ್ಮೆಪಡುವ ದೃಷ್ಟಾಂತಗಳು ಸಾಕಷ್ಟು. ಅವರಲ್ಲಿ ನಾಡಿನ ಹೆಸರಾಂತ ಕಲಾವಿದರಲ್ಲಿ ಒಬ್ಬರಾದ ಪಿ.ಎಸ್.ಕಡೇಮನಿಯವರ ಕಲಾ ಸಾಧನೆಯ ಪ್ರಭಾವ, ಪಿಕಾಸೋ ರಚಿಸಿದ ಗೆರ್ನಿಕಾ ಕಲಾಕೃತಿಯ ರಚನೆಗೆ ಯುದ್ಧ ನ್ನಿವೇಶ ಪ್ರೇರಣೆಯಾಯಿತು. ರೋರಿಚನು ಹಿಮಾಲಯ ಪ್ರವರ್ತಗಳನ್ನು ನೋಡಿ ಪ್ರೇರಣೆಗೊಂಡು ಹಲವಾರು ಕಲಾಕೃತಿಗಳನ್ನು ರಚಿಸಿದ್ದಾನೆ.

ಪಿ.ಎಸ್.ಕಡೇಮನಿಯವರ ಕಲೆ ಎನ್ನುವುದು ಮಾನವನ ವೈಶಿಷ್ಟ್ಯ. ಅಂತೆಯೇ ನಮ್ಮ ಸುತ್ತಲಿನ ನಿಸರ್ಗ ಹಾಗೂ ದೈನಂದಿನ ಜೀವನದಲ್ಲಿ ಜನಸಾಮಾನ್ಯರಲ್ಲಿ ಪ್ರಭಾವ ಬೀರುವಂತೆ ಕಲಾವಿದರ ಮನಸ್ಸಿನ ಮೇಲೂ ಪ್ರಭಾವ ಬೀರುತ್ತದೆ. ಆದರೆ ಕಲಾವಿದನಲ್ಲಿರುವ ಆತನ ಸಂವೇದನೆಯು ಹೊರಗಿನ ಘಟನೆಗಳಿಗೆ ಹಾಗೂ ದೃಶ್ಯಕಲೆಗಳಿಗೆ ಉಳಿದವರಿಗಿಂತ ಭಿನ್ನವಾಗಿ ಅಸ್ವಾದಿಸಿ ಹೆಚ್ಚು ತೀವ್ರವಾಗಿ ಸ್ಪಂದಿಸುತ್ತಾನೆ. ಈ ಸ್ಪಂದನ ಹಾಗೂ ತುಡಿತಗಳು ಮಾಧ್ಯಮದ ಮೂಲಕ ಪ್ರಕಟವಾಗಿ ಕಲಾಕೃತಿಯೆನಿಸುತ್ತವೆ. ಪಿ.ಎಸ್.ಕಡೇಮನಿಯವರ ಕಲಾಕೃತಿ ರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯು ಕೃತಿರಚನೆಯಲ್ಲಿ ಅವರದೇ ಆದ ಸಂವೇದನೆಯನ್ನು ಕಾಣಬಹುದು. ಅವರು ನಿಸರ್ಗದತ್ತವಾದ ಹಳ್ಳಿಯ ಪರಿಸರದಲ್ಲಿ ಬೆಳೆದು ಬಂದ ವ್ಯಕ್ತಿ. ಆದುದರಿಂದ ಅವರ ಕಲಾಕೃತಿಗಳಲ್ಲಿ ಸಹಜವಾಗಿ ಗ್ರಾಮೀಣ ಜನರ ಬದುಕಿನ ಚಿತ್ರಣ ಮೂಡಿಬಂದಿದೆ ಎನ್ನಬಹುದು. ಅವರು ಜಲವರ್ಣ ಆಕ್ರಾಲಿಕ್ ಮತ್ತು ತೈಲವರ್ಣಗಳಿಂದ ಕೃತಿಗಳನ್ನು ರಚಿಸಿದ್ದಾರೆ. ಅವರ ಕಲಿಕಾಹಂತದಲ್ಲಿ ಬ್ರಿಟಿಷ್ ಅಕಾಡೆಮಿಕ್ ಪದ್ಧತಿಯಲ್ಲಿ ವ್ಯಾಸಂಗ ಮತ್ತು ಪಾಶ್ಚಾತ್ಯ ಕಲಾವಿದ ಕಲಾಕೃತಿಗಳ ಪ್ರಭಾವಕ್ಕೂ ಒಳಗಾಗಿದ್ದಾರೆ. ಆದರೆ ಕೃತಿ ರಚನೆಯ ವಸ್ತು ವಿಷಯದಲ್ಲಿ ಭಾರತೀಯತೆ ಮತ್ತು ತಮ್ಮ ಸುತ್ತಮುತ್ತಲಿನ ಗ್ರಾಮೀಣ ಪರಿಸರದ ವಸ್ತು ವಿಷಯಗಳು ಹೆಚ್ಚಾಗಿ ಕಾಣುತ್ತೇವೆ.

ಪ್ರಭಾವ

ಪಿ.ಎಸ್.ಕಡೇಮನಿ ಅಥವಾ ಇನ್ನುಳಿದ ಯಾವುದೇ ಕಲಾವಿದರಾಗಲಿ ಅವರು ತಮ್ಮ ಸಮಕಾಲೀನ ಕಲಾವಿದರಿಗಿಂತ ವಿಭಿನ್ನ ಎನ್ನುವ ನಿಟ್ಟಿನಲ್ಲಿ ಕಲಾಕೃತಿಗಳ ರಚಿಸಿ ವೈಯಕ್ತಿಕ ಛಾಪನ್ನು ಮೂಡಿಸುವುದು ಸರ್ವೇಸಾಮಾನ್ಯ. ಹೀಗೆ ಪ್ರಪಂಚದ ಎಲ್ಲಾ ಚಿತ್ರಕಲಾವಿದರು ಒಂದಲ್ಲಾ ಒಂದು ರೀತಿಯಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಕಲಿಕಾ ಹಂತದಲ್ಲಿ ಪ್ರಭಾವ ಬೀರುವುದು ಸಹಜ. ಅದರಂತೆ ಕಲಾವಿದರು ತಮಗೆ ಇಷ್ಟವಾದ ವರ್ಣವಿನ್ಯಾಸ, ಸಂಯೋಜನೆ, ವಸ್ತು ವಿಷಯ ಕಲಾವಿದರಿಂದ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಅದರೊಂದಿಗೆ ತಮಗೆ ತಾವೇ ಸಾಟಿಯಾಗಿರುತ್ತಾರೆ. ಇದಕ್ಕೆ ಪಿ.ಎಸ್.ಕಡೇಮನಿಯವರು ಹೊರತಾಗಿಲ್ಲ. ಇದೊಂದು ತಡೆಲಾಗದ ತುಡಿತ ಬೇರೇನೂ ಅಲ್ಲ ಎನ್ನಬಹುದು. ಏಕೆಂದರೆ ಸಂವೇದನಾಶೀಲ ಮನುಷ್ಯನಿಗೆ ಕೆಲವು ಪ್ರಭಾವಗಳು ಪ್ರೇರಣೆ ನೀಡಿ ಸೃಜನಶೀಲ ಸೃಷ್ಟಿಗೆ ಕಾರಣವಾಗುತ್ತವೆ.

ಆಗಲೇ ಹೇಳಿದಂತೆ ಪ್ರಭಾವವು ಸಂವೇದನಾಶೀಲವನ್ನು ಹಾಗೂ ಮುಕ್ತಮನಸ್ಸನ್ನು ಮಾತ್ರ ಆಯ್ದುಕೊಳ್ಳುತ್ತದೆ. ಒಣ ಅಹಮ್ಮಿನವರನ್ನ ಎಂದೂ ಸಮೀಪಿಸುವುದಿಲ್ಲ. ಸಂಸ್ಕೃತದಲ್ಲಿ ಪ್ರಭಾವಕ್ಕೆ ನಮ್ಮ 'ಸುತ್ತಮುತ್ತಲಿನ ಬೆಳಕು' ಅಥವಾ 'ಹೊಮ್ಮಿ ಬರುವ ಬೆಳಕು' ಎಂದೆಲ್ಲಾ ಅರ್ಥಗಳಿವೆ. ಆದರೆ ನಾವು ಭಾವಿಸುವುದಲ್ಲ. ಅದು ಅನುಭವವಾಗುತ್ತದೆ. ಇಷ್ಟೆಲ್ಲಾ ಅವರ ಕೃತಿಗಳಲ್ಲಿ ಸಹಜವಾಗಿಯೇ ತಮ್ಮ ಸಮಕಾಲೀನ ಹಿರಿಯ ಶ್ರೇಷ್ಠ ಕಲಾವಿದರಾದ ರುಮಾಲೆ ಚನ್ನಬಸಯ್ಯನವರ ಭೂದೃಶ್ಯ ಚಿತ್ರಗಳು, ಆರ್.ಎಂ.ಹಡಪದರ ಸಂಯೋಜನಾಚಿತ್ರಗಳು, ಎಂ.ವಿ.ಮಿಣಜಗಿಯವರ ಕಲಾಕೃತಿಗಳು, ಟಿ.ಪಿ.ಅಕ್ಕಿಯರ ಕಲಾಕೃತಿಗಳು ಪ್ರಭಾವ ಬೀರಿರುವುದಲ್ಲದೇ ಪಾಶ್ಚಾತ್ಯ ಕಲಾವಿದರಾದ ಮೈಕೆಲ್ ಎಂಜಿಲೋ ಕಲಾಕೃತಿಗಳು, ವ್ಯಾನ್‌ಗಾಗ್‌ನ 'ಸೆಲ್ಫ್ ಪೋರ್ಟ್ರೇಟ್' ಕಲಾಕೃತಿಗಳು ಕಲಾವಿದರ ಕಲಾವಿದ ಕಡೇಮನಿಯವರ ಮೇಲೆ ಗಾಢವಾದ ಪ್ರಭಾವ ಬೀರಿರುವುದಾಗಿ ಹೇಳುತ್ತಾರೆ.

ಅಲ್ಲದೇ ಅವರ ಸಹದ್ಯೋಗಿ ಹಿರಿಯ ಕಲಾವಿದರಾದ ದಿ.ಎಂ.ಎಸ್.ಜತ್ತಿ ಮತ್ತು ನಾಡಿನ ಶ್ರೇಷ್ಠ ಕಲಾವಿದರಾದ ನಾಡೋಜ ಜೆ.ಎಸ್.ಖಂಡೇರಾವ್ ಅವರ ಪ್ರಭಾವವು ಇವರ ಮೇಲಾಗಿರುವುದು ಇವರ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಂಡುಬರುವ ಪ್ರಮುಖ ಅಂಶವೆಂದು ಹೇಳಬಹುದು.

ಇನ್ನೊಂದು ಪ್ರಮುಖ ಅಂಶವೆಂದರೆ ಪಿ.ಎಸ್.ಕಡೇಮನಿಯವರ ಗುರುಗಳಾದ ದಿ.ಡಿ.ವಿ. ಹಾಲಭಾವಿಯವರ ಕಲಾಕೃತಿಗಳ ಮತ್ತು ಇನ್ನೋರ್ವ ಗುರುಗಳಾದ ಎಂ.ಆರ್.ಬಾಳೀಕಾಯಿಯವರ ಕಲಾಕೃತಿಗಳಲ್ಲಿಯ ವಸ್ತು ವಿಷಯಗಳು ಹೆಚ್ಚಾಗಿ ಗ್ರಾಮೀಣ ಪರಿಸರದ ಜನರ ಜೀವನದ ಕುರಿತಾಗಿಯೇ ಕಾಣುತ್ತೇವೆ. ಅದೇ ರೀತಿ ಕಡೇಮನಿಯವರ ಕಲಾಕೃತಿಗಲ್ಲಿಯೂ ಗ್ರಾಮೀಣ

ಪರಿಸರದ ವಸ್ತು ವಿಷಯಗಳೇ ಕಂಡುಬರುವುದರಿಂದ ಕಡೇಮನಿಯವರ ಮೇಲೆ ಅವರ ಕಲಾಶಿಕ್ಷಣದ ಗುರುಗಳ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಆದರೆ ಈ ಮೂರು ಜನರ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಿರುವಂತಹ ವಸ್ತು ವಿಷಯಗಳಲ್ಲಿ ಸಾಮತ್ಯೆ ಕಂಡರೂ ಕೂಡ ತಂತ್ರ, ಶೈಲಿಯಲ್ಲಿ ಕಡೇಮನಿಯವರ ಕಲಾಕೃತಿಗಳಲ್ಲಿ ಭಿನ್ನತೆ ಕಂಡುಬರುತ್ತದೆ.

ಮೊದ ಮೊದಲು ಅವರ ಗುರುಗಳ ಹಾಗೂ ಪಾಶ್ಚಾತ್ಯ ಕಲಾವಿದರ ಅನುಕರಣೆ ಎದ್ದು ಕಂಡರೂ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಅವರ ನಿರಂತರ ಅಭ್ಯಾಸದೊಂದಿಗೆ ಚಿತ್ರಕೃತಿಗಳನ್ನುರಚಿಸಿರುವುದು ಕಂಡುಬರುತ್ತದೆ. ಕಲಾಕೃತಿಗಳನ್ನು ಗಮನಿಸಿದ್ದರು ಇದು ಕಡೇಮನಿಯವರ ಕಲಾಕೃತಿಯೆಂದು ಖಚಿತವಾಗಿ ಹೇಳುವಷ್ಟು ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಕೃತಿ ರಚನೆಯಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರಕಲಾ ಸಂಪ್ರದಾಯದ ನೆರಳು ಇವರ ಕಲಾಕೃತಿಗಳಲ್ಲಿ ಕಂಡುಬರುತ್ತದೆ. ಇವರ ಎಲ್ಲ ಕಲಾಕೃತಿಗಳು ಸಾಮಾಜಿಕ ಜೀವನ ಮತ್ತು ಗ್ರಾಮೀಣ ಬದುಕಿನ ವಸ್ತುವಿಷಯವನ್ನು ಒಳಗೊಂಡಿದ್ದ ಸಹೃದನಿಗೆ ರಸಾನುಭವ ನೀಡುತ್ತವೆ.

ಪ್ರೇರಣೆ

ಪ್ರೇರಣೆ ಎಂದರೆ ಸೃಷ್ಟಿ ಕ್ರಿಯೆಯ ಮೂಲಶಕ್ತಿಯಾಗಿದೆ. ಈ ಪ್ರೇರಣೆ ಎಂದರೆ? ನಮ್ಮ ಸುತ್ತಮುತ್ತಲಿನ ವಿಶ್ವ ಇಷ್ಟೊಂದು ಬೆಳೆದಿರುವಂತಹ ಈ ಪ್ರೇರಣೆಯನ್ನು ಎರಡು ವಿಧವಾಗಿ ವಿಂಗಡಿಸಿಕೊಳ್ಳಬಹುದು. ಒಂದು ಭಾವಪ್ರೇರಣೆ, ಇನ್ನೊಂದು ಅಭಾವ ಪ್ರೇರಣೆ. ಭಾವ ಪ್ರೇರಣೆಯು ಸಂಪೂರ್ಣ ಕಾವ್ಯಾತ್ಮಕವಾಗಿದ್ದು, ಸಂತೋಷದಿಂದ ಸಂತೋಷವನ್ನು ದುಃಖದಿಂದ ಸಂತೋಷವನ್ನು ಕೊಡುವಂತಹ ಕಲಾನಿರ್ಮಿತಿಗಳ ಹುಟ್ಟಿಗೆ ಕಾರಣವಾಗುತ್ತದೆ. ಅಭಾವ ಪ್ರೇರಣೆಯು ಇಲ್ಲದಿರುವ ಆದರೆ ಅವಶ್ಯಕವಾಗಿ ಬೇಕಾಗಿರುವ ಭೌತಿಕ ವಸ್ತುವೆಂದರೆ, ರಚನೆಗೆ ಮೂಲ ಕಾರಣವಾಗುವ ಪ್ರಚೋದನಾ ಶಕ್ತಿಯಾಗಿ ಇದನ್ನೇ ಕೋಶಗಳು ವ್ಯಾಕರಣಾತ್ಮಕವಾಗಿ ಕ್ರಿಯಾಪದವೆಂದು ಗುರುತಿಸಿ ಪ್ರಚೋದಿಸು ಎಂಬ ಅರ್ಥವನ್ನು ಇದಕ್ಕೆ ನಿರ್ದೇಶಿಸುತ್ತದೆ.

ಪ್ರಸ್ತುತ ಭಾಗದಲ್ಲಿ ಪಿ.ಎಸ್.ಕಡೇಮನಿಯವರು ಪಡೆದಿರಬಹುದಾದ ಪ್ರೇರಣೆಯೂ ಭಾವ ಪ್ರೇರಣೆಯಾಗಿದೆ. ಏಕೆಂದರೆ ಅದೊಂದು ಕಾವ್ಯಾತ್ಮಕ ನಿರ್ಮಿತಿಗಳ ಮೂಲ ಕಾರಣವಾಗಿದೆ. ಜೀವಂತ ಕಲಾವಿದನೊಬ್ಬ ಅಂದರೆ ಕ್ರಿಯಾಶೀಲವಾದ ಕಲಾಭಿಜ್ಞತೆ; ಪೂರ್ಣ ಮನಸುಳ್ಳ ಕಲಾವಿದನು ಪಡೆಯುವ ಪ್ರೇರಣೆಯಾಗಿದೆ. ಈ ಪ್ರೇರಣೆಯೂ ಕಡೇಮನಿಯವರ ಕಲಾಬದುಕಿನ ಪ್ರತಿಯೊಂದು ಹಂತದಲ್ಲಿಯೂ ಬೇರೆ ಬೇರೆ ಮೂಲಗಳಿಂದ ಅವರಿಗೆ ದೊರೆತಿದೆ ಎಂಬುದನ್ನು ಅವರ ಕಲಾಬದುಕನ್ನು ಅಧ್ಯಯನ ಮಾಡಿದಾಗ ನಮಗೆ ತಿಳಿಯುತ್ತದೆ.

ಪಿ.ಎಸ್.ಕಡೇಮನಿಯವರು ಬಾಲ್ಯದಲ್ಲಿಯೇ ತಂದೆಯವರು ಹಬ್ಬ-ಹರಿದಿನಗಳಲ್ಲಿ ಗೋಡೆಗಳ ಮೇಲೆ ಬಿಡಿಸುತ್ತಿದ್ದಂತಹ ಚಿತ್ರಗಳಿಂದ ಹಾಗೂ ತಾಯಿಯವರ ಕೌದಿಕಲೆ ಮತ್ತು ಕಸೂತಿ ಕಲೆಯಿಂದ ಪ್ರೇರಿತರಾಗಿ ಚಿತ್ರ ಬರೆಯಲು ಪ್ರಾರಂಭಿಸಿದರು. ಅಲ್ಲದೆ ತಮ್ಮ ಒಕ್ಕಲುತನದ ಕುಟುಂಬದಲ್ಲಿನ ಸಂಸ್ಕಾರಗಳಿಂದ ಗ್ರಾಮೀಣ ಜನರ ನೋವು ನಲಿವುಗಳೇ ಅವರಿಗೆ ಕಲಾ ರಚನೆಗೆ ಪ್ರಚೋದನೆ ನೀಡಿದವು. ಗ್ರಾಮೀಣ ಜನರ ಬದುಕಿನ ಆ ದೃಶ್ಯಗಳಿಗೆ ತಮ್ಮ ಬಾಲ್ಯಾವಸ್ಥೆಯಲ್ಲಿಯೇ ಸ್ಪಂದಿಸುವ ಮನಃಶಕ್ತಿಯನ್ನು ಪಡೆದಿದ್ದರಿಂದ ಅವರು ಇಷ್ಟೊಂದು ಪ್ರಬುದ್ಧ ಕಲಾವಿದರಾಗಲು ಸಾಧ್ಯವಾಯಿತು ಎನ್ನಬಹುದು.

ಇಂಥ ಪ್ರಬುದ್ಧ ಕಲಾವಿದರು ದಿ.ಡಿ.ವಿ.ಹಾಲಭಾವಿ ಹಾಗೂ ಎಂ.ಆರ್.ಬಾಳೀಕಾಯಿ ಗುರುಗಳಲ್ಲಿ ವಿದ್ಯಾರ್ಥಿಯಾಗಿ ಸೇರಿದರು ಅವರಲ್ಲಿದ್ದ ಕಲಾ ಪ್ರಭಾವಕ್ಕೆ ಸೂಕ್ತ ದಾರಿ ಯೊಂದನ್ನು ಪಡೆದುಕೊಳ್ಳಲು ಗುರುಗಳು ನೀಡಿದ ಔಚಿತ್ಯಪೂರ್ಣವಾದ ಸಲಹೆ ಸೂಚನೆ ತಿದ್ದುಪಡಿಗಳನ್ನು ಇನ್ನೊಂದು ಬಗೆಯ ಯೋಗ್ಯ ಪ್ರೇರಣೆಯನ್ನು ನೀಡದ್ದರಿಂದ ಅವರು ಸಾಕಷ್ಟು ಪರಿಶ್ರಮದಿಂದ, ಶ್ರದ್ಧೆಯಿಂದ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಇಂದು ಹೆಸರಾಂತ ಕಲಾವಿದರ ಸಾಲಿನಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಯಿತು.

ಶೈಲಿ

ಶೈಲಿ ಎಂದರೆ ಕಲಾವಿದನೊಬ್ಬನು ಅಭಿವ್ಯಕ್ತಿಸುವ ರೀತಿ ಎಂದು ಸುಲಭವಾಗಿ ಹೇಳ ಬಹುದಾದರೂ ಅಷ್ಟೇ ಸಾಲದು "ಕಲಾವಿದರಾಗಲಿ, ಕವಿಯಾಗಲಿ ತನ್ನಲ್ಲಿ ಸ್ಫುರಿಸಿದನ್ನು ಯಾವುದೇ ಮಾಧ್ಯಮದಲ್ಲಿ ಹೇಳಬಯಸುವ ಮಾರ್ಗವೇ ಶೈಲಿ.

ಜಡವಾಗಿ ಯಾರು ಒಂದು ಕಾಲದ ಜನಕ್ಕೆ ಅಂಟಿಕೊಂಡು ಯಾವುದೇ ಸಂಪ್ರದಾಯಿಕ ಸಾಧನ, ಶೈಲಿಗಳನ್ನು ಅನುಕರಿಸುತ್ತಾರೋ ಅಂತಹ ಜನರ ಸಮಾಜ ಜೀವನವು ಚೈತನ್ಯಮಯವಾಗಿ ಸಾಗಿಲ್ಲವೆಂದೂ ಹೇಳಬೇಕು. ಕಲಾವಿದ ತಾನು ಗುರುತಿಸಿಕೊಳ್ಳುವುದು ಮತ್ತು ಬೆಳೆಯುವ ಒಂದು ಶೈಲಿ ಪ್ರಭಾವದಿಂದ ಎಂದರೆ ತಪ್ಪಗಲಾರದು. ಕಲಾವಿದನ ಸ್ವಂತ ಅನುಭವ, ಸಂವೇದನೆಯನ್ನು ನಿರೂಪಿಸಲು ಶೈಲಿ ಒಂದು ವಾಹಕವಿದ್ದಂತೆ.

ಕಡೇಮನಿಯವರ ಕಲಾಕೃತಿಗಳನ್ನು ಅಧ್ಯಯನ ಮಾಡಿದಾಗ ಕೆಲವು ವಿಶಿಷ್ಟ ಅಂಶಗಳು ಕಂಡುಬರುತ್ತವೆ. ಇವರದು ಬ್ರಿಟೀಷ್ ಅಕಾಡೆಮಿಕ್ ಕಲಾಶೈಲಿಯ ಶಿಕ್ಷಣ ಪಡೆದವರಾದರೂ ಅದರ ಪ್ರಭಾವ ಇದ್ದರೂ ಕೂಡ ಭಾರತೀಯತೆಯ ಗ್ರಾಮೀಣ ಬದುಕಿನ ಅನುಭವ ಮತ್ತು ಜಾನಪದ ಅಂಶಗಳು ಇವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಸೌಂದರ್ಯ, ನೈಜತೆಯ ಸೊಬಗು ಪ್ರತಿಯೊಂದು ಚಿತ್ರಗಳಲ್ಲಿನ ಭಾವನೆಗಳು ಇವು ಕಲಾಸೃಷ್ಟಿಯಲ್ಲಿ ಗುರುತಿಸುವ ಪ್ರಮುಖ ಕಲಾ ಕೌಶಲ್ಯದ ಶೈಲಿಯಾಗಿದೆ. ಕಡೇಮನಿಯವರು ಯಾವುದೇ ಪ್ರಭಾವಕ್ಕೆ ಒಳಗಾದಲ್ಲಿ

ತಮಗೆ ಯೋಗ್ಯವೆನಿಸಿದ ಶೈಲಿಯಿಂದ ಕೃತಿ ರಚಿಸಿದ್ದಾರೆ. ಗ್ರಾಮೀಣ ಪರಿಸರದ ಜನರ ನಿತ್ಯದ ಕೆಲಸಕಾರ್ಯದ ಚಿತ್ರಣವನ್ನು ಜನಪದ ಕಲೆಗಳಾದ ಹಬ್ಬಹರಿದಿನಗಳಲ್ಲಿ ಗೋಡೆಗಳ ಮೇಲೆ ಬರೆದಿರುವಂತಹ ಚಿತ್ರಗಳು ಕಡೇಮನಿಯವರ ತಾಯಿಯವರು ಹೊಲಿದಿರುವಂತಹ ಕೌದಿ ಕಲೆ, ಕಸೂತಿ ಕಲೆ, ಕೊಂಚಿಗೆ, ಕುಲಾಯಿಗಳನ್ನು ತಮ್ಮ ಕಲಾಕೃತಿಗಳಲ್ಲಿ ಬಳಸಿಕೊಂಡಿರುವುದರಿಂದ ಸಹಜವಾಗಿಯೇ ಇವರ ಕಲಾಕೃತಿಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ತಂತ್ರ

ತಂತ್ರವೆಂಬುದು ನಿರ್ಮಾನ ಹಂತದಲ್ಲಿನ ಕ್ರಿಯೆಯನ್ನು ಕುರಿತದ್ದಾಗಿದೆ. ಶೈಲಿ ಎಂಬುದು ಕೃತಿಯೊಂದರ ಕುರಿತದ್ದಾಗಿದೆ. ಹೇಗೆ ಶೈಲಿ ಎಂಬುದು ಕೃತಿಯೊಂದರ, ವಿಚಾರವೊಂದರ ಆತ್ಮವಾಗಿದೆಯೋ ಹಾಗೆಯೇ ತಂತ್ರವೆಂಬುದು ಕಲಾಕೃತಿಯೊಂದು ಮೂಡಿಬರುವಾಗಿನ ಅಥವಾ ಮೂಡಿಸುವ ಸಾಪೇಕ್ಷದಂತವಾಗಿದೆ. ಇದು ಹೇಗೆ ಮೂಡಿತು ಎಂಬುದು ಶೈಲಿಯಾದರೆ, ಮೂಡುವುದೇ ತಂತ್ರ ಮೂಡಿದ ನಂತರದ ಕಲಾಕೃತಿಯ ಅಥವಾ ವಿಚಾರದ ಒಟ್ಟು ಬದುಕೇ ಅದರ ಪ್ರಭಾವ ಅಥವಾ ಇತರರ ಮೇಲೆ ಎಂದುಕೊಳ್ಳಬೇಕು.

ಕಲಾವಿದನ ಕಲಾಕೃತಿಯೂ ಸಹ ತಂತ್ರದ ಮೂಲಕವೇ ಮೂಡಿ ಬಂದಿರುತ್ತದೆ. ಏಕೆಂದರೆ ತಂತ್ರವು ಇಂಗ್ಲೀಷ್ 'TECHNIQUE' ಎಂಬ ಪದದ ಸಮಾನ ವೇದಿಕೆಯಾಗಿದೆ. ಇದನ್ನು ಕೋಶಗಳ ತಂತ್ರ ಹಾಗೂ ಕೌಶಲ್ಯವೆಂದು ವಿವರಿಸುವುದುಂಟು. ಅಂದರೆ ತಂತ್ರವೆಂಬುದು ಕೃತಿಯೊಂದರ ಸಂಪೂರ್ಣ ನಿರ್ಮಾಣಕ್ಕೆ ಸಂಬಂಧಿಸಿದ ಶಬ್ದವಾಗಿದ್ದು ಕಲಾವಿದನು ಮೂಲ ಆಶಯಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಇರುವ ಏಕೈಕ ಮಾರ್ಗವಾಗಿದೆ. ಏಕೆಂದರೆ ತಂತ್ರಕೌಶಲ್ಯದಲ್ಲಿನ ಕಲಾಪ್ರಜ್ಞೆಯೂ ಕೇವಲ ಮಾನಸಿಕ ಮಟ್ಟದಲ್ಲಿ ಉಳಿಯುತ್ತವೆಯೋ ಹೊರತು ಬಹುತೇಕ ರೂಪ ಪಡೆದು ಮೂಡಿಬರಲಾರದು.

ಇದೇ ದೃಷ್ಟಿಕೋನದಲ್ಲಿ ಪಿ.ಎಸ್.ಕಡೇಮನಿಯವರ ಕಲಾಕೃತಿಗಳು ಮೂಡಿಬಂದಿರುವ ಬಗೆಯನ್ನು ನೋಡಲಾಗಿ; ಅವರ ಎಲ್ಲ ಕಲಾಕೃತಿಗಳು ಆರಂಭಿಕ ಗುರುಗಳಾದ ದಿ.ಡಿ.ವಿ. ಹಾಲಭಾವಿಯವರಿಂದ ಹಿಡಿದು "ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಲಾಶಾಲೆಯ ಸಂಸ್ಕಾರಗಳು ಮುಖ್ಯಪಾತ್ರವಹಿಸಿದನ್ನು ನಿಶ್ಚಳವಾಗಿ ಕಾಣಬಹುದಾಗಿದೆ. ಅವರು ಯಾವುದೇ ಕಲಾಕೃತಿಯನ್ನು ನಿರ್ಮಿಸುವುದಕ್ಕಿಂತ ಮೊದಲು ಅದರ ಸಂಪೂರ್ಣ ಸಂಯೋಜನೆಯನ್ನು ಪೆನ್ಸಿಲ್‌ನಿಂದ ರೇಖಾಕೃತಿ ಮಾಡಿಕೊಂಡು ಅದಕ್ಕೆ ಆಕ್ರಲಿಕ್ ವರ್ಣದಿಂದ ತೆಳುವಾಗಿ 'ವಾಶ್' ಮಾಡಿ ಬೇಕಾದ ಬದಲಾವಣೆಗಳನ್ನು ಆರಂಭಪೂರ್ವ ಹಂತದಲ್ಲಿ ಮಾಡಿಕೊಂಡು ನಂತರ ತೈಲವರ್ಣದಲ್ಲಿ ಮುಖ್ಯ ಸಂಯೋಜನೆಯನ್ನು ಅವರ ವಿಷಯಾನುಕ್ರಮದಲ್ಲಿ ಮಿಶ್ರ ಬಣ್ಣ ಬಳಕೆಯೊಂದಿಗೆ ಕಲಾಕೃತಿಯನ್ನು ರಚಿಸುತ್ತಾರೆ. ಇದು ಸಾಮಾನ್ಯವಾಗಿ ಎಲ್ಲ ಕಲಾವಿದರ

ರಚನಾ ವಿಧಾನದಲ್ಲಿ ಕಂಡುಕೊಂಡರೂ ಕೂಡ ಕಡೇಮನಿಯವರ ರಚನಾ ತಂತ್ರ ವಿಧಾನವು ಭಿನ್ನವಾಗಿ ತೋರುತ್ತದೆ.

ಕಡೇಮನಿಯವರು ಹೇಳುವ ಹಾಗೆ ಆಕ್ರಾಲಿಕ್ ವರ್ಣಗಳನ್ನು ಮಿತವಾಗಿ ಬಳಸುವಂತಹ ಸ್ವಭಾವ ನನ್ನದು ಯಾಕೆಂದರೆ? ನಿರ್ಮಾಣವಾಗಿರುವಂತಹ ಕ್ಯಾನ್‌ವಾಸ್ ಮೇಲೆ ಒಂದು 'ವಾಶ್' ಮಾತ್ರ ಆಕ್ರಾಲಿಕ್ ವರ್ಣವನ್ನು ತುಂಬಿ ಅದರ ಮೇಲೆ ತೈಲವರ್ಣದಿಂದಲೇ ಕಲಾಕೃತಿ ರಚಿಸುತ್ತೇನೆ ಹಾಗೂ ಆ ಕಲಾಕೃತಿಗೆ ಪೂರಕವಾದಂತಹ/ವಾಗುವಂತಹ ತಂತ್ರಗಳನ್ನು ಬಳಸುತ್ತೇನೆ ಎಂದು ಹೇಳುತ್ತಾರೆ.

ಹೀಗೆ ಕಡೇಮನಿಯವರ ಕಲಾಕೃತಿಗಳ ರಚನಾ ಕ್ರಮದಲ್ಲಿ 'ಕೌದಿಯು ಬಹುಮುಖ್ಯ ಪಾತ್ರ ವಹಿಸುತ್ತದೆ ಎಂದು ಹೇಳಬಹುದು. ಅವರ ಗ್ರಾಮೀಣ ಪರಿಸರದ ವಿಷಯಗಳಲ್ಲಿ ಈ ಕೌದಿಯು ಕಲಾಕೃತಿಯ ಯಾವುದೇ ಭಾಗದಲ್ಲಿ ಅದರ ಛಾಯೆ ಎದ್ದು ಕಾಣುತ್ತದೆ.

ಕಡೇಮನಿಯವರ ಕೃತಿ ನಿರ್ಮಾಣದ ಪ್ರತಿ ಹಂತದಲ್ಲೂ ಅದರ ಮೂಲ ಸ್ವರೂಪದ ಮೇಲೆ ಲಕ್ಷ ಕೇಂದ್ರೀಕರಿಸಿ ಇಚ್ಛಿತ ಸ್ವರೂಪಕ್ಕೆ ಚಿತ್ರವನ್ನು ತರುತ್ತಾರೆ. ಹೀಗೆ ಮಾಡಲು ಮನಸ್ಸಿನ ಹಾಗೂ ವರ್ಣಗಳ ಮೇಲಿನ ಹಿಡಿತ ಇವೆರಡೂ ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಆದ್ದರಿಂದ ಕಡೇಮನಿಯವರ ಕೃತಿಗಳು ಯಾವುದೋ ಗಡಿಬಿಡಿಯಿಂದ ಅವ್ಯವಸ್ಥಿತವಾಗಿ ನಿರ್ಮಾಣವಾದವುಗಳಲ್ಲ. ವ್ಯವಸ್ಥಿತವಾದ ರೀತಿಯಲ್ಲಿ ಯೋಜನಾಬದ್ಧವಾಗಿ, ಕಾಳಜಿಪೂರ್ವಕವಾಗಿ ಹಾಗು ಸಂಯೋಜನೆಗೆ ಅನುಗುಣವಾಗಿ ವಸ್ತು ವಿಷಯಗಳು ಒಡಮೂಡಿರು ವಂಥವುಗಳಾಗಿವೆ. ಇಂಥ ನಿರ್ಮಿತಿ ಕಾಲದಲ್ಲಿ ಗುರು ವೃಂದದ ಹಾಗೂ ತಾಯಿಯವರ ಎಲ್ಲ ಸಂಸ್ಕಾರಗಳು ಜಾಗೃತವಾಗಿದ್ದುಕೊಂಡು ಕೆಲಸ ಮಾಡಿರುತ್ತವೆ. ಆದರೆ ಇಂದಿನ ತಲೆಮಾರಿನ ಬಹುಜನ ಕಲಾವಿದರಲ್ಲಿ ಈ ಶಿಸ್ತುಬದ್ಧ ನಿರ್ಮಾಣ ತಂತ್ರದ ಕೊರತೆ ಇರುವುದರಿಂದ ಇತ್ತೀಚಿನ ಕೃತಿಗಳು ಕಡೇಮನಿಯವರಂಥಹ ಅಗ್ರ ಪಂಕ್ತಿಯ ಕಲಾವಿದರ ಸಾಲಿನಲ್ಲಿ ನಿಲ್ಲಲಾರರು ಹೋಗುತ್ತಿದ್ದಾರೆ. ಇದು ಕಡೇಮನಿಯವರ ಕಲಾಕೃತಿಗಳ ವಸ್ತುವಿಷಯದ ಆಯ್ಕೆಯ ಮತ್ತು ಅವರ ವ್ಯಕ್ತಿತ್ವದ ವಿಶೇಷತೆಯಾಗಿದೆ. ಇದಕ್ಕೆ ಕಾರಣ ಅವರಲ್ಲಿರುವ ತಾಳ್ಮೆ ಹಾಗೂ ಕ್ರಿಯಾಶೀಲತೆ ಇದಕ್ಕೆ ಕಾರಣವಾಗಿದೆ.

ರೇಖಾಚಿತ್ರಗಳ ತಂತ್ರ

ಪಿ.ಎಸ್.ಕಡೇಮನಿಯವರ ರೇಖಾ ಚಿತ್ರಗಳು ಸ್ಫೂರ್ತಿಯಿಂದ ಕೂಡಿದ್ದು, ಸಮಯದ ವಿಸ್ತಾರವನ್ನು ಕಡಿಮೆ ಮಾಡಿ ವಿಷಯವನ್ನೊಂದು ಸಂಕ್ಷಿಪ್ತರೂಪದಲ್ಲಿ ಹಿಡಿದಿಟ್ಟವುಗಳಾಗಿವೆ. ಕಡೇಮನಿಯವರು ರೇಖಾಚಿತ್ರಗಳಲ್ಲಿ ತಮ್ಮನ್ನು ಅಷ್ಟಾಗಿ ತೊಡಗಿಸಿಕೊಂಡಿರಲಿಲ್ಲ ಆದರೂ ಸಾಂದರ್ಭಿಕವಾಗಿ ತಮ್ಮ ದೈನಂದಿನ ಕಾರ್ಯಚಟುವಟಿಕೆಯಲ್ಲಿನ ಅನುಭವ ಮನಸ್ಸಿನಾಳಕ್ಕೆ

ಬಿದ್ದ ಅನುಭವಕ್ಕೆ ಪ್ರೇರಿತವಾಗಿ ಆ ಅನುಭವದ ಪ್ರೇರಣೆಯಿಂದ ಕೆಲವೊಂದಿಷ್ಟು ರೇಖಾಚಿತ್ರಗಳನ್ನು, ಸಂಯೋಜನಾ ರೇಖಾ ಚಿತ್ರಗಳನ್ನು ರಚಿಸಿದ್ದಾರೆ. ಅವರ ರೇಖಾಚಿತ್ರಗಳಲ್ಲಿ ಕೆಲವೇ ರೇಖೆಗಳ ಮೂಲಕ ವಸ್ತು ವಿಷಯವನ್ನು ಕೃತಿರಚನೆಯಲ್ಲಿ ಒಡಮೂಡಿಸಿರುವ ಸಾಮರ್ಥ್ಯ ಶ್ಲಾಘನೆಗೆ ಯೋಗ್ಯವಾದದ್ದು. ಇವರ 'ನದಿ' ಎನ್ನುವ 'ಶೀರ್ಷಿಕೆ'ಯ ಸಂಯೋಜನಾ ರೇಖಾಚಿತ್ರಗಳು ಅವರ ತಂತ್ರದ ಸಾಮರ್ಥ್ಯದ ಗುಣಮಟ್ಟವನ್ನು ತೋರಿಸುವಂತಹ ಕೃತಿಗಳಾಗಿವೆ.

ಕಡೇಮನಿಯವರ ರೇಖಾಚಿತ್ರ ತಂತ್ರವೂ ಪ್ರೌಢಿಮೆಯಿಂದ ಕೂಡಿದ್ದು ರೇಖೆಯ ಎಲ್ಲ ವಿಧದ ಚಲನೆಚಲನಗಳು ಕಾವ್ಯದ ಗತಿಯನ್ನು ಹೊಂದಿವೆ. ಇದು ಅವರ ರೇಖಾ ಚಿತ್ರ ಕೃತಿಗಳ ತಂತ್ರದ ವಿಶಿಷ್ಟ ಗುಣವಾಗಿದೆ.

ಜಲವರ್ಣ ತಂತ್ರ

ಕಡೇಮನಿಯವರು ಜಲವರ್ಣ ಕಲಾಕೃತಿಯನ್ನು ರಚಿಸುವುಲ್ಲಿಯೂ ಸಿದ್ಧಹಸ್ತರಾಗಿದ್ದಾರೆ. ಇಲ್ಲಿಯವರೆಗೆ ಸುಮಾರು ೨೦೦ಕ್ಕೂ ಹೆಚ್ಚು ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ. ರುಮಾಲೆ ಚೆನ್ನಬಸವಯ್ಯನವರ ನಿಸರ್ಗ ಚಿತ್ರಗಳಿಗೆ ಪ್ರಭಾವಿತರಾಗಿದ್ದರೂ ಕೂಡ ಅವರ ಪ್ರಭಾವ ಕಂಡುಬರುವುದಿಲ್ಲ. ಕಲಾಶಿಕ್ಷಣದ ಹಂತದಲ್ಲಿಯೇ ಜಲವರ್ಣವನ್ನು ಮೈಗೂಡಿಸಿಕೊಂಡ ಕಡೇಮನಿಯವರು ಉತ್ಕೃಷ್ಟವಾದ ಕೃತಿಗಳನ್ನುಈ ಮಾಧ್ಯಮದಲ್ಲಿ ರಚಿಸಿದ್ದಾರೆ. ನಿಸರ್ಗಚಿತ್ರ ರಚಿಸುವಾಗ ಪ್ರಥಮ ಹಂತದಿಂದಲೇ ಕೃತಿಯನ್ನು ಪೂರ್ಣಗೊಳಿಸುತ್ತಾರೆ. ತಂತ್ರಗಾರಿಕೆಯಲ್ಲಿ ಜಲವರ್ಣ ರಚನೆಯಲ್ಲಿ ಕಡೇಮನಿಯವರು ಅವಸರದ ಮನೋಭಾವ ಹೊಂದಿರುವುದು ಕಂಡುಬರುತ್ತದೆ.

ತೈಲವರ್ಣ

ಪಿ.ಎಸ್.ಕಡೇಮನಿಯವರ ತೈಲವರ್ಣ ಮಾಧ್ಯಮದ ಕೃತಿಗಳು ಅತ್ಯಂತ ಮೌಲ್ಯಯುತ ವಾದವು. ಜನಪದೀಯ ಸತ್ವಗಳ ಜತೆಜತೆಗೆ ಪಾಶ್ಚಾತ್ಯ ಶೈಲಿಯಾದ 'ಎಕ್ಸ್‌ಪ್ರೇಷನಿಸಂ'ನ ಅತಿ ನೈಜತೆಯನ್ನು ಹಾಗೂಯುರೋಪಿನ ಪುನರುಜ್ಜೀವನ ಕಾಲದ ಕಲಾವಿದರ ಉತ್ಕೃಷ್ಟ ಕೃತಿಗಳನ್ನು ನೆನಪಿಸುವಂತೆ ಇವರ ವರ್ಣಗಾರಿಕೆ ಹಾಗೂ ಶೈಲಿಯು ಇವರ ಕಲಾಕೃತಿಗಳಲ್ಲಿ ಕಂಡುಬರುತ್ತದೆ. ಇವರ ಕೃತಿಗಳು ರಮ್ಯವಾದ ಅಕಾಡೆಮಿಕ್ ನೆರಳಿನಲ್ಲಿ ಇದ್ದರೂ ವಸ್ತು ವಿಷಯಗಳ ಆಯ್ಕೆಯಲ್ಲಿ 'ಗ್ರಾಮೀಣ ದೃಶ್ಯ ಸಂಸ್ಕೃತಿಯನ್ನು ತೀವ್ರತೆಯಿಂದ ಕ್ಯಾನ್‌ವಾಸಿನ ಅವಕಾಶದಲ್ಲಿ ಸಂಯೋಜಿಸಿ ಕೌದಿಯ ಹಾಜರಿಯನ್ನು ಆಕರ್ಷಿಸಿದ್ದಾರೆ.

ಕಡೇಮನಿಯವರು ತಮ್ಮ ಕೃತಿಗಳಲ್ಲಿ ಕವುದಿ 'ಆತ್ಮ'ವನ್ನು ಶಕ್ತಿಯುತವಾಗಿ ತಂದುಕೊಳ್ಳುತ್ತಿದ್ದಾರೆ. ಗ್ರಾಮೀಣ ಬದುಕಿನ ಭೂದೃಶ್ಯಗಳು ವೇಗವಾಗಿ ಬದಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ಅಲ್ಲಿನ ಸಂಸ್ಕೃತಿಯ ಬೇರುಗಳು ಸಡಿಲಗೊಳ್ಳುತ್ತಿವೆ? ಎಂದು ಪ್ರಶ್ನಿಸಿಕೊಂಡರೆ ಶಕ್ತವಾದುವುಗಳು

ಕಾಲದ ಹೊಡೆತವನ್ನು ಮಿರಿ ಉಳಿದುಕೊಳ್ಳುವ ಅಂಶವನ್ನು ನೆನಪಿಸುವಂತೆ ನಮ್ಮ ಕವುದಿ ಮಾಧ್ಯಮ ಉಳಿದುಕೊಂಡಿದೆ. ಕಡೇಮನಿಯವರ ಎಲ್ಲ ಒಳಹೊರಗುಗಳು ಅವರ ಬದುಕಿನ ಬಾಹ್ಯ ಬಳಕೆಗಳೇ ಅಲ್ಲದೆ ಅವರ ಚಿತ್ರಗಳ ಅಭಿವ್ಯಕ್ತಿ ಮೂಲದ ಆಕರವೂ ಕವುದಿಯೇ ಆಗಿರುವುದು ಒಂದು ಅಸಾಮಾನ್ಯ ಎನ್ನುವ ಕೆ.ವಿ.ಸುಬ್ರಹ್ಮಣ್ಯಂ ಅವರ ಮಾತು ಅರ್ಥಪೂರ್ಣವಾಗಿದೆ.

ಇವರ ವರ್ಣಚಿತ್ರಗಳಲ್ಲಿ ಓಕುಳಿಯ ವೈಖರಿ ತುಂಬ ಸರಳ ಹಾಗೂ ಸುಂದರ ನಮ್ಮ ನಾಡಿನ ಸಾಮಾನ್ಯ ಜನರ ಉಡುಗೆತೊಡುಗೆಗಳು ನಿಜವಾದ ಐಸಿರಿ ಇವರ ಕಲಾಕೃತಿಗಳಲ್ಲಿ ಸಾಮಾನ್ಯ ವಿಷಯ ವಸ್ತು ಇಲಕಲ್ ಸೀರೆ; ಗುಳೇದಗುಡ್ಡ ಖಣದ ಸೊಬಗು ಇವರ ಚಿತ್ರಗಳಲ್ಲಿ ಬರುವ ನೀರೆಯರ ಪ್ರತಿಬಿಂಬಿಸುವ ರೀತಿ ಅಪ್ರತಿಮವಾದುದು.

ಈ ಅಧ್ಯಯನದಲ್ಲಿ ಚರ್ಚೆಗೊಳಗೊಂಡ ಸಂಗತಿಗಳಾದ ಕಡೇಮನಿಯವರ ತಂತ್ರ, ಶೈಲಿ, ಪ್ರಭಾವ, ಪ್ರೇರಣೆಗಳೇ ಮುಂತಾದ ಅಂಶಗಳನ್ನು ಅಧ್ಯಯನ ಮಾಡಿದಾಗ ಅವರೊಬ್ಬ ಅಪ್ರತಿಮ ವಿಭಿನ್ನ, ವಿಶಿಷ್ಟ ಕ್ರಿಯಾಶೀಲ ಕಲಾವಿದರಲ್ಲಿ ಒಬ್ಬರು ಎಂಬುದು ಕಂಡುಬರುತ್ತದೆ.





ಕಲಾವಿದರ ತಾಯಿ ಈರವ್ವ



ಚಿತ್ತಾರದ ಕೌದಿ

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ಯಾವುದೇ ಒಂದು ಸಂಸ್ಕೃತಿ, ತನ್ನ ಸಾಮಾಜಿಕ ಬದಲಾವಣೆಯಲ್ಲಿ ಅನೇಕ ಆಯಾಮಗಳನ್ನು ಪಡೆದು, ಹೊಸ ಹೊಸ ನೆಲೆಗಳನ್ನು ಕಂಡುಕೊಳ್ಳುತ್ತಲೇ, ಪರಂಪರೆಯ ವಿವಿಧ ಮುಖಗಳ ಬದಲಾವಣೆಯನ್ನು ಸೇರಿಸುತ್ತದೆ. ಅದರ ವೈವಿಧ್ಯತೆಯಲ್ಲಿ ಕಲಾಪ್ರಕಾರಗಳು, ಅಭಿವ್ಯಕ್ತಿಯ ರೂಪ ಇತ್ಯಾದಿಗಳು ಪುರಾವೆಗಳಾಗಿ ಉಳಿಯುತ್ತವೆ. ಇವುಗಳ ಐತಿಹಾಸಿಕ ಹಾಗೂ ಸಾಂಸ್ಕೃತಿಕ ದೃಷ್ಟಿಕೋನಗಳನ್ನು ಹೊಸ ದೃಷ್ಟಿಯಲ್ಲಿ ವಿಶ್ಲೇಷಿಸುವ ಹಾಗೂ ವೈಚಾರಿಕ ನೆಲೆಯಲ್ಲಿ ನಿಂತು ಪರಿಶೋಧಿಸುವ ಇಂದಿನ ಸಂದರ್ಭದಲ್ಲಿ ಬೆಳವಣಿಗೆಯ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಿ ವಿವಿಧ ಕಲಾಪ್ರಕಾರಗಳಲ್ಲಿಯ ಸಹಸಂಬಂಧ, ಕ್ರಿಯಾತ್ಮಕ ಚಟುವಟಿಕೆಗಳು ಹೆಚ್ಚಾಗಲೇಬೇಕಾಗುತ್ತದೆ. ಆ ಕುರಿತು ಚರ್ಚಿಸಿದಾಗ ಶತಮಾನಗಳ ಹಿಂದಿನ ಅರ್ಥ, ಅನರ್ಥಗಳು ಆಧುನಿಕವಾಗಿಯೂ ಅರ್ಥ, ನಿರರ್ಥಕತೆಗಳನ್ನು ಪಡೆಯಬಹುದು. ಆದರೆ ಸೂಕ್ಷ್ಮವಾಗಿ ನಮ್ಮ ನೆಲೆಗಟ್ಟಿನಲ್ಲಿ ಯೋಚಿಸುವಾಗ ಸಾಕಷ್ಟು ವಿಷಯಗಳು ಗಮನಕ್ಕೆ ಬರುತ್ತವೆ. ಜನಪದ ವಸ್ತುವಿಷಯ ಮೂಲದಿಂದ ವ್ಯಕ್ತವಾದ ಕಡೇಮನಿಯವರ ಕಲೆಗೆ ಅವರದೇ ಆದ ರೂಪ ಅರ್ಥ, ಭಾವನೆ, ಕಲ್ಪನೆಗಳು ಹೊಂದುತ್ತಲೇ ಶ್ರೇಷ್ಠ ಕಲಾಕೃತಿಗಳಾಗಿವೆ. ಚಿತ್ರಕಲೆಯಲ್ಲಿ ಅಡಕವಾಗಿರುವ ವಸ್ತು ವೈವಿಧ್ಯತೆ ಕೂಡ ಇಲ್ಲಿ ಬಹಳ ಮುಖ್ಯವಾಗುತ್ತದೆ. ಹಾಗಾಗಿ ಕಲೆಯಲ್ಲಿ ಒಂದು ಸಂಸ್ಕೃತಿ; ಅದರ ಮೂಲಕ ಒಂದು ಪರಂಪರೆ ಸೃಷ್ಟಿ, ನಂತರ ಅದರದೇ ಆದ ಕೊಡುಗೆ ನಾಳೆಗೆ ಪೂರಕವೆನಿಸುತ್ತದೆ. ಅಥವಾ ಹೊಸದರ ಮೂಲವನ್ನು ನೀಡುತ್ತದೆ. ಈ ದೃಷ್ಟಿಯಿಂದ ಲಲಿತ ಕಲೆಗಳೂ ಅನೇಕ ಒತ್ತಡಗಳ ಒತ್ತಾಸೆಯಾಗಿಯೂ ಬೆಳೆದಿವೆ. ದಶಕದಿಂದೀಚೆಗೆ ಚಿತ್ರಕಲೆಯಲ್ಲಿಯೂ ಬದಲಾವಣೆ ಕಾಣುತ್ತಿದ್ದೇವೆ. ಕನ್ನಡದ ಸಂದರ್ಭದಲ್ಲಿ ಚಿತ್ರ, ನಾಟಕ, ಸಾಹಿತ್ಯಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹೊರಗಿನ ಪ್ರಭಾವ ಒಳಗಿನ ಚಿಂತನೆ, ವಾಸ್ತವ ಪ್ರಜ್ಞೆಗಳನ್ನು ಗರಿ ಮೂಡಿಸಿಕೊಂಡ ಈ ಬದಲಾವಣೆ ನಾಳೆಯ ಪರಿಕಲ್ಪನೆಯ ಮೂಲವಾಗಿದೆ. ಈ

ಕಾರಣದಿಂದಾಗಿಯೇ ಇತಿಹಾಸವನ್ನೋದಲು ಗ್ರಹಿಸಲು ಸಾಧ್ಯವಾಗಿರುವುದು. ಈ ಎಲ್ಲದರ ಒಟ್ಟು ಗ್ರಹಿಕೆಯೊಳಗಿನ ಸಂಸ್ಕೃತಿ ಎಂಬುದು ವ್ಯಕ್ತಿ ಸಮಾಜದ ನಿರ್ಮಾತೃವೂ ಆಗುತ್ತದೆ.

ವ್ಯಕ್ತಿ ಸಮಾಜದಲ್ಲಿ ತಮಗೆ ನಿಲುಕಿದ ದಾರಿಯಲ್ಲಿ ಹಲವಾರು ಕಲಾವಿದರು ಏನಾದರೊಂದು ಕೆಲಸ ಮಾಡಬೇಕೆಂದು ಉತ್ಸುಕರಾಗಿ ಚಟುವಟಿಕೆ ಹೊಂದಿರುವವರಾಗಿದ್ದಾರೆ. ಈ ಅಭಿಲಾಷೆ ಕ್ಷಣಭಂಗವಾಗದಂತೆ ನೋಡಿಕೊಳ್ಳುವುದು, ವಾಸ್ತವಿಕ ಅರಿವಿನೊಡನಿರುವುದು ಒಂದಾದರೆ, ಆರಂಭ ಶೂರ್ವವನ್ನು ತೋರದೆ, ಸಮೂಹ ಮಾಧ್ಯಮಗಳ ಪ್ರಭಾವ ಪ್ರಚಾರಗಳಿಲ್ಲದೇ ಸದ್ದು-ಗದ್ದಲಗಳಿಂದ ದೂರವಿದ್ದೂ ಕ್ರಿಯಾತ್ಮಕ ಕೆಲಸ ಮಾಡುವವರಿಗೆ ಯಾವುದರ ಕೊರತೆಯೂ ಕಾಣಿಸದು. ಅಲ್ಲಿ ಬೇಕಾಗಿರುವುದು ಪ್ರೋತ್ಸಾಹಕರ ವಾತಾವರಣ ನಿರ್ಮಿಸಿಕೊಳ್ಳುವುದು ಅಂತಹ ವಾತಾವರಣವನ್ನು ನಿರ್ಮಿಸಿಕೊಂಡವರು ಪಿ.ಎಸ್.ಕಡೇಮನಿಯವರು.

ಈ ನಿಟ್ಟಿನಲ್ಲಿ ಕಡೇಮನಿಯವರು ಚಿತ್ರಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡು ರಾಷ್ಟ್ರ, ಅಂತರಾಷ್ಟ್ರೀಯ ಖ್ಯಾತಿ ಪಡೆದು ತಮ್ಮದೇ ಆದ ವ್ಯಕ್ತಿತ್ವದಿಂದ ಕಲಾಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡುತ್ತ ಬಂದಿರುವರು. ಅಲ್ಲದೇ ನಾಡಿನ ಸಂಸ್ಕೃತಿಯ ಹಿರಿಮೆಯನ್ನು ಹೆಚ್ಚಿಸಲು ಶ್ರಮಿಸಿದವರು.

ಇಂತಹ ಬಹುಮುಖ ಕಲಾ ಸಾಧಕ ಪಿ.ಎಸ್.ಕಡೇಮನಿಯವರ ಕುರಿತಾಗಿರುವ ಈ ಪ್ರಬಂಧದಲ್ಲಿ ಏಳು ಅಧ್ಯಾಯಗಳಲ್ಲಿ ವಿಷಯ ನಿರೂಪಣೆ ಮಾಡಲಾಗಿದೆ. ಪ್ರತಿಯೊಂದು ಅಧ್ಯಾಯವು ಚರ್ಚಿಸಲ್ಪಟ್ಟ ಸಂಗತಿಗಳ ಸಂಕ್ಷಿಪ್ತ ಸ್ವರೂಪದ ಫಲಿತಗಳು ಕೆಳಗಿನಂತಿವೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳ ಕುರಿತು ಹೇಳಲಾಗಿದೆ. ಪ್ರಸ್ತುತ ಅಧ್ಯಯನವನ್ನು ಏತಕ್ಕಾಗಿ ಕೈಗೊಳ್ಳಲಾಗಿದೆ. ಅದರ ಉದ್ದೇಶಗಳು, ಅಧ್ಯಯನದ ಮಹತ್ವ, ಕಲಾಕ್ಷೇತ್ರಕ್ಕೆ ಮತ್ತು ಸಾಮಾಜಿಕವಾಗಿ ಅದರ ಉಪಯುಕ್ತತೆ ಮುಂತಾದವುಗಳನ್ನು ಬಿಂಬಿಸಲಾಗಿದೆ. ಜೊತೆಗೆ ಕಡೇಮನಿಯವರ ಬಗ್ಗೆ ಇದುವರೆಗೆ ನಡೆದ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ. ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಕೈಗೊಂಡ ವೈಧಾನಿಕತೆಗಳನ್ನು ಮೊದಲನೆಯ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯವು ಕಡೇಮನಿಯವರ ಸಾಂಸ್ಕೃತಿಕ ಪರಿಸರ, ಬಾಲ್ಯಜೀವನದ ಕುರಿತಾಗಿದೆ. ಇದರಲ್ಲಿ ಕಡೇಮನಿಯವರು ಹುಟ್ಟಿದ ಕುಮತೆ ಗ್ರಾಮದ ಸಾಂಸ್ಕೃತಿಕ ಪರಿಸರ, ಐತಿಹಾಸಿಕ ಹಿನ್ನೆಲೆ, ಜನಪದ ಕಲೆಗಳ ಹಿನ್ನೆಲೆಗಳನ್ನು ಬಿಂಬಿಸಲಾಗಿದೆ. ಇದರೊಂದಿಗೆ ಕಡೇಮನಿಯವರ ಕೌಟುಂಬಿಕ ಹಿನ್ನೆಲೆ, ತಂದೆ, ತಾಯಿಗಳು, ಬಂಧುವರ್ಗ, ಬಾಲ್ಯದ ದಿನಗಳು, ಗ್ರಾಮೀಣ ಆಟಗಳು, ಜನಪದ ಆಚರಣೆಗಳ ಹಿನ್ನೆಲೆಯಲ್ಲಿ ತಿಳಿಸಲಾಗಿದೆ. ಬಾಲ್ಯದಲ್ಲಿ ಕಲೆಯ ಕಡೆಗೆ ಒಲಿದ ಮನಸ್ಥಿತಿ, ಅದಕ್ಕೆ ಪೂರಕವಾದ ಪರಿಸರ, ಪ್ರಾಥಮಿಕ ಶಿಕ್ಷಣದಲ್ಲಿ ಕಲೆಗೆ

ಸಿಕ್ಕಂತಹ ಪ್ರೇರಣೆ, ಕಲಾ ಚಟುವಟಿಕೆಗಳು, ಪ್ರೌಢಶಾಲಾ ಹಂತದಲ್ಲಿ ಹೆಚ್ಚಾದ ಅವರ ಕಲಾ ಆಸಕ್ತಿ, ಪ್ರಭಾವ ಬೀರಿದ ಕಲಾ ಶಿಕ್ಷಕರ ಕುರಿತಾಗಿ ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಮೂರನೆಯ ಅಧ್ಯಾಯವು ಕಡೇಮನಿಯವರು ಎಸ್.ಎಸ್.ಎಲ್.ಸಿ ಮುಗಿಸಿದ ನಂತರ ಚಿಕ್ಕಪ್ಪನ ಪ್ರೋತ್ಸಾಹದಿಂದ ಕಲಾ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಆಗಮಿಸಿ ಕಲಾ ಶಿಕ್ಷಣವನ್ನು ಪಡೆದುಕೊಳ್ಳತೊಡಗಿದ ಸಂಗತಿ, ಅಲ್ಲಿನ ಕಲಾಶಿಕ್ಷಕರು, ಮಿತ್ರರು, ಸಹಪಾಠಿಗಳೊಂದಿಗೆ ಕಲೆಯನ್ನು ಪರಿಣಾಮಕಾರಿಯಾಗಿ ಹೇಗೆ ಕಲಿತರು ಎಂಬಂತಹ ಪ್ರಮುಖ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ, ಕಲಾಶಿಕ್ಷಣ ಪೂರೈಸಿದ ನಂತರ ಬಾಗಲಕೋಟೆಯ ಶ್ರೀ ವಾಸುದೇವ ಎನಾಮಲ್ ಇಂಡಸ್ಟ್ರೀಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದು, ಕೆಲಸದ ಒತ್ತಡದಿಂದ ಅದನ್ನು ತೊರೆದು ಶ್ರೀ ಸಿದ್ಧೇಶ್ವರ ಕಲಾಮಂದಿರದಲ್ಲಿ ವೃತ್ತಿಗೆ ಸೇರಿಕೊಂಡ ಹಂತದಿಂದ ಇಂದಿನವರೆಗೆ ಅವರ ವೃತ್ತಿ ಬದುಕು ಯಾವ ರೀತಿ ನಡೆದುಬಂದಿತು ಎಂಬುದನ್ನು ವಿವರಸಲಾಗಿದೆ. ಹಾಗೆಯೇ ವೃತ್ತಿ ಬದುಕಿನಲ್ಲಿ ಕಲಾಶಾಲೆಯ ಬೆಳವಣಿಗೆಗೆ ಹಗಲಿರುಳು ತನು ಮನದಿಂದ ದುಡಿದ ರೀತಿಯನ್ನು ಇಲ್ಲಿ ಗಮನಿಸಲಾಗಿದೆ.

ಕಡೇಮನಿಯವರ ಕಲಾ ಬದುಕು ಬಿ.ಎಲ್.ಡಿ.ಇ. ಸಂಸ್ಥೆಯೊಂದಿಗೆ ಬೆಸೆದುಕೊಂಡಿದೆ. ಅಲ್ಲದೆ ಸಿದ್ಧೇಶ್ವರ ಕಲಾಮಂದಿರದ ಬೆಳವಣಿಗೆಯು ಪರೋಕ್ಷವಾಗಿ ಕಡೇಮನಿಯವರ ಬೆಳವಣಿಗೆಯೇ ಆಗಿದೆ. ವೃತ್ತಿ ಬದುಕಿನ ಜೊತೆಗೆ ಕಲಾ ಬದುಕನ್ನು ನಡೆಸಿಕೊಂಡು ಬಂದಿರುವುದನ್ನು ಗಮನಿಸಲಾಗಿದೆ. ಕಡೇಮನಿಯವರ ಅವಿರತ ಶ್ರಮದಿಂದ ಈ ಕಲಾ ಶಾಲೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಬೆಳೆಸಿರುವುದು, ಕಲಾಶಿಬಿರ, ಕಲಾ ಪ್ರದರ್ಶನ, ಪ್ರಾತ್ಯಕ್ಷಿಕೆ, ಉಪನ್ಯಾಸ, ಕಾರ್ಯಾಗಾರ ಮಾತ್ರವಲ್ಲದೆ ಪೂರಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಕಲಾಶಾಲೆಯಲ್ಲಿ ಹಮ್ಮಿಕೊಳ್ಳುವ ಮೂಲಕ ಅದರ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಇದಲ್ಲದೆ, ರಾಜ್ಯ, ರಾಷ್ಟ್ರಮಟ್ಟದ ವಿದ್ವಾಂಸರು ಕಲಾವಿದರನ್ನು ಕಲಾಶಾಲೆಗೆ ಕರೆಸುವ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಜ್ಞಾನವನ್ನು ಒದಗಿಸಿದ್ದಾರೆ. ಇಂತಹ ಕ್ರಮಗಳಿಂದಾಗಿ ಇಲ್ಲಿನ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಿದ್ದು ಎಂಬುದನ್ನು ಕಂಡುಕೊಳ್ಳುತ್ತ ಅದಕ್ಕಾಗಿ ಕಡೇಮನಿಯವರು ಎಂತಹ ಕ್ರಮಗಳನ್ನು ತೆಗೆದುಕೊಂಡರು ಎಂಬುದನ್ನು ವಿವೇಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪಿ.ಎಸ್.ಕಡೇಮನಿಯವರ ಪ್ರಸ್ತುತ ಲಭ್ಯವಿರುವ ರೇಖಾ ಚಿತ್ರಗಳನ್ನು ವಿವರಪೂರ್ಣವಾಗಿ ಅಂದರೆ ಬಳಸಿದ ಮಾಧ್ಯಮ ವಸ್ತು ವಿಷಯ ಮತ್ತು ಸಂದರ್ಭ ಸಹಿತವಾಗಿ ವಿಶ್ಲೇಷಿಸಿ ವ್ಯವಸ್ಥಿತ ವಿಂಗಡಣೆ ಮಾಡಿಕೊಂಡು ಕೆಲವು ಉದಾಹರಣೆ ಗಳೊಂದಿಗೆ ಅವುಗಳ ಗುಣಮಟ್ಟವನ್ನು ಪ್ರಸ್ತುತ ಸಂದರ್ಭದಲ್ಲಿಯ ಕಲಾ ವಾತಾವರಣದ ಮೇಲೆ ಅವು ಮಾಡಿದ ಪ್ರಭಾವವನ್ನು ಆ ಮೂಲಕ ಅವು ಹೇಗೆ ಮುಂದಿನ ಪೀಳಿಗೆಯ ಕಲಾವಿದರಿಗೆ, ಕಲಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಗಳಾಗಬಹುದು ಎಂಬುದನ್ನು ಸಂಕ್ಷಿಪ್ತವಾಗಿ

ವಿವರಿಸುತ್ತ ಅಧ್ಯಯನ ಕೈಗೊಂಡಾಗ ಕೆಲವೊಂದು ಹೊಸ ಬಗೆಯ ರಚನಾ ತಂತ್ರ, ಶೈಲಿಯ ವಿಚಾರಗಳನ್ನು ತಿಳಿದುಕೊಳ್ಳಲು ಈ ಅಧ್ಯಾಯವು ಒದಗಿಸಿಕೊಟ್ಟಿತು.

ಅಧ್ಯಾಯ ಐದರಲ್ಲಿ ಕಡೇಮನಿಯವರ ವರ್ಣಚಿತ್ರಗಳ ಕುರಿತು ಶಾಸ್ತ್ರೀಯ ವರ್ಗೀಕರಣ ಮಾಡಿಕೊಂಡು ಅಲ್ಲಿ ಬಳಕೆಯಾದ ಮಾಧ್ಯಮ ಉಪಯೋಗಿಸಿದ ತಂತ್ರ, ಆಯ್ದುಕೊಂಡ ವಸ್ತು-ವಿಷಯ ಹಾಗೂ ಅವುಗಳ ಪ್ರಭಾವ ಇವುಗಳನ್ನು ಅಧ್ಯಯನ ಮಾಡಿದ್ದು, ತೈಲವರ್ಣ, ಜಲವರ್ಣ, ಮಾಧ್ಯಮಗಳಲ್ಲಿರುವ ಕಲಾಕೃತಿಗಳನ್ನು ಸೃಜನೇತರ ಸಂಯೋಜನ ಚಿತ್ರಗಳು, ಸೃಜನಾತ್ಮಕ ಸಂಯೋಜನ ಚಿತ್ರಗಳು, ಭಾವಚಿತ್ರಗಳು, ನಿಸರ್ಗ ಚಿತ್ರಗಳು, ಈ ನಿಸರ್ಗ ಚಿತ್ರಗಳಲ್ಲಿ ಹಂಪಿ ಪರಿಸರದ ವಿರೂಪಾಕ್ಷ ದೇವಾಲಯದ ಗೋಪುರ, ದೃಶ್ಯ, ತುಲಾಭಾರ ಮಂಟಪದ ದೃಶ್ಯ, ವಿಜಾಪುರ ಪರಿಸರದ ಆದಿಲ್ ಶಾಹಿಗಳ ಐತಿಹಾಸಿಕ ಸ್ಮಾರಕಗಳ ದೃಶ್ಯಗಳು, ತೈಲವರ್ಣ ಮಾಧ್ಯಮದಲ್ಲಿ ರಚಿಸಿ ಸಂಗ್ರಹಿಸಿಕೊಂಡ ಭಾವಚಿತ್ರಗಳು, ಬೇಡಿಕೆ ಹಿನ್ನೆಲೆಯಲ್ಲಿ ರಚಿಸಿಕೊಟ್ಟ ಭಾವಚಿತ್ರಗಳು ಹೀಗೆ ಕಲೆಯ ಎಲ್ಲ ಪ್ರಕಾರಗಳನ್ನು ಅವರು ರಚಿಸಿದ ಕಲಾಕೃತಿಗಳನ್ನು ವಿಶ್ಲೇಷಿಸಿದಾಗ ಈ ಕೆಳಗಿನ ಅಂಶಗಳು ಕಂಡುಬಂದವು. ಅಂದರೆ, ಸೃಜನೇತರ ಸಂಯೋಜನ ಚಿತ್ರಗಳಲ್ಲಿನ ವಿಷಯಗಳು ಗ್ರಾಮೀಣ ಬದುಕನ್ನು ಕುರಿತಾಗಿದ್ದು, ಭಾರತೀಯ ದೇಶೀ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಹಾಗೂ ಅವುಗಳಲ್ಲಿ ಪಾಶ್ಚಾತ್ಯ ವರ್ಣತಂತ್ರ, ಅಲ್ಲದೆ ಕಡೇಮನಿಯವರ ಮೇಲೆ ಪ್ರಭಾವ ಬೀರಿದ ಕಲಾವಿದರಾದ, ಜೆ.ಎಸ್.ಖಂಡೇರಾವ್, ಎಂ.ಆರ್.ಬಾಳೇಕಾಯಿ, ಡಿ.ವಿ.ಹಾಲಭಾವಿಯವರ ಪ್ರಭಾವ ಕಂಡು ಬಂದಿತು.

ಅವರ ಭಾವಚಿತ್ರಗಳಲ್ಲಿಯೂ ಸಹ ಬ್ರಿಟೀಷ್ ಅಕಾಡೆಮಿಕ್ ಪ್ರಭಾವದ ದೃಷ್ಟಿಕೋನಗಳು ಕಂಡುಬರುತ್ತವೆ. ಈ ಭಾವಚಿತ್ರಗಳಲ್ಲಿ ನಿಜವಾಗಿಯೂ ಪರಿಪೂರ್ಣತೆಯಿಂದ ಕೂಡಿದ್ದ ವ್ಯಕ್ತಿಯ ವಯಸ್ಸು ಮತ್ತು ಭಾವವನ್ನು ಹಾಗೂ ಅಂಗ ರಚನಾ ಶಾಸ್ತ್ರಬದ್ಧ ನಿಖರತೆಗಳು ಈ ಚಿತ್ರ ಗಳಲ್ಲಿ ಕಂಡುಬರುತ್ತದೆ. ಪಿ.ಎಸ್.ಕಡೇಮನಿಯವರು ಚಿತ್ರಿಸಿದ ನಿಸರ್ಗ ಚಿತ್ರಗಳಲ್ಲಿನ ಉತ್ಕೃಷ್ಟ ವರ್ಣಗಾರಿಕೆ ಯಥಾದರ್ಶನ ನಿಯಮಗಳು ನಿಖರವಾದ ಚಿತ್ರಗಾರಿಕೆ ಇವೆಲ್ಲವುಗಳನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಯಿತು.

ಅಧ್ಯಾಯ ಆರರಲ್ಲಿ ಕಡೇಮನಿಯವರ ಕಲಾಕೃತಿಗಳ ಮೇಲಿನ ಪ್ರಭಾವ, ಪ್ರೇರಣೆ ಹಾಗೂ ತಂತ್ರ ಶೈಲಿ ಈ ಅಧ್ಯಾಯದಲ್ಲಿ ನೋಡಲಾಗಿ, ಕಡೇಮನಿಯವರು ಬಾಲ್ಯದಲ್ಲಿ ತಂದೆ, ತಾಯಿಯರಿಂದ, ತಮ್ಮ ಹಳ್ಳಿಯ ಪರಿಸರದಿಂದ, ಕಲಾವಿದರಿಂದ ಪಡೆದ ಪ್ರೇರಣೆ ಹಾಗೂ ಅವರ ಮೇಲಾದ ಪ್ರಭಾವ ಅವರು ಬಳಸಿದ ಶೈಲಿ ಮತ್ತು ಉಪಯೋಗಿಸಿದ ತಂತ್ರ ಇವುಗಳ ವಿಶ್ಲೇಷಣೆ ಇದ್ದು ಒಬ್ಬ ಕಲಾವಿದನ ಬೆಳವಣಿಗೆಗೆ ಕಾರಣವಾಗುವ ಎಲ್ಲ ಮೂಲಗಳನ್ನು ವಿವರವಾಗಿ ಅಧ್ಯಯನ ಮಾಡಿ ವಿಶ್ಲೇಷಿಸಿದಾಗ ಕಲಾವಿದನೊಬ್ಬನು ಎಲ್ಲಿಯವರೆಗೆ ತನ್ನ

ಸುತ್ತಮುತ್ತಲಿನ ನಿಸರ್ಗದೊಂದಿಗೆ ಸ್ಪಂದಿಸುತ್ತಿರುತ್ತಾನೋ ಹಾಗೂ ಎಲ್ಲಿಯವರೆಗೆ ಹೊಸ ವಿಷಯಗಳಿಗೆ ತನ್ನನ್ನು ತಾನು ತೆರೆದಿಟ್ಟುಕೊಂಡು ಕಲಿಯಬೇಕಾದುದೆಲ್ಲವನ್ನು ವಿನಯದಿಂದ ಕಲಿಯುತ್ತಿರುತ್ತಾನೋ ಅಂಥ ಕಲಾವಿದನು ಯಾವಾಗಲೂ ಬೆಳೆದು ಸಮಾಜಕ್ಕೆ, ಕಲಾಕ್ಷೇತ್ರಕ್ಕೆ ಉಪಯುಕ್ತನಾಗುತ್ತಾನೆಂದು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಯಿತು. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಎಲ್ಲ ಅಧ್ಯಾಯಗಳ ಮತ್ತು ಒಟ್ಟಾರೆ ಅಧ್ಯಯನದ ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಕೆಲವು ಪ್ರಮುಖ ಫಲಿತಗಳು.

೧. ತಮ್ಮ ಸಂಪೂರ್ಣ ಬದುಕನ್ನು ಚಿತ್ರಕಲಾ ಕ್ಷೇತ್ರಕ್ಕೆ ಮೀಸಲಾಗಿಟ್ಟ ಕಡೆಮನಿಯವರು ಕಲೆಯ ಬೆಳವಣಿಗೆಯಲ್ಲಿ ಸಂತೋಷ ಕಂಡವರು. ಕಲಾಕೃತಿ ರಚನೆಯಲ್ಲಿ ತಮ್ಮ ವಿಶಿಷ್ಟ ಶೈಲಿ, ವಸ್ತು ವಿಷಯದಿಂದಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡವರು ಎಂಬಂತಹ ಸಂಗತಿಗಳನ್ನು ಇಲ್ಲಿ ವಿವೇಚಿಸಲಾಗಿದೆ.

೨. ವಿದ್ಯಾರ್ಥಿಗಳಿಗೆ ನೆಚ್ಚಿನ ಕಲಾಗುರುಗಳಾಗಿ, ಮಾರ್ಗದರ್ಶಕರಾಗಿ, ಸಂಘಟನಾ ಶಕ್ತಿ ಹೊಂದಿದವರಾಗಿ, ನಾಡಿನ ಶ್ರೇಷ್ಠ ಕಲಾವಿದ ಮತ್ತು ಚಿಂತಕರಾಗಿ ಕಡೇಮನಿಯವರು ನಮ್ಮೊಂದಿಗಿರುವುದು ಅವರ ನಿಂತರ ಪರಿಶ್ರಮ, ಕ್ರಿಯಾಶೀಲತೆ ಮತ್ತು ವ್ಯಕ್ತಿತ್ವಗಳಿಂದಾಗಿ ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ.

೩. ಕಡೇಮನಿಯವರು ಇಂದಿನ ಆಧುನಿಕ ಯಾಂತ್ರೀಕೃತ ವಾತಾವರಣದಲ್ಲಿ ಬದುಕುತ್ತಿದ್ದರು, ಎಂದಿಗೂ ಗ್ರಾಮೀಣ ಪರಂಪರೆ, ಸಂಪ್ರದಾಯಗಳನ್ನು ಕಡೆಗಣಿಸಿದವರಲ್ಲ. ತಮ್ಮ ಕೃತಿಗಳಲ್ಲೂ ಅವರು ಗ್ರಾಮೀಣ ಪರಿಸರದ ಬದುಕಿನ ಮೂಲ ತತ್ವಗಳನ್ನು ಬಳಸಿಕೊಂಡೇ ಅವುಗಳಿಗೆ ಆಧುನಿಕ ರೂಪಕೊಟ್ಟವರು ಎಂದು ಈ ಅಧ್ಯಯನದಿಂದ ತಿಳಿದುಬರುತ್ತದೆ.

೪. ಚಿತ್ರರಚನೆಯಲ್ಲಿ ರೇಖಾಚಿತ್ರವನ್ನು ಹೆಚ್ಚು ಇಷ್ಟಪಡುವ ಕಡೇಮನಿಯವರು 'ನಾ ನೋಡಿದ ನದಿ' ಎನ್ನುವ ಸರಣಿ ರೇಖಾಚಿತ್ರಗಳನ್ನು ಅವರ ವೈಯಕ್ತಿಕ ಅಭಿವ್ಯಕ್ತಿಯ ವಿಶೇಷತೆಯನ್ನು ಕಲಾಕೃತಿಗಳಲ್ಲಿ ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಮಾಡಲಾಗಿದೆ.

೫. ನಿತ್ಯ ನೂತನವಾಗಿರುವ ನಮ್ಮ ಗ್ರಾಮೀಣ ಬದುಕಿನ ಸನಾತನವನ್ನು ಬಣ್ಣದ ಗೆರೆಗಳಲ್ಲಿ ಹಿಡಿದಿಟ್ಟಿರುವ ಕಡೇಮನಿಯವರು ಮುಂದಿನ ತಲೆಮಾರಿನ ಕಲಾವಿದರಿಗೆ, ಸಂಶೋಧಕರಿಗೆ ಮಾರ್ಗಸೂಚಿಯಾಗುತ್ತಾರೆ ಎಂಬಂತಹ ಅಂಶಗಳನ್ನು ಈ ಅಧ್ಯಯನದಿಂದ ಕಂಡು ಕೊಳ್ಳಲಾಗಿದೆ.

೬. ಕಡೇಮನಿಯವರ ಪ್ರತಿಯೊಂದು ಕಲಾಕೃತಿಗಳಲ್ಲಿಯೂ ಗ್ರಾಮಾಂತರ ಹಳ್ಳಿಗಾಡಿನ ಜೀವನದ ಒಳಹೊರ ಮೈಗಳು ಗೋಚರಿಸುವುದರಿಂದ ಗ್ರಾಮೀಣ ಸಂಸ್ಕೃತಿಯ ಉಳಿವಿಗಾಗಿ ತಮ್ಮ

ಕಲೆಯಿಂದ ಪ್ರತಿಪಾದಿಸಿರುವುದು ಈ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶವೆಂದು ಹೇಳಬಹುದು.

೭. ಕಡೇಮನಿಯವರು ಬಳಸಿರುವ ಬಣ್ಣ ಕಣ್ಣಿಗೆ ತಂಪನ್ನು ಎರಚುವ ಮಿಶ್ರಮಾಧ್ಯಮ ಹಳ್ಳಿಯ ನೈಜ ಬದುಕಿನ ವಾಸ್ತವ, ಸಂಸ್ಕೃತಿ, ಸಮಾಜ, ಬಡತನದ ನಡುವೆ ಮಾತೃ ಪ್ರೀತಿ, ಪ್ರಾಣಿ ಪ್ರೀತಿಯ ಜೊತೆ ಯುವ ಹೃದಯದಲ್ಲಿ ಅಡಗಿದ ಪ್ರೀತಿ ಪ್ರೇಮ ಅಲ್ಲದೆ ದೇಶೀಯತೆಯನ್ನು ಕಲಾಕೃತಿಗಳಲ್ಲಿ ಅನಾವರಣ ಗೊಂಡಿರುವುದನ್ನು ಗಮನಿಸಲಾಗಿದೆ.

೮. ರಾಜ್ಯ, ರಾಷ್ಟ್ರ ಮತ್ತು ಪಾಶ್ಚಾತ್ಯ ಕಲಾವಿದರ ಕಲಾಕೃತಿಗಳಿಂದ ಕಡೇಮನಿಯವರು ಪ್ರಭಾವಿತರಾಗಿದ್ದರೂ ತಮ್ಮದೇ ಆದ ವಿಶೇಷ ಶೈಲಿ ಕಂಡುಕೊಂಡವರು. ಗ್ರಾಮೀಣ ಪರಿಸರದ 'ನನ್ನ ಹಳ್ಳಿ' ಎಂಬ ಸರಣಿ ಚಿತ್ರಗಳು, ಬಾಲ್ಯದ ನೆನಪುಗಳ ಸರಣಿ ಚಿತ್ರಗಳು, ಗ್ರಾಮೀಣ ಬದುಕಿನ ಆಚರಣೆಗಳ ಚಿತ್ರಗಳು, ವೀರಗಲ್ಲು ಶಾಸನಗಳ ಚಿತ್ರಗಳು, ವಿಶೇಷವಾಗಿ ತಮ್ಮ ಕಲಾಕೃತಿಗಳಲ್ಲಿ ಕೌದಿಯನ್ನು ಬಳಸಿಕೊಂಡು ಗ್ರಾಮೀಣ ಪರಿಸರದ ಚಿತ್ರಗಳಲ್ಲಿ ಅವರ ವೈಯಕ್ತಿಕ ಶೈಲಿಯು ಅನಾವರಣಗೊಂಡಿರುವುದನ್ನು ಗುರುತಿಸಲಾಗಿದೆ.

೯. ನೈಜವಾದ ಶೈಲಿಯನ್ನು ಮತ್ತು ಅಮೂರ್ತ ರೂಪದ ಮಿಶ್ರಣದ ರಚನೆಯಿಂದ ವಿಭಿನ್ನ ವಾದಂತಹ ರಚನಾ ಶೈಲಿಯನ್ನು ಇವರ ಕಲಾಕೃತಿಗಳಲ್ಲಿ ಕಂಡುಬರುವಂತಹ ಪ್ರಮುಖ ಅಂಶವಾಗಿದೆ.

೧೦. ಹೆಚ್ಚಿನ ಕಲಾವಿದರು ಸಂಯೋಜನೆಯಲ್ಲಿನ ಆಕೃತಿಗಳನ್ನು ವಿಭಜಿಸಿ ರಚಿಸುತ್ತಾರೆ. ಆದರೆ ಇವರು ರಚಿಸುವ ಕಲಾಕೃತಿಯಲ್ಲಿ ಒಂದು ಆಕೃತಿ ಮತ್ತೊಂದು ಆಕೃತಿ ಅಥವಾ ಹಿನ್ನೆಲೆ ಯೊಂದಿಗೆ ಮಿಶ್ರಣಗೊಂಡಿದ್ದರೂ ಪ್ರತ್ಯೇಕತೆಯನ್ನು ಅಭಿವ್ಯಕ್ತಪಡಿಸುತ್ತದೆ.

೧೧. ಒಬ್ಬ ಕಲಾವಿದ ಒಬ್ಬ ವ್ಯಕ್ತಿಯ ಭಾವಚಿತ್ರವನ್ನು ಎಂಟು–ಹತ್ತು ಬಾರಿ ಚಿತ್ರಿಸಿರುವ ಉದಾಹರಣೆಗಳು ಎಸ್.ಎಂ.ಪಂಡಿತ್ ಅವರ ಭಾಚಿತ್ರ ರಚನೆಯ್ಲಲಿ ಕಾಣುತ್ತೇವೆ. ಆದರೆ, ಪಿ.ಎಸ್.ಕಡೇಮನಿಯವರು ಬಿ.ಎಲ್.ಡಿ.ಇ.ಸಂಸ್ಥೆಯ ಬೆಳವಣಿಗೆಗೆ ಕಾರಣೀಭೂತರಾದ ದಿ॥ ಬಿ.ಎಂ.ಪಾಟೀಲ, ಬಂಥನಾಳ ಶ್ರೀಗಳು ಹಾಗೂ ಡಾ.ಫ.ಗು.ಹಳಕಟ್ಟಿ ಈ ಮೂಲ ವ್ಯಕ್ತಿಗಳ ೨೦೦ಕ್ಕೂ ಹೆಚ್ಚು ಭಾವಚಿತ್ರಗಳನ್ನು ರಚಿಸಿರುವುದು ಚಿತ್ರಕಲಾ ಇತಿಹಾಸದಲ್ಲಿ ಇದೊಂದು ದಾಖಲೆ ಎಂದೇ ಹೇಳಬಹುದು.

೧೨. ಕಲಾವಿದರ ಕುರಿತಾಗಿರುವ ವ್ಯಕ್ತಿ ಅಧ್ಯಯನಗಳಲ್ಲಿ ಅವರ ವೈಯಕ್ತಿಕ ಬದುಕಿನ ವಿವರಗಳನ್ನು ಗೌಣವಾಗಿಸಿ ಅವರ ಕಲೆ, ಕಲಾಕೃತಿ, ಕಲಾಶೈಲಿಗೆ ಪೂರಕ ಚಟುವಟಿಕೆಗಳಂತಹ ಅಂಶಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಅಧ್ಯಯನ ಮಾಡಿರುವ ಪ್ರಯತ್ನ ಈ ಅಧ್ಯಯನದಲ್ಲಿದೆ.

ನಾಡಿನ ಶ್ರೇಷ್ಠ ಕಲಾವಿದರು, ಕಲಾಚಿಂತಕರಲ್ಲಿ ಒಬ್ಬರಾದ ಪಿ.ಎಸ್.ಕಡೆಮನಿಯವರ ಬದುಕು ಮತ್ತು ಕಲಕೃತಿಗಳ ಕುರಿತಾಗಿರುವ ಈ ಅಧ್ಯಯನ ಪ್ರಬಂಧವು ಕಾಲ ಮತ್ತು ವಿಷಯದ ವ್ಯಾಪ್ತಿಗೆ ಒಳಪಟ್ಟು ರಚನೆಯಾಗಿರುವುದರಿಂದ ಕೆಲವು ಇತಿಮಿತಿಗಳಿಗೆ ಒಳಪಟ್ಟಿದೆ. ಹಾಗಾಗಿ ಕಡೇಮನಿಯವರ ಬದುಕು ಮತ್ತು ಕಲಾಕೃತಿಗಳ ಕುರಿತಾಗಿರುವುದರಿಂದ ಇದು ಸಮಗ್ರವಾದ ಅಧ್ಯಯನವಲ್ಲ, ಕೆಲವು ದೃಷ್ಠಿಕೋನಗಳಿಂದ ಮಾತ್ರ ಈ ಅಧ್ಯಯನವನ್ನು ನಡೆಸಲಾಗಿದ್ದು, ಇನ್ನೂ ಹಲವಾರು ದೃಷ್ಠಿಕೋನಗಳಿಂದ ಅಧ್ಯಯನ ಮಾಡುವ ಅವಕಾಶಗಳು ಇಲ್ಲಿವೆ. ಈ ಹಿನ್ನೆಲೆಯಿಂದ ಮುಂದಿನ ಅಧ್ಯಯನಕಾರರಿಗೆ ಇದೊಂದು ಮಾರ್ಗಸೂಚಿಯಾದರೆ ಅದರ ಸಾರ್ಥಕತೆ ಯಶಸ್ವಿಯಾದಂತೆ ಎಂದು ಇಲ್ಲಿ ಹೇಳಬಯಸುತ್ತೇನೆ.

ಅನುಬಂಧಗಳು

೧. ವಕ್ತೃಗಳು

೧. ರೇವಣಸಿದ್ದ ಕಡೇಮನಿ, ೬೫, ಕುಮತೆ

೨. ಗೌರವ್ವ ಚೌಧರಿ ೭೫, ಸಾರವಾಡ

೩. ಗಂಗಾಬಾಯಿ, ೪೮, ನಾಗಠಾಣ

೨. ವಂಶಾವಳಿ

ಸಿದ್ಲಿಂಗಪ್ಪ, ಚನ್ನಪ್ಪ, ಪೊನ್ನಪ್ಪ
ಕಾಶೀಬಾಯಿ

ಶಿದಗಿರೆಪ್ಪ | ದುಂಡಪ್ಪ | ಮಲ್ಲಪ್ಪ | ಚನ್ನಪ್ಪ
ಈರವ್ವ | ಬಂಗಾರೆವ್ವ | ಚಂದ್ರವ್ವ | ತಾಯವ್ವ

ಶಿದ್ಲಿಂಗಪ್ಪ | ರೇವಣೆಪ್ಪ | ಗುರಪ್ಪ | ಪೊನ್ನಪ್ಪ
ಲಕ್ಷ್ಮೀಬಾಯಿ | ಶಾಂತಾಬಾಯಿ | ಲಕ್ಷ್ಮೀಬಾಯಿ | ಅನ್ನಪೂರ್ಣ

ವನಶ್ರೀ | ವರ್ಣಿಕಾ | ವರುಣ | ವಸಂತ

೩. ವ್ಯಕ್ತಿ ಪರಿಚಯ

೧೯೫೫ : ಜನನ, ಕರ್ನಾಟಕ ರಾಜ್ಯದ ವಿಜಾಪೂರ ಜಿಲ್ಲೆಯ ಕುಮಠೆ ಎಂಬ ಸುಂದರ ಗ್ರಾಮದಲ್ಲಿ

೧೯೬೧-೬೭ : ಪ್ರಾಥಮಿಕ ಶಿಕ್ಷಣ ಹುಟ್ಟೂರಾದ ಕುಮಠೆಯಲ್ಲಿ

೧೯೬೯-೭೨ : ಮಾಧ್ಯಮಿಕ ಶಿಕ್ಷಣ ಸಮೀಪದ ಬಬಲೇಶ್ವರದಲ್ಲಿ

೧೯೭೯ : ಜಿ.ಡಿ.ಆರ್ಟ್, ಧಾರವಾಡದಲ್ಲಿ

೧೯೮೧ : ಆರ್ಟ್ ಮಾಸ್ಟರ್, ಧಾರವಾಡದಲ್ಲಿ

೧೯೯೭ : ಪಿ.ಜಿ.ಡಿಪ್ಲೋಮಾ ಇನ್ ಆರ್ಟ್ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ವಿಜಾಪುರ

೨೦೦೭ : ಎಂ.ವಿ.ಎ. ಸ್ನಾತಕೋತ್ತರ ಪದವಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೯೯೩ : ಉಪಾಧ್ಯಕ್ಷ, ನಟೇಶ್ವರ ಕಲಾ ಬಳಗ, ವಿಜಾಪೂರ.

೧೯೯೮ : ಉಪಾಧ್ಯಕ್ಷ, ಹಂದಿಗನೂರ ನಾಟ್ಯ ಸಂಘ, ವಿಜಾಪೂರ.

೨೦೦೩ : ಕಾರ್ಯಕಾರಿ ಸಮಿತಿ ಸದಸ್ಯ, ೭ನೇ ಕರ್ನಾಟಕ ಕಲಾ ಮೇಳ, ಬೆಂಗಳೂರು.

೨೦೦೧-೦೪ : ಸದಸ್ಯರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೦೦೬-೦೯ : ನಿರ್ದೇಶಕರು, ಬಿ.ಎಲ್.ಡಿ.ಇ. ನೌಕರರ ಪತ್ತಿರ ಸಹಕಾರಿ ಬ್ಯಾಂಕ್, ವಿಜಾಪುರ.

೧೯೮೮ರಿಂದ : ಉಪನ್ಯಾಸಕ, ಬಿ.ಎಲ್.ಡಿ.ಇ. ಸಂಸ್ಥೆಯ ಶ್ರೀ ಸಿದ್ಧೇಶ್ವರ ಚಿತ್ರಕಲಾ ವಿದ್ಯಾಲಯ, ವಿಜಾಪುರ

೨೦೧೧ರಿಂದ : ಪ್ರಾಚಾರ್ಯರು, ಬಿ.ಎಲ್.ಡಿ.ಇ. ಸಂಸ್ಥೆಯ ಶ್ರೀ ಸಿದ್ಧೇಶ್ವರ ಚಿತ್ರಕಲಾ ವಿದ್ಯಾಲಯ, ವಿಜಾಪೂರ.

ಪ್ರಶಸ್ತಿಗಳು

೧೯೮೮ : ಪ್ರಥಮ ಪ್ರಶಸ್ತಿ, ೧೦೦ನೇ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ 'ಭಾವ ಚಿತ್ರಕಲಾ ಕೃತಿಗೆ'

೧೯೯೩ : ಪ್ರಥಮ ಪ್ರಶಸ್ತಿ, ಯುವ ಕಲಾವಿದರ ರಾಜ್ಯಮಟ್ಟದ ಕಲಾ ಪ್ರದರ್ಶನ, ವಿಜಾಪೂರ.

೧೯೯೫ : ಪ್ರಥಮ ಪ್ರಶಸ್ತಿ, ಏಡ್ಸ್, ಕುರಿತು ರಾಜ್ಯಮಟ್ಟದ ಕಲಾ ಪ್ರದರ್ಶನ, ದಾವಣಗೆರೆ.

೧೯೯೬ : ದ್ವಿತೀಯ ಪ್ರಶಸ್ತಿ, ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪೂರ.

೨೦೦೪ : ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ವಿಜಾಪೂರ.

೨೦೧೧ : ಗುಲಬರ್ಗಾ ಲಲಿತಕಲಾ ಅಕಾಡೆಮಿ, ಗುಲಬರ್ಗಾ

೨೦೧೧ : ಗೌರವ ಪ್ರಶಸ್ತಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು(ಶಿವಮೊಗ್ಗ)

೨೦೧೩ : ಶ್ರೀ ಡಿ.ವಿ.ಹಾಲಭಾವಿ ರಾಷ್ಟ್ರೀಯ ಸಮ್ಮಾನ (ಕುಂಚಕಲಾಶ್ರೀ ಪ್ರಶಸ್ತಿ)

೨೦೧೪ : ಶ್ರೀ ಸಿದ್ದೇಶ್ವರ ರತ್ನ "ಪ್ರಶಸ್ತಿ" ಶ್ರೀ ಸಿದ್ದೇಶ್ವರ ಸಂಸ್ಥೆ, ವಿಜಾಪುರ

ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

೧೯೮೫ : ವಿಜಾಪೂರದಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ

೧೯೯೦ : ಹುಬ್ಬಳ್ಳಿಯಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ

೧೯೯೦ : ಗದಗದಲ್ಲಿ, ವಿಜಯ ಕಲಾ ಮಂದಿರ ಸಂಸ್ಥೆ, ಗದಗ

೧೯೯೦ : ಬಾಗಲಕೋಟದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಾಪುರ

೧೯೯೮ : ಸರಕಾರಿ ಆರ್ಟ್ ಗ್ಯಾಲರಿ, ಧಾರವಾಡ

೨೦೦೦ : ಡಾ.ಫ.ಗು.ಹಳಕಟ್ಟಿ ಸ್ಮಾರಕ ಭವನ, ವಿಜಾಪುರ

೨೦೦೦ : ಹೈದರಾಬಾದ ಸಾಲಾರಜಂಗ್ ಮ್ಯೂಜಿಯಂನಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ

೨೦೦೬ : ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಭವನ, ವಿಜಾಪುರ

೨೦೦೭ : ಡಾ.ಅಂಬೇಡ್ಕರ ಭವನ, ಬಿಜಾಪೂರ.

ಸಮೂಹ ಕಲಾ ಪ್ರದರ್ಶನ

೧೯೮೬ : ತ್ರಿವಳಿ ಸದಸ್ಯರ ಕಲಾವಿದರು, ಜಗಜ್ಯೋತಿ ಬಸವೇಶ್ವರ ಉತ್ಸವ, ಕೊಡಲಸಂಗಮ

೧೯೮೮ : ಉತ್ತರ ಕರ್ನಾಟಕ ಕಲಾವಿದರ ಬಳಗ, ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು.

೧೯೯೦ : ಶ್ರೀ ಸಿದ್ಧೇಶ್ವರ ಆರ್ಟ್ ಇನ್‌ಸ್ಟಿಟ್ಯೂಟ್, ವಿಜಾಪುರ

೧೯೯೩ : ನವರಸಪೂರ ಉತ್ಸವ, ವಿಜಾಪುರ

೧೯೯೮ : "ಕಲಾ ಪಯಣ" ಧಾರವಾಡ, ಬೆಳಗಾವಿ, ಯರಗಟ್ಟಿ, ವಿಜಾಪುರ, ಗದಗ

೨೦೦೭ : ಚಿತ್ರಕಲಾ ಪರಿಷತ್, ಬೆಂಗಳೂರು

೨೦೦೭ : ಲಕ್ಷಣ ಆರ್ಟ್ ಗ್ಯಾಲರಿ, ಬೆಂಗಳೂರು

೨೦೦೭ : ವರ್ಣಿಕಾ ಗ್ರುಪ್, ಚಿತ್ರಕಲಾ ಪರಿಷತ್, ಬೆಂಗಳೂರು

೨೦೦೮ : ವರ್ಣಿಕಾ ಗ್ರುಪ್, ಯರ್ನಾಕುಲಂ, ಕೇರಳ

೨೦೦೯ : ನೆರೆ ಸಂತ್ರಸ್ತರಿಗಾಗಿ ಕಲಾ ಪ್ರದರ್ಶನ ಮತ್ತು ಮಾರಾಟ, ವಿಜಾಪುರ.

೨೦೧೧ : ಶ್ರೀ ಸಿದ್ದೇಶ್ವರ ಕಲಾ ಮಂದಿರದ ಸಿಬ್ಬಂದಿಗಳ ಕಲಾ ಪ್ರದರ್ಶನ, ವಿಜಾಪೂರ.

ಕಲಾ ಪ್ರದರ್ಶನಗಳಲ್ಲಿ ಭಾಗ

೧೯೮೬ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಾಪೂರ

೧೯೮೯ : ನವದೆಹಲಿ, ಭುವನೇಶ್ವರ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ

೧೯೮೯ : ೨ನೇ ವಿಜಾಪೂರ ಕಲ ಮಹೋತ್ಸವ, ವಿಜಾಪೂರ.

೧೯೮೯ : ಜಿಲ್ಲಾ ಸಾಂಸ್ಕೃತಿಕ ಪರಿಷತ್, ವಿಜಾಪೂರ.

೧೯೮೯ : ಅಖಿಲ ಭಾರತ ಕಲಾ ಪ್ರದರ್ಶನ, ಚಿತ್ರಕಲಾ ಪರಿಷತ್, ಬೆಂಗಳೂರು.

೧೯೯೧ : ಆಲ್:ಇಂಡಿಯಾ ಕಲಾ ಪ್ರದರ್ಶನ, ಧಾರವಾಡ, ವಿಜಯ ಕಲಾ ಮಂದಿರ ಸಂಸ್ಥೆ, ಗದಗದಿಂದ.

೧೯೯೨ : ಅಖಿಲ ಭಾರತ ಕಲಾ ಪ್ರದರ್ಶನ, ಚಿತ್ರಕಲಾ ಪರಿಷತ್, ಬೆಂಗಳೂರು.

೧೯೯೨ : ರೀಜನಲ್ ಕಲಾ ಪ್ರದರ್ಶನ, ಚಿತ್ರಕಲಾ ಪರಿಷತ್, ಬೆಂಗಳೂರು.

೧೯೯೨ : ರೀಜನಲ್ ಕಲಾ ಪ್ರದರ್ಶನ, ವಿಜಯಕಲಾ ಮಂದಿರ ಸಂಸ್ಥೆ, ಗದಗ.

೧೯೯೨ : ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೯೯೨ : ಸಿಮ್ಲಾ, ಜೈಪೂರಗಳಲ್ಲಿ ಕನಾಟಕ ಲಲಿತಕಲಾ ಅಕಾಡೆಮಿಯಿಂದ

೧೯೯೩ : ಭಿತ್ತಿ ಚಿತ್ರಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ

೧೯೯೩ : ರಾಜ್ಯಮಟ್ಟದ ಕಲಾ ಪ್ರದರ್ಶನ, ಯುವ ಕಲಾವಿದರ ವೇದಿಕೆ, ವಿಜಾಪುರ.

೧೯೯೪ : ಆಲ್ ಇಂಡಿಯಾ ಕಲಾ ಪ್ರದರ್ಶನ, ವಿಜಾಪೂರ.

೧೯೯೪ : ಜಲವರ್ಣ ಕಲಾಕೃತಿಗಳ ಪ್ರದರ್ಶನ, ಹುಬ್ಬಳ್ಳಿ.

೧೯೯೫ : ೮ನೇ ರಾಷ್ಟ್ರೀಯ ಕಲಾಮೇಳ, ಬೆಂಗಳೂರು.

೧೯೯೫ : ರೀಜನಲ್ ಕಲಾ ಪ್ರದರ್ಶನ, ನಾಗಪೂರ.

೧೯೯೫ : ರಾಜ್ಯಮಟ್ಟದ ಕಲಾ ಪ್ರದರ್ಶನ, ರಾಜ್ಯಮಟ್ಟದ ಏಡ್ಸ್ ಕುರಿತು ವಿಚಾರ ಸಂಕೀರ್ಣ, ದಾವಣಗೆರೆ.

೧೯೯೬ : ಕಲಾಚೇತನ ಬಳಗ, ಬಸವನ ಬಾಗೇವಾಡಿ.

೧೯೯೬ : ೨೫ನೇ ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೯೯೬ : ಆಲ್ ಇಂಡಿಯಾ ಫೈನ್ ಆರ್ಟ್, ಎಗ್ಜಿಬಿಷನ್, ಚಿತ್ರಕಲಾ ಪರಿಷತ್, ಬೆಂಗಳೂರು.

೧೯೯೬ : ಆಲ್ ಇಂಡಿಯಾ ಡ್ರಾಯಿಗ್ಸ್ ಪ್ರದರ್ಶನ, ಜೈಪೂರ.

೧೯೯೮ : ಮೈಸೂರು ದಸರಾ ಕಲಾ ಪ್ರದರ್ಶನ, ಮೈಸೂರು.

೧೯೯೮ : ವಾರ್ಷಿಕ ಕಲಾ ಪ್ರದರ್ಶನ, ಕನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೯೯೯ : ೨೮ನೇ ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೦೦೦ : ಜನಪದ ಶೈಲಿ ಕಲಾಕೃತಿಗಳ ಪ್ರದರ್ಶನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೦೦ : ಹಾ.ಹೆಲ್ತ್ ಅಸೋಸಿಯೇಶನ್, ದೆಹಲಿ.

೨೦೦೦ : ಕರ್ನಾಟಕ ಕಾಂಟೆಂಪ್ರರಿ ಕಲಾ ಪ್ರದರ್ಶನ, ಹೈದರಾಬಾದ.

೨೦೦೦ : ಕಲಾ ಪ್ರದರ್ಶನ, ಕೆನರಾ ಪ್ರತಿಷ್ಠಾನ, ಬೆಂಗಳೂರು

೨೦೦೦ : ಅಖಿಲ ಭಾರತ ೬೮ನೇ ಸಾಹಿತ್ಯ ಸಮ್ಮೇಳನ, ಬಾಗಲಕೋಟ.

೨೦೦೧ : "ಉಗ್ರ ದೇವತೆ" ಕಲಾ ಕೃತಿಗಳ ಪ್ರದರ್ಶನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಗುಲಬರ್ಗಾದಲ್ಲಿ

೨೦೦೨ : ವಾರ್ಷಿಕ ಕಲಾ ಪ್ರದರ್ಶನ ಕರ್ನಾಟಕ ಲಲಿತಕಲಾ ಅಕಾಡೆಮಿ, ಹಾಸನದಲ್ಲಿ.

೨೦೦೩ : ೭ನೇ ಕರ್ನಾಟಕ ಕಲಾಮೇಳ, ಬೆಂಗಳೂರು.

೨೦೦೪ : ೩೪ನೇ ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೦೦೫ : ೩೫ನೇ ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೦೦೬ : ಅಖಿಲ ಭಾರತ ೭೧ನೇ ಸಾಹಿತ್ಯ ಸಮ್ಮೇಳನ, ಬೀದರ.

೨೦೦೬ : ಕ್ಯಾಮ್ಲಿನ್ ಕಲಾ ಪ್ರದರ್ಶನ, ಚೆನ್ನೈ.

೨೦೦೬ : ನೆಹರು ಆರ್ಟ್ ಸೆಂಟರ್, ಬಾಂಬೆ (ಟೈಮ್:ಲೈನ್ಸ್)

೨೦೦೭ : ೩೬ನೇ ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೦೦೮ : ವಾರ್ಷಿಕ ಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೦೦೯ : ಜಿಲ್ಲಾ ಸಾಹಿತ್ಯ ಸಮ್ಮೇಳನ, ವಿಜಾಪೂರ.

೨೦೧೦ : ಜಿಲ್ಲಾ ಸಾಹಿತ್ಯ ಸಮ್ಮೇಳನ, ವಿಜಾಪೂರ, ಬ.ಬಾಗೇವಾಡಿ

೨೦೧೧ : ವಾರ್ಷಿಕ ಕಲಾ ಪ್ರದರ್ಶನ ಕ.ಲ.ಕ.ಅಕಾಡೆಮಿ, ಬೆಂಗಳೂರು (ಶಿವಮೊಗ್ಗ)

೨೦೧೧ : ಗುಲಬರ್ಗಾ ಲಲಿತಕಲಾ ಅಕಾಡೆಮಿ, ಗುಲಬರ್ಗಾ

೨೦೧೨ : ಬೆಂಗಳೂರು ಆರ್ಟ್ ಫೌಂಡೇಶನ್, ಬೆಂಗಳೂರು

೨೦೧೩ : ವರ್ಲ್ಡ್ ಆರ್ಟಿಸ್ಟ್ ಡೇ ಸಿದ್ಧಲಿಂಗ್ ಫೈನ್ ಆರ್ಟ್ ಸೊ., ವಿಜಾಪುರ

೨೦೧೩ : ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು

೨೦೧೩ : ಚಿತ್ರ ಪರಿಷೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

ಕಲಾಶಿಬಿರ

೧೯೮೮ : ೫ನೇ ಕರ್ನಾಟಕ ಕಲಾಮೇಳ, ಬೆಂಗಳೂರು

೧೯೯೧ : ಕೋಮು ಸೌಹಾರ್ದತೆಗಾಗಿ ಕೃತಿ ರಚನೆ, ಬೆಂಗಳೂರು.

೧೯೯೧ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತುಮಕೂರು

೧೯೯೧ : ಕರ್ನಾಟಕ ಲಲಿತಕಲಾ ಅಕಾಡೆಮಿ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರ ಸಂಯುಕ್ತಆಶ್ರಯದಲ್ಲಿ ಮೈಸೂರಿನ ಇಲವಾಲದಲ್ಲಿ

೧೯೯೨ : ಕನಾಟಕ ಲಲಿತಕಲಾ ಅಕಾಡೆಮಿ ಶಿಬಿರ, ವಿಜಾಪೂರ

೧೯೯೨ : ರೀಜನಲ್ ಲಲಿತಕಲಾ ಅಕಾಡೆಮಿ, ಮದ್ರಾಸ್, ವಿಜಾಪೂರ.

೧೯೯೨ : ಯುವ ಕಲಾವಿದರ ಶಿಬಿರ, ವಿಜಾಪೂರ.

೧೯೯೩ : ೬ನೇ ಕರ್ನಾಟಕ ಕಲಾ ಮೇಳ, ಬೆಂಗಳೂರು.

೧೯೯೪ : ಅಂತಾರಾಷ್ಟ್ರೀಯ ಕುಟುಂಬ ವರ್ಷ ಪೇಂಟಿಂಗ್ ಶಿಬಿರ, ತೊರವಿ.

೧೯೯೪ : ಆಲ್ ಇಂಡಿಯಾ ಕಲಾ ಶಿಬಿರ, ಬಿಜಾಪೂರ.

೧೯೯೫ : ವಜ್ರಮಹೋತ್ಸವ, ಹಾಲಬಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ

೧೯೯೫ : ರಾಜ್ಯಮಟ್ಟದ ಕಲಾ ಶಿಬಿರ, ಬೆನನ್ ಸ್ಮಿತ್ ಸ್ಕೂಲ್ ಆಫ್ ಆರ್ಟ್, ಬೆಳಗಾವಿ.

೧೯೯೫ : ವಿಭಾಗ ಮಟ್ಟದ ಕಲಾ ಶಿಬಿರ, ರಾಯಚೂರು.

೧೯೯೫ : ಕೋಮು ಸೌಹಾರ್ದತೆಗಾಗಿ ಕಲಾ ಶಿಬಿರ, ಹುಬ್ಬಳ್ಳಿ.

೧೯೯೫ : ಕಲಾ ಶಿಬಿರ, ೧೧ನೇ ಬಳ್ಳಾರಿ, ಜಿಲ್ಲಾ ಸಾಹಿತ್ಯ ಸಮ್ಮೇಳನ, ಬಳ್ಳಾರಿ.

೧೯೯೫ : ಜಲವರ್ಣ ಚಿತ್ರಕಲಾ ಶಿಬಿರ, ಪೊನ್ನಂಪೇಟ, ಕೂರ್ಗ

೧೯೯೬ : ರಾಜ್ಯಮಟ್ಟದ ಕಲಾ ಶಿಬಿರ, "ಸಪ್ತರಂಗ", ಬೆಳಗಾವಿ.

೧೯೯೬ : ಕರ್ನಾಟಕ ಲಲಿತಕಲಾ ಅಕಾಡೆಮಿ, ನಿತ್ಯ ನಿರಂತರ ಸಹಯೋಗದೊಂದಿಗೆ ಭಾವಚಿತ್ರ ಕ್ಯಾಂಪ್, ಸೋಣಂಗೇರಿ, ದ.ಕನ್ನಡ.

೧೯೯೬ : ರಾಜ್ಯ ಕಲಾವಿದರ ಶಿಬಿರ, ಕೊರ್ತುಕೊಂದಾ, ರಾಯಚೂರು ಜಿಲ್ಲೆ.

೧೯೯೬ : ಚಿತ್ರಕಲಾ ಶಿಬಿರ, ರಾಜ್ಯ ಚಿತ್ರಕಲಾ ಸಿಬ್ಬಂದಿ ಸಂಘ, ಹಂಪಿಯಲ್ಲಿ

೧೯೯೬ : ರಾಜ್ಯ ಕಲಾವಿದರ ಶಿಬಿರ, ಬೀಳಗಿ, ಬಾಗಲಕೋಟ ಜಿಲ್ಲೆ.

೧೯೯೭ : ರಾಜ್ಯ ಕಲಾವಿದರ ಶಿಬಿರ, ಬಿಜಾಪೂರ, ಕೆ.ಕೆ.ಹೆಬ್ಬಾರ ಫೌಂಡೇಶನ್, ಬಾಂಬೆ ಇವರಿಂದ.

೧೯೯೮ : ರೇಖಾ ಚಿತ್ರ ಶಿಬರ, ಹುಬ್ಬಳ್ಳಿ

೧೯೯೮ : ಚಲನ ಚಿತ್ರೋತ್ಸವ ಕಾರ್ಯಕ್ರಮದಡಿಯಲ್ಲಿ ಕಲಾ ಶಿಬಿರ, ಚಡಚಣ.

೧೯೯೮ : ಕಲಾ ಶಿಬಿರ, ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಅಂಗವಾಗಿ, ವಿಜಾಪೂರ.

೧೯೯೯ : ಶತಮಾನದ ರಂಗ ಸಂಭ್ರಮ ಕಾರ್ಯಕ್ರಮದಲ್ಲಿ ಭಾವಚಿತ್ರ ಶಿಬಿರ, ಬಿಜಾಪೂರ, ಕ.ನಾ.ಅಕಾಡೆಮಿಯಿಂದ

೧೯೯೯ : ಆಲ್ ಇಂಡಿಯಾ ಕಲಾ ಶಿಬಿರ, ತುಮಕುರು, ಕ.ಲ.ಕ.ಅಕಾಡೆಮಿಯಿಂದ

೨೦೦೦ : ಹಂಪಿ ಉತ್ಸವ ಆಚರಣೆ(ಕಾವ್ಯ, ಗೀತ, ಕುಂಚ) ಕಾರ್ಯಕ್ರಮ, ಹಂಪಿ.

೨೦೦೦ : ರಾಷ್ಟ್ರೀಯ ಚಿತ್ರಕಲಾ ಶಿಬಿರ, ಬಾದಾಮಿ(ನಿರೀಕ್ಷಿತ ಕಲಾವಿದ)

೨೦೦೧ : ಐಪೆಕ್ಸ್ ಆಲ್ ಇಂಡಿಯಾ ಆರ್ಟಿಸ್ಟ್ ಕ್ಯಾಂಪ್, ದೆಹಲಿ.

೨೦೦೨ : ಕಲಾ ಶಿಬಿರ "ದಶಮಾನೋತ್ಸವ" ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್.

೨೦೦೨ : ಚಿತ್ರಕಲಾ ಶಿಬಿರ ಶ್ರೀ ಜಗದ್ಗುರು ತೋಂಟದಾರ್ಯ ಮತ್ತು ಮಹೋತ್ಸವ, ಗದಗ.

೨೦೦೪ : ಹಂಪಿ ಉತ್ಸವದಡಿ ಪ್ರವಾಸೋದ್ಯಮ ಇಲಾಖೆಯಿಂದ ಕಲಾ ಶಿಬಿರ, ಹಂಪಿ.

೨೦೦೪ : ರಾಷ್ಟ್ರಕವಿ ಕುವೆಂಪು ಜನ್ಮ ಶತಮಾನೋತ್ಸವ ಅಂಗವಾಗಿ ಹಿರಿಯ ಚಿತ್ರಕಲಾವಿದರ ಶಿಬಿರ, ಬೆಂಗಳೂರು.

೨೦೦೪ : ಡಾ.ಎಸ್.ರೋರಿಕ್ ಜನ್ಮ ಶತಮಾನೋತ್ಸವ ಅಂಗವಾಗಿ ಹಿರಿಯ ಚಿತ್ರಕಲಾವಿದರ ಶಿಬಿರ, ಬೆಂಗಳೂರು.

೨೦೦೫ : ಕಲಾ ಶಿಬಿರ, ಮೈಸೂರು, ಕ.ಲ.ಕ.ಅಕಾಡೆಮಿ ಹಾಗೂ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ ಸಹಯೋಗ.

೨೦೦೬ : ಕಲಾಶಿಬಿರ, ವಿಜಾಪುರ, ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ.

೨೦೦೬ : ಕಲಾ ಶಿಬಿರ, ಹಂಪಿ, ಕನ್ನಡ ವಿಶ್ವವಿದ್ಯಾಲಯ ನುಡಿ ಹಬ್ಬ ನಿಮಿತ್ಯ.

೨೦೦೬ : ರಾಜ್ಯ ಕಲಾ ಶಿಬಿರ, ಹೂವಿನ ಹಡಗಲಿ ರಂಗಭಾರತಿ ಹಾಗೂ ಕ.ಲ.ಕ.ಅಕಾಡೆಮಿ ಸಹಯೋಗ.

೨೦೦೭ : ಕರ್ನಾಟಕ ಏಕೀಕರಣ ವ್ಯಕ್ತಿಗಳ ಭಾವಚಿತ್ರಕಲಾ ಶಿಬಿರ ಮಿಲ್ಟ್ರಿ ಶಾಲೆ, ಕ್ಯಾಂಪ್, ಬೆಳಗಾವಿ.

೨೦೦೭ : ಬೇಂದ್ರೆ ಕಾವ್ಯ ಚಿತ್ರಕಲಾ ಶಿಬಿರ, ಧಾರವಾಡ, ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಕ.ಲ.ಕ.ಅಕಾಡೆಮಿ ಸಹಯೋಗ.

೨೦೦೮ : "ಆಳ್ವಾಸ್ ಚಿತ್ರಸಿರಿ" ರಾಜ್ಯಮಟ್ಟದ ಚಿತ್ರಕಲಾ ಶಿಬಿರ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡಬಿದ್ರೆ

೨೦೦೮ : ಚಿತ್ರಕಲಾ ಶಿಬಿರ ಕನ್ಯಾನ, ಕುಂದಾಪುರ, ಶಿವರಾಮ ಕಾರಂತ ಸ್ಮಾರಕ ಪ್ರತಿಷ್ಠಾನ

೨೦೦೯ : "ಆಳ್ವಾಸ್ ಚಿತ್ರಸಿರಿ" ಬೃಹತ್ ಕ್ಯಾನ್‌ವಾಸ್ ಮೇಲೆ ಕೃತಿ ರಚನೆ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡಬಿದ್ರೆ.

೨೦೦೯ : ನಾಡೋಜ ಶ್ರೀ ಖಂಡೇರಾವ ಅವರ ಸನ್ಮಾನ ಸಮಾರಂಭದ ನಿಮಿತ್ಯ, ಗುಲಬರ್ಗಾ.

೨೦೧೦ : ಶ್ರೀಕೃಷ್ಣ ದೇವರಾಯರ ಪೀಠಾರೋಹಣದ ೫೦೦ನೇ ಸ್ಮರಣಾರ್ಥ ಕಲಾ ಶಿಬಿರ, ಹಂಪಿ.

೨೦೧೦ : ಕಲಾಶಿಬಿರ ಮತ್ತು ಪ್ರದರ್ಶನ, ಜಿಲ್ಲಾ ೧೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬ.ಬಾಗೇವಾಡಿ.

೨೦೧೦ : ಕಲಾಶಿಬಿರ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ.

೨೦೧೦ : ಕನ್ನಡ ರಾಜ್ಯೋತ್ಸವ ಅಂಗವಾಗಿ (ಕಾವ್ಯ, ಗೀತ, ಕುಂಚ) ಕಾರ್ಯಕ್ರಮ, ವಿಜಾಪುರ.

೨೦೧೧ : ಹಿರಿಯ ವಿದ್ಯಾರ್ಥಿಗಳ ಚಿತ್ರಕಲಾ ಶಿಬಿರ, ಸರಕಾರಿ ಚಿತ್ರಕಲಾ ಶಾಲೆ, ಧಾರವಾಡ.

೨೦೧೧ : ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ.

೨೦೧೧ : 'ರಾಣಿ ಅಬ್ಬಕ್ಕದೇವಿ' ಕುರಿತು, ಅಲ್:ಇಂಡಿಯಾ ಕಲಾ ಶಿಬಿರ, ಮಂಗಳೂರಿನ ಬಂಟ್ವಾಳದ ಉಳ್ಳಾಲದಲ್ಲಿ

೨೦೧೨ : ಕಲಾ ತಪಸ್ವಿ ಟ್ರಸ್ಟ್, ಮಂಡ್ಯ, ರಾಜ್ಯ ಕಲಾ ಶಿಬಿರ

೨೦೧೩ : 'ಚಿತ್ರ ಪರಿಷೆ' ಆರ್ಟಿಸ್ಟ್ ಕ್ಯಾಂಪ್, ಬೆಂಗಳೂರು.

೨೦೧೩ : ಕನಕದಾಸರ ಕುರಿತು ಆರ್ಟಿಸ್ಟ್ ಕ್ಯಾಂಪ್, ಹಾವೇರಿಯ ಕನಕಗಿರಿ

೨೦೧೩ : ರಾಘವೇಂದ್ರರ ಮತ್ತು ಮಧ್ವಾಚಾರ್ಯರ ಕುರಿತು ಆರ್ಟಿಸ್ಟ್ ಕ್ಯಾಂಪ್ ಆಂಧ್ರದ ಮಂತ್ರಾಲಯದಲ್ಲಿ

೨೦೧೪ : ಚಾಲುಕ್ಯ ಉತ್ಸವ ಆರ್ಟಿಸ್ಟ್ ಕ್ಯಾಂಪ್, ಬಾದಾಮಿ, ಜಿಲ್ಲಾ ಬಾಗಕೋಟೆ.

ಕಲಾಕೃತಿ ಸಂಗ್ರಹ

ಜಗತ್ತಿನ ಶ್ರೀಮಂತ ಶ್ರೀ ಬಿಲ್‌ಗೇಟ್ಸ್, ಸೀನಿಯರ್ ಅಮೇರಿಕಾ.

ಶ್ರೀಮತಿ ಮಿನಿ ಗಾರ್ಡಿನೇರ್ ಗೇಟ್ಸ್, ಅಮೇರಿಕಾ

ಶ್ರೀಮತಿ ಕ್ಯಾಥರಿನ್ ನೇಮೆ, ಕೆನಡಾ.

ಶ್ರೀಮತಿ ಹೆಲ್ಮೆನೆ ಗಾಯ್ಲೇ, ಅಮೇರಿಕಾ.

ಸನ್ಮಾನ್ಯ ಎಸ್.ಎಮ್.ಕೃಷ್ಣ, ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಶ್ರೀಯುತ ಡಿ.ಬಿ.ಇನಾಮದಾರ, ಮಾಜಿ ಸಚಿವರು, ಕರ್ನಾಟಕ ಸರ್ಕಾರ.

ಶ್ರೀಯುತ ಎಂ.ಬಿ.ಪಾಟೀಲ, ಶಾಸಕರು, ತಿಕೋಟಾ.

ಶ್ರೀಯುತ ಜಿ.ಕೆ.ಪಾಟೀಲ, ಎಂ.ಎಲ್.ಸಿ., ಬಿಜಾಪುರ.

ಶ್ರೀಯುತ ರಾಜು ಆಲಗೂರ, ಶಾಸಕರು, ಬಳ್ಳೊಳ್ಳಿ.

ಶ್ರೀಯುತ ಸೋಮಶೇಖರ ಸಾಲಿ, ಮಾಜಿ ಅಧ್ಯಕ್ಷರು, ಕ.ಲ.ಕ.ಅಕಾಡೆಮಿ, ಬೆಂಗಳೂರು.

ಶ್ರೀಯುತ ಬಿ.ಎಸ್.ಪಾಟೀಲ, ಕುಮಠೆ

ಶ್ರೀಯುತ ಸುನೀಲಗೌಡ ಬಿ.ಪಾಟೀಲ, ಬಿಜಾಪೂರ

ಶ್ರೀಯುತ ಎಚ್.ಬಿ.ಪಾಟೀಲ, ಕುಮಠೆ

ಶ್ರೀಯುತ ಸಂಜೀವ ಬಿ.ಪಾಟೀಲ, ದೆಹಲಿ

ಶ್ರೀಮತಿ ರೇಖಾ ಶೆಟ್ಟರ್, ಧಾರವಾಡ

ಶ್ರೀಯುತ ಮಂಗಳವೇಡೆ, ವಿಜಾಪುರ

ಶ್ರೀಯುತ ದುದಗಿ ಇಂಜಿನೀಯರ್, ವಿಜಾಪೂರ

ಕೇಂದ್ರ ಲಲಿತಕಲಾ ಅಕಾಡೆಮಿ, ದೆಹಲಿ

ಐಪೆಕ್ಸ್, ದೆಹಲಿ

ಕೆ.ಕೆ.ಹೆಬ್ಬಾರ್ ಫೌಂಡೇಶನ್, ಬಾಂಬೆ

ರೀಜನಲ್ ಲಲಿತಕಲಾ ಅಕಾಡೆಮಿ, ಚೆನ್ನೈ

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಚಿತ್ರಕಲಾ ಪರಿಷತ್, ಬೆಂಗಳೂರು

ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಕುವೆಂಪು ಲಲಿತಕಲಾ ಮಹಾವಿದ್ಯಾಲಯ, ದಾವಣಗೆರೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತುಮಕೂರು

ಎನ್.ಆರ್.ಐ.ಕಟ್ಟಡ, ವಿಜಾಪುರ.

ಡಾ.ಫ.ಗು.ಹಳಕಟ್ಟಿ ಸ್ಮಾರಕ ಭವನ, ವಿಜಾಪುರ

ಬಿ.ಎಲ್.ಡಿ.ಇ. ಸಂಸ್ಥೆಯ ಎಲ್ಲ ವಿದ್ಯಾಕೇಂದ್ರಗಳಲ್ಲಿ ಭಾವಚಿತ್ರಗಳು

ವಿಜಯ ಮಹಾಂತೇಶ ಸಂಸ್ಥಾನ ಮಠ, ಇಲಕಲ್

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ,

ಡಿ.ಡಿ.ಪಿ.ಐ. ಆಫೀಸ್, ವಿಜಾಪುರ.

ಡಾ.ಎಂ.ಎಸ್.ಬಿರಾದಾರ, ವಿಜಾಪುರ

ಡಾ.ಆರ್.ಸಿ.ಬಿದರಿ, ವಿಜಾಪೂರ

ಶ್ರೀಮತಿ ಮಂಜುಸಿಂಗ್, ಯು.ಜಿ.ಸಿ. ಸೆಕ್ರೆಟರಿ, ಬೆಂಗಳೂರು

ಡಾ.ಫ.ಗು.ಹಳಕಟ್ಟಿ, ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯ, ವಿಜಾಪುರ

ಶ್ರೀ ಶ್ರೀ ಸಿದ್ದಮಲ್ಲಯ್ಯಸ್ವಾಮಿ ವಿರಕ್ತ ಮಠ, ಬಾಬಾನಗರ

ಶ್ರೀಯುತ ಸೌದತ್ತಿ, ಮಾಜಿ ಕುಲಪತಿಗಳು, ಮಂಗಳೂರು

ಶ್ರೀ ಎಸ್.ಬಿ.ಶಾಹಪೇಟಿ, ಕುಲಸಚಿವರು(ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಠ ಮಾನ್ಯರಲ್ಲಿ ಹಾಗೂ ಗಣ್ಯ ಮಾನ್ಯರ ಮನೆಗಳಲ್ಲಿ ಭಾವಚಿತ್ರ, ಕಲಾಕೃತಿಗಳು ರಾರಾಜಿಸುತ್ತಿವೆ.

ಡಾ.ಬಿ.ಜಿ.ಮೂಲಿಮನಿ, ಕುಲಪತಿಗಳು, ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪೂರ

ಶ್ರೀ ಅಸೋಕ ಖೇಣಿ, ಬೆಂಗಳೂರು

ಶ್ರೀ ವೀರಪ್ಪ ಮೊಯಿಲಿ, ಕೇಂದ್ರ ಕಾನೂನು ಸಚಿವರು

ಶ್ರೀ ಲೋಣಿ, ಕ್ರಿಮಿನಾಶಕ ವ್ಯಾಪಾರಸ್ಥರು, ವಿಜಾಪುರ.

ಶ್ರೀ ಕುಲಕರ್ಣಿ, ನಿರ್ದೇಶಕರು, ಆಯುಕ್ತರ ಕಚೇರಿ, ಧಾರವಾಡ.

ಶ್ರೀ ಜಗದ್ಗುರುಗಳು, ಕೂಡಲ ಸಂಗಮ ಬಸವಣ್ಣನ ಕೃತಿ

ಡಾ. ಕೃಪಾಶಂಕರ ಮನ್ನಿಕೇರಿ, ಬೆಂಗಳೂರು.

ಶ್ರೀಮತಿ ಅರುಂಧತಿ, ಬೆಂಗಳೂರು

ಜಿಲ್ಲಾ ಆಡಳಿತ, ಬಾಗಲಕೋಟೆ

ಪ್ರಾತ್ಯಕ್ಷಿಕೆ

ಉಮಾ ಆರ್ಟ್ ಇನ್ಸ್ಟಿಟ್ಯೂಟ್, ಬೆಳಗಾವಿ.

ನೂತನ ಲಲಿತಕಲಾ ಮಹಾವಿದ್ಯಾಲಯ, ರಾಯಚೂರು.

ವಿಜಾಪೂರ ಜಿಲ್ಲಾ ಚಿತ್ರಕಲಾ ಕಾರ್ಯಾನುಭವ ಶಿಕ್ಷಕರ ಸಂಘ, ವಿಜಾಪೂರ.

ಶ್ರೀ ಪ್ರಭುರಾಜೇಂದ್ರ ಕಲಾ ವಿದ್ಯಾಲಯ, ಅಮೀನಗಡ.

ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ, ಮುದ್ದೇಬಿಹಾಳ.

ಕಲಾ ಉತ್ಸವ, ವಿಜಯ ಕಲಾ ಮಂದಿರ, ಗದಗ.

ರವಿವರ್ಮ ಚಿತ್ರಕಲಾ ಮಹಾವಿದ್ಯಾಲಯ, ಬ.ಬಾಗೇವಾಡಿ.

ರೇವಣಸಿದ್ಧೇಶ್ವರ ಲಲಿತಕಲಾ ಮಹಾವಿದ್ಯಾಲಯ. ಹೂವಿನ ಹಿಪ್ಪರಗಿ.

ಆದರ್ಶ ಚಿತ್ರಕಲಾ ಮಹಾವಿದ್ಯಾಲಯ, ಇಂಡಿ.

ಯುವ ಕಲಾವಿದರ ವೇದಿಕೆ, ವಿಜಾಪೂರ.

ಮಹೇಶ ಚಿತ್ರಕಲಾ ಮಹಾವಿದ್ಯಾಲಯ, ಮುಧೋಳ.

ಮುರುಘೇಂದ್ರ ಲಲಿತಕಲಾ ಮಹಾವಿದ್ಯಾಲಯ, ಅಥಣಿ.

ಸರಕಾರಿ ಚಿತ್ರಕಲಾ ಶಾಲೆ, ಧಾರವಾಡ.

ಪಿ.ಡಿ.ಜೆ.ಪ.ಪೂ.ಕಾಲೇಜು, ವಿಜಾಪೂರ.

ಬೆಂಗಳೂರು ವಿಭಾಗದ ಚಿತ್ರಕಲಾ ಕಾರ್ಯಾನುಭವ ಶಿಕ್ಷಕರ ಸಮ್ಮೇಳನ, ಬೆಂಗಳೂರು.

ಚಿತ್ರಕಲಾ ಶಿಕ್ಷಕರ ಸಂಘ, ಶಿವಮೊಗ್ಗ

ವಿಜಯ ಕಲಾ ಮಹಾವಿದ್ಯಾಲಯ, ಇಲಕಲ್

ನಾಟಕ ಅಭಿನಯ (ಹವ್ಯಾಸ)

ಸೂರ್ಯ ಶಿಕಾರಿ

ನಮಗ ಯಾರೂ ಇಲ್ಲೋ ಎಪ್ಪಾ ಸಾಕ್ಷಿ

ಪರಿಹಾರ

ಸ್ತ್ರೀರತ್ನ

ದೇವರಿಗೆ ನೆನಪಿಲ್ಲ

ಹಲವಾರು ನಾಟಕಗಳಲ್ಲಿ ರಂಗ ಸಜ್ಜಿಕೆ, ಪ್ರಸಾದನ, ವಸ್ತ್ರಾಲಂಕಾರ ಇತ್ಯಾದಿ.

ಪ್ರಾಚಾರ್ಯರು
ಶ್ರೀ ಸಿದ್ಧೇಶ್ವರ ಲಲಿತಕಲಾ ಮಹಾವಿದ್ಯಾಲಯ
ಮದ್ದಿನ ಖಣಿ, ಕಾಲೇಜು ರಸ್ತೆ
ವಿಜಾಪೂರ : ೫೮೬೧೦೧
ಫೋ: ೦೮೩೫೨:೨೪೪೪೪೯

ಗ್ರಂಥಋಣ

೧. ಕಾಳೆ ಕೆ.ವಿ., **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨ ಎಚ್ಚೆಸ್ಕೆ, ೨೦೦೧, **ಶಿಕ್ಷಣ ಸಂಸ್ಕೃತಿ,** ಕಮಲ ಪ್ರಕಾಶನ, ಮೈಸೂರು

೩. ಗುರಣಭಾವಿ, ೨೦೦೬, **ಅಂತಾರಾಷ್ಟ್ರೀಯ ಕ್ರೀಡಾಜ್ಯೋತಿ ವೈಜನಾಥ ಸಮಗೊಂಡ,** ಶ್ರೀಮತಿ ಸುಮಿತ್ರಾ ವೈ.ಸಮಗೊಂಡ ಪ್ರಕಾಶನ

೪. ಚಂದ್ರಕಾಂತ ಕುಸನೂರ, ೧೯೯೦, **ಕಲೆ ಅನುಭವ ಮತ್ತು ಅನುಭಾವ,** ಮಾಲಗತ್ತಿ ಪ್ರಕಾಶನ, ಬೆಳಗಾವಿ

೫. ಚಪ್ಪರಬಂಡ ಆರ್.ಎಂ., ೨೦೦೬, **ಬಿಜಾಪುರ ಜಿಲ್ಲೆಯ ಜಾತ್ರೆಗಳು,** ಯಾಸ್ಮಿನ್ ಪ್ರಕಾಶನ, ವಿಜಾಪುರ

೬. ನಾಯಕ ಹಾ.ಮಾ., ೧೯೬೬, **ಸಂಕೀರ್ಣ,** ಸುರುಚಿ ಪ್ರಕಾಶನ, ಮೈಸೂರು

೭. ಪಾಟೀಲ ಎಸ್.ಸಿ., ೨೦೦೧, **ವರ್ಣಸಂಚಯ,** ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್ಲ

೮. ಪಾಟೀಲ ಬಿ.ಎಂ., ೨೦೦೬, **ವಚನ ಗಮ್ಮಟ**(ಡಾ.ಫ.ಗು.ಹಳಕಟ್ಟಿಯವರ ಜೀವನ ಮತ್ತು ಸಾಹಿತ್ಯ), ಹಿತಚಿಂತಕ ಪ್ರಕಾಶನ, ಮಹಾಲಿಂಗಪೂರ

೯. ಮೂರ್ತಿ ಕೆ.ಎಲ್.ಎನ್., ೧೯೯೮, **ಕರ್ನಾಟಕದ ಕಲೆ ಮತ್ತು ವಾಸ್ತು ಶಿಲ್ಪ,** ರಂಜಿತಾ ಪ್ರಕಾಶನ, ತುಮಕೂರು

೧೦. ಮೂರ್ತಿ ಕೆ.ಎಸ್., ೧೯೯೦, **ರುಮಾಲೆ ಚೆನ್ನಬಸವಯ್ಯ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೧. ರವಿಕುಮಾರ ಕಾಶಿ, ೨೦೧೨, **ಅನುಕ್ತ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೧೨. ರಾಠೋಡ ಐ.ಬಿ., ೨೦೦೯, **ರೇಖೆಗಳಲ್ಲಿ ಚಿತ್ರಕಲಾವಿದರು,** ಪಿ.ಬಿ.ರೋಡ್, ವಿಜಾಪುರ

೧೩. ವೀರಭದ್ರಪ್ಪ ಬಿ.ವಿ., **ಶಿಕ್ಷಣ ಮತ್ತು ಸಂಸ್ಕೃತಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು

೧೪. ವೀರಭದ್ರಪ್ಪ(ಸಂ), ೨೦೦೫, **ಭಾರತೀಯ ಸಂಸ್ಕೃತಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು

೧೫. ಸಿಂಪಿಗೇರ ಎನ್.ಎನ್., ೧೯೯೩, **ಸಿ.ಓ.ಸಮಗೊಂಡ ರಾಷ್ಟ್ರ ಪ್ರಶಸ್ತಿ ವಿಜೇತ ಪೊಲೀಸ್ ಅಧಿಕಾರಿ ಜೀವನ ಚರಿತ್ರೆ,** ಶ್ರೀಮತಿ ಆಶಾಲತಾ ಸಿ.ಸಮಗೊಂಡ ಮಹಿಮಾ, ಬಾಂಬೆ

೧೬. ಸುಬ್ರಹ್ಮಣ್ಯಂ ಕೆ.ವಿ., ೨೦೦೪, **ಮುಖಗಳೊಂದಿಗೆ ಮುಖಾಮುಖಿ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಳೂರು

೧೭. ಶಂಕರ ಪಾಟೀಲ, ೧೯೯೫, **ಚಿತ್ರಕಲಾ ಚಿಂತನೆ,** ಪ್ರಗತಿ ಪ್ರಕಾಶನ, ವಿದ್ಯಾನಗರ, ದಾವಣಗೆರೆ

೧೮. ಶಾಂತರಾಜ್, ೧೯೯೫, **ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ,** ಸ್ಪಂದನ ಕಲಾವಿದರ ಯುವ ಬಳಗ

೧೯. ಶಾಸ್ತ್ರೀ ಬಿ.ವಿ.ಕೆ.(ಸಂ), ೧೯೯೧, **ರೇಖಾಚಿತ್ರ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಳೂರು

೨೦. ಶಿವಾನಂದ ಎಚ್.ಬಂಟನೂರ, ೨೦೧೩, **ದೃಶ್ಯ-ಪದದೃಶ್ಯ,** ಅಲಕಾ ಪ್ರಕಾಶನ, ವಿಜಾಪುರ

೨೧. ಶಿವಾನಂದ ಎಚ್.ಬಂಟನೂರ, ೨೦೦೯, **ದೃಷ್ಟಿ-ಸೃಷ್ಟಿ,** ಅಲಕಾ ಪ್ರಕಾಶನ, ವಿಜಾಪುರ

೨೨. ಶ್ರೀಕಂಠಶಾಸ್ತ್ರೀ, ೨೦೦೬, **ಭಾರತೀಯ ಸಂಸ್ಕೃತಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೨೩. ಹೂಗಾರ ಎಸ್.ಕೆ., **ಕಲೆ ಮತ್ತು ಹಬ್ಬ,** ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಾಕೃತಿ ರಚನೆಯಲ್ಲಿ ನಿರತರಾದ ಕಲಾವಿದ ಪಿ.ಎಸ್.ಕಡೇಮನಿ







ಕನ್ನಡಾಂಬೆ ಭುವನೇಶ್ವರಿ ದೇವಿ



ಉಳುಮೆ ಮಾಡುತ್ತಿರುವ ರೈತ

ಸನ್ಮಾನ ಮತ್ತು ಗೌರವ ಪುರಸ್ಕಾರಗಳೊಂದಿಗಿನ ಛಾಯಚಿತ್ರಗಳು









ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ



ವಿಜಾಪುರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ



ಎಂ.ಬಿ.ಪಾಟೀಲರಿಗೆ ಕಡೇಮನಿಯವರು ಕಲಾಕೃತಿಯನ್ನು ಕಾಣಿಕೆಯಾಗಿ ನೀಡುತ್ತಿರುವ ಸಂದರ್ಭ



■ ತುಮಕೂರಿನ ಡಾ.ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ನಡೆದ ಅಖಿಲ ಭಾರತ ಚಿತ್ರಕಲಾ ಶಿಬಿರದಲ್ಲಿ ಪಾಲ್ಗೊಂಡಿದ್ದ ಕಲಾವಿದರೊಂದಿಗೆ ಅಧ್ಯಕ್ಷರಾದ ಡಾ. ವಿ.ಜಿ ಅಂದಾನಿ ಹಾಗೂ ಕಲಾವಿಮರ್ಶಕ ಕೆ.ವಿ. ಸುಬ್ರಹ್ಮಣ್ಯಂ ಅವರೊಂದಿಗೆ ಪಿ.ಎಸ್. ಕಡೇಮನಿ



ದೆಹಲಿಯಲ್ಲಿ ನಡೆದ ಇಂಡಿಯನ್ ಆರ್ಟ್ ಫೇರ್‌ನಲ್ಲಿ ಭಾಗವಹಿಸಿದ ಕಡೇಮನಿಯವರು



ಚಿ.ಸು.ಕೃಷ್ಣ ಸೆಟ್ಟಿ ಮತ್ತು ವಿದ್ಯಾಧರ ಸಾಲಿಯವರೊಂದಿಗೆ ಕಡೇಮನಿಯವರು



ಕಡೇಮನಿಯವರ ಕಲಾ ಪ್ರದರ್ಶನವನ್ನು ವೀಕ್ಷಿಸುತ್ತಿರುವ ಸಚಿವರಾದ ಎಂ.ಬಿ.ಪಾಟೀಲರು





